ಮಹಿಳೆ : ಅಂದು - ಇಂದು



ಪ್ರೇಮಸಾಯಿ ಪ್ರಕಾಶನ

ಮಹಿಳೆ ಅಂದು - ಇಂದು

ಡಾ॥ ಜ್ಯೋತ್ಸ್ನ ಕಾಮತ್

ಶ್ರೀ ಪ್ರೇಮಸಾಯಿ ಪ್ರಕಾಶನ
"ಶ್ರೀ ಗುರುಪ್ರಸಾದ"
ನಂ. 845, 4ನೇ ಮುಖ್ಯರಸ್ತೆ,
ವಿಜಯನಗರ, ಬೆಂಗಳೂರು - 560 040

MAHILE ANDU-INDU (A Collection of Essays)
by ***Dr. JYOTSNA KAMAT***
Published by **Sri Premasai Prakashana,** No. 845, 4th Main Road, Vijayanagar, Bangalore-560 040. Phone: 3301822

Pages: VI x 130

First Edition: 2001

ವಿನ್ಯಾಸ: ಕೃಷ್ಣಾನಂದ ಕಾಮತ

ಬೆಲೆ: 50-00

ಅಕ್ಷರ ಜೋಡಣೆ:
ಪ್ರತಿಭಾ ಪ್ರಿಂಟರ್ಸ್
ನಂ. 411, 8ನೇ ಮುಖ್ಯ ರಸ್ತೆ (ಪೈಪ್ ಲೈನ್)
ಹನುಮಂತನಗರ, ಬೆಂಗಳೂರು - 560 019
ದೂರವಾಣಿ: 6692113

ಮುದ್ರಕರು:
ಶ್ರೀ ಲಕ್ಷ್ಮೀ ಆರ್ಟ್ ಪ್ರಿಂಟರ್ಸ್
910/ಎ, 3ನೇ ಮುಖ್ಯರಸ್ತೆ,
ವಿಜಯನಗರ, ಬೆಂಗಳೂರು - 560 040

ಎರಡು ಮಾತು

ಇಲ್ಲಿಯ ಒಂಭತ್ತು ಪ್ರಬಂಧಗಳಲ್ಲಿ ನಮ್ಮ ನಾಡಿನಲ್ಲಿ ಬೇರೆ ಬೇರೆ ಶತಮಾನಗಳಲ್ಲಿ ಪಡಿಮೂಡಿದ ಸ್ತ್ರೀ ಜಿವನದ ನಾನಾ ಹೊಳಹುಗಳನ್ನು ಹಿಡಿದಿಡಲು ಯತ್ನಿಸಿದ್ದೇನೆ. ಮನುಸ್ಮೃತಿಯು ಹಲವು ಶತಮಾನಗಳ ಕಾಲ ದಂಡನೀತಿ, ನ್ಯಾಯದಾನ, ಸಾಮಾಜಿಕ ಕಟ್ಟಳೆಗಳ ಕೈಪಿಡಿಯಾಗಿ ಉಳಿದು ಬಂದಿತ್ತು ಎಂಬ ನಂಬಿಕೆ ಇದೆ. ಇದು ಹಾಗೂ 'ನಸ್ತ್ರೀ ಸ್ವಾತಂತ್ರ್ಯ ಮರ್ಹತಿ!' ಎಂದು ಘೋಷಿಸಿ ಸ್ತ್ರೀವಾದಗಳ ಭರ್ತ್ಸನೆಗೆ ಕಾರಣನಾದ ಮನುಸ್ಮೃತಿಕಾರ, ನಿಜಕ್ಕೂ ಸ್ತ್ರೀ ದ್ವೇಷಿಯೇ? ಮಹಿಳೆಯರು ಹಾಗೂ ಮಕ್ಕಳ ಸಾಮಾಜಿಕ ರಕ್ಷಣೆಯ ಕಳಕಳಿ ಅವನಿಗಿರಲಿಲ್ಲವೇ? ಇಂದಿನವರಿಗಿದೆಯೇ? ಎಂಬ ಅಂಶಗಳನ್ನು 'ಮನುಸ್ಮೃತಿ ಮತ್ತು ಮಹಿಳೆ' ಪ್ರಬಂಧದಲ್ಲಿ ಚರ್ಚಿಸಿದ್ದೇನೆ.

ಕನ್ನಡ ನಾರಿ, ಶತಮಾನಗಳಲ್ಲಿ ಸ್ವಂತಿಕೆಯನ್ನು ಮೆರೆಯುತ್ತ ಬಂದಿದ್ದಾಳೆ. ಇಂದಿನ ಎಲ್ಲ ಕ್ಷೇತ್ರಗಳಲ್ಲಿಯ ಅವಳ ಮುನ್ನಡೆಯೆಂಬುದು ದಿಢೀರ್ ಬೆಳವಣಿಗೆಯಲ್ಲ. ಜೊತೆಗೆ ವರ್ತಮಾನದ ಅವಳ ಸಾಧನೆ, ನೆಮ್ಮದಿಯನ್ನು ನೀಡಿಲ್ಲ! ಎಂಬ ಅಂಶಗಳನ್ನು 'ಶತಮಾನಗಳಲ್ಲಿ ಕನ್ನಡತಿ' ಲೇಖನದಲ್ಲಿ ತರಲುಯತ್ನಿಸಿದಂತೆ, ಲಲಿತ ಕಲೆಗಳಲ್ಲಿ ಅವಳ ಸಾಧನೆಯನ್ನು ಮೂರನೆ ಅಧ್ಯಾಯದಲ್ಲಿ ಒಡಮೂಡಿಸಲು ಹವಣಿಸಿದ್ದೇನೆ.

ನಗರಗಳಲ್ಲೇ ಹುಟ್ಟಿ ಬೆಳೆದು ಬಾಳಿ ತಮ್ಮ ಹಕ್ಕು-ಬಾಧ್ಯತೆಗಳ ಬಗ್ಗೆ ಹೋರಾಡುವ ಮಹಿಳಾ ವೃಂದಕ್ಕೆ ಪ್ರತಿಕೂಲವಾದ ಪರಿಸರ, ನಿಸರ್ಗದ ಪ್ರಕೋಪ, ಕಾಡುಮೃಗಗಳ ಹಾವಳಿ, ರೋಗರುಜಿನಗಳು, ಮುಖ್ಯವಾಗಿ ತೀವ್ರ ಬಡತನಗಳೊಂದಿಗೆ ಹೋರಾಡುತ್ತಲೇ ದಿನ ಕಳೆಯುವ ಮುಗ್ಧ ಆದಿವಾಸಿ ನಾರಿಯರ ಪರಿಚಯ ಇಲ್ಲ. ನನ್ನ ಪತಿ, ಡಾ. ಕೃಷ್ಣಾನಂದ ಕಾಮತರು, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ 'ಫೆಲೋ' ಆಗಿ ಒಂದು ವರ್ಷ ಮಧ್ಯಪ್ರದೇಶದ ಕಾಡು-ಮೇಡುಗಳಲ್ಲಿ ಸಂಚರಿಸುತ್ತಿದ್ದಾಗ, ನಾನೂ ಕೆಲ ಕಾಲ ಅವರೊಂದಿಗಿದ್ದೆ. ನಮ್ಮ ಜಿಲ್ಲೆಯ ಹಾಲಕ್ಕಿ ಗೌಡತಿಯರ ಜೀವನವನ್ನು ಸನಿಹದಿಂದ ಬಲ್ಲೆ. ಇವರೆಲ್ಲರ ನೋವು-ನಲಿವಿನ ಕ್ಷಣಗಳನ್ನು 'ಆದಿವಾಸಿ ಮಹಿಳೆಯರು' ಅಧ್ಯಾಯದಲ್ಲಿ ಚಿತ್ರಿಸುವ ಯತ್ನ ಮಾಡಿದ್ದೇನೆ.

ಸಂಶೋಧನೆ, ಸತ್ಯಶೋಧಗಳು ಎಲ್ಲ ಕಾಲಕ್ಕೂ ಸಂತೋಷ ಕೊಡುವ ವಿಚಾರಗಳಲ್ಲ. ಹಲವು ಬಾರಿ ಮುಖಗಳು ಅಪ್ರಿಯವಾಗಿ, ಕಟುವಾಗಿ ಕೆರಳಿಸುವಂತೆ ಇರುತ್ತವೆ. ಆಯಾ ಶತಮಾನಗಳ ಸಾಮಾಜಿಕ ಹಿನ್ನೆಲೆಯಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಅರಿಯುವ, ಅರ್ಥೈಸುವ ಯತ್ನ ಮಾಡಿದರೆ, ಇಂದಿನ ಸ್ತ್ರೀಯರ ಸ್ಥಿತಿಗಳನ್ನು ಹೊಸಬೆಳಕಿನಲ್ಲಿ ನೋಡಲು ಸಾಧ್ಯ. ಅಂಥ ಪ್ರಯತ್ನ ಇಲ್ಲಿದೆ. ಮಹಿಳಾ ಸಾಹಿತ್ಯ ಪ್ರಕಟನೆಯಲ್ಲಿ ವಿಶೇಷ ಉತ್ಸಾಹವುಳ್ಳ ಶ್ರೀ ಎ. ಎಸ್. ಭಟ್ ದಂಪತಿಗಳ ಪ್ರೋತ್ಸಾಹ-ಪ್ರಚೋದನೆಗಳಿಂದ ಈ ಪುಸ್ತಕ ನಿರೀಕ್ಷೆ ಮೀರಿ ಬೇಗನೆ ಬೆಳಕು ಕಂಡಿದೆ! ಅವರಿಗೆ ನನ್ನ ಕೃತಜ್ಞತೆಗಳು.

ಬೆಂಗಳೂರು
15-5-2001

ಜ್ಯೋತ್ಸ್ನಾ ಕಾಮತ್

ಪರಿವಿಡಿ

1. ಮನುಸ್ಮೃತಿ ಮತ್ತು ಮಹಿಳೆ 1

2. ಶತಮಾನಗಳಲ್ಲಿ ಕನ್ನಡಿತಿ 34

3. ಕನ್ನಡಿತಿ ಮತ್ತು ಲಲಿತಕಲೆಗಳು 43

4. ಆದಿವಾಸಿ ಮಹಿಳೆಯರು 62

5. ಅಂಬಿಕಾತನಯದತ್ತರ ಸ್ತ್ರೀ ದೃಷ್ಟಿಕೋನ 73

6. ಮಹಿಳೆ ಮತ್ತು ಕಾನೂನು ರಕ್ಷಕರು 88

7. ಬಾನುಲಿ ಮತ್ತು ನಾರೀಜಾಗೃತಿ 98

8. ಮಹಿಳೆ: ಉದ್ಯೋಗ - ಗೃಹಕೃತ್ಯಗಳ ನಡುವೆ 107

9. ಸ್ತ್ರೀ-ಪುರುಷ ಸಮಾನತೆ: ಒಂದು ವಿವೇಚನೆ 123

'ಮನುಸ್ಮೃತಿ' ಮತ್ತು ಮಹಿಳೆ

ಇತ್ತೀಚೆಗೆ 'ಮನುಸ್ಮೃತಿ' ಅಥವಾ 'ಮನು ಧರ್ಮಶಾಸ್ತ್ರ'ವನ್ನು ಬರೆದವನೆಂದು ಭಾವಿಸಲಾದ ಮನು ಮಹರ್ಷಿಯನ್ನು ಟೀಕಿಸುವವರು ಹೆಚ್ಚುತ್ತಲೇ ಇದ್ದಾರೆ. ಸಂಪ್ರದಾಯವಂತರನ್ನು 'ಮನುವಾದಿ' ಗಳೆಂದು ಕರೆಯುವದು ವಾಡಿಕೆಯಾಗಿದೆಯಲ್ಲದೇ ಒಂದು ರಾಷ್ಟ್ರೀಯ, ರಾಜಕೀಯ ಪಕ್ಷಕ್ಕೆ 'ಮನುವಾದಿ' ಪಕ್ಷವೆಂಬ ಅನ್ವರ್ಥಕನಾಮ ಸಂದಿದೆ! ಮನುವನ್ನು ನಿಂದಿಸಲು ಕಾರಣಗಳು ಇಲ್ಲದಿಲ್ಲ. ವಿಶ್ವದಲ್ಲೇ ವಿಶಿಷ್ಟವಾದ, ಜಾತಿ ಪ್ರಧಾನವಾದ, ವಿಷಮ ಸಮಾಜ ವ್ಯವಸ್ಥೆ ನಮ್ಮದು. ತೀರ ಪ್ರಾಚೀನ ಕಾಲದಲ್ಲಿ ಸಮಾಜಕ್ಕೆ ಭದ್ರ ಬುನಾದಿ ಒದಗಿಸಲೆಂದು ಕಲ್ಪಿಸಿದ ವರ್ಣಾಶ್ರಮ ವ್ಯವಸ್ಥೆ, ಬರುಬರುತ್ತ ವಿಕೃತಗೊಂಡು, ಸ್ಪೃಶ್ಯಾಸ್ಪೃಶ್ಯ ಜಾತಿಗಳೆಂದು, ಕೃತ್ರಿಮ ಭೇದ ಬೆಳೆಯುತ್ತ ಬಂದು, ಮೂಲ ಉದ್ದೇಶವೇ ವಿಫಲವಾದದ್ದು, ಕಟುವಾದ ಚಾರಿತ್ರಿಕ ಸತ್ಯ. ಈ ವಿಷಮ ವ್ಯವಸ್ಥೆಯ ಸ್ಪಷ್ಟ ರೂಪವನ್ನು ಮನುಸ್ಮೃತಿಯಲ್ಲಿ ಕಾಣುತ್ತೇವಾದ್ದರಿಂದ, ಅದು ವಿಚಾರವಾದಿಗಳ, ಸಮಾಜ ಸುಧಾರಕರ ಕೋಪಕ್ಕೆ ಕಾಲಕಾಲಕ್ಕೆ ತುತ್ತಾಗಿದ್ದರೆ ಆಶ್ಚರ್ಯವಿಲ್ಲ.

ಆದರೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಮ್ಮದೇ ಸಮರ್ಪಕವಾದ ಸಂವಿಧಾನವನ್ನು ಪಡೆದಿದ್ದೇವೆ. ಸರ್ವತಂತ್ರ ಸ್ವತಂತ್ರ ಗಣರಾಜ್ಯವನ್ನು ರೂಪಿಸಿ ಕೊಂಡಿದ್ದೇವೆ. ಸ್ತ್ರೀ ಪುರುಷ ಭೇದವಿಲ್ಲದೇ ಸಮಾನವಾದ ರಾಜಕೀಯ, ಆರ್ಥಿಕ, ಸಾಮಾಜಿಕ ಹಕ್ಕುಗಳನ್ನು ಪಡೆದಿದ್ದೇವೆ. ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿದ ಮನುವನ್ನು ಝಾಡಿಸಿ ಮೂಲೆಗುಂಪಾಗಿಸಿದ್ದೇವೆ. ಆದರೂ 'ಮನುವಾದ' ಜೀವಂತವಾಗಿದೆಯೇ? ಮನುವನ್ನು, ಎಂದೋ ಬೂದಿ ಯಾಗಿ ಹೋದ ವ್ಯಕ್ತಿಯನ್ನು ಇಂದು, ಮುಂದೆಂದೂ (ಹಲವು ಬಾರಿಹಿಂದೆ ಸಹ!) ಸಾಮಯಿಕತೆ ಇಲ್ಲದಾತನನ್ನು ಪುನಃ ಪುನಃ ನೆನಪಿಸಿಕೊಂಡು ಉಗುಳುವಂಥ ಪರಿಸ್ಥಿತಿ ಏತಕ್ಕೆ ಬರುತ್ತದೆ? ಎಂದು ಆಶ್ಚರ್ಯ ಪಡುವಂತೆ ಆಯಿತು. ಇತ್ತೀಚೆಗಂತೂ ಒಂದು ಮಹಿಳಾ ಪತ್ರಿಕೆ, ಸ್ತ್ರೀಯನ್ನು ಮನುವು ದಾಸಿಯಾಗಿ,

ಸೂಳೆಯಾಗಿ ಕಂಡ! ಎಂದು ಬರೆದದ್ದನ್ನು ಓದಿದ ಬಳಿಕ, ಮನು ಸ್ಮೃತಿಯನ್ನು ಮೂಲ ಸಂಸ್ಕೃತದಲ್ಲಿ ಓದಿಯೇ ಆತನ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ಕುತೂಹಲ ಹುಟ್ಟಿತು. ಓದುತ್ತ ಹೋದಂತೆ, ಆದರೊಳಗಿನ ದ್ವಂದ್ವಾತ್ಮಕವಾದ, ಗೊಂದಲವನ್ನುಂಟು ಮಾಡುವ ಹೇಳಿಕೆಗಳನ್ನು ಪರಿಶೀಲಿಸುತ್ತ ಹೋದಂತೆ, ಭಾರತದ ಅತಿಮುಖ್ಯವಾದ ಧರ್ಮಶಾಸ್ತ್ರವೆನಸಿಕೊಂಡ ಈ ಗ್ರಂಥದಲ್ಲಿ ಉಲ್ಲೇಖಿತವಾದ ಕಟ್ಟುಪಾಡುಗಳು ಎಂದೂ ಪೂರ್ಣರೂಪದಲ್ಲಿ ಪಾಲಿಸಲ್ಪಟ್ಟಿರಬಹುದಾದ ಸಾಧ್ಯತೆಯಿಲ್ಲ! ಎಂದು ಸ್ಪಷ್ಟವಾಗತೊಡಗಿತು. ಪ್ರಾಯಶ್ಚಿತ್ತಕ್ಕೆ ಸಂಬಂಧಿಸಿದ ಕೆಲವಂತೂ ಭ್ರಮಿಷ್ಠ ಕಲ್ಪನೆಗಳೇ ಆಗಿವೆ. ಮನುಸ್ಮೃತಿಯ ಸಮಕಾಲೀನ ಚರಿತ್ರೆಯನ್ನೂ, ಸಮೀಪದ ಯುಗದ ಕೌಟಿಲ್ಯ, ವಾತ್ಸ್ಯಾಯನರ ಕೃತಿಗಳನ್ನೂ ಅಭ್ಯಸಿಸಿದಾಗ, ಮನುವಿಗೆ ಸಂದ ಸಾರ್ವಕಾಲಿಕ ಮಾನ್ಯತೆಯೆಂಬುದು ಕಾಲ್ಪನಿಕ ವಿಚಾರವೆಂದು ಅನಿಸಿತು. ಆತನ ಅಭಿಪ್ರಾಯ ಗಳಲ್ಲಿ ಹೆಚ್ಚಿನವು ಗ್ರಂಥಸ್ಥವಾಗಿ ಉಳಿದಿರುವ ಸಂಭವವೇ ಹೆಚ್ಚು! ಎಂಬುದು ಸಾಮಾಜಿಕ ಸಂಘಟನೆಯ ಕುರಿತಾದ ನಮ್ಮ ಉಪಖಂಡದ ಒಟ್ಟಾರೆ ಚರಿತ್ರೆಯನ್ನು ಗಮನಿಸಿದಾಗ ತೀರ್ಮಾನಿಸುವಂತೆ ಆಯಿತು.

ಮನುಸ್ಮೃತಿಯಲ್ಲಿ ಒತ್ತು ಕೊಟ್ಟದ್ದು ಎರಡೂವರೆ ಸಹಸ್ರ ವರ್ಷಗಳ ಹಿಂದಿನ ಗೃಹಸ್ಥ ಧರ್ಮಕ್ಕೆ. ಈ ಆದರ್ಶಪ್ರಾಯವಾದ ಗೃಹಜೀವನವನ್ನು ಮಾನವ ಸಹಜ ದೌರ್ಬಲ್ಯಗಳು, ಎಂದಿಗೂ ಸಾಧ್ಯವಾಗಿಸುವದಿಲ್ಲವೆಂಬುದು ಎಲ್ಲರೂ ಎಲ್ಲ ಕಾಲದಲ್ಲೂ ಒಪ್ಪಿಕೊಳ್ಳಬೇಕಾದ ಮಾತೇ! ವ್ಯವಸ್ಥಿತವಾದ ಮಾನವ ಸಮಾಜ ಜೀವನಕ್ಕೆ ಕೆಲವೊಂದು ಕಟ್ಟುಪಾಡುಗಳು ಅವಶ್ಯ ಎಂಬುದನ್ನು ಜಗತ್ತಿನ ಎಲ್ಲ ಸಭ್ಯತೆಗಳೂ ಒಪ್ಪಿಕೊಳ್ಳುತ್ತವೆ. ಭಾರತವೂ ಹೊರತಾಗಿರಲಿಲ್ಲ. ಅತಿ ಪುರಾತನ ಕಾಲದಿಂದಲೂ ಬಳಕೆಯಲ್ಲಿದ್ದ ಮನುಮಹರ್ಷಿಯ ವಿಚಾರಗಳನ್ನು ನಮ್ಮ ಹಿರಿಯರು. ತಾಳೆಗರಿ ಗ್ರಂಥದಲ್ಲಿ ಜೋಪಾನವಾಗಿ ಕಾಯ್ದಿರಿಸುವಂತೆ ನೋಡಿ ಕೊಂಡರು. ಅವಶ್ಯಕತೆ ಬಿದ್ದಾಗ ಬಳಸಿಕೊಂಡರು. ಅನುಕೂಲವಾಗದಿದ್ದಾಗ ಸುಮ್ಮನಿದ್ದುಬಿಟ್ಟರು. ಪ್ರಬಲರಾದ ಆಳರಸರಂತೂ ಸ್ಮೃತಿ ವಿರುದ್ಧವಾಗಿ ನಡೆದು ಕೊಂಡದ್ದೂ ಇದೆ, ಎಂಬುದನ್ನು ಕೆಲವು ಐತಿಹಾಸಿಕ ಘಟನೆಗಳಿಂದ ಅರಿಯುವಂತೆ ಆಯಿತು.

ಏಕಪ್ರಕಾರವಾಗಿ ಅಂದರೆ ಎರಡು ಸಾವಿರ ವರ್ಷಗಳಿಂದ ಬದಲಾವಣೆ ಹೊಂದದೇ ಪ್ರಚಾರದಲ್ಲಿರುವ ಮನುಸ್ಮೃತಿಯು ಅತ್ಯಂತ ತ್ರೋಟಕವಾಗಿ ಶ್ಲೋಕರೂಪದಲ್ಲಿ ಬರೆಯಲ್ಪಟ್ಟಿದೆ. ಇದರಿಂದಾಗಿ ವಿವಿಧ ರೀತಿಯ ವ್ಯಾಖ್ಯಾನಗಳಿಗೆ, ಟೀಕೆಗೆ, ವಿಶ್ಲೇಷಣೆಗೆ ಎಡೆಮಾಡಿಕೊಟ್ಟಿದೆ. ಪ್ರಸ್ತುತ ಮಹಿಳೆಯರಿಗೆ ಸಂಬಂಧಿಸಿದ ವಿಚಾರಗಳನ್ನು ಪರಾಮರ್ಶಿಸಿದಾಗ, ಸ್ತ್ರೀಯರಿಗೆ ಅನುಕೂಲವಾಗಬಹುದಾಗಿದ್ದ ಮೂಲ ಮನುಸ್ಮೃತಿಯ ವಿಚಾರಗಳನ್ನು, ಈ ಶಾಸ್ತ್ರಗ್ರಂಥದ ಟೀಕಾಕಾರರು, ವ್ಯಾಖ್ಯಾನಕಾರರು ಕೈಬಿಟ್ಟಿದ್ದಾರೆ, ತಿರುಚಿದ್ದಾರೆ. ನಂತರದ ಶತಮಾನಗಳ ವ್ಯಾಖ್ಯಾನಕಾರರೂ, ಸ್ಮೃತಿಕಾರರೂ ಭಾರತೀಯ ನಾರಿಗೆ ಮನುವಿಗಿಂತ ಹೆಚ್ಚಿನ ಅನ್ಯಾಯವೆಸಗಿದ್ದಾರೆ! ಎಂಬುದು ಸ್ಪಷ್ಟ. ಆಕೆಯ ಅಳಿಗಾಲ ಭಾರತದಲ್ಲಿ ಮನುಸ್ಮೃತಿರೂಪಗೊಳ್ಳುವ ಮೊದಲೇ ಆರಂಭವಾಗಿದ್ದಿತು. ಮನುವಿನಿಂದಾಗಿ ಹೆಚ್ಚಿನ ಒತ್ತು ಅಥವಾ ಅಧಿಕೃತ ಸಮ್ಮತಿ ಪಡೆದು ಇನ್ನೂ ಮುಂದಿನ ಶತಮಾನಗಳಲ್ಲಿ ಅದು ಜೋರಾಗಲು ಅವಕಾಶವಾಯಿತು ಎಂಬುದು ಗಮನಾರ್ಹ ಅಂಶವಾಗಿದೆ.

ಮನುವಿನ ಮೂಲ ಶ್ಲೋಕಗಳನ್ನು ಅರ್ಥೈಸುವದೂ ಸುಲಭವಾಗಲಿಲ್ಲ. ಒಂದು ಸಮಸ್ಯೆ ಅಥವಾ ವಿಚಾರದ ಕುರಿತಾದ ಅವನ ಅಭಿಪ್ರಾಯ, ಪರಸ್ಪರ ವಿರೋಧಿ ಶ್ಲೋಕಗಳಲ್ಲಿ, ಕೆಲಬಾರಿ ಒಂದೇ ಕಡೆ ಕಂಡುಬರುತ್ತದೆ! ಉದಾಹರಣೆಗೆ ವಿಧವಾ ವಿವಾಹ, ನಿಯೋಗ ಮುಂತಾದವಕ್ಕೆ ಸಮ್ಮತಿಯೂ, ನಿಷೇಧವೂ ಬಂದೇ ಬರುತ್ತವೆ. ಅದರಂತೆ ವಧುದಕ್ಷಿಣೆ (ಕನ್ಯಾಶುಲ್ಕಕ್ಕೆ) ನಿಷೇಧವೂ ಸಮ್ಮತಿಯೂ ಒಂದೇ ಎಡೆಯಲ್ಲಿ ಬಂದಿರುವದನ್ನು ನೋಡಬಹುದು. ಇಂಥ ವಿರೋಧಾತ್ಮಕ ಹೇಳಿಕೆಗಳಿಗೆ ಕಾರಣಗಳನ್ನು, ಹಿನ್ನೆಲೆಯನ್ನೂ ಕಂಡು ಹಿಡಿಯುವ ಪ್ರಯತ್ನ ಮಾಡಿದೆ. ಒಂದು ವರ್ಷದ ಮನುಸ್ಮೃತಿಯ ಅಧ್ಯಯನದ ನಂತರ ಮಹಿಳೆಯರನ್ನು ಕುರಿತಾದ ಮನುವಿನ ಧೋರಣೆಯನ್ನು ಸಾಮಯಿಕವೆನಿಸುವ ಕೆಲವೇ ಅಂಶಗಳಿಗಷ್ಟೇ ಚೌಕಟ್ಟನ್ನು ಹಾಕಿಕೊಂಡು, ವಿವರಣೆ ಕೊಡಲು ಯತ್ನಿಸಲಾಗಿದೆ.

ಈ ಪ್ರಬಂಧ, ಮನುಸ್ಮೃತಿಯ ಸಮರ್ಥನೆ ಅಲ್ಲವೇ ಅಲ್ಲವೆಂದು ಮೊದಲಲ್ಲಿಯೇ ಹೇಳಿಬಿಡುವದು ಕ್ಷೇಮಕರ! ಶತಶತಮಾನಗಳಲ್ಲಿ ಶೋಚನೀಯ ರೂಪ ತಾಳುತ್ತ ಬಂದ ಭಾರತೀಯ ನಾರಿಯ ಅಧೋಗತಿಗೆ 'ಮನು' ಎಂಬಾತನು

ಎಷ್ಟುಮಟ್ಟಿಗೆ ಕಾರಣನಾದ? ಸುಲಭದಲ್ಲಿ ಬದಲಾವಣೆಗೆ ಒಪ್ಪದ ಭಾರತೀಯ ಮಾನಸ, ಎಷ್ಟುಮಟ್ಟಿಗೆ ಕಾರಣವಾಗಿದೆ? ಮಹಿಳಾ ಜಾಗೃತಿಯನ್ನು ಸಾಧಿಸಲು ಯತ್ನಿಸದ ಪಟ್ಟಭದ್ರಾಸಕ್ತಿಯ ಅಂಶಗಳು ಎಷ್ಟು ಕಾರಣವಾಗಿವೆ? ಎಂದು ಕೆಲವರಾದರೂ ಗಂಭೀರವಾಗಿ ಯೋಚಿಸುವ ಕಾಲ ಬಂದಿದೆ.

ಮನುವಿನ ಕುರಿತಾದ ಮೇಲಿಂದ ಮೇಲೆ ಚರ್ಚಿಸಲ್ಪಡುವ ಅಂಶಗಳನ್ನು, ಕೆಳಗಿನಂತೆ ಸಂಗ್ರಹಿಸಬಹುದು.

1. ಮಾನವರಿಗೆಲ್ಲ ಮೂಲಪುರುಷನಾದ ಮಹರ್ಷಿ (ಮಹಾರಾಜನೆನ್ನುವುದೂ ಉಂಟು) ಮನುವೆಂಬಾತನು ಒಳ್ಳೆಯ ಬದುಕಿಗೆ ಸಹಾಯವಾಗುವ 'ಮನುಸ್ಮೃತಿ' ಎಂಬ ಗ್ರಂಥವನ್ನು ರಚಿಸಿದ. ಅನಾದಿ ಕಾಲದಿಂದ ಭಾರತೀಯರು ಅದನ್ನು ತಪ್ಪದೇ ಪಾಲಿಸಿದರು. ಸರ್ವಮಾನ್ಯತೆ ಪಡೆದುದರಿಂದ ಬ್ರಿಟಿಷರು ನ್ಯಾಯ ನಿರ್ಣಯ, ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಇದನ್ನೇ ಅನುಸರಿಸಿದರು. ನಮ್ಮದೇ ಹಿಂದೂ ಮಸೂದೆ ಬರುವ ತನಕ ಮನುಸ್ಮೃತಿಯೇ ಸ್ತ್ರೀಧನ, ವಾರಸಾ ಹಕ್ಕು ದತ್ತಕಾದಿಗಳಿಗೆ ಭಾರತದಲ್ಲಿ ಆಧಾರವಾಗಿತ್ತು.

2. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' (ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ) ಎಂದು ಘೋಷಿಸುವದರ ಮೂಲಕ ಮನುವು ಆಕೆಯ ಶಾಶ್ವತ ಪರಾಧೀನತೆಗೆ ನಾಂದಿ ಹಾಡಿದ. ಸ್ತ್ರೀಧನ, ಆಸ್ತಿ, ಧನಕನಕಾದಿಗಳಿಂದ ಅವಳು ವಂಚಿತಳಾಗುವಂತೆ ಮಾಡಿದ.

3. 'ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೆ ತತ್ರ ದೇವತಾಃ' ನಾರಿಯು ಪೂಜಿಸಲ್ಪಡುವಲ್ಲಿ ದೇವತೆಗಳು ನಲಿಯುತ್ತಾರೆ' ಎಂದಾತ ಇದೇ ಮನುವೇ? ಹಾಗಿದ್ದರೆ ಮೇಲಿನ ಹೇಳಿಕೆಗೆ ಇದು ವಿರುದ್ಧವಾಗಿದೆಯಲ್ಲವೇ? ಪೂಜನೀಯಳು ಎಂದು ಪರಿಗಣಿಸಲ್ಪಟ್ಟವಳು. ಗೃಹಬಂಧನ, ದಿಗ್ಬಂಧನಗಳಿಗೆ ಒಳಗಾಗುವದು ಅಪೇಕ್ಷಣೀಯವೇ? ಮನುವು ಸ್ತ್ರೀ ದ್ವೇಷಿಯೇ? ಸ್ತ್ರೀ ಪ್ರಶಂಸಕನೇ?

4. ಭಾರತೀಯ ಸಂಸ್ಕೃತಿಗೆ ಕಳಂಕ ಪ್ರಾಯವಾದ ಬಾಲವಿವಾಹಕ್ಕೆ ಸಮ್ಮತಿ, ವಿಧವಾ ವಿವಾಹಕ್ಕೆ ಅಸಮ್ಮತಿ, ವಿಧವೆಯು ತಲೆ ಬೋಳಿಸಿಕೊಂಡು ಕೆಂಪು ಸೀರೆಯುಟ್ಟು, ಒಪ್ಪತ್ತಿನ ಆಹಾರ, ಜಪತಪಗಳನ್ನು ಕೈಕೊಂಡು,

ಅಮಂಗಲೆಯೆನಿಸಿಕೊಂಡು ಆಯುಷ್ಯವಿಡೀ ಕೊರಗುವಂತೆ ಮಾಡಲು ಮನುವೇ ಕಾರಣ. ಸಹಗಮನಕ್ಕೆ, ದೇವದಾಸಿ ಪದ್ಧತಿಗೆ ಅವನೇ ಕಾರಣ!

5. ಮನುವಿನ ಪರಂಪರೆ ಜೀವಂತವಾಗಿದೆ!

ಇವನ್ನು ಒಂದೊಂದಾಗಿ ಪರಾಮರ್ಶಿಸಬಹುದು :

(1) ಮನುವೆಂಬಾತನು ಯಾರು? ವೇದಕಾಲದಿಂದಲೂ ಮನುವಿನ ಉಲ್ಲೇಖ ಬರುತ್ತದೆ. ಧರ್ಮ, ಸಮಾಜ, ನ್ಯಾಯ, ವ್ಯವಹಾರಗಳ ಸೂಕ್ಷ್ಮ ವಿಚಾರಗಳಲ್ಲಿ ಅನುಮಾನಗಳು ಕಾಣಿಸಿಕೊಂಡಾಗ, ಮನುವಿನ ಅಭಿಪ್ರಾಯವನ್ನು ಅಧಿಕೃತವಾಗಿ ಉದ್ಧರಿಸುವದು ರೂಢಿಯಾಗಿತ್ತು. ಕ್ರಿಸ್ತಪೂರ್ವದ ಸಹಸ್ರ ವರ್ಷಗಳಾಚೆ ಅಂಥ ಹೆಸರಿನ ವ್ಯಕ್ತಿ ಬಾಳಿದ್ದು ಧರ್ಮ, ರಾಜನೀತಿ, ನ್ಯಾಯ, ಸಾಮಾಜಿಕ ನೀತಿ-ರೀತಿಗಳ ಕುರಿತಾದ ಸ್ಪಷ್ಟವಾದ ಕೆಲಸೂತ್ರಗಳನ್ನು ರೂಪಿಸಿರಬಹುದು. ಪ್ರಾಚೀನಯುಗದಲ್ಲಿ ಆತನೊಬ್ಬ ಅತಿಮುಖ್ಯ ಆಧಾರರೂಪಿ ಸ್ಮೃತಿಕಾರನಾಗಿದ್ದನೆಂಬುದು ನಿಸ್ಸಂದೇಹ. ಆದರೆ ಆ ಯುಗದಲ್ಲಿ ಆತ ರೂಪಿಸಿದ ಹಲವು ಅಂಶಗಳು ನಂತರದ ಗ್ರಂಥರೂಪದ ಮನುಸ್ಮೃತಿಯಲ್ಲಿ ಇಲ್ಲ. ಉದಾಹರಣೆಗೆ ನಿರುಕ್ತಕಾರಯಾಸ್ಕನು (ಕ್ರಿ.ಪೂ. ಆರನೆಯ ಶತಮಾನ) ಆಸ್ತಿಯ ವಿಭಜನೆಯ ಸಂದರ್ಭದಲ್ಲಿ ಮನುವಿನ ಅಭಿಪ್ರಾಯವೇ ಅಧಿಕೃತವಾದದ್ದೆಂದು ಉಲ್ಲೇಖಿಸಿದ್ದಾನೆ. ಅದರ ಪ್ರಕಾರ ತಂದೆಯ ಸಂಪತ್ತಿನಲ್ಲಿ, ಆತನ ಯಾವತ್ತೂ ಸಂತಾನಕ್ಕೆ, ಗಂಡು-ಹೆಣ್ಣು ಸೇರಿದಂತೆ ಸಮಪಾಲು ಇತ್ತು! ಪ್ರಚಲಿತ ಮನುಸ್ಮೃತಿಯಲ್ಲಿ ಈ ಅಂಶ ಇಲ್ಲವೇ ಇಲ್ಲ! ಮೂಲ ಮನುವಿನ ಅಭಿಪ್ರಾಯ ಮುಂದರಿದ್ದರೆ, ನಾರಿಯ ಆರ್ಥಿಕ ಪರಾಧೀನತೆಯಿರುತ್ತಿರಲಿಲ್ಲ ಮತ್ತು ಈಗಿನ ಹಿಂದೂ ಕಾಯದೆಯಲ್ಲಿ ಹೆಣ್ಣು ಮಕ್ಕಳ ವಾರಸಾ ಹಕ್ಕನ್ನು ಸೇರಿಸುವ ಯತ್ನವನ್ನೇ ಮಾಡಬೇಕಾಗಿರಲಿಲ್ಲ. ಮನುವಿನ ಮೂಲ ವಿಚಾರಗಳು, ಶತಮಾನದಿಂದ ಶತಮಾನದಲ್ಲಿ ಬದಲಾಗುತ್ತ ಬಂದವು. ಮನುವಿನ ಹೆಸರು ಮಾತ್ರ ಮುಂದುವರಿಯಿತು.

'ಮನು ಹೇಳಿದ್ದೆಲ್ಲ ಔಷಧ' (ಮನುರ್ವೈ ಕಿಂಚಿದಾಹ, ತದ್ ಭೇಷಮ್) ಎಂಬ ಆಳವಾದ ನಂಬಿಕೆ ಜನರಲ್ಲಿ ಬೇರೂರಿ, ಇತರ ಯಾವ ಸ್ಮೃತಿಕಾರರು ಹೊಸದೇನನ್ನು ಹೇಳಿದರೂ ಒಪ್ಪಿಗೆಯಾಗುವಂತೆ ಇರಲಿಲ್ಲ. ಆದರೆ ಜನಜೀವನವೆಂದರೆ ನಿಂತ ನೀರಲ್ಲ. ರೀತಿ ನೀತಿಗಳು ಪರಿಸ್ಥಿತಿಗನುಗುಣವಾಗಿ

ಬದಲಾಗಲೇ ಬೇಕಾಗುತ್ತದೆ. ಅಂತೆಯೇ ಬದಲಾವಣೆಗಳನ್ನು ತರಲು ಯತ್ನಿಸು ನಂತರದ ಸ್ಮೃತಿಕಾರರು ಉಪಾಯವೊಂದನ್ನು ಹುಡುಕಿದರು. ಬರವಣಿಗೆಯಿನ ಸಾಕಷ್ಟು ಪ್ರಚಾರಕ್ಕೆ ಬಂದಿರದ ಯುಗದಲ್ಲಿ, ಮನುವಿನ ಹೆಸರಿನಿಂದ ಬದಲಾವಣೆಗಳನ್ನು ತಂದು ಬಿಟ್ಟರೆ ಮನುವಿನ ಸಿಂಧುತ್ವವೂ ಸಾಧಿ ದಂತಾಗುತ್ತದೆ. ತಮ್ಮ ಉದ್ದೇಶವೂ ಕೈಗೂಡುತ್ತದೆ, ಎಂದು ಮನಗಂಡ ಹೀಗಾಗಿ ನಂತರ ಹೊಸದಾಗಿ ಕಾಣಿಸಿಕೊಂಡ ರಿವಾಜುಗಳೂ ಮನುವಿನವ ಎಂದು ಸಾಮಾನ್ಯರೆಲ್ಲ ನಂಬುವಂತೆ ಬರೆದರು.

ಮನುಧರ್ಮಶಾಸ್ತ್ರದ ಪ್ರಭಾವ ಎಷ್ಟಿತ್ತೆಂದರೆ ಪ್ರಾಚೀನ ಭಾರತೀ ಸಂಸ್ಕೃತಿ ಹರಡಿದ ಮ್ಯಾನ್‌ಮಾರ್ (ಬ್ರಹ್ಮದೇಶ) ಇಂಡೋನೇಶಿ (ಸುವರ್ಣಭೂಮಿ) ಥ್ಯಾಲ್ಯಾಂಡ್ (ಸಯಾಮ್)ಗಳಲ್ಲೂ ತುಂಬ ಈಚಿನವ ಮನುವಿನ ಶಾಸ್ತ್ರವೇ ಜಾರಿಯಲ್ಲಿತ್ತು. ಭಿನ್ನರೂಪಗಳಲ್ಲಿ.

ಸಮಾಜದ ಚಟುವಟಿಕೆಗಳು ಬೆಳೆದಂತೆ, ಸಂಕೀರ್ಣತೆಯೂ ಹೆಚ್ಚಿ ಭಾರತದಾದ್ಯಂತ ರೂಢಿಯಲ್ಲಿದ್ದ ಆಚಾರವಿಚಾರಗಳನು ಕ್ರೋಢೀಕರ ಗ್ರಂಥರೂಪವಾಗಿಸುವ ಪ್ರಯತ್ನ ನಡೆಯಿತು. ಅದೇ ಗ್ರಂಥ, ಈ ಶತಮಾನ ಪ್ರಾರಂಭದ ತನಕ ಪ್ರಚಾರದಲ್ಲಿದ್ದ ಮನು ಸಂಹಿತೆ, ಮಾನವ ಧರ್ಮಶ ಅಥವಾ ಮನು ಸ್ಮೃತಿ. ಭಾರತೀಯರಿಗೆ ದೈನಂದಿನ ಜೀವನಕ್ಕೆ ಆಧಾರಗ ಎರಡು. ವೇದಗಳು ಅಂದರೆ ಶ್ರುತಿ ಹಾಗೂ ಮನು ಪ್ರಣೀತವೆನಿಸಿಕೊ ಸ್ಮೃತಿ ಎಂಬುದು ಜನಮನದಲ್ಲಿ ಬೇರೂರಿ ಹೋದ ಮಾತಾಗಿತ್ತು.

ಹೆಚ್ಚಿನ ಬದಲಾವಣೆಗಳನ್ನು ಕಾಣದೇ ಸಂಕಲಿತವಾಗಿ ಮುಂದುವರಿ ಬಂದ, ಆಚಾರ ಗ್ರಂಥ, ರೂಪ ತಾಳಿದ ಕಾಲ, ಕ್ರಿಸ್ತಶಕಪೂರ್ವ ಎರಡನೆ ಶತಮಾನದಿಂದ ಕ್ರಿಸ್ತಶಕ ಎರಡನೆಯ ಶತಮಾನವೆಂದು ಎಲ್ಲ ವಿದ್ವಾಂಸರ ಒಪ್ಪುತ್ತಾರೆ. ಅಂದರೆ ಕಳೆದ 1800 ವರ್ಷಗಳಿಂದ ಮನು ಸ್ಮೃತಿ ಒಂ ರೂಪದಲ್ಲಿರುತ್ತದೆ. ಹನ್ನೆರಡು ಅಧ್ಯಾಯಗಳಲ್ಲಿ ಹಂಚಿ ಹೋದ ಗ್ರಂಥದ 2684 ಶ್ಲೋಕಗಳಿವೆ. ಧರ್ಮಲಕ್ಷಣ, ವಿವಿಧ ಸಂಸ್ಕಾರಗಳು, ಸ್ತ್ರೀ-ಪುರು ಕರ್ತವ್ಯಗಳು. ವಿವಿಧ ವೃತ್ತಿಗಳನ್ನು ಪಾಲಿಸಬೇಕಾದ ನಿಯಮಗಳು. ರಾಜನೀ ದಂಡ, ತೆರಿಗೆಯ ನಿಯಮಗಳು, ನ್ಯಾಯದಾನದ ವ್ಯವಸ್ಥೆ, ಆಸ್ತಿಯ ವಿಭಜ ಅಪರಾಧ, ಶಿಕ್ಷೆ ಹಾಗೂ ಪ್ರಾಯಶ್ಚಿತ್ತಗಳು ಮುಂತಾದವೇ ಅಲ್ಲದೇ ಧಾಮಿ

ಜೀವನ ಕೈಕೊಳ್ಳುವವರಿಗೆ ನಿಯಮಾವಳಿಗಳನ್ನೂ ಅದು ಹೊಂದಿದೆ. ಖಂಡನೆಗೆ ಒಳಗಾದ ವರ್ಣಾಶ್ರಮ ನೀತಿ ಅದರೊಳಗಿನ ಒಂದು ಭಾಗವಾಗಿದೆ.

ಮನುಸ್ಮೃತಿ ರೂಪಗೊಂಡ ಸ್ವಲ್ಪಕಾಲದ ನಂತರ ಯಾಜ್ಞವಲ್ಕ್ಯ ಸ್ಮೃತಿ ಕ್ರೋಢೀಕೃತವಾಯಿತು. ನಂತರ ಹುಟ್ಟಿಕೊಂಡ ಸುಮಾರು ಇಪ್ಪತ್ತು ಸ್ಮೃತಿಗ್ರಂಥಗಳಿಗೆ ಮನು ಸ್ಮೃತಿಯೇ ಮೂಲ ಆಧಾರವಾಗಿದೆ.

ಮನುಸ್ಮೃತಿಯು ಗ್ರಂಥರೂಪ ತಾಳಿದ್ದು ಭಾರತ ಚರಿತ್ರೆಯ ಸಂಧಿಕಾಲದಲ್ಲಿ. ವಾಯುವ್ಯದಿಂದ ಶಕರು, ಯವನರು, ಹೂಣರು, ಪಹ್ಲವರಾದಿಯಾಗಿ ಅನಾರ್ಯ ಪಂಗಡಗಳು ಎಡಬಿಡದೇ ನುಗ್ಗಿ ಬಂದವು. ಕೇವಲ ಕೊಲೆ-ಸುಲಿಗೆಗಳಿಂದ ಇವು ತೃಪ್ತಿ ಹೊಂದಲಿಲ್ಲ. ಕಲ್ಪನೆಗೂ ಮೀರಿದ ಸುಫಲವಾದ ಈ ಪ್ರದೇಶದಲ್ಲಿ ಶಾಶ್ವತವಾಗಿ ತಳ ಊರಿದವು. ಇಲ್ಲಿಯ ನೆಲದೊಂದಿಗೆ ಒಂದಾಗುವ ಸರ್ವಪ್ರಯತ್ನ ನಡೆಸಿದವು. ಇಲ್ಲಿಯ ಧರ್ಮಗಳನ್ನು ಸ್ವೀಕರಿಸಿದವು. ಇಲ್ಲಿಯ ಹೆಂಗಳೆಯರನ್ನು ಮದುವೆಯಾದವು. ಸಾಮಾಜಿಕ ಮಾನ್ಯತೆ ಪಡೆಯುವ ಎಡಬಿಡದ ಯತ್ನ ನಡೆಸಿದವು.

ಆದರೆ ತಾವೇ ಶ್ರೇಷ್ಠಕುಲ ಸಂಭೂತರೆಂದು ನಂಬಿದ ಆರ್ಯಭೂಮಿಯ ವೈದಿಕ ಪಂಗಡದವರಿಗೆ ಇವರೆಲ್ಲರ ಆಗಮನ ಹಿತಕಾರಿಯಾಗಿರಲಿಲ್ಲ. ಸಂಸ್ಕಾರವಿಹೀನರಾದ ಈ ದಾಳಿಕಾರ, ಮ್ಲೇಂಛ ಪಂಗಡದವರೆಲ್ಲ ಅವರಿಗೆ 'ಶೂದ್ರ'ರೇ ಆಗಿದ್ದರು! ಸ್ಮೃತಿ ಕಾರರಿಗೆ ಇವರೆಲ್ಲರಿಂದ ತಮ್ಮ ಸ್ತ್ರೀಯರನ್ನು ಕಾಯ್ದಿರಿಸುವದು ಮುಖ್ಯವಾಯಿತು. ವರ್ಣಸಂಕರದಂಥ ಭೀತಿ ಇನ್ನೊಂದು ಇರಲಿಲ್ಲ. ಹೀಗಾಗಿ ಸ್ತ್ರೀಯರ ಮೇಲೆ ನಿರ್ಬಂಧಗಳು ಹೆಚ್ಚಾಗತೊಡಗಿದವು.

ಬಂದ ಆಕ್ರಮಣಕಾರರಲ್ಲಿ ಬಲಾಢ್ಯರಾದವರು ಬೌದ್ಧ, ಶೈವ, ಭಾಗವತ (ವೈಷ್ಣವ) ಮತಗಳನ್ನು ಸ್ವೀಕರಿಸಿ, ರಾಜರಾದರು. ಧರ್ಮರಕ್ಷಕರಾದರು. ಕಾಲಕ್ರಮದಲ್ಲಿ ಕ್ಷತ್ರಿಯರೆನಿಸಿಕೊಂಡರು. ವರ್ಣವ್ಯವಸ್ಥೆಯ ಕಟ್ಟುಪಾಡುಗಳು ಅವರನ್ನು ಸೋಂಕಲೇ ಇಲ್ಲ! ಹೀಗಾಗಿ ಸ್ಮೃತಿಕಾರರು ಕೆಲಮಟ್ಟಿಗೆ ಬಗ್ಗಿ ಮಿಶ್ರವಿವಾಹಕ್ಕೆ ಅನುಮತಿ ನೀಡಲೇಬೇಕಾಯಿತು. ಹೊಸದಾಗಿ ಕಾಣಿಸಿಕೊಂಡ 'ಶೂದ್ರ' ಜನಾಂಗಗಳಿಂದ ವೈದಿಕ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಪ್ರಯತ್ನ ಮನುಸ್ಮೃತಿಯ ಉದ್ದಕ್ಕೂ ಕಾಣಬಹುದಾಗಿದೆ.

ಮೊದಲಲ್ಲಿ ಬಹುಸಂಖ್ಯೆಯಲ್ಲಿ ಬೌದ್ಧರಾದ ಜನ, ಕ್ರಮೇಣ ಅದರಲ್ಲಿಯ ನ್ಯೂನತೆಗಳಿಂದಾಗಿ ಆಸಕ್ತಿಯನ್ನು ಕಳೆದುಕೊಳ್ಳಲಾರಂಭಿಸಿದ್ದರು. ಸನ್ಯಾಸಕ್ಕೆ ನೀಡಿದ ಪ್ರಾಮುಖ್ಯತೆಯಿಂದಾಗಿ, ಸಾಂಸಾರಿಕ ಜೀವನದ ನಶ್ವರತೆಯನ್ನು ಸಾರಿ ಹೇಳುವದರಲ್ಲಿ ಬೌದ್ಧ, ಜೈನ ಮತ ಪ್ರಚಾರಕರು ಸ್ಪರ್ಧೆಯನ್ನೇ ನಡೆಸಿದ್ದರು. ವೈದಿಕ ಧರ್ಮವೂ ಹಿಂದೆ ಬೀಳಲಿಲ್ಲ. ಈ ಮೂರೂ ಧರ್ಮಗಳಲ್ಲಿ ಸಾಮಾನ್ಯವಾದದ್ದು ಸ್ತ್ರೀನಿಂದೆ. ಅಧ್ಯಾತ್ಮಿಕ ಜೀವನ ಕೈಕೊಂಡ ಮುಮುಕ್ಷುಗಳ ಹಿತಚಿಂತನೆ, ಮುಖ್ಯವಾಗಿ ಕಂಡ ಮನುವು ಈ ವಿಚಾರದಲ್ಲಿ ಇನ್ನೆರಡು ಮತಗಳಿಂದ ಪ್ರಭಾವಿತನಾದದ್ದು ಸಂಧಿಕಾಲದ ಬೆಳವಣಿಗೆಯೇ! ಮೋಕ್ಷ ಸಾಧನೆಗೆ ಸ್ತ್ರೀಯರು ಅತಿ ದೊಡ್ಡ ಆತಂಕ ಎಂಬ ವಿಷಯದಲ್ಲಿ ಎಲ್ಲ ಪಂಥಗಳಲ್ಲಿ ಏಕಮತವಿತ್ತು.

ಮನುಸ್ಮೃತಿಕಾರನನ್ನು ಕಾಡಿದ್ದು ತೀರ ಪ್ರಾಚೀನ ಕಾಲದಿಂದ ರೂಢವಾಗಿದ್ದ ಹಾಗೂ ತನ್ನ ಕಾಲದಲ್ಲಿ ಬದಲಾಗಿ ಪ್ರಸ್ತುತವೆನಿಸಿದ್ದ ಆಚಾರ-ವಿಚಾರಗಳ ಸಮನ್ವಯ. ಆದಾಗಲೇ ಭರತ ಖಂಡದಲ್ಲಿ, ವಿವಿಧ ಜನಾಂಗಗಳು, ಬುಡಕಟ್ಟು ಸಮಾಜಗಳು, ಬೇರೆ ಬೇರೆ ಮತ, ಪಂಥಗಳನ್ನು ಪಾಲಿಸುತ್ತಿದ್ದ ಅವೈದಿಕರು, ಹಾಗು ವೈದಿಕ ಅನುಯಾಯಿಗಳ ಆಚರಣೆಗಳು ಒಂದರಿಂದೊಂದು ಭಿನ್ನವಾಗಿದ್ದವು. ಅವುಗಳಲ್ಲಿ ಹಸ್ತಕ್ಷೇಪ ಮಾಡುವ ವಿಚಾರ 'ಮನು' ಸ್ಮೃತಿಕಾರನಿಗೆ ಇರಲಿಲ್ಲ. ಅಷ್ಟೇ ಅಲ್ಲ. ಅರಸನಾದವನು ಜಾತಿಗಳ, ಜನಪದ ಸಮೂಹಗಳ ಕುಲಧರ್ಮಗಳ ರೀತಿನೀತಿಗಳನ್ನು ಎಚ್ಚರದಿಂದ ಪರಿಶೀಲಿಸಬೇಕು. (ಮನು. 8.41) ಹಾಗೆಯೇ ದೇಶ-ಕಾಲ ಪರಿಸ್ಥಿತಿಗೆ, ಜಾತಿ ಕುಲ ನಂಬಿಕೆಗಳಿಗೆ ಅವಿರುದ್ಧವಾದ ಆಡಳಿತ ಕ್ರಮವನ್ನು ನಿಯೋಜಿಸಬೇಕು (ಮನು 8.46) ಎಂದು ಸ್ಪಷ್ಟವಾಗಿ ಮನು ಸ್ಮೃತಿ ಹೇಳುತ್ತದೆ. ಹೀಗಾಗಿ ಬಹುಸಂಖ್ಯಾಕರು ತಮಗೆ ಒಗ್ಗಿ ಬಂದ ಕುಲದ ಧಾರ್ಮಿಕ ಹಾಗೂ ಸಾಮಾಜಿಕ ರೀತಿಗಳನ್ನೇ ಅನುಸರಿಸುತ್ತಿದ್ದರು. ಸ್ಮೃತಿ ವಾಕ್ಯ ಪರಿಪಾಲನೆಯೇ ಅಂದಿನ, ನಂತರದ ಯುಗದ ಭಾರತೀಯರೆಲ್ಲರ ಜೀವನದ ಮುಖ್ಯ ಅಂಗವಾಗಿತ್ತೆಂದು ಯಾರೂ ಭಾವಿಸಬೇಕಾಗಿಲ್ಲ!

ಮನುಸ್ಮೃತಿಯ ಮಾನ್ಯತೆ: ಬ್ರಿಟಿಶರು ಭಾರತದ ಸಾರ್ವಭೌಮತ್ವ ಹೊಂದುವ ತನಕ ಭಾರತದ ಬೇರೆ ಬೇರೆ ಸಂಸ್ಥಾನಗಳಲ್ಲಿ ಬೇರೆ ಬೇರೆ ಸ್ಮೃತಿಗಳ ಆಧಾರಿತ ಆಡಳಿತ ಹಾಗೂ ನ್ಯಾಯ ವಿತರಣೆಯ ಪ್ರಕಾರಗಳು

ಜಾರಿಯಲ್ಲಿದ್ದು ವ್ಯಾಖ್ಯಾನಕಾರರು ಕೂಡ ಮಾಡಿದ ವಿಶ್ಲೇಷಣೆಯೇ ಮುಖ್ಯ ಆಧಾರವಾಗಿತ್ತು. ಇಡೀ ದೇಶಕ್ಕೆ ಸರಿಹೋಗುವ ಒಂದೇ ಆಡಳಿತ ಪದ್ಧತಿಯನ್ನು (ನ್ಯಾಯಾಂಗವೂ ಸೇರಿದಂತೆ) ಬಳಕೆಯಲ್ಲಿ ತರುವ ಉದ್ದೇಶದಿಂದ ಆಧಾರಗ್ರಂಥವೊಂದರ ಹುಡುಕಾಟವನ್ನು ಬ್ರಿಟಿಷರು ಕೈಕೊಂಡಾಗ ಮನುಸ್ಮೃತಿಯೇ ಎಲ್ಲ ಕಡೆಯಲ್ಲಿ ಮಾನ್ಯತೆ ಪಡೆದ ಅಂಶವನ್ನು ಕಂಡುಕೊಂಡರು. ಸಾರ್ವಜನಿಕರಿಗೆ ಸಹಾಯವಾಗುವಲ್ಲಿ ಯಾಜ್ಞವಲ್ಕ್ಯ ಸ್ಮೃತಿಯ ಅಂಶಗಳನ್ನೂ ಸೇರಿಸಿಕೊಂಡ ನ್ಯಾಯ ವಿಧಾನವನ್ನು ರೂಪಿಸಿಕೊಂಡರು. ಮುಂದೆ ನಮ್ಮ ಸ್ವತಂತ್ರ ಸಂವಿಧಾನದಲ್ಲಿಯೂ ಬ್ರಿಟಿಷರ ಇದೇ ಮಾದರಿಯನ್ನೇ ಬಹುಮಟ್ಟಿಗೆ ಸ್ವೀಕರಿಸಿದ್ದರೆ ಆಶ್ಚರ್ಯಪಡಬೇಕಾಗಿಲ್ಲ.

ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಕಾಲ ಮನುಸ್ಮೃತಿಯೇ ಸಮಸ್ತ ಭಾರತದ ಜನಮಾನಸವನ್ನು ರೂಪಿಸುವದರಲ್ಲಿ ಪ್ರಭಾವ ಬೀರಿದೆ ಎಂಬ ಅಭಿಪ್ರಾಯ ಇತ್ತೀಚಿನದು. ಹೆಚ್ಚಿನ ಪ್ರಕ್ಷೇಪಗಳಿಲ್ಲದೇ ಗ್ರಂಥರೂಪದಲ್ಲಿ ಉಳಿದು ಬಂದ ಈ ಸಂಹಿತೆ, ಒಬ್ಬನೇ ವ್ಯಕ್ತಿಯ ಕೊಡುಗೆಯಲ್ಲ. ಒಂದೇ ಶತಮಾನದಲ್ಲಿ ರೂಪಗೊಂಡದ್ದೂ ಅಲ್ಲ. ಈಗಾಗಲೇ ಹೇಳಿದಂತೆ ಕಾಲಕಾಲಕ್ಕೆ ಬದಲಾಗುತ್ತ ಬಂದರೂ, ಆ ಆಚಾರ ವಿಚಾರಗಳೆಲ್ಲ ಮನುವಿನ ಹೆಸರನ್ನೇ ಹೊಂದಿದ್ದವು. ಹೀಗಾಗಿ ಕೊನೆಗೊಮ್ಮೆ, 'ಮನುಧರ್ಮಶಾಸ್ತ್ರ'ವೆಂಬ ಗ್ರಂಥವೊಂದು ರೂಪ ತಾಳಿದಾಗ ಪರಸ್ಪರ ವಿರುದ್ಧವೆನಿಸುವ, ಈಗಿನವರಿಗೆ ಗೊಂದಲವುಂಟು ಮಾಡುವ ಹೇಳಿಕೆಗಳನ್ನೂ ಸಂಗ್ರಹರೂಪದಲ್ಲಿ ಕಾಣುವಂತಾಗಿದೆ.

ಆಯಾ ಶತಮಾನಗಳ ವ್ಯಾಖ್ಯಾನಕಾರರು ವೈರುಧ್ಯಗಳನ್ನು ತಪ್ಪಿಸಲು, ಪ್ರಾರಂಭದಿಂದಲೇ ಒಂದು ಕ್ರಮವನ್ನು ಕೈಕೊಂಡರು. ತಮ್ಮ ಕಾಲಕ್ಕೆ ಉಚಿತವೆನಿಸುವ ಮನು ವಾಕ್ಯಗಳನ್ನು 'ಪ್ರಶಂಸೆ'ಯ ರೂಪದಲ್ಲಿ ಸ್ವೀಕರಿಸಿದರು. ಸರಿಬಾರದ ಅಂಶಗಳನ್ನು 'ನಿಷೇಧ'ವೆಂದು ಸಾರಿದರು. ಮತ್ತು ಅತ್ಯಂತ ಪ್ರಾಚೀನವಾಗಿದ್ದವುಗಳನ್ನು ಹಾಗೂ ಶತಮಾನಗಳಲ್ಲಿ ನಿಂತೇ ಹೋದ ಪದ್ಧತಿಗಳಿಗೆ ಸಂಬಂಧಿಸಿದವುಗಳನ್ನು, ಅಂತರ್ಜಾತೀಯ ಹಾಗೂ ವಿಧವಾ ವಿವಾಹ, ನಿಯೋಗ ಮುಂತಾದ ಮನುಸಮ್ಮತವಿಚಾರಗಳನ್ನು (ಇವು ಸ್ತ್ರೀಯರಿಗೆ ಅನುಕೂಲವಿದ್ದವು!) 'ಕಲಿವರ್ಜ' ಅಥವಾ ಕಲಿಯುಗದಲ್ಲಿ ನಡೆಯದ ವಿಚಾರಗಳು! ಎಂದು ತಾವೇ ಘೋಷಿಸಿಬಿಟ್ಟರು. ಹೀಗಾಗಿ ಸ್ಮೃತಿಗಳಲ್ಲಿ

ಗೌರವ ವಿಶ್ವಾಸವಿಟ್ಟ ಜನರಿಗೆ ವ್ಯಾಖ್ಯಾನಕಾರರ ಹೇಳಿಕೆಗಳೇ ವೇದವಾಕ್ಯವಾಗಿ ಪರಿಣಮಿಸುವಂತೆ ಆಯಿತು.

ಪ್ರಾರಂಭದಲ್ಲಿ ಹೇಳಿದ ವಿದೇಶೀಯ ಆಕ್ರಮಣಕಾರರಿಂದಾಗಿ ನಾರಿಯರ ಪರಾಧೀನತೆಗೆ ಒತ್ತು ಬಿದ್ದದ್ದು ನಿಜವಾದರೂ, ಅದಕ್ಕೂ ಮೊದಲೇ ಅವರ ಇಳಿಗಾಲ ಪ್ರಾರಂಭವಾಗಿದ್ದಿತು. ವಿರಳವಾದ ಜನಸಂಖ್ಯೆ, ಆಗಾಗ ಕೈಕೊಳ್ಳ ಬೇಕಾಗಿದ್ದ ಯುದ್ಧಗಳು, ಪಿಂಡದಾನಕ್ಕಾಗಿ ಪುತ್ರಸಂತಾನ ಪ್ರಾಪ್ತಿ ಇವುಗಳ ಮುಖ್ಯ ಆಶಯ, ಆರೋಗ್ಯಕರವಾದ ಸಂತತಿಯಾಗಿತ್ತು. ಇವೆಲ್ಲವೂ ನಾರಿಯನ್ನೇ ಅವಲಂಬಿಸಿದ್ದವು. ಹೀಗಾಗಿ ಸ್ತ್ರೀಯರಿಗೆ ಮನೆಯೇ ಮುಖ್ಯವಾಯಿತು ಹಾಗೂ ಗೃಹಿಣಿ ಮತ್ತು ಮಾತೆಯಾಗಿಯೇ ಅವಳು ಸಮಾಜದ ಅತಿಮುಖ್ಯವಾದ ಘಟಕವಾಗಿ ಮುಂದರಿಯುವಂತೆ ನೋಡಿಕೊಳ್ಳಲಾಯಿತು. ವೇದಕಾಲದಲ್ಲಿ ಲಭ್ಯವಾಗಿದ್ದ ಅಧ್ಯಾತ್ಮಿಕ ವಿದ್ಯೆಯ ಅವಕಾಶಗಳು ವಿರಳವಾಗುತ್ತ ನಡೆದಿದ್ದವು. ಜೈನ, ಬೌದ್ಧ ಧರ್ಮಗಳು, ವೈದಿಕ ಕರ್ಮಕಾಂಡಗಳ ವಿರುದ್ಧ ಬಂಡೆದ್ದರೂ, ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಗಳನ್ನು ಗೌರವಾನ್ವಿತವಾಗಿ ಗುರುತಿಸ ಲಿಲ್ಲವೆಂಬುದನ್ನು ವಿಷಾದದಿಂದಲೇ ಒಪ್ಪಿಕೊಳ್ಳಬೇಕಾಗುತ್ತದೆ! ಜೈನರಲ್ಲಿ ಸ್ತ್ರೀ ಜನ್ಮಕ್ಕೆ ಮೋಕ್ಷವಿಲ್ಲ. ಬುದ್ಧನು ಬೌದ್ಧ ಸಂಘಕ್ಕೆ ಮಹಿಳೆಯರನ್ನು ಬರಮಾಡಿಕೊಳ್ಳಲು ಅರೆಮನಸ್ಸಿನಿಂದಲೇ ಒಪ್ಪಿಕೊಂಡಿದ್ದು ಚಾರಿತ್ರಿಕ ಸತ್ಯ. ಬುದ್ಧನ ನಂತರ ಬಂದ ಜಾತಕ ಕತೆಗಳಂತೂ ಸ್ತ್ರೀಯರ ಚಾಂಚಲ್ಯ, ದ್ರೋಹ, ವಂಚನೆಗಳನ್ನೇ ಪುನಃ ಪುನಃ ಎತ್ತಿ ತೋರಿಸಿದಂತೆ, ಸಮಕಾಲೀನ ಜೈನ ಸಾಹಿತ್ಯದಲ್ಲೂ ಇದೇ ಧೋರಣೆಯನ್ನು ಕಾಣುತ್ತೇವೆ. ಹೆಚ್ಚಿನ ಜನಸಾಮಾನ್ಯರೂ ಇದನ್ನೇ ಒಪ್ಪಿಕೊಂಡಂತೆ ತೋರುತ್ತದೆ. ಸನಾತನಿಗಳಿಗೆ ಸಾರ್ವಕಾಲಿಕ ಕೈಪಿಡಿಯೊಂದನ್ನು ತಯಾರಿಸುವ ಉತ್ಸುಕತೆಯಿದ್ದ 'ಮನು'ವಿಗೆ ಇದು ಅನುಕೂಲವೇ ಆಯಿತು. ಸ್ತ್ರೀ ನಿಂದೆಯನ್ನು ಧಾರಾಳವಾಗಿ ಮನುಸ್ಮೃತಿಯಲ್ಲಿ ಕಾಣಬಹುದು.

ಹೆಣ್ಣು ಬೇಗನೆ ಪ್ರಾಯಕ್ಕೆ ಬರುತ್ತಾಳೆ. ಬೇಗ ಮಕ್ಕಳನ್ನು ಹೆರುತ್ತಾಳೆ, ಎಂಬ ನಂಬಿಕೆಯಿದ್ದ ಯುಗದಲ್ಲಿ ಅವಳ ದೈಹಿಕ ಬೆಳವಣಿಗೆಯತ್ತ ಗಮನ ನೀಡಲಾಯಿತೇ ಹೊರತು, ಬೌದ್ಧಿಕ ಬೆಳವಣಿಗೆಯತ್ತ ಅಲ್ಲವೆಂಬುದು ದುರ್ದೈವದ ಸಂಗತಿ. ಇದನ್ನು ದೃಢಪಡಿಸುವಂತೆ ಸಾಮಾಜಿಕ ಅರಕ್ಷತೆ ಬೆಳೆಯಿತು.

ಸಾರ್ವಜನಿಕ ಸುಭದ್ರತೆಯ ಅಭಾವದಲ್ಲಿ ಹೆಣ್ಣುಮಕ್ಕಳ ಸಂರಕ್ಷಣೆ ಅತಿಮುಖ್ಯ ವಾಗಿಬಿಡುತ್ತದೆ. ಕಷ್ಟಕಾಲದಲ್ಲಿ ಪತಿ, ತನ್ನ ಪತ್ನಿಯನ್ನು ಚೆನ್ನಾಗಿ ರಕ್ಷಿಸಬಲ್ಲಷ್ಟು ಅನೇಕ ಗಂಡು-ಹೆಣ್ಣು ಮಕ್ಕಳ ತಂದೆಯಾದಾತ, ಅಷ್ಟು ಚೆನ್ನಾಗಿ ರಕ್ಷಿಸಲಾರನೆಂದು ಸ್ಮತಿಕಾರರು ಕಂಡುಕೊಂಡದ್ದರಿಂದ ಬಾಲ್ಯವಿವಾಹ ಹೆಚ್ಚೆಚ್ಚಾಗಿ ರೂಢಿಯಲ್ಲಿ ಬಂದಿತು, ಅಂತೂ ತಾಯಿಯ ಸ್ಥಾನವೇ ಚಿಕ್ಕ ವಯಸ್ಸಿನಲ್ಲಿ ದೃಢಪಟ್ಟ ಮೇಲೆ, ಹೆಣ್ಣಿಗೆ ನಿಶ್ಚಿಂತತೆಯ, ಮುಕ್ತ ಓಡಾಟ-ಆಟಪಾಠದ ಅವಧಿ, ತೀರ ಸೀಮಿತ ವಾಗಿದ್ದರೆ ಆಶ್ಚರ್ಯವಿಲ್ಲ.

(2) 'ಸ್ವಾತಂತ್ರ್ಯ' ಎಂಬ ನಮ್ಮ ಈಗಿನ ಕಲ್ಪನೆಯನ್ನು ಎರಡು ಸಹಸ್ರ ವರ್ಷಗಳ ಹಿಂದೆ ಮನು ಕಲ್ಪಿಸಿಕೊಂಡ 'ಸ್ವಾತಂತ್ರ್ಯ' ಎಂಬ ಶಬ್ದಕ್ಕೆ ಹೋಲಿಸುವದು ತಪ್ಪಾದೀತು! ಹೆಣ್ಣಿಗೆ ರಕ್ಷಣೆ ಅತಿಮುಖ್ಯ. ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಪತಿ ಮತ್ತು ವೃದ್ಧಾಪ್ಯದಲ್ಲಿ ಮಗನ ರಕ್ಷಣೆ ಆಕೆಗೆ ಒದಗಲೇಬೇಕು ಎಂದು ಮನು ಭಾವಿಸಿದ್ದರೆ ಆ ಯುಗದಲ್ಲಿ ಅದು ರೂಢಿಗತ ನಂಬಿಕೆಯಾಗಿ ಬೆಳೆದಿತ್ತು. ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಇದೇ ಪರಿಸ್ಥಿತಿ ಮುಂದುವರಿದಿದೆ. ಅಷ್ಟೇಕೆ? ತನ್ನ ಶಿಕ್ಷಣ ಕ್ರಮದ ಆಯ್ಕೆ, ಭವಿಷ್ಯದ ಯೋಜನೆ, ಬಾಳಸಂಗಾತಿಯನ್ನು ಆರಿಸುವ ಸ್ವಾತಂತ್ರ್ಯ, ವೃತ್ತಿಯ ಅವಕಾಶಗಳು ಹಾಗೂ ತನ್ನ ಗಳಿಕೆಯ ವಿತರಣೆಯ ಸ್ವತಂತ್ರ ಹಕ್ಕು ಎಂಬವುಗಳು ನಗರಸ್ಥಿತ ಸ್ತ್ರೀಯರಲ್ಲೂ ಎಷ್ಟು ಪ್ರಮಾಣದಲ್ಲಿ ಲಭ್ಯವಿವೆ? ಹೆಚ್ಚಿನ ಸಂದರ್ಭಗಳಲ್ಲಿ ಮಹತ್ವದ ನಿರ್ಣಯಗಳಲ್ಲಿ, ಅತ್ಯಂತ ಆಪ್ತರಾದ ಪುರುಷರನ್ನೇ ಆಕೆ ಅವಲಂಬಿಸ ಬೇಕಾದದ್ದು ಸರ್ವವಿದಿತ. ಸ್ತ್ರೀ ಸ್ವಾತಂತ್ರ್ಯದ ವ್ಯಾಖ್ಯೆ, ಶತಮಾನಗಳಲ್ಲಷ್ಟೇ ಏಕೆ, ಇತ್ತೀಚೆಗೆ ದಶಕದಿಂದ ದಶಕಕ್ಕೂ ಬದಲಾವಣೆ ಹೊಂದುತ್ತಿರುವದನ್ನು ನೋಡುತ್ತಿದ್ದೇವೆ! ಹೀಗಾಗಿ ಮನುವಾಕ್ಯವಾದ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಉದ್ಗಾರ, ಸಾಂದರ್ಭಿಕ ಮಹತ್ವದ್ದೆಂದು ಪರಿಗಣಿಸುವುದು ವಿಹಿತವೆನಿಸುತ್ತದೆ. ವಿವಾಹ ಸಂದರ್ಭದಲ್ಲಿಯ, ಗಂಡು ಮಕ್ಕಳಿಗೆ ಸರಿಯಾದ ಸ್ಥಾನವನ್ನು ಒದಗಿಸುವ ಸಂದರ್ಭದಲ್ಲಿಯ, ಆಸ್ತಿಯ ವಿಭಜನೆಯ ಕಾಲದ, ಮನುವಿನ ನಾರೀ ಸಂಬಂಧಿತ ವಿಚಾರಗಳನ್ನು ಪರಿಶೀಲಿಸಿದರೆ, 'ಸ್ವಾತಂತ್ರ್ಯ'ದ ಕುರಿತಾದ ಮನುವಿನ ಕಲ್ಪನೆ, ನಮ್ಮ ಆಧುನಿಕ ಪರಿಕಲ್ಪನೆಗಿಂತ ಭಿನ್ನವಾಗಿದ್ದು ಕಂಡು ಬರುತ್ತದೆ ಸ್ವಾಗತಾರ್ಹವೂ ಆಗಿದೆ.

ಸ್ತ್ರೀಧನ : ಆರ್ಥಿಕ ಅಸಹಾಯಕತೆಯೆ ವ್ಯಕ್ತಿಯ ಪರಾಧೀನತೆಗೆ ಕಾರಣವಾಗುತ್ತದೆ. ಕುಲ, ವಂಶಗಳೇ ಅತಿಮುಖ್ಯವಾಗಿ, ಪಿತೃಪ್ರಧಾನ ವ್ಯವಸ್ಥೆಯೇ ಬಲವಾಗಿ ಹಿರಿಮಗನೇ ಅಧಿಕಾರ ಸೂತ್ರಗಳನ್ನು ಚಲಾಯಿಸುತ್ತಿದ್ದ ದೊಡ್ಡ ಅವಿಭಕ್ತ ಕುಟುಂಬಗಳಲ್ಲಿ ಕಿರಿಯ ಗಂಡು ಸಂತಾನಕ್ಕೇ ಗೌಣ ಸ್ಥಾನವಿದ್ದಾಗ ಹೆಣ್ಣು ಸಂತಾನದ ಬೇಕು-ಬೇಡಗಳನ್ನು ವಿಚಾರಿಸಿಕೊಳ್ಳುವವರು ಯಾರು? ಇಷ್ಟಾದರೂ ಯಾಸ್ಕನ ಕಾಲಕ್ಕೆ ಕೂಡ ಹೆಣ್ಣು ಮಕ್ಕಳಿಗೆ ಸಹ ಗಂಡು ಮಕ್ಕಳಷ್ಟೇ, ತಂದೆಯ ಆಸ್ತಿಯ ಸರಿಸಮಾನ ಹಕ್ಕು ಇದ್ದುದನ್ನು ಮತ್ತು ಅದಕ್ಕೆ ಮನುವಿನ ಆಧಾರವನ್ನು ಆತನು ಉದ್ಧರಿಸಿದ್ದನ್ನು ಈ ಮೊದಲು ಹೇಳಲಾಗಿದೆ. ಮನುಸ್ಮೃತಿಯ ಮೊದಲ ಶತಮಾನಗಳಲ್ಲಿ ವಿವಾಹವಾಗಲಿದ್ದ ಮಗಳಿಗೂ ಭೂಮಿಯ ರೂಪದಲ್ಲಿ ಆಸ್ತಿಯ ಪಾಲು ದೊರೆಯುತ್ತಿತ್ತು. ವಿವಾಹದ ಬಳಿಕ ಅದು ಹಲವಾರು ಸಮಸ್ಯೆಗಳಿಗೆ ಅವಕಾಶ ಮಾಡಿಕೊಡುತ್ತಿದ್ದುದರಿಂದ ಕ್ರಮೇಣ ನಿಂತುಹೋಯಿತು. ಒಡವೆ ವಸ್ತುಗಳು, ಬಟ್ಟೆ ಬರೆ, ಪಾತ್ರೆ ಪಡಗ, ಗೋ ಸಂಪತ್ತು, ವಾಹನಗಳು (ಬಂಡಿ, ಮೇಣೆ ಇತ್ಯಾದಿ ಮತ್ತು ಹೊರುವ ಆಳುಗಳು) ಮುಂತಾದ 'ಚರ' ಆಸ್ತಿಯಷ್ಟೇ ಹೆಣ್ಣು ಮಕ್ಕಳಿಗೆ ದೊರೆಯಲಾರಂಭಿಸಿತು. ಸ್ತ್ರೀಧನದ ವ್ಯಾಖ್ಯೆ ಮತ್ತು ಮಹತ್ವ, ಅದರ ದುರುಪಯೋಗ ತಡೆಯುವ ಪ್ರಯತ್ನ ಮಾಡಿದ ಶ್ರೇಯಸ್ಸು ಮನುವಿಗೇ ಸಲ್ಲಬೇಕು!

ಸ್ತ್ರೀ ಧನವನ್ನು ಅಧ್ಯಗ್ನಿ. ಅಧ್ಯಾವಾಹನಿಕ ಲಬ್ಧ, ಪ್ರಾಪ್ತ, ದತ್ತ ಹಾಗೂ ಅನ್ವಾಧೇಯಗಳೆಂಬ ಆರು ಪ್ರಕಾರಗಳಲ್ಲಿ ವಿಭಜಿಸಲಾಗಿದೆ. 'ಅಧ್ಯಗ್ನಿ'ಯೆಂಬುದು ಅಗ್ನಿಸಾಕ್ಷಿಯಾಗಿ ಕನ್ಯೆಯ ಕಡೆಯ ಪಿತ್ರಾದಿಗಳು ವಿವಾಹ ಕಾಲಕ್ಕೆ ಕೊಡುವ ಹಕ್ಕಿನ ಉಡುಗೊರೆಗಳನ್ನು ಒಳಗೊಂಡರೆ, 'ಅಧ್ಯಾವಾಹನಿಕ'ವು ಮೆರವಣಿಗೆಯಲ್ಲಿ ಸಂದ ಆಪ್ತೇಷ್ಟರು ಒದಗಿಸಿದವುಗಳು. ಹಿರಿಯರು, ಮದುವೆ ಗೊತ್ತಾಗುವಾಗ ನಿಷ್ಕರ್ಷಿಸಿ ಗೊತ್ತು ಪಡಿಸಿದ್ದು 'ಲಬ್ಧ' ಪ್ರಕಾರದಲ್ಲಿ ಬಂದರೆ, ತಾಯಿಯ ಕಡೆಯಿಂದ ಒಡವೆ, ಸುವರ್ಣಾದಿಗಳು 'ಪ್ರಾಪ್ತ' ಸ್ತ್ರೀ ಧನದ ಭಾಗವಾಗಿತ್ತು. ಸಂಬಂಧಿಕರು ಪ್ರೀತಿಪೂರ್ವಕ ಕೊಡ ಮಾಡಿದ್ದು 'ದತ್ತ' ಪ್ರಕಾರವೆನಿಸಿಕೊಂಡರೆ, ಆರನೆಯ ಹಾಗೂ ಕೊನೆಯದಾದ ಪತಿಯ ಕಡೆಯಿಂದ ಪಡೆದ 'ಅನ್ವಾಧೇಯ'ವು, ನಂತರ ಆಕೆಯ ಮಕ್ಕಳಿಗೆ ಸಲ್ಲುತ್ತಿತ್ತು.

ಸಂಪ್ರದಾಯದಂತೆ ಸ್ತ್ರೀ ಧನದ ಒಡೆತನ ಗೃಹಿಣಿಯದೇ ಆಗಿ ಮುಂದುವರಿಯುತ್ತಿತ್ತು. 'ಕುಮಾರೀಭಾಗ'ವೆನಿಸಿಕೊಂಡು ಅವಳ ನಂತರ ಅದೆಲ್ಲ ಅವಳ ಹೆಣ್ಣುಮಕ್ಕಳಲ್ಲಿ ಹಂಚಿ ಹೋಗುತ್ತಿತ್ತು. ಹೆಣ್ಣು ಮಕ್ಕಳು ಇಲ್ಲದಿದ್ದರೆ ಮಾತ್ರ ಗಂಡು ಮಕ್ಕಳಿಗೆ ಹೋಗುತ್ತಿತ್ತು.

ಸ್ತ್ರೀಧನವನ್ನು ಪತಿ ಅಥವಾ ಅವನ ಕಡೆಯ ಬಾಂಧವರು ಎತ್ತಿ ಹಾಕಿದರೆ, ಅವಳಿಗೆ ಸೇರಿದ ವಾಹನ, ಒಡವೆ, ಬಟ್ಟೆ ಬರೆಗಳನ್ನು ಲಪಟಾಯಿಸಿದರೆ, ಇಂಥ ಪಾಪಿಷ್ಠರು ನರಕಕ್ಕೆ ಹೋಗುತ್ತಾರೆ! ಎಂದು ಮನು ಎಚ್ಚರಿಸಿದ್ದಾನೆ. ಸಂಪ್ರದಾಯದ ನೀತಿ, ಹಾಗೂ ನರಕದ ಭೀತಿಗಳು, ಸ್ತ್ರೀಧನಕ್ಕೆ ತಾರಕವಾಗಿದ್ದವು.

ಮದುವೆಯಾಗಲಿದ್ದ ಕನ್ಯೆಗೆ ಲಭಿಸುತ್ತಿದ್ದ, ಆಪದ್ಧನವೆಂದು ಬಳಸಬಹುದಾಗಿದ್ದ ಸ್ತ್ರೀಧನವು ಸಾಕಷ್ಟು ದೊಡ್ಡ ಮೊತ್ತದ್ದು ಇರುತ್ತಿದ್ದಿರಬೇಕು. ಜಗತ್ತಿನ ಇತರೇ ದೇಶಗಳ ಮಹಿಳೆಯರಿಗೆ, ತಂದೆ ಅಥವಾ ಪತಿಯ ಜೊತೆಗೇ ಅಲ್ಲದೇ, ಸ್ವತಂತ್ರವಾಗಿ ಯಾವುದೇ ಧನರೂಪೀ ಭೂಮಿ, ವಸ್ತುಗಳಿಗೆ ಹತ್ತೊಂಭತ್ತನೆಯ ಶತಮಾನದವರೆಗೂ ಅಧಿಕಾರವಿರಲಿಲ್ಲ. ಫ್ರೆಂಚ್ ರಾಜ್ಯಕ್ರಾಂತಿಯ ಬಳಿಕವೇ ಐರೋಪ್ಯ ನಾರಿಗೆ ಅದು ಲಭಿಸಿತು. ಮನುಸ್ಮೃತಿಯಲ್ಲಿ ಸ್ತ್ರೀಧನದ ಪ್ರಕಾರಗಳು ಉಲ್ಲೇಖಿತವಾಗಿವೆಯಲ್ಲದೇ ಅವುಗಳಿಂದ ಆಕೆ ವಂಚಿತಳಾಗದಂತೆ ಗಂಡಸರಿಗೆಲ್ಲ ಮುನ್ನೆಚ್ಚರಿಕೆ ನೀಡಿದ್ದು ಔದಾರ್ಯದ ಕ್ರಮವೆಂದೇ ತಿಳಿಯಬೇಕು. ನಂತರದ ಸ್ಮೃತಿಕಾರರು ಮಾತ್ರ ಇದರ ಮೊತ್ತವನ್ನು ಇಳಿಸುತ್ತಲೇ ಹೋಗಿ, ಕಾತ್ಯಾಯನನ ಪ್ರಕಾರ, ಅವಳ ಜೀವಾವಧಿ ಧನದ ಅಧಿಕಾರ, 2000 ಆಣೆ (125 ರೂಪಾಯಿಗಳು) ಗಳಿಗಷ್ಟೇ ಸೀಮಿತವಾಯಿತು!

ಯಾಜ್ಞವಲ್ಕ್ಯ ಸ್ಮೃತಿಯ ಟೀಕಾಕಾರನಾದ ವಿಜ್ಞಾನೇಶ್ವರ ಕೆಲಮಟ್ಟಿಗೆ ಔದಾರ್ಯ ತೋರಿದ್ದು, ಆತನ ದಾಯಭಾಗ ನೀತಿಯನ್ನು ಬ್ರಿಟಿಷರು ಅಳವಡಿಸಿಕೊಂಡರು. ಅಲ್ಲಿಯ ತನಕ ಸ್ತ್ರೀಧನದ ಮೊತ್ತ ಹಾಗೂ ಅದರ ವಿತರಣೆಯ ಪ್ರಕಾರದಲ್ಲಿ ಏಕಮತವಿರದೇ ಪ್ರತಿಯೊಂದು ಪ್ರದೇಶದಲ್ಲಿ ಭಿನ್ನವಾಗಿತ್ತು. 'ಸೌದಾಯಿಕ'ವೆಂದು ನಂತರದ ಯುಗದಲ್ಲಿ ಅದನ್ನು ಕರೆದು, ಪ್ರಮಾಣವನ್ನು ಕನಿಷ್ಟಮಟ್ಟಕ್ಕೆ ಇಳಿಸುವದರಲ್ಲಿ ಮಧ್ಯಯುಗದ ವ್ಯಾಖ್ಯಾನಕಾರರು ಯಶಸ್ವಿಯಾದರು.

(3) ಯತ್ರನಾರ್ಯಸ್ತು ಪೂಜ್ಯಂತೇ : ಭಾರತೀಯ ಸಂಸ್ಕೃತಿಯನ್ನು, ಮಹತಿಯನ್ನು ಯಾವತ್ತೂ ಕೊಂಡಾಡುವ ವರ್ಗವೊಂದಿದೆ. ತಪ್ಪದೇ ಅದು, ಪ್ರಸಿದ್ಧ ಮನುವಾಕ್ಯವಾದ 'ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೆ ತತ್ರ ದೇವತಾಃ। ಯತ್ರೈತಾಸ್ತು ನ ಪೂಜ್ಯಂತೆ ಸರ್ವಾ ತತ್ರಾ ಫಲಾಕ್ರಿಯಾಃ ।' (ನಾರಿಯರನ್ನು ಗೌರವಿಸುವ ಎಡೆಯಲ್ಲೆಲ್ಲ ದೇವತೆಗಳು ಪ್ರಸನ್ನರಾಗಿರುತ್ತಾರೆ. ಎಲ್ಲಿ ಅವರ ಪೂಜೆ (ಸನ್ಮಾನ, ಗೌರವ ಎಂಬರ್ಥದಲ್ಲಿ) ನಡೆಯುವದಿಲ್ಲವೋ ಆ ಮನೆಯಲ್ಲಿ ಎಲ್ಲ ಕಾರ್ಯಗಳೂ ನಿಷ್ಫಲವಾಗುತ್ತವೆ) ಎಂಬುದನ್ನು ಉದ್ಧರಿಸುತ್ತಲೇ ಇರುತ್ತದೆ. ಸ್ತ್ರೀಯರು ಪೂಜೆಗೆ ಅರ್ಹರು. ಯಾಕೆ ಎಂಬುದಕ್ಕೆ ಕಾರಣ ಮುಂದಿನ ವಾಕ್ಯದಲ್ಲೇ ಇದೆ. ಮನೆತನದ ಯಾವತ್ತೂ ಶುಭಾರಂಭ, ಗೃಹಿಣಿಯನ್ನು ಅವಲಂಬಿಸಿದ್ದಿತು. ಗೃಹಜೀವನದ ಶಾಂತಿ-ಸಮಾಧಾನಗಳು ಸ್ತ್ರೀಯರ ಮೇಲೆಯೇ ನಿಂತಿವೆ. ಎಂಬ ಮಾತಿನಲ್ಲಿ ಮನುವಿಗೆ ಅನುಮಾನವೇನೂ ಇರಲಿಲ್ಲ. ಈ ಸಂದರ್ಭದಲ್ಲಿಯೇ ಹೆಣ್ಣುಮಕ್ಕಳು ಕಣ್ಣೀರು ಹಾಕುತ್ತ, ಕಾಲ ಕಳೆಯುವ ಮನೆಯ ಉದ್ಧಾರವಾಗುವದಿಲ್ಲ ಅಷ್ಟೇ ಅಲ್ಲ ಕ್ರಮಶಃ ಅದು ನಾಶ ಹೊಂದುತ್ತದೆಂದು ಎಚ್ಚರಿಸಿದ್ದಾನೆ. 'ಜಾಮಿ' ಎಂದು ಆತನು ಕರೆದ ಮನೆಯ ಹೆಣ್ಣು ಮಕ್ಕಳಲ್ಲಿ ಪತ್ನಿ, ಸೊಸೆ, ಸೋದರಿಯರು, ಅವರ ಕನ್ಯೆಯರು, ತನ್ನ ಹಾಗೂ ಸೋದರರ ಹೆಣ್ಣು ಮಕ್ಕಳೆಲ್ಲ ಬರುತ್ತಿದ್ದರು. ಅವರೆಲ್ಲ ಸಂತೋಷದಿಂದ ಇದ್ದರೇ ಮನೆಯ ಯಜಮಾನ ತನ್ನ ಹೊಣೆಯನ್ನು ಸರಿಯಾಗಿ ನಿರ್ವಹಿಸಬಲ್ಲ!

ಹೆಣ್ಣು ಮಕ್ಕಳಿಗೆಲ್ಲ ಒಳ್ಳೆಯ ಆಹಾರ, ಬಟ್ಟೆ ಬರೆ, ಆಭರಣಾದಿಗಳಿಗೆ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಸ್ತ್ರೀಯರ ಪ್ರಸನ್ನತೆಯ ಮೇಲೆಯೇ ಎರಡೂ ಕುಲಗಳ ನೆಮ್ಮದಿ ನೆಲಸಿರುತ್ತದೆಯಾದ್ದರಿಂದ ತಂದೆ. ಸೋದರ ರಂತೆಯೇ ಪತಿ-ಮೈದುನರೂ ಅವರ ನೆಮ್ಮದಿಯತ್ತ ಗಮನವಿಡಬೇಕೆಂದು ಹೇಳಲು ಮನುವು ಮರೆತಿಲ್ಲ.

'ಸ್ತ್ರೀಗೂ ಶ್ರೀಗೂ ವ್ಯತ್ಯಾಸವಿಲ್ಲ!' ಇಬ್ಬರೂ ಮನೆಯನ್ನು ಬೆಳಗಿಸುವ ದೀಪಗಳಂತೆ! ಎಂಬ ಉದ್ಗಾರವು ಮನುಸ್ಮೃತಿಯಲ್ಲಿದೆ. ಸ್ತ್ರೀಯು ಸಂತಾನವನ್ನು ನೀಡುವ ಶ್ರೀ (ಲಕ್ಷ್ಮಿ)ಯೇ ಆಗಿದ್ದಳು. ಮಕ್ಕಳ ಜನ್ಮ, ಲಾಲನೆ ಪಾಲನೆಗಳಲ್ಲದೇ ಗೃಹಜೀವನದ ಯಾವತ್ತೂ ವ್ಯವಹಾರಗಳಿಗೆ (ಲೋಕಯಾತ್ರಾ) ಕಾರಣಳಾಗಿದ್ದ ಗೃಹಿಣಿಯನ್ನು ಅಲಕ್ಷಿಸುವಂತಿದೆಯೇ? ಧರ್ಮಕಾರ್ಯಗಳು, ಮನೆ ಮಂದಿಯ

ಶುಶ್ರೂಷೆ, ಜೊತೆಗೆ ಪತಿಯ ದೈಹಿಕ ತೃಪ್ತಿಗಳೆಲ್ಲ ಹೆಣ್ಣನ್ನೆ ಅವಲಂಬಿಸಿವೆ. ಪುರುಷನ, ಅವನ ಪಿತೃಗಳ ಸ್ವರ್ಗಪ್ರಾಪ್ತಿ ಕೂಡ ಗೃಹಿಣಿಯ ಮೇಲೆ ನಿರ್ಭರಿಸಿವೆ! ಎಂದು ಗಂಡಸರನ್ನು ಎಚ್ಚರಿಸುವ ಜೊತೆಗೆ, ಸಂತತಿಯ ರಕ್ಷಣೆ ಹಾಗೂ ಕುಟುಂಬದ ಶ್ರೇಯೋಭಿವೃದ್ಧಿಯಲ್ಲಿ ಅವಳ ಹೊಣೆಯನ್ನು ಗುರುತಿಸುವಂತೆ ಮನುವು ಪುನಃ ಪುನಃ ಜ್ಞಾಪಿಸುತ್ತಾನೆ.

ಮನು ಸ್ಮೃತಿಯ ಎರಡನೆಯ ಅಧ್ಯಾಯದಲ್ಲಿಯೇ ಮಾತೆಯ ಕುರಿತಾದ ಗೌರವವನ್ನು ಪ್ರಸ್ತಾಪಿಸಲಾಗಿದೆ. 'ಹತ್ತು ಉಪಾಧ್ಯಾಯರಿಗಿಂತ ಆಚಾರ್ಯನು ಮೇಲು. ನೂರು ಆಚಾರ್ಯರಿಗಿಂತ ತಂದೆ ಮೇಲು. ತಂದೆಗಿಂತ ಸಹಸ್ರಪಟ್ಟು ಮಾತೆಯ ಗೌರವವಿದೆಯೆಂದು ಹೇಳಲಾಗಿದೆ. ಮಗುವಿನ ವಿದ್ಯಾದಾನದ ಸಂದರ್ಭದಲ್ಲಿ ಈ ಮಾತು ಬರುತ್ತದೆ. ಸಂಸ್ಕಾರಗಳ ಮೇಲೆ ಹೆಚ್ಚು ಒತ್ತು ಇದ್ದು ಮಗುವಿನ ಮೊದಲ ವರ್ಷಗಳು ತಾಯಿಯ ಬಳಿಯಲ್ಲಿ ಕಳೆಯುವದರಿಂದ, ತಾಯಿಯ ಹೆಚ್ಚಿನ ಪ್ರಭಾವಕ್ಕೆ ಅದು ಒಳಗಾಗುತ್ತದೆ. ಮಗುವಿಗೆ ಮೊದಲ ಗುರುವೇ ತಾಯಿ, ಎಂಬುದನ್ನು ಪರಂಪರೆ ಗುರುತಿಸಿತ್ತು. ಉಪಾಧ್ಯಾಯ, ಆಚಾರ್ಯ ತಂದೆ ಮುಂತಾದವರ ಜೊತೆಗೆ ತಾಯಿಯ ಹೆಸರನ್ನು ಮನು ಸೇರಿಸಿದ್ದು ಆಕಸ್ಮಿಕವಿರಲಾರದು! ಮಗುವಿನ ಬೆಳವಣಿಗೆ ಪೂರ್ತಿ ತಾಯ ಮಡಿಲಲ್ಲೇ. ಅದರ ಪಾಲನೆ, ಪೋಷಣೆಯ ಸಂಪೂರ್ಣ ಹೊಣೆ ತಾಯಿಯದು (ಮನು 2-147) ಎಂದು ಮಾತೆಯ ಮಹತ್ವವನ್ನು ಸರಿಯಾಗಿ ಗುರುತಿಸಲಾಗಿದೆ.

ಸ್ತ್ರೀ ವಿದ್ಯೆಯ ಉಲ್ಲೇಖ ಈ ಸ್ಮೃತಿಯಲ್ಲಿ ಬರುವದಿಲ್ಲ. ಸಾಕ್ಷರತೆ-ಶಿಕ್ಷಣ ಪ್ರಸಾರಗಳು ಗಂಡಸರಲ್ಲೇ ಸಾಕಷ್ಟು ಪ್ರಮಾಣದಲ್ಲಿ ಆ ಯುಗದಲ್ಲಿರಲಿಲ್ಲ. ವಿದ್ಯೆಯೆಂದರೆ ಮೋಕ್ಷ ಸಾಧನಕ್ಕೆ ಸಹಾಯವಾದ ಆಧ್ಯಾತ್ಮವಿದ್ಯೆಯೆಂದೇ ತಿಳಿಯಲಾಗುತ್ತಿತ್ತು. 'ನ ಸ್ತ್ರೀ ವಿದ್ಯಾಮರ್ಹತಿ' ಎಂದು ಮನುವು ಎಲ್ಲಿಯೂ ಹೇಳದಿರುವದೇ ಪುಣ್ಯ!

ಸ್ತ್ರೀ ನಿಂದೆ, ಮನು ಸ್ಮೃತಿಯಲ್ಲಿ ಹೇರಳವಾಗಿ ಬರುತ್ತದೆ ಎಂಬ ಅಂಶವನ್ನು ಮರೆಯುವಂತಿಲ್ಲ. ಭಾರತೀಯರ ವೈಶಿಷ್ಟ್ಯವಾದ ಇಬ್ಬಂದಿತನಕ್ಕೆ ಮಹಿಳೆಯರ ಸಂದರ್ಭದಲ್ಲಿ ಈ ಧರ್ಮಶಾಸ್ತ್ರ, ಮಾದರಿ ಗ್ರಂಥವಾಗಬಲ್ಲದು! ಅಷ್ಟೊಂದು ತಿರಸ್ಕಾರ ಪುರಸ್ಕಾರದೊಂದಿಗೆ ನಾರಿಯ ಉಲ್ಲೇಖ ಬರುತ್ತದೆ. ಉಪನಯನದ ಸಂಸ್ಕಾರ, ಆದಾಗಲೇ ಕನ್ಯೆಯರಿಗೆ ನಿಂತೇ ಹೋಗಿತ್ತು. ಈ ಸಂಸ್ಕಾರ

ಹೀನತೆಯಿಂದಾಗಿ ಅವಳ ಸ್ಥಾನ-ಮಾನ-ಶೂದ್ರರ ಸರಿಸಮಾನವಾಗಿಬಿಟ್ಟಿತು! ಸ್ತ್ರೀಯರ ಗೌಣಸ್ಥಾನ, ಆ ಯುಗದಲ್ಲಿ ಸರ್ವ ಸ್ವೀಕೃತವಾಗಿತ್ತು. ಹಿಂದೂಗಳಿಗೆಲ್ಲ ಪವಿತ್ರ ಗ್ರಂಥವಾದ ಭಗವದ್ಗೀತೆಯಲ್ಲೂ ತನಗೆ ಶರಣಾದ ಸ್ತ್ರೀಯರು, ವೈಶ್ಯರು, ಶೂದ್ರರಾದಿಗಳೆಲ್ಲ ಶ್ರೇಷ್ಠ ಸ್ಥಾನವನ್ನು ಹೊಂದುತ್ತಾರೆ' ಎಂದು ಶ್ರೀಕೃಷ್ಣನು (13.2) ಘೋಷಿಸಿದ್ದಾನೆ. ಎಲ್ಲ ವರ್ಣಗಳ ನಾರಿಯರ ಸ್ಥಾನವೂ ಕೀಳಾದದ್ದೇ! ಈ ಮಟ್ಟಿಗೆ ಸ್ತ್ರೀ ಸಮಾಜಕ್ಕೆಲ್ಲ ಇಡಿಯದಾಗಿ ಸರಿಸಮಾನತೆಯನ್ನು ಕಲ್ಪಿಸಿಕೊಡುವಲ್ಲಿ ಪ್ರಾಚೀನರು ಯಶಸ್ಸನ್ನು ಸಾಧಿಸಿದ್ದಾರೆ!

ಆದರ್ಶ ಗೃಹಸ್ಥಧರ್ಮ ಹೇಗಿರಬೇಕು? ಆದರ್ಶಗೃಹಿಣಿ ಎಂಥವಳು? ಎಂದು, ಕಲ್ಪನೆಯಲ್ಲಿ ರೂಪಗೊಂಡ ಮನುವಿನ ಅಭಿಪ್ರಾಯಗಳು ವಾಸ್ತವಿಕವಾಗಿ ಜಾರಿಯಲ್ಲಿ ಬಂದಿರಲಿಲ್ಲ, ಎನ್ನುವುದನ್ನು ಮುಂದೆ ನೋಡಬಹುದು.

(4) ಬಾಲವಿವಾಹ, ಸಹಗಮನ, ಪುನರ್ವಿವಾಹ ಮುಂತಾದವು: ಅದಾಗಲೇ ಕೆಲವೆಡೆ ಪ್ರಚಲಿತವಿದ್ದ ಬಾಲ ವಿವಾಹಕ್ಕೆ ಸಿಂಧುತ್ವ, ಮನುವಿನಿಂದಲೇ ಪ್ರಾಪ್ತವಾಯಿತು! ಮೂವತ್ತು ವರ್ಷದ ವರನಿಗೆ ಹನ್ನೆರಡು ವರ್ಷದಾಕೆ, ಇಪ್ಪತ್ನಾಲ್ಕು ವರ್ಷದವನಿಗೆ ಎಂಟುವರ್ಷದಾಕೆಯು ಪತ್ನಿಯಾಗಬಹುದೆಂದು ಹೇಳಿದ್ದಾನೆ. ಆದರೆ ಈ ಪದ್ಧತಿ ಸರ್ವಸಾಮಾನ್ಯವಿತ್ತು ಎಂದು ಹೇಳಲಾಗದು! ಬಹಳ ವರ್ಷಗಳ ಅಂತರ (1:3)ವನ್ನು ವಧೂ-ವರರಲ್ಲಿ ಮಾನ್ಯಮಾಡಿದ್ದಾನೆ, ಎಂದು ಊಹಿಸುವದೇ ಉಚಿತ. ಕ್ಷತ್ರಿಯರಲ್ಲಿ ಕಿಶೋರಾವಸ್ಥೆಯಲ್ಲಿ ಕನ್ಯೆಯರ ವಿವಾಹ ಸಾಮಾನ್ಯವಾಗಿತ್ತು. ಕೌಟಿಲ್ಯನ ಹಾಗೂ ಬೌದ್ಧ, ಜೈನಗ್ರಂಥಗಳನ್ನು ಪರಿಶೀಲಿಸಿದಾಗ ಜನಸಾಮ್ಯಾನರಲ್ಲಿ ಹದಿನಾರು ವಯಸ್ಸಿನ ಹುಡುಗರು ಹಾಗೂ, ಹನ್ನೆರಡು ವಯಸ್ಸಿನ ಹುಡುಗಿಯರು ವಿವಾಹ ಯೋಗ್ಯರಾಗಿದ್ದರು ಎಂದು ಕಂಡು ಬರುತ್ತದೆ. ಬ್ರಾಹ್ಮಣರಲ್ಲಿ ಮಾತ್ರ ಕನ್ಯೆಗೆ ಉಪನಯನ ಸಂಸ್ಕಾರ ಲೋಪವಾದ ಬಳಿಕ ವಿವಾಹವೇ ಹೆಣ್ಣುಮಕ್ಕಳಿಗೆಲ್ಲ ಮುಖ್ಯವಾಗಿ, ಬಾಲ್ಯದಲ್ಲೇ ವಿವಾಹ ಸಂಸ್ಕಾರ ಹೆಚ್ಚೆಚ್ಚು ಬಳಕೆಯಲ್ಲಿ ಬರಲಾರಂಭಿಸಿತು.

ಆದರೆ ಅದೇ ಮನು, ಉತ್ಕೃಷ್ಟನಾದ ಅನುರೂಪನಾದ ವರನಿಗೆ, ಯಥಾವಿಧಿ ಮದುವೆ ಮಾಡಿಕೊಡುವದು ಉಚಿತ. ಆದರೆ ಗುಣಹೀನನಿಗೆ ಎಂದೂ ಮಗಳನ್ನು ಕೊಡಕೂಡದು ! ಎಂದು ಘೋಷಿಸಿರುವ. ಅಯೋಗ್ಯನಿಗೆ ಮಗಳನ್ನು ಕೊಡುವದಕ್ಕಿಂತ ಆಮರಣ, ಆಕೆ ಅವಿವಾಹಿತಳಾಗಿಯೇ ಉಳಿದು

ತಂದೆಯ ಮನೆಯಲ್ಲಿದ್ದರೆ ತಪ್ಪಲ್ಲ! ಎಂದೂ ಉದ್ಗರಿಸಿದ್ದಾನೆ. ಜೂಜುಕೂರನೋ, ದುರಾಚಾರಿಯೋ, ಮುದುಕನೋ, ಕುಡುಕನೋ, ವ್ಯಸನಿಯೋ ಅಂತು ಮಗಳಿಗೊಬ್ಬ ಗಂಡ ದೊರೆತರೆ, ಕನ್ಯಾಸೆರೆ ತಪ್ಪುತ್ತದೆ! ಎಂಬ ನಂತರದ ಶತಮಾನಗಳ ತಾಯ್ತಂದೆಗಳ ಅಭಿಪ್ರಾಯದ ಬೆಳವಣಿಗೆಯಲ್ಲಿ ಈ ಮನುವಾಕ್ಯವನ್ನು ಗಮನಿಸುವುದು ಉಚಿತ. ವಿವಾಹವೆಂಬುದು, ಮನೆಯ ಯಜಮಾನನ ಹಿರಿಯ ಜವಾಬ್ದಾರಿ. ಜೊತೆಗೆ ಕನ್ಯಾದಾನ ಪವಿತ್ರವಾಗಿದ್ದು, ಆ ಪವಿತ್ರ ಹೊಣೆಯನ್ನಾತ ತಪ್ಪಿಸಿಕೊಳ್ಳದಿರಲಿ! ಎಂಬುದು ಸ್ಮೃತಿಕಾರನ ಕಾತರವಾಗಿತ್ತು.

ಈ ಕಾತರ ಆತನು ಕನ್ಯೆಯರಿಗೆ ಕೊಡಮಾಡಿದ ಪರ್ಯಾಯ ಬಂದರಿಂದ ಇನ್ನೂ ಸ್ಪಷ್ಟವಾಗುತ್ತದೆ. ಋತುಮತಿಯಾದ ಮೂರುವರ್ಷಗಳವರೆಗೆ ಕಾಯ್ದರೂ, ತಂದೆಯೋ ಪಾಲಕನೋ ಮದುವೆಮಾಡಿಕೊಡದಿದ್ದಲ್ಲಿ ಕನ್ಯೆಯು ವರನನ್ನು ತಾನೇ ಹುಡುಕಿಕೊಳ್ಳಬಹುದು. ಈ ವಿಷಯದಲ್ಲಿ ಆಕೆಗೂ, ವರನಿಗೂ ದೋಷ ತಟ್ಟುತ್ತಿರಲಿಲ್ಲ! ಆಕೆ ತಾನಾಗಿಯೇ ಆಯ್ಕೆ ಮಾಡಿಕೊಂಡ ಪತಿಯ ಬಳಿ ಹೋಗುವಾಗ, ತಂದೆ-ತಾಯಿ, ಬಂಧುಗಳು ಕೊಡುಮಾಡುತ್ತಿದ್ದ ಒಡವೆ ವಸ್ತುಗಳನ್ನು ಒಯ್ಯುವ ಹಾಗಿರಲಿಲ್ಲ.

ವಧು ಸ್ವಯಂ ಆಗಿ ವರನನ್ನು ಹುಡುಕಿಕೊಂಡಾಗ ಕನ್ಯಾಶುಲ್ಕವನ್ನು ವರನಾದವನು ಕೊಡಬೇಕಾಗಿಲ್ಲ. ಏಕೆಂದರೆ ಇಲ್ಲಿ ತಂದೆಯಾದವನು ಕನ್ಯಾದಾನದ ಕರ್ತವ್ಯವನ್ನು ನಿರ್ವಹಿಸಿಲ್ಲ! ಎಂದು ಮನು ಹೇಳಿಬಿಟ್ಟಿದ್ದಾನೆ. ವಿವಾಹವನ್ನು ಕನ್ಯಾದಾನವೆಂದಿದ್ದರಿಂದ, ಒಮ್ಮೆ ಮದುವೆ ಮಾಡಿಕೊಟ್ಟವಳಿಗೆ ಪುನಃ ಮದುವೆ ಇರಲಿಲ್ಲ ಎಂಬ ಅರ್ಥ ಹೊರಡುತ್ತದೆ. ದಾನವನ್ನು ಒಮ್ಮೆ ಮಾತ್ರ ಮಾಡಲು ಸಾಧ್ಯವಷ್ಟೆ?

ಬಾಲ್ಯವಿವಾಹದ ಮೇಲೆ ಒತ್ತು ಇದ್ದರೂ ಮೈ ನೆರೆದರೂ ಮದುವೆಯಾಗದೇ ಹೆಣ್ಣುಮಕ್ಕಳು ಮನೆಯಲ್ಲಿರುವ ಸಂದರ್ಭಗಳು ಇದ್ದೇ ಇದ್ದವು. ಜೊತೆಗೆ ಕನ್ಯೆಯರು ಅಚಾತುರ್ಯದಿಂದಾಗಿ ಗರ್ಭಿಣಿಯಾಗುವ ಸಂದರ್ಭಗಳಿಗೂ ಕೊರತೆಯಿರಲಿಲ್ಲ. ಆದರೆ ಇಂಥ ಹೆಣ್ಣುಮಕ್ಕಳಿಗೂ ಅವರ ಸಂತಾನಕ್ಕೂ ದೊರೆಯುತ್ತಿದ್ದ ಸಾಮಾಜಿಕ ಸುರಕ್ಷಿತತೆ ಸೋಜಿಗಪಡಿಸುವಂತಹುದು. 'ಅಕ್ರಮ ಸಂತಾನ' ಎಂಬ ಶಬ್ದ ಮನುವಿಗೆ ಅಪರಿಚಿತವಾಗಿತ್ತು!

ಪುನರ್ವಿವಾಹ : ಎಲ್ಲ ಹೆಣ್ಣುಗಳು ಪುನರ್ವಿವಾಹದಿಂದ ವಂಚಿ
ರಾಗುತ್ತಿದ್ದರು, ಎಂದು ನಂಬುವಂತಿಲ್ಲ. ನಾನಾ ಕೆಲಸಗಳ ನಿಮಿತ್ತ ವಿವಾಹಿ
ಗಂಡಸರು ಪರದೇಶಗಳಿಗೆ ಹೋಗಿರುತ್ತಿದ್ದರು. ಸಾಗಾಟದ ಸಂಪರ್ಕ
ಪ್ರಯಾಣದ ಸವಲತ್ತುಗಳು ದುರ್ಲಭವಿದ್ದ ದಿನಗಳಲ್ಲಿ ಹೊರಟು ಹೋ
ಕಣ್ಮರೆಯಾದ ಹಲವರು ಇರುತ್ತಿದ್ದರು. ಇಂಥವರ ಎಳೆ ವಯಸ್ಸಿನ ಹೆಂಡಂ
ಪಾಡನ್ನು ಮನು ಗಮನಿಸಿದ್ದಾನೆ. ಹೊರಟ ಕಾರಣಗಳಿಗೆ ಅನುಗುಣವಾ
ಕಾಯುವ ಅವಧಿಯನ್ನು ನಿರ್ದಿಷ್ಟಪಡಿಸಿದ್ದಾನೆ. ಕರ್ತವ್ಯದ ನಿಮಿ
ಹೋದಾತನ ಪತ್ನಿ ಎಂಟು ವರ್ಷ, ವಿದ್ಯೆಗೆ ಹೋದಾತನಾಕೆ, ಆರು ವ
ಹಾಗೂ ವಿಹಾರಾರ್ಥ ಹೋದಾತನಿಗೆ ಮೂರುವರ್ಷ ಕಾಯಬೇಕಾಗಿ
(ಮನು 9:76)

ಆ ಬಳಿಕ ಆ ದುರ್ಭಾಗ್ಯೆ ಏನು ಮಾಡಬೇಕು? ಎಂದು ಮ
ಹೇಳುವದಿಲ್ಲ! ಆದರೆ ಸ್ಮೃತಿ ವಾಕ್ಯಗಳು ಅತ್ಯಂತ ಸಂಕ್ಷಿಪ್ತವಿದ್ದು ಜನಹಿತ
ದೃಷ್ಟಿಯಿಂದ ಅವನ್ನು ಅರ್ಥೈಸುವ ಅಧಿಕಾರ ಕುಲದ ಹಿರಿಯರಿಗಿತ
ಕಾಯುವಿಕೆಯ ಅವಧಿಯ ಬಳಿಕ ಆಯಾಕುಲ, ಜಾತಿಗಳ ಪದ್ಧತಿಯಂತೆ ಕನ್ಯೆ
ಭವಿಷ್ಯ ನಿರ್ಧರಿಸಲ್ಪಡಲಿ! ಎಂದೇ ಅವನ ಸದುದ್ದೇಶವಿರದಿದ್ದರೆ, ಕಾಯುವಿಕೆ
ಆಯಾಕಾರಣಗಳಿಗೆ ಅನುಸರಿಸಿ ಅವಧಿಯನ್ನೂ ಪ್ರತ್ಯೇಕವಾಗಿ ಅವ
ಉಲ್ಲೇಖಿಸುತ್ತಿರಲಿಲ್ಲ. ಅಂಥ ಹೆಣ್ಣು ತಿರುಗಿ ಬಾರದವರಿಗಾಗಿ ಕಾದು, ಕೊ
ಭಸ್ಮವಾಗಬೇಕೆಂಬುದು ಆತನ ಉದ್ದೇಶವಿರಲಿಲ್ಲ ಎಂದು ಅರ್ಥೈಸುವವ
ಪುನರ್ವಿವಾಹಕ್ಕೆ ಅವಕಾಶ ಮಾಡಿಕೊಡುತ್ತಿದ್ದರು.

ಇಂಥ ಪ್ರಸಂಗಗಳಲ್ಲಿಯೇ ವ್ಯಾಖ್ಯಾನಕಾರರ ಕೈ ಮೇಲಾಗುತ್ತದೆ. ಮ
ನಂತರದಲ್ಲಿ ಕೆಲವರು ಪುನರ್ವಿವಾಹಕ್ಕೆ ಅವಕಾಶವಿದೆ, ಎಂದರೆ ಮಧ್ಯಯು
ದವರು ಅಂಥ ಹೆಣ್ಣು ಯಾವುದಾದರೊಂದು ಉದ್ಯೋಗವನ್ನು ಕೈಕೊಳ್ಳಬೇ
ಎನ್ನುತ್ತಾರೆ. ವಿಹಾರಾರ್ಥವೆಂದರೆ ಹೆಣ್ಣನ್ನು ಹುಡುಕಿಕೊಂಡು ಹೋಗುವದೆಂ
ಹೇಳಿದವರು, ಪತಿಯ ಶೋಧಕ್ಕೆ ಪತ್ನಿಯೇ ಹೊರಡಬೇಕೆಂದು ಹೇಳಿದವ
ಇದ್ದಾರೆ. ಮಧ್ಯಯುಗದ ಹೊತ್ತಿಗೆ ಮೇಲುವರ್ಗದ ಮಹಿಳೆಯರಿಗೆ ಪುನರ್ವಿವಾ
ನಿಂತೇ ಹೋಗಿದ್ದರೂ, ಮನುಸ್ಮೃತಿ ರೂಪಗೊಂಡ ಕೆಲವು ಶತಮಾನ
ಕಾಲ ಈ ಅವಕಾಶ ದೊರೆತಿರಬಹುದಾಗಿದ್ದ ಸಂಭವವಿದೆ.

ವಿಧವಾವಿವಾಹ : ಮೊದಲಲ್ಲೇ ಹೇಳಿದಂತೆ, ವಿಧವೆಯರು ವಿವಾಹವಾಗುವ ಬಗ್ಗೆ ಅರೆಸಮ್ಮತಿ ಹಾಗೂ ನಿಷೇಧಗಳನ್ನು ಮನುಸ್ಮೃತಿಯಲ್ಲಿ ಜೊತೆಜೊತೆಗೆ ಕಾಣಬಹುದು. ಪುತ್ರಸಂತಾನಕ್ಕೆ ಅತಿಹೆಚ್ಚಿನ ಮಹತ್ವ ಪ್ರಾಪ್ತವಾಗಿ ಪಿಂಡ ದಾನದ, ಹಾಗೂ ಆಸ್ತಿಯ ಹಕ್ಕಿನ ಸಮಸ್ಯೆಗಳನ್ನು ಪರಿಹರಿಸಲು ಮಹಿಳೆಯ ಜನ್ಮದಾತೆಯ ಅಧಿಕಾರವನ್ನು ಮನ್ನಿಸುವುದು ಅವಶ್ಯವಾಗಿತ್ತು. ಆದರೆ 'ಔದಾರ್ಯ' ಯುತ, ಸಮ್ಮತಿಯನ್ನು ವಿಧವಾವಿವಾಹಕ್ಕೆ ಕೊಡಮಾಡಿದರೆ ಅದೇ ಪದ್ಧತಿ ಪ್ರಬಲವಾಗಿ ಅನೈತಿಕತೆ (!) ಹಬ್ಬಬಹುದೆಂಬ ಹೆದರಿಕೆ ಸ್ತ್ರೀ ಸಮಾಜದ ನೀತಿಯನ್ನು ರೂಪಿಸುವ ಅಧಿಕಾರ ಹೊಂದಿದ ಸ್ಮೃತಿಕಾರನನ್ನು ಕಾಡುತ್ತಿತ್ತು! ಅಂತೆಯೇ ವೇದಕಾಲದಿಂದ ಪ್ರಚಲಿತವಿದ್ದ ನಿಯೋಗ ಪದ್ಧತಿಗೆ ಮನುವು ಮಾನ್ಯತೆಯನ್ನು ಒಲ್ಲದೇ ನೀಡಿದ. ಈ ಪದ್ಧತಿಯಲ್ಲಿ ಮಕ್ಕಳಿಲ್ಲದೇ ಮೃತನಾದವನ, ಸೋದರನೊಂದಿಗೆ ಅಥವಾ ಅದೇ ವಂಶದ (ಸಪಿಂಡ) ಯೋಗ್ಯ ವ್ಯಕ್ತಿಯೊಂದಿಗೆ, ಗುರುಹಿರಿಯರ ಸಮ್ಮತಿಯಿಂದ ಸಂಬಂಧ ಪಡೆದು, ಸಂತಾನವನ್ನು ವಿಧವೆಯಾದಾಕೆ ಹೊಂದಬಹುದಾಗಿತ್ತು. ಮೊದಮೊದಲಿಗೆ ಮೃತನ ಸೋದರನೊಂದಿಗೆ ವಿವಾಹದಲ್ಲೆ ಮುಕ್ತಾಯ ಹೊಂದುತ್ತಿದ್ದ ಈ ಪದ್ಧತಿ ಆ ಬಳಿಕ ತಾತ್ಪೂರ್ತಿಕವಾದ ನಿಯೋಗ ರೂಪದಲ್ಲಿ ಮಹಾಭಾರತ ಕಾಲದಲ್ಲೂ ಪ್ರಚಾರದಲ್ಲಿತ್ತು. ಮನುಸ್ಮೃತಿಯ ಕಾಲಕ್ಕೂ ಇತ್ತು. ಮನುವು ಈ ಪದ್ಧತಿಗೆ ಹೊಸರೂಪಾಂತರ ಕೊಡಲು ಯತ್ನಿಸಿದಂತಿದೆ. ಮಕ್ಕಳಿಲ್ಲದ ವಿಧವೆಯು ನಿಯೋಗ ಪದ್ಧತಿಯಿಂದ ಒಂದೇ ಒಂದು ಗಂಡು ಮಗುವನ್ನು ಆಸ್ತಿಗಾಗಿ ಪಡೆಯಬಹುದು. ನಂತರದ ಸಂತಾನಕಾಮನೆ ಹೊಲ್ಲ! ಅದು ಪಶುಧರ್ಮ! ಎಂದೂ, ದೈಹಿಕ ಪಾವಿತ್ರ್ಯ ಅತಿಮುಖ್ಯ ಎಂದೂ ಹೇಳುತ್ತಾನೆ.

ಆ ಬಳಿಕ ಬರುವ ಶ್ಲೋಕಗಳಲ್ಲಿ ಪುನರ್ ವಿವಾಹದ ನಿಷೇಧವಿದೆ. ಪತಿಯ ಮರಣದ ನಂತರ ವಿಧವೆಯು ಸಂತತಿಗೆ ಇಚ್ಛಿಸಬಾರದು. ಕಾಯಾ, ವಾಚಾ, ಮನಸಾ ಪತಿಗೆ ಅಧೀನಳಾಗಿ ಆಕೆ ಬಾಳನ್ನು ಮುಂದುವರಿಸಿದರೆ ಶಾಶ್ವತಗೌರವಕ್ಕೆ ಪ್ರಾಪ್ತಳಾಗಿ, ಆಮರಣಾಂತ ಬ್ರಹ್ಮಚರ್ಯ ಪಾಲಿಸುವ ಪುರುಷರಂತೆಯೇ ಸ್ವರ್ಗ ಪಡೆಯುತ್ತಾಳೆ. ಸಚ್ಚರಿತ್ರೆಯುವಳು ಪುನರ್ವಿವಾಹಕ್ಕೆ ಎಳಸುವುದಿಲ್ಲ. ಪುನರ್ವಿವಾಹಿತರನ್ನು (ಪತಿಯನ್ನು ತ್ಯಜಿಸುವವರೂ ಈ ವರ್ಗದಲ್ಲಿ ಬರುತ್ತಾರೆ)

ಲೋಕವು ತುಚ್ಛತೆಯಿಂದ ಕಾಣುತ್ತದೆ'. ಎಂದು ಉದಾಹರಣೆಗಳ ಮೂಲಕ ಪುನರ್ವಿವಾಹ ನಿಷೇಧವನ್ನು ಬೋಧಿಸುವ ಯತ್ನವಿದೆ.

ಇದು ವೇದಯುಗದ ನಂತರದ ಬೆಳವಣಿಗೆಯಿದ್ದು, ಎರಡೂ ಸಂಪ್ರದಾಯಗಳನ್ನು ಹೊಂದಿಸುವ ಸ್ಮೃತಿಕಾರನ ಅಸಫಲ ಪ್ರಯತ್ನ ಎದ್ದು ಕಾಣುತ್ತದೆ! ಸ್ಮೃತಿಮಾನ್ಯತೆ ಇಲ್ಲದಿದ್ದರೂ ವಿಧವಾವಿವಾಹಗಳು ನಡೆದೇ ಇದ್ದವು. ಮನುಸ್ಮೃತಿಯ ಕೊಂಚವೇ ಬಳಿಕ ರೂಪಗೊಂಡ ವಾತ್ಸ್ಯಾಯನನ ಕಾಮಸೂತ್ರದಲ್ಲಿ ಪ್ರೌಢವಿವಾಹದಂತೆ ವಿಧವಾವಿವಾಹವೂ ಪ್ರಚಲಿತವಿದ್ದ ಪ್ರಮಾಣ ಸಿಗುತ್ತದೆ. 'ಪುನರ್ಭೂ' ಎಂದು ಪುನರ್ ವಿವಾಹಿತೆಯನ್ನು ಕರೆಯುತ್ತಿದ್ದು ಅವರಲ್ಲಿ ನಾಲ್ಕು ಪ್ರಕಾರಗಳನ್ನು ಗುರುತಿಸಲಾಗಿದೆ. ಬಹುಪತ್ನಿತ್ವಕೆ ಮನ್ನಣೆಯಿದ್ದುದರಿಂದ, ತಾರುಣ್ಯ, ರೂಪ, ಕಲಾಕೌಶಲ್ಯಗಳನ್ನು ಹೊಂದಿದಾಕೆ ಅಕಸ್ಮಾತ್ ವಿಧವೆಯಾದರೆ, ಪುನರ್ ವಿವಾಹಕ್ಕೆ ಕೊರತೆಯಿರುತ್ತಿರಲಿಕ್ಕಿಲ್ಲ. ಆದರೆ ಕುಟುಂಬದಲ್ಲಿ, ಸಮಾಜದಲ್ಲಿ ಅವಳ ಸ್ಥಾನ, ಪ್ರಥಮ ವಿವಾಹಿತೆಗಿಂತ ಕಡಿಮೆಯಿರುತ್ತಿತ್ತು .

ಆಸ್ತಿಯ ಒಡೆತನದ ಪ್ರಶ್ನೆಬಂದಾಗ ವಿಧವೆಯನ್ನು ಅದರಿಂದ ವಂಚಿತಳನ್ನಾಗಿ ಮಾಡುವ ಮನಸ್ಸಿಲ್ಲದೇ ನಿಯೋಗಕ್ಕೆ ಸಮ್ಮತಿ ದೊರೆತಿದೆ. ಆದರೆ ಸೋಜಿಗದ ವಿಚಾರವೆಂದರೆ ಮಹಿಳೆಯೊಬ್ಬಳಿಗೆ ಇಬ್ಬರಿಂದ ಬೇರೆ ಬೇರೆ ಮಕ್ಕಳನ್ನು ಪಡೆಯುವ ಸಂದರ್ಭದಲ್ಲಿ ಮತ್ತು ಆಸ್ತಿಯ ಕುರಿತು ವಿವಾದ ಹುಟ್ಟಿಕೊಂಡಲ್ಲಿ, ಪ್ರತಿಮಗುವೂ ಸ್ವಂತ ತಂದೆಯ ಆಸ್ತಿಯನ್ನು ಮಾತ್ರ ಪಡೆಯಲು ಅರ್ಹನು! ಎಂದು ಸ್ಪಷ್ಟವಾದ ಮನುವಿನ ಅಭಿಪ್ರಾಯ ನೋಡಿದರೆ ಆ ಶತಮಾನ ಗಳಲ್ಲಿ ಪುನರ್ ವಿವಾಹಗಳು ಸಾಕಷ್ಟು ನಡೆಯುತ್ತಿದ್ದವು ಎಂದೇ ಊಹಿಸಬೇಕು.

ಇನ್ನು, ರಾಜವಂಶದವರಿಗೆ ಈ ಸ್ಮೃತಿಯ ಕಟ್ಟುಪಾಡುಗಳ ಕಾಡುತ್ತಿರಲಿಲ್ಲ. ರಾಜರು ವರ್ಣಾಶ್ರಮ ಧರ್ಮ ಎತ್ತಿ ಹಿಡಿಯುವವರೆಂದು ಸ್ಮೃತಿಕಾರರನ್ನು ಪೂಜಿಸುವವರೆಂದು ಖ್ಯಾತಿವೆತ್ತವರು, ಅವರ ಅಭಿಪ್ರಾಯಗಳನ್ನು ಮಾನ್ಯಮಾಡುತ್ತಿದ್ದರೆಂದು ನಂಬಲಾಗದು! ಗುಪ್ತಯುಗ (ಕ್ರಿ.ಶ. 4 ರಿಂದ 6ನೆ ಶತಮಾನ) ಭಾರತ ಚರಿತ್ರೆಯಲ್ಲಿ ಸುವರ್ಣಯುಗವೆಂದು ಸ್ಮರಿಸಲ್ಪಡುತ್ತದೆ. ಶಕರನ್ನು ಸೋಲಿಸಿದ ವಿಕ್ರಮಶಕೆ ಪ್ರಾರಂಭಿಸಿದ ಆ ವಂಶದ ಶ್ರೇಷ್ಠ ಅರಸು ಎರಡನೆಯ ಚಂದ್ರಗುಪ್ತ ವಿಕ್ರಮಾದಿತ್ಯನು, ತನ್ನ ಅಣ್ಣನ ಕೊಲೆಯಾದ ಬಳಿ

(ಹೇಡಿಯಾಗಿದ್ದ ಆತನನ್ನು ಚಂದ್ರಗುಪ್ತನೇ ಕೊಲೆಗೈದನೆಂಬುದಕ್ಕೆ ಆಧಾರವಿದೆ) ಆತನ ವಿಧವೆ ಧ್ರುವಸ್ವಾಮಿನಿಯನ್ನು ಮದುವೆ ಆದದ್ದೇ ಅಲ್ಲದೇ ಅವಳನ್ನು ಪಟ್ಟಮಹಿಷಿಯನ್ನಾಗಿಸಿದ. ಅವಳ ಹೆಸರಿನಲ್ಲಿ ನಾಣ್ಯಗಳನ್ನು ಟಂಕಿಸಿದ. ರಾಜರನ್ನು ಪ್ರಜರು ಬಹುವಿಧದಲ್ಲಿ ಅನುಕರಿಸುವದು ಸಾಮಾನ್ಯವಲ್ಲವೇ? ಆದರೆ ಜನಸಾಮಾನ್ಯರು ಕೈಕೊಳ್ಳುವ ಕ್ರಮಗಳಿಗೆ ಪ್ರಸಿದ್ಧಿ ದೊರೆಯುವದಿಲ್ಲವಲ್ಲ? ಈಗ ನಮಗೆ ಸುಧಾರಣಾ ಕ್ರಮಗಳೆಂದು ಕಂಡರೂ ವಿಧವಾ-ವಿವಾಹ ಪ್ರಚಲಿತವಿದ್ದ ಜನಾಂಗಗಳು ಆ ಪದ್ಧತಿಯನ್ನು ಉಳಿಸಿಕೊಂಡೇ ಬಂದಿವೆ. ಕೆಲವು ಯೋಧ ಜನಾಂಗಗಳಲ್ಲಿ 'ಚದ್ದರ್ ಡಾಲನಾ' ಎಂಬ ವಿಧಿಯು ಇದ್ದು, ನಿಯೋಗ ಪದ್ಧತಿಯ ಆಚರಣೆಯೇ ಆಗಿದೆ. ಅದರಂತೆ ಕರ್ನಾಟಕದಲ್ಲಿ 'ಉಡಕೀ' ಪದ್ಧತಿ, ಕುಲ-ಶ್ರೇಣಿ ಸಮ್ಮತವೆಂದು ಮನು ಒಪ್ಪಿಕೊಂಡ ಪುನರ್‌ವಿವಾಹದ ಸಂಪ್ರದಾಯವೇ ಆಗಿ ಉಳಿದಿದೆ.

'ಕಲಿವರ್ಜ' ಎಂಬ ಬ್ರಹ್ಮಾಸ್ತ್ರವನ್ನು ಸ್ಮೃತಿ-ವ್ಯಾಖ್ಯಾನಕಾರರು ಪ್ರಯೋಗಿಸಲಾರಂಭಿಸಿದಾಗ, ಬಹುಶಃ ಏಳನೆಯ ಶತಮಾನದಿಂದ ಈಚೆಗೆ ಮನುಸ್ಮೃತಿಯನ್ನು ಮನ್ನಿಸುವ ವರ್ಗಗಳಲ್ಲಿ ವಿಧವಾ-ವಿವಾಹ ನಿಂತು ಹೋಯಿತು. ಅರಬ್ ವಿದ್ವಾಂಸ ಆಲ್ಬೆರೂನಿ ಹತ್ತನೆಯ ಶತಮಾನದಲ್ಲಿ ಮುಸ್ಲಿಂ ಆಕ್ರಮಿತ ಪ್ರದೇಶದಲ್ಲಿದ್ದ ಹಿಂದೂ ವಿಧವೆಯರ ದೀನ ಪಾಡನ್ನು ಗಮನಿಸಿದ್ದ. 'ಎಲ್ಲ ಹಿಂದುಗಳಲ್ಲಿಮದುವೆ ಚಿಕ್ಕವಯಸ್ಸನಲ್ಲಿ ನಡೆಯುತ್ತಿದ್ದು ಹೆಣ್ಣಿನ ವಿವಾಹಜೀವನ, ಬಾಳ ಸಂಗಾತಿಯ ಸಾವಿನಲ್ಲೆ ಕೊನೆಗೊಳ್ಳುತ್ತದೆ. ಇವರಲ್ಲಿ ವಿವಾಹ ವಿಚ್ಛೇದನ ಪದ್ಧತಿ ಇಲ್ಲ. ಚಿಕ್ಕವಯಸ್ಸಿನಾಕೆಯೂ ಪುನರ್ವಿವಾಹ ಮಾಡಿಕೊಳ್ಳುವಂತಿಲ್ಲ. ಅವಳಿಗಿರುವ ಆಯ್ಕೆ ಎರಡೇ, ಆಮರಣಾಂತ ವಿಧವಾಜೀವನ, ಅಥವಾ ಸತಿ ಹೋಗುವದು, ಏಕೆಂದರೆ ವಿಧವೆಯರನ್ನು ಅತ್ಯಂತ ಕೀಳಾಗಿ ನಡೆಸಿಕೊಳ್ಳಲಾಗುತ್ತದೆ' ಎಂದು ಉದ್ಗರಿಸಿದ್ದಾನೆ.

ಇದು ಮನುಸ್ಮೃತಿ ರೂಪಗೊಂಡ ಸಹಸ್ರವರ್ಷಗಳ ನಂತರದ ಪರಿಸ್ಥಿತಿಯಾಗಿತ್ತು. ಆ ಬಳಿಕ ವಿಧವೆಯರ ಮೇಲೆ ನಿರ್ಬಂಧಗಳು ಹೆಚ್ಚುತ್ತಲೇ ಹೋದವು.

ಮುಂಡನ: ವಿಧವೆಯರಿಗೆ ಬ್ರಹ್ಮಚಾರಿಗಳ ಸಮಾನ ಸಾತ್ವಿಕ, ಕಠಿಣ ಜೀವನವೇ ಯೋಗ್ಯವೆಂದು ಹೇಳಿದರೂ, ತೀರ ಇತ್ತೀಚಿನವರೆಗೆ ಹಲವು

ಬ್ರಾಹ್ಮಣ ಪಂಗಡಗಳಲ್ಲಿ ಉಳಿದು ಬಂದಿದ್ದ ವಿಧವೆಯರ ತಲೆಬೋಳಿಸು ಕ್ರೂರ ಪದ್ಧತಿಯನ್ನು ಮನು ಉಲ್ಲೇಖಿಸಿಲ್ಲ. ಅಷ್ಟೇಕೆ? ಹನ್ನೆರಡನೆಯ ಶತಮಾನದಲ್ಲಿ ಯಾಜ್ಞವಲ್ಕ್ಯ ಸ್ಮೃತಿಗೆ ವ್ಯಾಖ್ಯಾನ ನೀಡಿದ ಕನ್ನಡಿ ವಿಜ್ಞಾನೇಶ್ವರನೂ ಹೇಳಿಲ್ಲ, ಅಷ್ಟೇ ಅಲ್ಲ, ತಲೆ ಬೋಳಿಸುವದು ಕಠಿಣ ಶಿಕ್ಷೆಯ ಕ್ರಮವಾಗಿದ್ದು, ವಿದ್ವಾಂಸರಿಗೆ, ವಿಪ್ರರಿಗೆ, ರಾಜರಿಗೆ ಮತ್ತು ಸ್ತ್ರೀಯರಿ ಅನ್ವಯಿಸುವುದಿಲ್ಲವೆಂದು ಮನುವಿನ ಅಭಿಪ್ರಾಯವನ್ನೇ ಉದ್ಧರಿಸುತ್ತಾನೆ!

ವಿಧವೆ: ಸನ್ಯಾಸಿನಿಯ ಬಾಹ್ಯರೂಪವನ್ನು ಸೃಷ್ಟೀಕರಿಸಲು, ಮುಂಡನ ಮತ್ತು ಕೆಂಪು ವಸ್ತ್ರಧಾರಣೆ (ಕಾಷಾಯದ ಉಗ್ರರೂಪ) ಕಡ್ಡಾಯವಾದದು ಹದಿನಾಲ್ಕನೆಯ ಶತಮಾನದಿಂದೀಚೆಗೆ. ಬಹುಶಃ ಮುಸ್ಲಿಂ ಆಕ್ರಮಣ ದಕ್ಷಿಣಕೂ ಹಬ್ಬಿ - ಅರಕ್ಷತೆ, ಸಾರ್ವತ್ರಿಕವಾದಾಗ, ವಿಧವೆಯರಾದ ಹೆಣ್ಣುಮಕ್ಕಳ ಮೇಲಿ ನಿರ್ಬಂಧಗಳು ಹೆಚ್ಚುತ್ತ ಹೋದವು. ಅವರ ದರ್ಶನವೇ ಅಪಶಕನವೆಂದು ಪರಿಗಣಿಸಲು, ಅವರನ್ನು ಪ್ರತ್ಯೇಕಿಸಲು ಬಾಹ್ಯಲಕ್ಷಣಗಳಾದ ಮುಂಡನ- ಕೆಂಪು ಸೀರೆಗಳು ಸಹಾಯವಾದವು!

ಸಹಗಮನ : ಅಥವಾ ಸತಿಪದ್ಧತಿಯನ್ನು ಮನು ಉಲ್ಲೇಖಿಸಿಲ್ಲ. ನಂತರ ಬಂದ ವಿಷ್ಣುಸ್ಮೃತಿ (ನಾಲ್ಕನೆಯ ಶತಮಾನ) ಹಾಗೂ ಬೃಹಸ್ಪತಿ ಸ್ಮೃತಿ (ಆರನೆಯ ಶತಮಾನ)ಗಳು ಅದನ್ನು ಪ್ರಶಂಸಿಸುತ್ತವೆ. ಆದರೆ ಮನುಸ್ಮೃತಿಯ ಪ್ರಮುಖ ವ್ಯಾಖ್ಯಾನಕಾರನಾದ ಮೇಧಾತಿಥಿಯು, (ಒಂಭತ್ತನೆಯ ಶತಮಾನ) ಸಹಗಮನ ಪದ್ಧತಿಯನ್ನು ಖಂಡಿಸಿದ್ದಾನೆ. ಆಯುಷ್ಯ ತೀರುವ ಮೊದಲು ದೇಹವನ್ನು ಕೊನೆಗಾಣಿಸುವದು ಆತ್ಮಘಾತವೇ ಹೊರತು ಧರ್ಮಮಾರ್ಗವಲ್ಲವೆಂದು ಹೇಳಿದ್ದಾನೆ.

ಆದರೆ ಹನ್ನೊಂದನೆಯ ಶತಮಾನದ ಹೊತ್ತಿಗೆ ಅದು ಬಹಳಷ್ಟು ಪ್ರಚಲಿತವಾಯಿತು. ಮೊದಲು ಕ್ಷತ್ರಿಯರಲ್ಲಿ ಹೆಚ್ಚು ಕಂಡು ಬಂದ ರೂಢಿ ಆ ಬಳಿಕ ವರ್ಣ-ಜಾತಿಭೇದವಿಲ್ಲದೆ ಬೆಳೆದು ಬಂದಿತು. ವಿಜ್ಞಾನೇಶ್ವರನಂತೂ ಇನ್ನಿಲ್ಲದಷ್ಟು ಸತಿ ಪದ್ಧತಿಯನ್ನು ಪ್ರಶಂಸಿದ್ದಾನೆ. ಅಲ್ಲದೇ ಬ್ರಾಹ್ಮಣರಿಂದ ಚಾಂಡಾಲ ಸ್ತ್ರೀಯರವರೆಗೆ ಯಾವ ಮಹಿಳೆಯೂ ಸತಿಹೋದರೂ ಅವಳ ಎರಡೂ ಕಡೆಯ ಪಿತೃ ಪರಂಪರೆಯನ್ನು ಸ್ವರ್ಗಕ್ಕೆ ಕರೆದೊಯ್ದ ಪುಣ್ಯಪ್ರಾಪ್ತಿ ಅವಳದಾಗುತ್ತದೆ! ಎಂದು ಸಾರಿದ್ದಾನೆ. ಹೀಗೆನ್ನಲು ಕಾರಣ, ಸ್ಮೃತಿಕಾರರಲ್ಲಿ

ಕಾಣಿಸಿಕೊಂಡ ವರ್ಣಭೇದ. ಬ್ರಾಹ್ಮಣ ಸ್ತ್ರೀಗೆ ಸಹಗಮನ ನಿಷೇಧವೆಂದು ಹೇಳಿದವರು ಇದ್ದರು. ಸಹಗಮನ ಬೇಕಿಲ್ಲ. ಅನುಮರಣ (ಪತಿಯ ಶವದೊಂದಿಗೇ ಒಂದೇ ಚಿತೆಯಲ್ಲಿ ಅಲ್ಲದಿದ್ದರೂ, ಆ ಬಳಿಕ ಪ್ರತ್ಯೇಕ ಅಗ್ನಿಕುಂಡದಲ್ಲಿ) ಕೈ ಕೊಳ್ಳಬಹುದು ಅಂದವರಿದ್ದರು. ವಿಜಯನಗರ ಕಾಲದಲ್ಲಿ ಪರಾಶರಸ್ಮೃತಿಗೆ ವ್ಯಾಖ್ಯಾನ ಬರೆದ ಮಾಧವಾಚಾರ್ಯರೂ ಸಹಗಮನವನ್ನು ಸಮರ್ಥಿಸಿದ್ದಾರೆ.

ಆದರೆ ಮನು ಈ ಪದ್ಧತಿಯ ಬಗ್ಗೆ ಮೌನತಾಳಿದ್ದಾನೆ. ಮನುಸ್ಮೃತಿ ರೂಪಗೊಳ್ಳುವ ಕಾಲಕ್ಕೆ ಅಲ್ಲಲ್ಲಿ ಕೆಲವು ಕ್ಷಾತ್ರಪಂಗಡಗಳಲ್ಲಿ ಅನುಮರಣದ ಪದ್ಧತಿ ಇದ್ದರೂ ಸ್ಮೃತಿಕಾರರು ಗಮನ ಹರಿಸುವಷ್ಟು ವ್ಯಾಪಕವಾಗಿರಲಿಲ್ಲ. ಆದ್ದರಿಂದಲೋ ಏನೋ, ಅದರ ಉಲ್ಲೇಖ, ಮನು ಹಾಗೂ ಯಾಜ್ಞವಲ್ಕ್ಯ ಸ್ಮೃತಿಗಳಲ್ಲಿ ಇಲ್ಲ. ಅದನ್ನು ಮನುವಿನ ಔದಾರ್ಯವೆಂದು ಭಾವಿಸುವಂತಿಲ್ಲ!

ದೇವದಾಸಿ ಪದ್ಧತಿ : ದೇವದಾಸಿ ಪದ್ಧತಿಯನ್ನು ಮನುಸ್ಮೃತಿ ಉಲ್ಲೇಖಿಸುವದಿಲ್ಲ. ಬಹುಶಃ ಶಂಕರಾಚಾರ್ಯರಿಂದಾಗಿ ಪುನಶ್ಚೇತನಗೊಂಡ ಹಿಂದೂಧರ್ಮ, ಕ್ರಮೇಣ ವಿಸ್ತರಿಸುತ್ತ, ಮೂರ್ತಿಪೂಜೆ, ದೇವಾಲಯಗಳಿಗೆ ಹೆಚ್ಚಿನ ಮಹತ್ವಕಾಣಿಸಿಕೊಂಡಿತು. ಅರಸರಿಗೆ ದೊರೆಯುತ್ತಿದ್ದ ಭೋಗೈಶ್ವರ್ಯಗಳೆಲ್ಲ, ದೇವಾಧಿದೇವತೆಗಳಿಗೆ ಸಲ್ಲಲಾರಂಭಿಸಿದವು. ಸೂರ್ಯನ ಹಾಗೂ ಇತರ ದೇವಾಲಯಗಳಲ್ಲಿ, ವಿವಿಧ ಸೇವೆಗಳಿಗೆ ಕನ್ಯೆಯರನ್ನು ಕೊಡಮಾಡಿದರೆ ಸ್ವರ್ಗಪ್ರಾಪ್ತಿ ಖಂಡಿತವೆಂದು ಪುರಾಣಗಳು ಸಾರಿದವು. ಹೀಗಾಗಿ ನಂತರ ವಿಕೃತ ರೂಪ ತಾಳುತ್ತ ಬಂದ ಈ ಪದ್ಧತಿ ಮನುಸ್ಮೃತಿಯ ಅನೇಕ ಶತಮಾನಗಳ ಬಳಿಕ ಬೆಳೆದು ಬಂದಿದ್ದು, ಎಂದು ಹೇಳಬಹುದು.

ವಿವಾಹವಿಧಿ ಹಾಗೂ ಪ್ರಕಾರಗಳು : ಗೃಹಸ್ಥಧರ್ಮಕ್ಕೆ ಅತ್ಯವಶ್ಯವಿದ್ದ ವಿವಾಹ ಪದ್ಧತಿಯ ಅನೇಕ ಪ್ರಕಾರಗಳು, ಪ್ರಾಚೀನಕಾಲದಲ್ಲಿ ರೂಪಗೊಂಡಿದ್ದವು. ಅವುಗಳನ್ನು ಮನುಸಂಹಿತೆಯಲ್ಲಿ ಕಾಣುತ್ತೇವೆ. ವರದಕ್ಷಿಣೆಯ ಪ್ರಸ್ತಾಪ ಎಲ್ಲಿಯೂ ಬರುವದಿಲ್ಲ. ಬದಲಾಗಿ ವಧುದಕ್ಷಿಣೆ ಅಥವಾ ಕನ್ಯಾಶುಲ್ಕದ ರೂಢಿ ತುಂಬ ಜೋರಾಗಿತ್ತು! ಆದ್ದರಿಂದಲೋ ಏನೋ ಮನುವು ಈ ಪದ್ಧತಿಯನ್ನು ಖಂಡಿಸಿದ್ದಾನೆ. ಮದುವೆಯಾಗಬಯಸುವ ವರನು ಸಾಕಷ್ಟು ಹಣ, ಗೋಸಂಪತ್ತು, ವಾಹನ ಇತ್ಯಾದಿಗಳನ್ನು ಭಾವೀ ಮಾವ ಹಾಗೂ ಆತನ

ಸಂಬಂಧಿಕರಿಗೆ ಕೊಡಮಾಡಿದಾಗಲೇ ಅವನಿಗೆ ಪತ್ನಿ ಲಭಿಸುತ್ತಿದ್ದಳು. ಕನ್ಯಾಶು ಈಗಾಗಲೇ ಹೇಳಿದ ಸ್ತ್ರೀಯರನ್ನು ಸದಾ ಸಂತೋಷದಲ್ಲಿರಿಸಬೇಕು ಎಂ ಅಭಿಪ್ರಾಯ ಹಾಗೂ ಸ್ತ್ರೀಯರ ರಕ್ಷಣಾ ಕ್ರಮಗಳ ಬಗ್ಗೆ ವಹಿಸಬೇಕಾದ ಎ ಮುಂತಾದ ಅಂಶಗಳನ್ನು ನೋಡಿದಾಗ, ಸ್ತ್ರೀ ಸಂತಾನದ ಅಭಾವವಿದ ಕನ್ಯಾವಿಕ್ರಯ ದೊಡ್ಡಮೊತ್ತಕ್ಕೆ ನಡೆಯುತ್ತಿತ್ತೇ? ಎಂಬ ಸಂದೇಹ ಹುಟ್ಟುತ್ತ ಕನ್ಯಾಶುಲ್ಕವನ್ನು ಖಂಡಿಸುತ್ತ ಮನುವು, ಅದನ್ನು ಸ್ವೀಕರಿಸುವ ಕನ್ಯಾಪಿತ ಹೊಟ್ಟೆಯ ಮಗುವನ್ನು ಮಾರಿದ ಪಾಪಕ್ಕೆ ಒಳಗಾಗುತ್ತಾನೆ. ಆದ್ದರಿಂದ ಯಾ ವರ್ಣದವರೂ ಕನ್ಯಾಶುಲ್ಕವನ್ನು ಪುರಸ್ಕರಿಸಬಾರದು ಎನ್ನುತ್ತಾನೆ.

ಆದರೆ ಪ್ರೀತಿಯಿಂದ ಕೊಡಮಾಡಿದ ಇಂಥ ವಧುದಕ್ಷಿಣೆ, ವಧು ತಲುಪುವಂತಿದ್ದರೆ, ಅದರ ಸ್ವೀಕಾರಕ್ಕೆ ಆಕ್ಷೇಪ ಇಲ್ಲ ಎಂಬರ್ಥದ ಹೇಳಿಕೆ ಬರುತ್ತದೆ. 'ಪ್ರೀತಿ' ಮತ್ತು 'ಒತ್ತಾಯ' ಶಬ್ದಗಳನ್ನು ರೂಢ ಸಂಪ್ರದಾಯಗ ವಿಭಾಗಿಸುವದು ಬಲು ಕಠಿಣ! ಮನುಷ್ಯರ ಲೋಭ ನಿಯಂತ್ರಣಕ್ಕೆ ಕಾನೂ (ಹಿಂದಿನ ಕಾಲಕ್ಕೆ ಸ್ಮೃತಿಯ) ಆಧಾರಗಳು ಸಹಾಯವಾಗುವದಿಲ್ಲ! ಎಂಬು ನಮ್ಮ ಕಾಲದ ವರದಕ್ಷಿಣೆಗೆ ಸಂಬಂಧಿಸಿದ ಹಿಂಸೆ-ಹತ್ಯೆಗಳ ಪ್ರಕರಣಗಳ ಕಂಡುಕೊಂಡಿದ್ದೇವೆ. ಹಣಪಡೆದು ತಮ್ಮ ಹೆಣ್ಣು ಮಕ್ಕಳನ್ನು ಮದ ಮಾಡಿಕೊಡುತ್ತಿದ್ದ ಪಿತರ ಸಂಖ್ಯೆ ಸಾಕಷ್ಟು ದೊಡ್ಡದು ಇರುತ್ತಿತ್ತು, ಎಂ ಊಹಿಸಬಹುದು.

ಅಂತರ್ ಜಾತೀಯ ವಿವಾಹಕ್ಕೆ ಸಮ್ಮತಿಯನ್ನೂ, ನಿಷೇಧವ ಜೊತೆಜೊತೆಗೇ ಮನುಸ್ಮೃತಿಯಲ್ಲಿ ಕಾಣಬಹುದು. ಅವುಗಳಲ್ಲಿ ಪಾಲಿಸಬೇ ವಿಧಿಗಳನ್ನು ಸ್ಪಷ್ಟವಾಗಿ ಹೇಳುವದರಿಂದ ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿದ್ದವು ಎಂದೇ ಗ್ರಹಿಸುವುದು ಉಚಿತ. ಆಕ್ರಮಣಕಾರರಾಗಿ ಬ ವಿದೇಶೀಯ ಪಂಗಡಗಳು ಇಲ್ಲಿಯ ಕನ್ಯೆಯರನ್ನು ವಿವಾಹವಾಗುತ್ತಿದ್ದ "ಸಂಸ್ಕಾರ ಹೀನರ" ಇಂಥ ಮದುವೆಗಳ ಮತ್ತು ವರ್ಣ ಸಂಕರದ ಪ್ರಸಂಗಗ ತಪ್ಪಿಸಲು ಪ್ರಯತ್ನಿಸಿದ ಆದರೆ ಯಶಸ್ಸು ಸಿಗದ ಸ್ಮೃತಿಕಾರರು ತಮ ಅನುಲೋಮ ಪದ್ಧತಿಯ ಅಂತರ್ ವರ್ಣೀಯ (ಅಂತರ್ ಜಾತೀ ವಿವಾಹಗಳಿಗೆ ಸಮ್ಮತಿಸಿದರು. ಅಂದರೆ ವರನು ಉತ್ತಮ ವರ್ಣದವ ವಧು ಆತನಿಗಿಂತ ಕೆಳಗಿನ ವರ್ಣಕ್ಕೆ ಸೇರಿದವಳಿರಬೇಕು. ಇದರ ಉ

ಆಗಕೂಡದು! ಎಂದರು. ಇಂಥ ವಿವಾಹಗಳಿಗೆ ಸಾಂಕೇತಿಕ ವಿಧಿಗಳು ಇದ್ದವು.

ಸ್ವಜಾತಿಯ ವಧುವರರಲ್ಲಿ ಪಾಣಿಗ್ರಹಣ ಸಾಮಾನ್ಯವಾಗಿತ್ತು. ಕ್ಷತ್ರಿಯ ವಧು ಬ್ರಾಹ್ಮಣನನ್ನು ವರಿಸುವಾಗ ಕೈಯಲ್ಲಿ ಬಾಣವನ್ನು, ವೈಶ್ಯಕನ್ಯೆ ಅಂಕುಶ ಹಿಡಿದು ವಿವಾಹವಾಗಬೇಕಿತ್ತು. ನಂತರದ ಶ್ಲೋಕಗಳು ಇಂಥ ಮದುವೆಯನ್ನು ಖಂಡಿಸುತ್ತವೆ! ಆದ್ದರಿಂದ ಮನುಸ್ಮೃತಿ, ಸಂಧಿಕಾಲದ ಕೃತಿಯೆಂದು ಸಿದ್ಧವಾಗುವದು. ಸಾಧ್ಯ ಸಂದರ್ಭದಲ್ಲಿ , ಸ್ವಜಾತಿಯವರಲ್ಲಿ ಮದುವೆ ಸ್ತುತ್ಯವೆಂದೂ, ಅದು ಸಾಧ್ಯವಾಗದಿದ್ದರೆ ಅನುಲೋಮ, ಅಂತರ್‌ಜಾತೀಯ ವಿವಾಹಗಳಿಗೆ ಮನುಸಮ್ಮತಿಯಿತ್ತೆಂದು ಅರ್ಥೈಸಬಹುದು.

ಏನಿದ್ದರೂ, ಮಧ್ಯಯುಗದ ಕಟುರತೆಯನ್ನು ನೆನಪಿಸಿಕೊಂಡರೆ, ಈ ವಿಚಾರದಲ್ಲಿ ಮನು ಉದಾರನಾಗಿದ್ದ ಎಂಬುದು ಗಮನಾರ್ಹ.

ವಿವಾಹದ ಪ್ರಕಾರಗಳು: ಮೊದಲಿನಿಂದಲೂ ಅಸ್ತಿತ್ವದಲ್ಲಿದ್ದ ಎಂಟು ಮದುವೆಯ ಪ್ರಕಾರಗಳನ್ನು ಮನು, ಮಾನ್ಯ ಮಾಡಿದ್ದು ನಂತರದ ಕೆಲವು ಶತಮಾನಗಳಲ್ಲಿ ಅವು ರೂಢಿಯಲ್ಲಿದ್ದವು.

1. ವರಪೂಜೆಯ ಬಳಿಕ ವಸ್ತ್ರ-ಭೂಷಣಗಳಿಂದ ವಧುವರರನ್ನು ಅಲಂಕರಿಸಿ ಹಿರಿಯರ ಸಮಕ್ಷಮ ನಡೆಯುವ ಮದುವೆ 'ಬ್ರಾಹ್ಮ' ವಿವಾಹ.
2. ಸಾಲಂಕೃತ ಕನ್ಯಾದಾನ, 'ದೈವ' ವಿವಾಹ.
3. ಹಸುಗಳ ಜೋಡಿ ಅಥವಾ ಹಸು-ಎತ್ತಿನ ಜೋಡಿಯನ್ನು ಕನ್ಯಾಪಿತೃವಿಗೆ ಕೊಡಮಾಡಿದ ಲಗ್ನ. 'ಆರ್ಷ' (ಋಷಿಗೆ ಹೊಂದುವಂಥ) ಪ್ರಕಾರವಾಗಿತ್ತು.
4. ನೀವಿಬ್ಬರೂ ಧರ್ಮಪೂರ್ವಕ ನಡೆಯಿರಿ! ಎಂಬ ಆಶೀರ್ವಾದ ದೊಂದಿಗೆ ಕೆಲ ಕಾಣಿಕೆಗಳನ್ನು ವಧುವರರಿಬ್ಬರಿಗೆ ಕೊಡಮಾಡಿದ ಲಗ್ನ 'ಪ್ರಾಜಾಪತ್ಯ'. ಅಥವಾ ಪ್ರಜಾಪತಿಗೆ ಪ್ರಿಯವಾದದ್ದು.
5. ವರನಾದವನು ಯಥಾಶಕ್ತಿ ಉಡುಗೊರೆ, ಧನಗಳನ್ನು ಕನ್ಯೆಗೆ ಅವಳ ತಂದೆಗೆ ಹಾಗೂ ಸಂಬಂಧಿಗಳಿಗೆ ಕೊಡಮಾಡಿ, ಆಗುವ ವಿವಾಹ, 'ಆಸುರ' ಪ್ರಕಾರ.
6. ಪರಸ್ಪರ ಇಷ್ಟಪಟ್ಟೋ, ಪ್ರೇಮಿಸಿಯೋ ಮಾಡಿ ಕೊಂಡದ್ದು 'ಗಾಂಧರ್ವ' ಪ್ರಕಾರ.

7. ಬಲಾತ್ಕಾರದಿಂದ ಕನ್ಯೆಯನ್ನು ಅಪಹರಿಸಿಯೋ, ಅವಳ ಸಂಬಂಧಿಕ ರನ್ನು ಹೊಡೆದುಬಡಿದೋ, ಸೋಲಿಸಿಯೋ ತಂದಾಕೆಯನ್ನು ಮದುವೆಯಾದರೆ 'ರಾಕ್ಷಸ' ಪ್ರಕಾರ ಎನಿಸಿಕೊಳ್ಳುತ್ತಿತ್ತು.
8. ಮೈ ಮರೆಯುವ ಔಷಧ ಕೊಟ್ಟೋ, ನಿದ್ರಾವಸ್ಥೆಯಲ್ಲಿದ್ದವಳನ್ನೋ ಜ್ಞಾನತಪ್ಪಿಸಿ ಹೊತ್ತು ತಂದವಳೊಂದಿಗೆ ಮದುವೆ, 'ಪೈಶಾಚಿಕ ವಿಧಾನವಾಗಿತ್ತು.

ಬ್ರಾಹ್ಮಣರಿಗೆ ಮೊದಲ ಆರು, ಕ್ಷತ್ರಿಯರಿಗೆ ಕೊನೆಯ ನಾಲ್ಕು ವೈಶ್ಯ-ಶೂದ್ರರಿಗೆ ರಾಕ್ಷಸ ವಿಧಾನ ಬಿಟ್ಟು ಉಳಿದ ಮೂರು ಶಾಸ್ತ್ರ ಸಮ್ಮತವಿದ್ದವು. ಅಂದರೆ ಕೆಲವು ವರ್ಣಗಳಲ್ಲಿ ಕೆಲವು ವಿವಾಹ ಪ್ರಕಾರಗಳು ರೂಢವಾಗಿದ್ದು ಅವನ್ನೆಲ್ಲ ಸಿಂಧುವಾಗಿಸುವದು ಸ್ಮೃತಿಕಾರನ ಉದ್ದೇಶವಿರಲು ಸಾಕು. ಹೇಗಾದರೂ ಕನ್ಯೆಯನ್ನು ಪಡೆದರಾಯಿತು, ಮದುವೆಯ ವಿಧಿಯನ್ನು ಹಿರಿಯರು ಏರ್ಪಡಿಸುತ್ತಿದ್ದರು ಎಂದು ಅರ್ಥೈಸುವಾಗ, ಹೆಣ್ಣು ಮಕ್ಕಳ ಸಂಖ್ಯೆ ಇಳಿಮುಖ ವಾಗಿ, ರಾಕ್ಷಸ, ಪೈಶಾಚಿಕ ಉಪಾಯಗಳಿಗೆ ಮೊರೆ ಹೋಗುವ ಸ್ಥಿತಿ ಸಮಾಜದಲ್ಲಿ ಉಂಟಾಗುತ್ತಿದ್ದಿರಬಹುದು ಎಂದೂ ಊಹಿಸುವಂತಾಗುತ್ತದೆ!

ಕೆಲವೊಂದು ಬುಡಕಟ್ಟಿನ ಸಮಾಜಗಳಲ್ಲಿ ಈಗಲೂ ಸಾಂಕೇತಿಕವಾಗಿ ಹುಡುಗಿಯನ್ನು ಹಾರಿಸಿಕೊಂಡು ಹೋಗುವದು. ಹೆಣ್ಣನ್ನು ಅಡಗಿಸಿಡುವದು. ಹುಸಿಕಾಳಗ ಕೈಕೊಳ್ಳುವದು ಮೊದಲಾದ ವಿವಾಹ ವಿಧಿಗಳಿವೆ. ಇವು ಪ್ರಾಚೀನ ಕಾಲದ ರಾಕ್ಷಸ ಪ್ರಕಾರದ ವಿವಾಹದ ಪಳೆಯುಳಿಕೆಯಾಗಿರಲು ಸಾಕು.

ವಿವಾಹವೆಂಬುದು ಮನುಕಾಲದಲ್ಲಿ ತೀರ ಸಾದಾ ಹಾಗೂ ಸರಳವಾದ, ಗುರುಹಿರಿಯರ ಸಮ್ಮುಖದಲ್ಲಿ, ನಡೆಯುವ ವಿಧಿಯ ಪ್ರಕಾರವಾಗಿತ್ತು. ನಾಲ್ಕನೆಯ ಪ್ರಕಾರವಂತೂ ಕೇವಲ ಆಶೀರ್ವಾದ ಬಲವಿದ್ದು, ಪ್ರಜಾಪತಿ ಬ್ರಹ್ಮನಿಗೆ ಪ್ರಿಯವಾದದ್ದು. ಆರನೆಯ ಪ್ರಕಾರದ ಗಾಂಧರ್ವ ವಿವಾಹವು ಈಗಿನ 'ಲವ್‌ಮ್ಯಾರೇಜ್' ಅಥವಾ ಪ್ರೇಮವಿವಾಹಕ್ಕೆ ಸರಿ ಹೋಗುವಂತಹದು. ಇದರಲ್ಲಿ ವಧುವು ಖಂಡಿತಕ್ಕೂ ಬಾಲಕಿಯಾಗಿರುತ್ತಿರಲಿಲ್ಲ!

ಕನ್ಯಾಶುಲ್ಕದ ಮೊತ್ತವನ್ನು ಭಾವೀ ಮಾವನಿಗೆ ಕೊಟ್ಟು ಮದುವೆ ಆಗುವ 'ಅಸುರ' ಪ್ರಕಾರವು ಕೆಲ ಸಮಾಜಗಳಲ್ಲಿ ಸ್ತ್ರೀಯರಿಗಿದ್ದ ಪ್ರಾಧಾನ್ಯತೆಯನ್ನು

ಸೂಚಿಸುತ್ತದೆ. ಈಗಲೂ ಹಿಮಾಲಯದ ಕೆಲವು ಕೊಳ್ಳ ಪ್ರದೇಶಗಳಲ್ಲಿ ಪ್ರೌಢವಿವಾಹ ಬಳಕೆಯಲ್ಲಿದ್ದು ಕನ್ಯೆ, ತನ್ನ ಬಾಳ ಸಂಗಾತಿಯನ್ನು ಸ್ವತಃ ಆರಿಸಿಕೊಳ್ಳುತ್ತಾಳೆ. ಕನ್ಯಾಶುಲ್ಕ ಕಡ್ಡಾಯವಾಗಿದ್ದು, ಮಹಿಳೆಗೆ ವಿಚ್ಛೇದನದ ಸ್ವಾತಂತ್ರ್ಯವಿದೆ. ಮಕ್ಕಳು ತಾಯಿಯ ಹೆಸರನ್ನು ಬಳಸುವದು ಸಾಮಾನ್ಯ. ಕನ್ಯಾಶುಲ್ಕ–ಆಸುರವಿವಾಹಗಳು ಸ್ಮೃತಿ ಮಾನ್ಯತೆ ಪಡೆದದ್ದು ನೋಡಿದರೆ ಆ ಕಾಲದಲ್ಲಿ ಅವು ಕೆಲವು ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಚಲಿತವಿರಲು ಸಾಕು.

ಮಾತೆಯ ಮಹತ್ವ : ವಂಶವು ಬೆಳೆಯುತ್ತ ಹೋಗಲು, ಕುಲವು ವಿಶಾಲವಾಗಲು, ಪಿತೃಗಳಿಗೆಲ್ಲ ಪಿಂಡದಾನವು ಅವಿಚ್ಛಿನ್ನವಾಗಿ ಮುಂದುವರಿಯಲು, ಪುತ್ರ ಸಂತಾನ ಮುಖ್ಯವಾಗಿತ್ತು. ಪುತ್ರಸಂಪಾದನೆಗೆ ಸಾಮಾಜಿಕ ಅಡೆತಡೆಗಳು ಇರಲಿಲ್ಲ. ಹದಿಮೂರು ಪ್ರಕಾರದ ಮಕ್ಕಳನ್ನು ಮನುಸ್ಮೃತಿ ಗುರುತಿಸುತ್ತದೆ. ಅಂದಿನ ಸ್ತ್ರೀಯರ ಸ್ಥಾನಮಾನಗಳ ಮೇಲೆಯೂ ಈ ಅಂಶ ಬೆಳಕು ಬೀರುತ್ತದೆಯಾದ್ದರಿಂದ ಕೆಲವನ್ನು ಇಲ್ಲಿ ಗುರುತಿಸಬಹುದಾಗಿದೆ.

ಅವಿವಾಹಿತ ಮಗಳಿಗೆ ರಹಸ್ಯದಲ್ಲಿ ಮಗು ಹುಟ್ಟಿದರೆ, ಮುಂದೆ ಆಕೆ ವಿವಾಹವಾಗಲಿದ್ದ ವ್ಯಕ್ತಿಯ ಮಗುವೆಂದೇ ಅದು ಗುರುತಿಸಲ್ಪಡುತ್ತಿತ್ತು. ಅದರಂತೆ ವಧುವು ವಿವಾಹ ಕಾಲಕ್ಕೆ ಗರ್ಭಿಣಿಯಿದ್ದದ್ದು ಗೊತ್ತಿರಲಿ, ಗೊತ್ತಿರದೇ ಇರಲಿ, ಹುಟ್ಟಿದ ಮಗು, ಮದುವೆಯಾದಾತನದೇ ಅನಿಸಿಕೊಳ್ಳುತ್ತಿತ್ತು. ಅವಿಭಕ್ತ ಕುಟುಂಬದಲ್ಲಿ ಯಾರಿಂದ ಹುಟ್ಟಿದವನೆಂದು ಗೊತ್ತಾಗದೇ ಮಗು ಜನ್ಮತಾಳಿದರೆ, ಅದು ಮನೆಯ ಯಜಮಾನನದೆಂದೇ ಕರೆಯಲ್ಪಡುತ್ತಿತ್ತು.

ಪರಿತ್ಯಕ್ತೆಯರ, ವಿಧವೆಯರ, ಪುನರ್ವಿವಾಹದ ಬಳಿಕ ಹುಟ್ಟಿದ ಮಕ್ಕಳನ್ನು ಹೆಸರಿಸಲಾಗಿದೆ. ದತ್ತು ಮಗು, ಸಾಕುಮಗ ಹಾಗೂ ತಾನಾಗಿ ಬಂದು ಮಡಿಲಲ್ಲಿ ಬಿದ್ದ ಮಗ ಮುಂತಾದ ಮಕ್ಕಳೂ ಇದ್ದರು. ನಪುಂಸಕರು, ವ್ಯಾಧಿತರು, ಆಕಸ್ಮಿಕ ಮೃತರಿಗೆ ಮಕ್ಕಳಾಗದಿದ್ದಲ್ಲಿ, ಗುರು ಹಿರಿಯರ ಅನುಮತಿಯಿಂದ ಮಗುವನ್ನು ಪಡೆಯುವ ಅನುಕೂಲವು ಮಹಿಳೆಗಿದ್ದು, ಆ ಮಕ್ಕಳು ಮಹಿಳೆಯ ಪತಿಯ ಅಥವಾ ವಿವಾಹಿತ ಪುರುಷನವೇ' (ಕ್ಷೇತ್ರಜ) ಎಂದು ಗುರುತಿಸಲ್ಪಡುತ್ತಿದ್ದವು.

ಗಂಡು ಸಂತಾನವೇ ಮುಖ್ಯವಾಗಿದ್ದ ಯಾದಿಯಲ್ಲಿ ಹೆಣ್ಣು ಮಗುವಿನ ಉಲ್ಲೇಖ ಬರದೇ ಹೋದರೆ ಆಶ್ಚರ್ಯಪಡಬೇಕಿಲ್ಲ. ಆದರೆ ಇದರ ಅರ್ಥ

ಹೆಣ್ಣು ಶಿಶುಗಳನ್ನು ನಿರ್ನಾಮ ಮಾಡಿಬಿಡುತ್ತಿದ್ದರು, ಎಂದಲ್ಲ. ಭ್ರೂಣಹತ್ಯೆ ಶಿಶುಹತ್ಯೆಗಳು ಮಹಾಪಾಪವೆಂದು ನಂಬಿದ ಯುಗದಲ್ಲಿ ಅದಕ್ಕಾಗಿ ಕಠಿಣಶಿಕ್ಷೆ ಪ್ರಾಯಶ್ಚಿತ್ತಗಳಿದ್ದವು. ಅಲ್ಲದೇ ಹೆಣ್ಣು, ಕುಲದ ದೀಪ, ವಂಶೋದ್ಧಾರಕಿ. ಎಂದ ಸಾರಿ ಹೇಳಿದ ಮನು, ಶಿಶುಹತ್ಯೆ ಮನ್ನಿಸುತ್ತಾನೆಯೇ? ಸ್ತ್ರೀ ಪರಿಶುದ್ಧಳೆಂದ ಹೇಳಿಯೂ ಇದ್ದಾನಲ್ಲದೇ 'ಸ್ತ್ರೀರತ್ನಂ ದುಷ್ಕಲಾದಪಿ!' (ದುಷ್ಟಕುಲದಿಂದ ಬಂದರು ಹೆಣ್ಣು ರತ್ನವೇ! ಎಂದು ನಂಬಿದವ. ಹೀಗಾಗಿ ಮನೆತನಸ್ಥರಲ್ಲಿ, ಮೇಲೆ ವಿವರಿಸಿ ಆಕಸ್ಮಿಕಗಳಿಂದ ಹುಟ್ಟಿದ ಹೆಣ್ಣು ಸಂತಾನಕ್ಕೂ ಯೋಗ್ಯ ನೆಲೆ ದೊರೆಯುತ್ತಿತ ಇಂಥ ಕುಲದ, ಇಂಥವರ ಮಗಳು ಎಂದೇ ಗುರುತಿಸಲ್ಪಟ್ಟು ಕುಲೀನ, ಸತ್ಪಾತ್ರನಿ ಮದುವೆ ಮಾಡಿಕೊಡಲು ತೊಂದರೆಯಿರಲಿಲ್ಲ. ಏನಿದ್ದರೂ ಹೆಣ್ಣುಮಗು, ಭಾ ಕುಲಪುತ್ರನ ಜನನಿ ತಾನೇ?

'ಅಕ್ರಮ ಸಂತಾನ' ಎಂಬ ವಿಚಾರವೇ ಬಾಧಿಸದಿದ್ದ ಮನುವಿ ಯುಗದಿಂದ ನಾವು ತುಂಬ ಮುಂದೆ ಬಂದಿದ್ದೇವೆ. ಸ್ತ್ರೀ ಸ್ವಾತಂತ್ರ್ಯ, ಸ್ತ್ರೀಪುರು ಸಮಾನತೆಗಳು ಹಳೆಯ ವಿಚಾರಗಳಾದವು. ಸಂಸ್ಕೃತಿ, ಸಭ್ಯತೆ, ಶೀ ಭ್ರೂಣಹತ್ಯೆ, ಶಿಶುಹತ್ಯೆ ಮುಂತಾದ ವಿಚಾರಗಳಿಗೆ ಹೊಸವ್ಯಾಖ್ಯೆ ನೀಡು ಯತ್ನದಲ್ಲಿದ್ದೇವೆ. ಭ್ರೂಣಹತ್ಯೆಗೆ, ಗರ್ಭಪಾತವೆಂಬ ಅಭಿಧಾನ ಪ್ರಾಪ್ತವಾ ಸರಕಾರಿ ಮಾನ್ಯತೆಯೂ ದೊರೆತಿದೆ. ಮಹಿಳೆಯ ಆರೋಗ್ಯ ಹಾಗೂ ಜನಸಂ ನಿಯಂತ್ರಣಕ್ಕೆ ಪರೋಕ್ಷ ಸಹಾಯವಾಗುವ ಈ ಕ್ರಮ ಸ್ತುತ್ಯವಾದರು ಆಮ್ನಿಯೋ ಸಿಂಟೆಸಿಸ್ ಎಂಬ ಕ್ರಮದಲ್ಲಿ ಸ್ತ್ರೀ ಭ್ರೂಣನಾಶವೇ ದೊ ಪ್ರಮಾಣದಲ್ಲಿ ನಡೆಯುತ್ತಿದ್ದು ಮಹಿಳೆಯರು ಗಂಡು ಸಂತಾನವನ್ನೇ ಅಪೇಕ್ಷಿಸ ಕಠೋರ ಸತ್ಯವನ್ನು ಮುಚ್ಚಿಡುವಂತೆ ಇದೆಯೇ? ಅಥವಾ ಸ್ವೇಚ್ಛೆಯಿ ಗರ್ಭಪಾತಕ್ಕೊಳಗಾಗುವವರಲ್ಲಿ, ವಿವಾಹಿತೆಯರಿಗಿಂತ ಅವಿವಾಹಿತೆಯ ಎಳೆಹರೆಯದವರ, ಸಂಖ್ಯೆಯೇ ದಂಗುಬಡಿಸುವಷ್ಟು ಹೆಚ್ಚುತ್ತಲಿದೆ ಎ ಸರಕಾರಿ ಹಾಗೂ ಸರಕಾರೇತರ ಅಧಿಕೃತ ವರದಿಗಳನ್ನು ಕಡೆಗಣಿಸುವ ಇದೆಯೇ?

ಮನುವಿಗೆ ಪುಣ್ಯಭೂಮಿಯಾಗಿದ್ದ ಆರ್ಯಾವರ್ತದ ಪಂಜಾ ಹರಿಯಾಣಗಳಲ್ಲಿ ಸ್ತ್ರೀ ಶಿಶುಹತ್ಯೆಯೂ ಗಣನೀಯ ಪ್ರಮಾಣದಲ್ಲಿದೆ. ಇತ್ತೀ ಮಹಿಳೆಯೇ ಮುಖ್ಯಮಂತ್ರಿಯಾಗಿದ್ದ ದಕ್ಷಿಣ ರಾಜ್ಯದ ಜಿಲ್ಲೆಯೊಂದರಲ್ಲಿ ಅ

ಬೃಹತ್ ಪ್ರಮಾಣದಲ್ಲಿದ್ದು, 'ನವಜಾತ ಹೆಣ್ಣುಶಿಶುಗಳನ್ನು ಕೊಲ್ಲದಿರಿ, ಅವನ್ನು ಸಾಕಿ ಸಲಹುವ ಖರ್ಚನ್ನು ಸರಕಾರವೇ ಭರಿಸುತ್ತದೆ! ಎಂದು ಆಶ್ವಾಸನೆ ನೀಡಲಾಯಿತು. ಅಲ್ಲಲ್ಲಿ ತೊಟ್ಟಿಲುಗಳನ್ನು ಸ್ಥಾಪಿಸುವ ಯೋಜನೆಯನ್ನು ರಾಜ್ಯ ಸರಕಾರ ಕೈಕೊಂಡಿತು ಎಂಬುದನ್ನು ಜ್ಞಾಪಿಸಿಕೊಳ್ಳಬೇಕಾಗಿದೆ. ಇದಕ್ಕೆ ಕಾರಣಗಳು ಏನೇ ಇದ್ದರೂ ಬಹಳಷ್ಟು ಹೆಂಗಳೆಯರೇ ಹೆಣ್ಣು ಸಂತಾನ ಬಯಸುವದಿಲ್ಲ! ಎಂಬುದು ವಾಸ್ತವಿಕ ವಿಚಾರ. ಇದು ಮನುವಿನ ನಂಬಿಕೆಗೆ ತದ್ವಿರುದ್ಧವಾದದ್ದು.

5. **ಮನುಪರಂಪರೆಯಲ್ಲ!** ಮನುವನ್ನು ಮೀರಿದ ಪರಂಪರೆ ಜೀವಂತವಾಗಿದೆ. ಮನುವಿನ ಹೆಸರಿನಲ್ಲಿ ಅತ್ಯಂತ ಪ್ರಾಚೀನ ರೂಢಿಗಳನ್ನೂ, ಕಾಲಕಾಲಕ್ಕೆ ಹೊಂದಿದ ಬದಲಾವಣೆಗಳನ್ನೂ ಸಂಗ್ರಹಿಸಿದ ಯತ್ನವೇ ಲಭ್ಯವಿರುವ ಮನುಸ್ಮೃತಿಯ ರೂಪದಲ್ಲಿ ಉಳಿದು ಕೊಂಡಿದೆ, ಎಂಬುದನ್ನು ನೋಡಿದ್ದಾಗಿದೆ. ಭರತಖಂಡವು ಮೇಲಿಂದ ಮೇಲೆ ವಿದೇಶೀಯರ ಆಕ್ರಮಣ ಹಾಗೂ ಮುಸ್ಲಿಮರ ದಾಳಿಗಳ ಬಳಿಕಂತೂ ಸಾಂಸ್ಕೃತಿಕ ಆಘಾತಗಳನ್ನು ಮತ್ತೆ ಮತ್ತೆ ಎದುರಿಸುವ ಪ್ರಸಂಗಗಳು ಒದಗಿದವು. ಸಮಾಜದ ಚೌಕಟ್ಟುಗಳೆಲ್ಲ ಒಡೆದು ಚೂರಾಗಿ, ತಾವು ಕಲ್ಪಿಸಿ ರೂಢಿಸಿಕೊಂಡ ಸಂಸ್ಕೃತಿಯು ನಾಶವಾಗಬಾರದೆಂಬ ಸದುದ್ದೇಶ ದಿಂದ, ಹಲವಾರು ಕಟ್ಟುಪಾಡುಗಳನ್ನು ನಂತರದ ಸ್ಮೃತಿಕಾರರು, ವ್ಯಾಖ್ಯಾನಕಾರರು ಬಳಕೆಯಲ್ಲಿ ತಂದರಾದರೂ, ಅದು ಕಠಿಣ ಪರಿಣಾಮ ಬೀರಿದ್ದು ನಾರೀವರ್ಗದ ಮೇಲೆಯೇ! ನಾರಿಯ ಸ್ಥಾನ ದಲಿತರ ಮಟ್ಟಕ್ಕೆ ಇಳಿಸಲಾಯಿತು. ಒಂದೆಡೆ ಮಾತೆಗೆ ಪೂಜ್ಯತೆ ಇನ್ನೊಂದೆಡೆ ಅಸಹಾಯಕತೆ, ಅತಂತ್ರತೆಯ ಸ್ಥಾನಗಳು ಮುಂದರಿಯುವಂತೆ ನೋಡಿಕೊಳ್ಳಲಾಯಿತು. ಇದಕ್ಕೆ ಕಾರಣ, ತನ್ನ ವರ್ಗದ ಹಿತಾಸಕ್ತಿಗಳನ್ನೆ ಕಾಯ್ದುಕೊಂಡು ಹೋಗಲು ಮಾಡಿದ ಪುರೋಹಿತರ, ರಾಜಮಾನ್ಯರ ಮತ್ತು ಸಮಾಜದಲ್ಲಿ ಅತ್ಯಂತ ಶ್ರೇಷ್ಠರು ಎಂದು ನಂಬಿಕೊಂಡಿದ್ದ ಪಟ್ಟಭದ್ರರ ಪ್ರಯತ್ನವೇ ಎನ್ನಲಾಗುತ್ತದೆ. ಇದರಲ್ಲಿ ಕೊಂಚ ನಿಜಾಂಶ ಇರಬಹುದು. ತನ್ನ ವರ್ಗದ ಸ್ತ್ರೀಯರನ್ನು ಅದು ಅಸಹಾಯಕತೆಯ, ಪರಾಧೀನತೆಯ ಕೊನೆಯ ಅಂಚಿಗೆ ತಂದು ನಿಲ್ಲಿಸಿತು.

ಆದರೆ ಇಡೀ ಉಪಖಂಡದ ಜನಸಂಖ್ಯೆಯ 1/5 ಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿದ್ದ ವರ್ಗವನ್ನು ಪ್ರತಿನಿಧಿಸಿದ ಬ್ರಾಹ್ಮಣರಿಗೆ. ಸಮಸ್ತ ದೇಶದ ನಾರೀ ಸಮಾಜವನ್ನೇ ನಿಮ್ನ ಸ್ಥಿತಿಗೆ ಇಳಿಸುವ ಶಕ್ತಿಯೂ ಇರಲಿಲ್ಲ. ಅಧಿಕಾರವೂ ಇರಲಿಲ್ಲ

ಎಂಬುದೂ ನಿಜ. ಹಾಗಾದರೆ ಶತಮಾನಗಳ ಉದ್ದಕ್ಕೂ ಸ್ತ್ರೀವರ್ಗವು ಒಟ್ಟಾರೆ ಶೋಷಣೆಗೆ ಒಳಗಾಗಲಿಕ್ಕೆ ಕಾರಣಗಳು, ಪ್ರಬಲ ಕಾರಣಗಳು ಇರಬೇಕಲ್ಲ?

ಖಂಡಿತ ಇವೆ! ಮನುಸ್ಮೃತಿಯನ್ನು ಮೀರಿ ನಿಂತ ಕಾರಣಗಳಿವೆ. ಪುರುಷ ಪ್ರಧಾನ ಸಮಾಜದಲ್ಲಿ, ಮಹಿಳೆಯರ ರೀತಿ-ನೀತಿಗಳನ್ನು ಸ್ಥಾನಮಾನಗಳನ್ನು ಪುರುಷರೇ ನಿರ್ಧರಿಸುತ್ತ ಬಂದರು. ದೈಹಿಕವಾಗಿ ಪುರುಷರು ಯಾವತ್ತೂ ಕೆಲಸಗಳನ್ನು ನಿರ್ವಹಿಸಲಾರದವಳಾಗಿರುವ ನಾರಿ ಅಬಲೆ, ಮಾನಸಿಕವಾಗಿಯೂ ದುರ್ಬಲಳು, ಎಂಬ ಭಾವನೆ- ಸ್ತ್ರೀ ಪುರುಷರಲ್ಲಿ ಬೇರೂರಿಬಿಟ್ಟಿದೆ. ತೀರ ಹಿಂದೆ, ಪಂಗಡಗಳಲ್ಲಿ ಕಾದಾಟಗಳು ನಡೆದಾಗ, ಗೆದ್ದ ಪಂಗಡವು, ಸೋತವರ ಹೆಂಗಳೆಯರನ್ನೆಲ್ಲ ಒಯ್ದು, ಖಾಸಗೀ ಬಳಕೆಯ ವಸ್ತುವಂತೆ ಬಳಸುವದು ಸಾಮಾನ್ಯವಾಗಿದ್ದಂತೆ, ಯುದ್ಧೋಧ್ವಸ್ತ ಪ್ರದೇಶಗಳಲ್ಲೆಲ್ಲ ಹೆಂಗಸರೇ ಅತ್ಯಾಚಾರಕ್ಕೆ ಒಳಪಡುವದು ಹಿಂದೆ ಏಕೆ? ಈ ಶತಮಾನದಲ್ಲೇ ಎರಡು ಮಹಾಯುದ್ಧಗಳಲ್ಲಿ ನಡೆದ ಘಟನೆಗಳಾಗಿವೆ.

ಹೆಣ್ಣು ಭೋಗವಸ್ತುವೆಂದು ಭಾರತೀಯ ಪರಂಪರೆ ಹಿಂದೆಯೇ ನಿರ್ಧರಿಸಿದ್ದು, ಚರಿತ್ರೆ, ಸಾಹಿತ್ಯ, ಕಲಾಪ್ರಕಾರಗಳು, ಎಲ್ಲಕ್ಕಿಂತ ಹೆಚ್ಚಾಗಿ ರೂಢ ನಂಬಿಕೆಗಳು ಮೊದಲಾದವುಗಳಿಂದ ದೃಢಪಟ್ಟಿದೆ.

ಭಾರತೀಯ ಮಾನಸದಲ್ಲೂ ಇದು ಎಷ್ಟೊಂದು ಆಳವಾಗಿ ಬೇರೂರಿ ಬಿಟ್ಟಿದೆಯೆಂದರೆ, ಸುಶಿಕ್ಷಿತರೆನಿಸಿಕೊಳ್ಳುವ ಅತ್ಯಲ್ಪ ಸಂಖ್ಯೆಯ ಕೆಲವರನ್ನು ಬಿಟ್ಟರೆ, ಎಲ್ಲ ಸ್ತ್ರೀ ಪುರುಷರೂ, ಸಮಾಜದಲ್ಲಿ ಹೆಣ್ಣಿನ ಸ್ಥಾನಗೌಣವೆಂದೇ ನಂಬುತ್ತಾರೆ. ದೈನಂದಿನ ಯಾವತ್ತೂ ಚಟುವಟಿಕೆಗಳಲ್ಲಿ ವಿದ್ಯಾವಂತ ಮಹಿಳೆಯರು, ಸಹ ತಮ್ಮ ಆಂತರಿಕ ಬಲವನ್ನು ಬಳಸುವ ಯತ್ನ ಕೂಡಮಾಡದೇ ಪುರುಷರನ್ನೇ ಅವಲಂಬಿಸುತ್ತಾರೆ. ಇತ್ತೀಚೆಗೆ ಸಂವಿಧಾನವಿತ್ತ ಸಮಾನತೆಯ ಸೌಲಭ್ಯಗಳು ಹಾಗೂ ಮಹಿಳಾ-ಮೀಸಲಾತಿಯ ಅನುಕೂಲಗಳು ಎರಡನ್ನೂ ಒಟ್ಟಿಗೇ ಪಡೆಯಲು ವಿಚಿತ್ರ ಪ್ರಯತ್ನಗಳು ಹೆಚ್ಚೆಚ್ಚಾಗಿ ಗೋಚರಿಸುತ್ತಿವೆ! ಕಾರಣಾಂತರ ಗಳಿಂದ ನಮ್ಮ ಸಮಾಜದಲ್ಲಿ ಕಾಣಿಸಿಕೊಂಡ ಇಬ್ಬಂದಿತನ ಮುಂದುವರಿಯಲು ಹೆಂಗಳೆಯರ ಮಾನಸಿಕ ಪರಾಧೀನತೆಯೇ ಕಾರಣವೇನೋ, ಅನಿಸುವದುಂಟು.

ಜನಸಾಮಾನ್ಯರ ಉದಾಹರಣೆಗಳನ್ನೇ ತೆಗೆದುಕೊಳ್ಳೋಣ. ಬಾಲ್ಯ ವಿವಾಹಕ್ಕೆ ಮನುಸ್ಮೃತಿ ಸಮ್ಮತಿಯಿತ್ತರೆ, ಸ್ಮೃತಿಯನ್ನು ಅರಿಯದ

ಸಮಾಜಗಳಲ್ಲೆಲ್ಲ ಶಿಶುವಿವಾಹಗಳು ಹಿಂದಿನಿಂದ ಇಂದಿನವರೆಗೆ ಎಡಬಿಡದೇ ಮುಂದುವರಿದಿವೆ. ಇದೇ ಅಕ್ಷಯ ತೃತೀಯ (9.5.1999) ರಂದು ಸಾವಿರಾರು ಎಳೆಯ ಮಕ್ಕಳು ವಿವಾಹಿತರಾದರು ತೊಡೆಯಮೇಲಿದ್ದ ಎರಡುವರ್ಷದ ಮಕ್ಕಳಿಗೂ ಮದುವೆ ಮಾಡಲಾದ ವಿಚಾರ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನಗಳಲ್ಲಿ ಶಿಶುವಿವಾಹಗಳು ಅತ್ಯಂತ ಸಾಮಾನ್ಯವಾಗಿವೆ. ಬಾಲಕರಲ್ಲಿ ಕೆಲವರು ಅಪಘಾತಗಳಿಗೆ, ರೋಗಗಳಿಗೆ ತುತ್ತಾದಾಗ, ಅವರ ಹೆಂಡಂದಿರು ಬಾಲವಿಧವೆಯರಾಗಿ ಬದುಕುವುದು ಸಾಮಾನ್ಯವಾಗಿದೆ. ಕೆಲ ಬಾಲಕ 'ಪತಿ'ಗಳು, ಹಿರಿಯರ ಹೊಡೆತತಾಳದೆಯೋ, ಅಪ್ರಿಯ ಘಟನೆ ಗಳಿಂದಾಗಿಯೋ ಮನೆಬಿಟ್ಟು ಓಡಿಹೋಗುವದುಂಟು. ಇಂಥವರ 'ಪರಿತ್ಯಕ್ತ' ಪತ್ನಿಯರು ಜೀವನವಿಡೀ ಪರಿತಪಿಸುವ ಬಗೆ. ಊಹೆಗೆ ಬಿಟ್ಟದ್ದು. ಕಾಗದದ ಮೇಲೆ ಮಾತ್ರ ಉಳಿದುಕೊಂಡಿರುವ ಮಹಿಳಾಕಲ್ಯಾಣ ಯೋಜನೆಗಳು, ಇಂಥವರ್ಗವನ್ನು ಮುಟ್ಟುವುದಿಲ್ಲ. ಶಿಕ್ಷಣವಂತೂ ಇಲ್ಲವೇ ಇಲ್ಲ. ಮನು ಪುರಸ್ಕರಿಸದ ಸತಿ ಪರಂಪರೆಯೂ ಜೀವಂತವಾಗಿದೆ. 1987ರಲ್ಲಿ ರಾಜಸ್ಥಾನದ ದೇವರಾಲಾ ಎಂಬ ಊರಲ್ಲಿ ರೂಪಕಂವರ್ ಎಂಬ ಹದಿನೇಳು ವರ್ಷದ ತರುಣಿ, ಸಾರ್ವಜನಿಕರು ಸೋಜಿಗ, ದಿಙ್ಮೂಢತೆಗಳಿಂದ ನೋಡು ನೋಡುತ್ತಿದ್ದಂತೆ. ತನ್ನ ಕುಟುಂಬದ ಸದಸ್ಯರ ಸಹಾಯದಿಂದಲೇ ಮೃತ ಪತಿಯ ದೇಹದೊಂದಿಗೆ ಸುಟ್ಟು ಭಸ್ಮವಾದಳು. ಮಹಾಸತಿಯಾದಳು. ಈ ಘಟನೆಯ ಕುರಿತಾದ ದೇಶದಾದ್ಯಂತ ಪ್ರತಿಭಟನೆ, ಸರಕಾರದ ಅಲಕ್ಷ್ಯ, ಮಹಿಳಾ ಸಂಘಟನೆಗಳ ಆಕ್ರೋಶ, ಸಾಮಾನ್ಯರ ಸಂವೇದನೆಗಳು ಏನೇ ಇರಲಿ, ಸುಶಿಕ್ಷಿತ, ಸುಂದರ ಆಧುನಿಕ ತರುಣಿಯೊಬ್ಬಳು, ಸಜೀವವಾಗಿ ಸುಟ್ಟುಕೊಳ್ಳುವ ಘೋರ ನಿರ್ಧಾರ ಕೈ ಕೊಳ್ಳಲು ಕಾರಣವನ್ನು ಗಮನಿಸಬೇಕು. ವಿಧವೆಯಾಗಿ ಜೀವನದುದ್ದಕ್ಕೂ ಎದುರಿಸಬೇಕಾದ ಹತಾಶಭಾವ, ಪರಾಧೀನತೆ, ಶೂನ್ಯತೆಗಳ ಜೊತೆಗೆ ಸಾಮಾಜಿಕ ತಾತ್ಸಾರವನ್ನು ಎದುರಿಸುವ ಭಯಂಕರ ಕಲ್ಪನೆ, ರೂಪಕಂವರಳನ್ನು ಆವರಿಸಿತ್ತು. ಸಹಗಮನವು ಜೀವನದ ಅತಿ ಸಹಜ ಘಟನೆಯೆಂದು ಶತಮಾನಗಳ ಹಿಂದೆಯೇ ರೂಢಿಸಿಕೊಂಡ ರಜಪೂತರಲ್ಲಿ ವಿಧವೆಯರನ್ನು ಅತ್ಯಂತ ನಿಕೃಷ್ಟವಾಗಿ ಕಾಣಲಾಗುತ್ತದೆ. ಆ ತರುಣಿಗೆ ಇದನ್ನು ತಪ್ಪಿಸಲಾಗದ ಘೋರನಿರಾಶೆಯೇ ಅಗ್ನಿ ಪ್ರವೇಶಕ್ಕೆ ಪ್ರೇರಣೆ ನೀಡಿದ್ದರೆ

ಆಶ್ಚರ್ಯಪಡಬೇಕಾಗಿಲ್ಲ. ಶೂನ್ಯ ಭವಿಷ್ಯದ ಕಲ್ಪನೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ಎಳೆಯ ವಿಧವೆಯರು ಅದೆಷ್ಟೋ ಇರುತ್ತಾರೆ. ಅವರ ಕುರಿತಾದ ವರದಿಗಳು ಬರುವದು ವಿರಳ. ಈಗಲೂ ವಿಧವೆಯರ ಉಪಸ್ಥಿತಿ, ಅವಲಕ್ಷಣವೆಂದು, ಅವರ ಮುಖದರ್ಶನವೇ ಅಮಂಗಲ ಸೂಚಕವೆಂದು, ನಂಬುವವರಿಗೆ ಲೆಕ್ಕವೇ ಇಲ್ಲ. ಮನೆಯ ಯಾವದೇ ಶುಭಕಾರ್ಯಗಳಲ್ಲಿ ಅವರು ಪಾಲುಗೊಳ್ಳದಂತೆ ಮುಂಜಾಗ್ರತೆ ವಹಿಸಲಾಗುತ್ತದೆ. ಗ್ರಾಮಸ್ಥ ವಿಧವೆಯರು ಗ್ರಾಮದ ತಮ್ಮ ಸಮಾಜದ, ಅಷ್ಟೇಕೆ, ಮನೆಯ ಹಿರಿಯರಿಂದಲೇ ಹೆಚ್ಚೆಚ್ಚು ಶೋಷಣೆಗೆ ಒಳಗಾಗುವದು ದೈನಂದಿನ ಘಟನೆಗಳಾಗಿವೆ.

ಗ್ರಾಮದ ಬಡವರ್ಗಗಳ ಮಹಿಳೆಯರಿಗೆ ಕಡ್ಡಾಯದ, ಉಚಿತಶಿಕ್ಷಣ ಸೌಕರ್ಯ ತಲುಪುವದೇ ಇಲ್ಲ. ಅಪರೂಪಕ್ಕೆ ತಲುಪಿದರೂ, ಅವರ ಬೌದ್ಧಿಕತೆ ಹೆಚ್ಚಿಸುವ, ಆತ್ಮವಿಶ್ವಾಸವನ್ನು ಬೆಳೆಸುವ, ಸ್ವಾವಲಂಬಿ ಜೀವನ ಸಾಧ್ಯ ವಾಗಿಸುವ ಶಿಕ್ಷಣ ಅದಲ್ಲ. ಹೀಗಾಗಿ ಸ್ತ್ರೀ ಇನ್ನೂ ಅತಂತ್ರಳಾಗಿಯೇ ಮುಂದುವರಿದಿದ್ದಾಳೆ!

ಮನುಸ್ಮೃತಿಯನ್ನು ಮೀರಿಸಿದ ಶಾಸ್ತ್ರ! :- ನಿರಕ್ಷರಿಗಳಾದರೂ, ಮೀರಿದ ವ್ಯವಹಾರ ಚತುರೆಯರಾಗಿ, ಕೂಲಿ ಕಡಿಮೆಯಾದರೂ ಅತ್ಯಂತ ಶ್ರಮಜೀವಿ ಗಳಾಗಿ ಕುಟುಂಬಕ್ಕೆ ಸಹಾಯವೀಯದ, ಕುಡುಕಗಂಡನ ಏಟು ತಿನ್ನುತ್ತಲೇ, ಅವನನ್ನೂ, ಮನೆಯನ್ನೂ, ಮಕ್ಕಳನ್ನೂ ಸಂಭಾಳಿಸುತ್ತ, ಸಾಧ್ಯವಿದ್ದಾಗಲೆಲ್ಲ ಮಕ್ಕಳನ್ನು ಓದಿಸುತ್ತ, ಸವೆಯುತ್ತಿರುವ ಕೋಟಿಗಟ್ಲೆ ಮಹಿಳೆಯರು ಈ ದೇಶದಲ್ಲಿದ್ದಾರೆ. ಇವರಿಗೆಲ್ಲರಿಗೂ ಒಂದು "ಶಾಸ್ತ್ರ" ವಿದೆ. (ಮನುಧರ್ಮ ಶಾಸ್ತ್ರವಲ್ಲ!) ಆ ಶಾಸ್ತ್ರದ ಪ್ರಕಾರ ಅವರು ಗಂಡನ ಮೇಲೆ ಕೈ ಎತ್ತಲಾರರು! ಅವನ ಆಕ್ರಮಣಕ್ಕೆ 'ಇಲ್ಲ' ಅನ್ನಲಾರರು! ಎಷ್ಟೇ ದುಷ್ಟನಿದ್ದರೂ ಗಂಡನಿಂದ ಸಹಸಾ ಬೇರೆ ಹೋಗಲಾರರು. ದುಶ್ಚಟಗಳಿಂದಲೋ ಇತರ ಕಾರಣಗಳಿಂದಲೋ ಆತ ಬೇಗನೇ ಸತ್ತು ಹೋದರೆ, ಆ ಕೂಡಲೇ ವಿಧವಾ ವ್ರತ ಕೈಕೊಂಡು, ತಮ್ಮ ಹಣೆಬರಹವೆಂದು, ಯಾರನ್ನೂ ದೂಷಿಸದೇ ಬದುಕನ್ನು ಸಾಗಿಸಿಯಾರು. ಹೆಣ್ಣಿಗೆ ವಿವಾಹವಾಗದೇ ವಿಧಿಯಿಲ್ಲ. ಪತಿಯೇ ಪರಮದೈವತ. ತಾಯ್ತನವೇ ಹೆಣ್ಣು ಜನ್ಮದ ಸಾರ್ಥಕತೆ. ಬಂಜೆತನ ಪೂರ್ವಾರ್ಜಿತ ಪಾಪದ ಫಲ, ವಿಧವೆಯ ಬಾಳು ನಿರರ್ಥಕ! ಎಂಬ ನಂಬಿಕೆಗಳು ಮೇಲುಕೀಳನ್ನೆದೇ, ಹಳ್ಳಿ, ನಗರಗಳೆನ್ನದೇ

ಬಾಳು ನಿರರ್ಥಕ! ಎಂಬ ನಂಬಿಕೆಗಳು ಮೇಲುಕೀಳನ್ನೆದೇ, ಹಳ್ಳಿ, ನಗರಗಳ್ನೆದೇ ಸುಶಿಕ್ಷಿತ-ನಿರಕ್ಷರಿಗಳೆಂಬ ಭೇದಭಾವವಿಲ್ಲದೇ, ಸ್ಥಿರವಾಗಿ ಬಹುಸಂಖ್ಯಾತರ ಮನಸ್ಸಿನಲ್ಲಿ ಭದ್ರವಾಗಿ ನಿಂತುಬಿಟ್ಟಿವೆ. ಈ ನಂಬಿಕೆಗಳಲ್ಲಿ ಹೆಚ್ಚಿನವು ಮೂಢನಂಬಿಕೆಗಳಾದರೂ ''ಶಾಸ್ತ್ರ'' ವೆಂದೇ ನಂಬಿದ ರೂಢ ವಿಶ್ವಾಸಗಳು. ಬಹುಶಃ ''ಶಾಸ್ತ್ರ'' ವೆಂದರೆ ಮನುವಿನ ಹೆಸರಿನಲ್ಲಿ ಅನಾದಿಕಾಲದಿಂದ ನಡೆದು ಬಂದ ಸಂಪ್ರದಾಯಗಳು, ಸಹಸ್ರಾರು ವರ್ಷಗಳಿಂದ ಪಾಲಸಿಕೊಂಡು ಬಂದವುಗಳು. ಮನುಸ್ಮೃತಿಯನ್ನು ಮೀರಿ ನಿಂತವುಗಳು. ಸಂವಿಧಾನಾತ್ಮಕ ಬದಲಾವಣೆಗಳಾಗಲಿ. ಸರಕಾರವು ಘೋಷಿಸುತ್ತಲೇ ಇರುವ ಸುಧಾರಣೆ ಗಳಾಗಲಿ ಕೇವಲ ಐವತ್ತು ವರ್ಷ ಈಚಿನವು. ಭಾರತೀಯ ನಾರಿಯ ಮಾನಸವನ್ನು ಗೆಲ್ಲುವದರಲ್ಲಿ ಇವೆರಡೂ ಸೋತಿವೆ! ಈ ದೃಷ್ಟಿಯಲ್ಲಿ ಮನುವಿನ ಪರಂಪರೆ ಜೀವಂತವಾಗಿದೆ. ಆತ ಮಹಿಳೆಯರಿಗೆ ನಿಷೇಧಿಸಿದ ಸ್ವಾತಂತ್ರ್ಯ ದೈಹಿಕವಾಗಿ ಕೆಲಮಟ್ಟಿಗೆ ಸಾಧ್ಯವಾದರೂ, ಮಾನಸಿಕ, ವೈಚಾರಿಕ ಸ್ವಾತಂತ್ರ್ಯವೆಂಬುದು ಬಹು ಸಂಖ್ಯಾತ ಮಹಿಳೆಯರ ಮಟ್ಟಿಗೆ ಮರೀಚಿಕೆಯಾಗಿಯೇ ಮುಂದುವರಿದಿದೆ.

ಶತಮಾನಗಳಲ್ಲಿ ಕನ್ನಡಿತಿ

ಚಾರಿತ್ರಿಕವಾಗಿ ಶಾತವಾಹನರ ಕಾಲ, (ಕ್ರಿ.ಪೂ. 10ರಿಂದ ಕ್ರಿ.ಶ. 3ನೇ ಶತಮಾನ) ಭಾರತೀಯ ನಾರಿಯರೆಲ್ಲ ಹೆಮ್ಮೆ ಪಟ್ಟುಕೊಳ್ಳಬೇಕಾದ ಯುಗವೆಂದು ಹೇಳಬಹುದು. ಕರ್ನಾಟಕವನ್ನೊಳಗೊಂಡು ದಕ್ಷಿಣಭಾರತವನ್ನೆಲ್ಲ ಅವರ ಸಾಮ್ರಾಜ್ಯ ವ್ಯಾಪಿಸಿತ್ತು. ಆ ದಿನಗಳಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ, ದಾನ ದರ್ಮಗಳಲ್ಲಿ, ಅರಸುಮನೆತನದ ಮಹಿಳೆಯರೆಲ್ಲ ಪ್ರಮುಖ ಪಾತ್ರವಹಿಸಿದ್ದೇ ಅಲ್ಲದೇ ಆಳರಸರು ತಮ್ಮನ್ನು ಗೌತಮೀಪುತ್ರ, ವಾಸಿಷ್ಠೀಪುತ್ರ, ಹಾರೀತಿಪುತ್ರ ಎಂದು ಇಂಥಿಂಥ ತಾಯಿಯ ಮಗನೆಂದು ಶಾಸನಗಳಲ್ಲಿ ಕರೆದು ಕೊಳ್ಳುವದರಲ್ಲಿ ಹೆಮ್ಮೆಪಟ್ಟುಕೊಳ್ಳುತ್ತಿದ್ದರು. ನಂತರ ಕರ್ನಾಟಕವನ್ನಾಳಿದ ಬಾದಾಮಿಚಾಲುಕ್ಯರು, ರಾಷ್ಟ್ರಕೂಟರ ಕಾಲದಲ್ಲಿಯೂ ಮಹಿಳೆಯರು ದೇವಾಲಯಗಳನ್ನು ಕಟ್ಟಿಸುವದರಲ್ಲಿ, ಲಲಿತಕಲೆಗಳನ್ನು ಪ್ರೋತ್ಸಾಹಿಸುವದರಲ್ಲಿ, ಸಾಹಿತ್ಯದಲ್ಲಿ, ಆಡಳಿತದಲ್ಲಿ ಮಿಗಿಲೆನಿಸಿದರು.

ಕನ್ನಡಿಗರ ಹೆಮ್ಮೆಯರಸು ಚಾಲುಕ್ಯ ವಿಕ್ರಮಾದಿತ್ಯ ತ್ರಿಭುವನ ಮಲ್ಲ (ಕ್ರಿ.ಶ. 1076-1126)ನಿಗೆ ಹಲವಾರು ಹೆಂಡಂದಿರಿದ್ದರು. ಅವರಿಗೆಲ್ಲ ಅವನು ಊರು, ಗ್ರಾಮ, ಪಟ್ಟಣಗಳ ಆಡಳಿತವನ್ನು ವಹಿಸಿಕೊಟ್ಟಿದ್ದ. ಅದೇ ಚಾಲುಕ್ಯವಂಶದ ಅಕ್ಕಾದೇವಿ ಕಿಸುಕಾಡು ಪ್ರಾಂತವನ್ನು 44 ವರ್ಷಗಳ ದೀರ್ಘಕಾಲದವರೆಗೆ ಆಳಿದಳು. ಈಗಿನ ಗವರ್ನರರಿಗಿಂತ ಹೆಚ್ಚಿನ ಅಧಿಕಾರದ ವ್ಯಾಪ್ತಿ ಹೊಂದಿದ್ದ ಈ ಹುದ್ದೆಗೆ ಶಾಂತಿ-ಸುವ್ಯವಸ್ಥೆಗಳಿಗಾಗಿ ಸೈನ್ಯಾಚರಣೆ ಕೈಕೊಳ್ಳುವ ಸ್ವಾತಂತ್ರ್ಯವೂ ಇತ್ತು. 'ಅಖಿಳ ವಿದ್ಯಾರ್ಥಿ ಜನಾವಳಿನಂದಿನಿ' ಎಂಬ ಬಿರುದು ಹೊಂದಿದ ಅಕ್ಕಾದೇವಿ, 500 ವಿದ್ಯಾರ್ಥಿಗಳಿಗಾಗಿ ಒಂದು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದಳು. ದಂಗೆಯೆದ್ದ ಹಲವು ಮುಖಂಡರನ್ನು ಬಗ್ಗು ಬಡೆದು 'ರಣಭೈರವಿ' ಯೆನಿಸಿಕೊಂಡಿದ್ದಳು. ಅವಳ ಪತಿ ಬನವಾಸ ನಾಡಿನ ಮುಖ್ಯಸ್ಥ ಮಯೂರಶರ್ಮನಿಗಿಂತ ಈಕೆ ಎಲ್ಲ ಕ್ಷೇತ್ರಗಳಲ್ಲಿ ಮಿಗಿಲಾಗಿ ಮಿನುಗಿದ್ದು ಚರಿತ್ರೆ ಸಾರಿ ಹೇಳುತ್ತದೆ. ಪ್ರಾಂತಾಧಿಕಾರಿಣಿಯಾಗಿ ಭಾಗುಭಾಯಿ, ಚಿಕ್ಕಾಯಿ ತಾಯಿ ಮೊದಲಾದವರು ದಕ್ಷ ಆಡಳಿತ ನೀಡಿದರು.

ಈಗಿನ ಡಿವಿಜಿನಲ್ ಕಮೀಷನರ್ ಹುದ್ದೆಯನ್ನು ಹೋಲುವಂಥ ನಾಡಗೌಡ (ನಾಳ್‌ಗಾವುಂಡ)ನ ಹೊಣೆಯನ್ನು ಹತ್ತನೆಯ ಶತಮಾನದ ಪ್ರಾರಂಭದಲ್ಲೇ ಮಹಿಳೆಯೊಬ್ಬಳು ನಿರ್ವಹಿಸಿದ್ದು ಸ್ವಾರಸ್ಯಪೂರ್ಣ ವಾಗಿದೆ. ಸತ್ತರಸ ನಾಗಾರ್ಜುನ ನೆಂಬಾತ ಆ ನಾಡಿನ 70 ಊರುಗಳ ಮುಖ್ಯಸ್ಥನಾಗಿದ್ದು ಅಂದಿನ ವ್ಯವಸ್ಥೆಯಂತೆ, ಅಲ್ಲಿಯ ಕಂದಾಯ, ನೀರಾವರಿ, ರಕ್ಷಣೆಗಳಲ್ಲದೇ ಪೂರ್ತಿಯಾಗಿ, ಸ್ಥಳೀಯ ಆಡಳಿತದ ಮೇಲ್ವಿಚಾರಣೆಗೆ ಹೊಣೆಗಾರನಾಗಿದ್ದ. ಆತನ ಆಕಸ್ಮಿಕ ನಿಧನದಿಂದ ಅರಸನು ಆತನ ಪತ್ನಿ ಜಕ್ಕಿಯಬ್ಬೆಯನ್ನೇ ಆ ಹುದ್ದೆಗೆ ನೇಮಿಸಿದ. ಹಲವಾರು ಹೆಗ್ಗಡೆಗಳ ಮೇಲಾಡಳಿತವೂ ಜಕ್ಕಿಯಬ್ಬೆಗೆ ಸೇರಿತ್ತು. ಆಕೆ ವ್ಯವಸ್ಥಿತವಾಗಿ ಕಂದಾಯದ ವಸೂಲಿಯ ಜೊತೆಗೆ, ದಾನಗಳ ನಿರ್ವಹಣೆ, ನ್ಯಾಯ ವಿಚಾರಣೆಗಳನ್ನು ನಡೆಸಿಕೊಂಡು ಹೋದಳು. ಅವಳ ನಂತರ ಆಕೆಯ ಮಗಳೂ ಆ ಹುದ್ದೆಯನ್ನು ನಿರ್ವಹಿಸಿದ್ದು ವಿಶೇಷ.

ಸೆಟ್ಟಿಕವ್ವೆಯಂಬಾಕೆ ಕ್ರಿ.ಶ. 1204ರಲ್ಲಿ ಸಾತೇನಹಳ್ಳಿಯ ಊರೊಡತಿ ಯಾಗಿದ್ದಳು. ಸಾಮಾನ್ಯ ಮಹಿಳೆಯಂತೆ ಮೊರ, ಬುಟ್ಟಿ, ತಂಬಿಗೆ, ಹುಟ್ಟು, ಸಟ್ಟುಗ, ಕೊಡ, ಒರಳು, ಅಕ್ಕಿ ಎಂದು ಕೇವಲ ಗೃಹಕೃತ್ಯಗಳ ಬಗ್ಗೆಯೇ ಕೋಟಲೆಗೊಳ್ಳದೇ 'ಉತ್ತಮ ಅಧಿಪೋತ್ತಮೆ' ಯಾಗಿ ಆಳಿದಳೆಂದು ಶಾಸನವೊಂದು ಸಾರುತ್ತದೆ. ಖಳರನ್ನು ಬಗ್ಗಿಸಿ, ಕಳ್ಳರ ಸುಲಿಗೆಗಳನ್ನು ನಿಲ್ಲಿಸಿದಳು. ಆಗಾಗ ಧರ್ಮಪ್ರಸಂಗಗಳನ್ನು ಏರ್ಪಡಿಸಿ, ದೇಗುಲಗಳನ್ನು ಕಟ್ಟಿಸಿ ಧರ್ಮೋನ್ನತಿಗೆ ಕಾರಣಳಾಗಿ, ನಗರದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಿದ್ದಳು.

ಹೆಗ್ಗಡಿತಿಯಾಗಿಯೂ ಹಲವಾರು ಹೆಂಗಳೆಯರು ಅಧಿಕಾರ ನಿರ್ವಹಿ ಸುತ್ತಿದ್ದರು. ಆದರಂತೆ ಅನೇಕ ಶೈವ, ವೈಷ್ಣವ, ಜೈನ ಪ್ರತಿಷ್ಠಾನಗಳ ಮುಖ್ಯಸ್ಥೆಯ ರಾಗಿ ಮಹಿಳೆಯರು ಕಾರ್ಯನಿರ್ವಹಿಸಿದ ಉದಾಹರಣಗಳಿವೆ. ಗಣಕುಮಾರಿ, ಯೋಗಿನಿ, ತಪಸ್ವಿನಿ, ಗಣಿನಿ, ಕಂತಿಯರೆಂದು ಶಾಸನಗಳು ಅವರ ಹೆಸರುಗಳನ್ನು ಉಲ್ಲೇಖಿಸುತ್ತವೆ. ಧಾರ್ಮಿಕ, ಆಧ್ಯಾತ್ಮಿಕ ಬೋಧನೆ ಕೈಕೊಂಡು ಜನಸಾಮಾನ್ಯರಿಗೆ ಮಾರ್ಗದರ್ಶನ ನೀಡುವದರ ಜೊತೆಗೆ ಪ್ರತಿಷ್ಠಾನ, ಮಠಗಳ ಧಾರ್ಮಿಕ ಕ್ರಿಯೆಗಳು ಮತ್ತು ದಾನದತ್ತಿಗಳ ನಿರ್ವಹಣೆ ಹಾಗೂ ಧರ್ಮದರ್ಶಿಯ ಗುರುತರ ಹೊಣೆ ಅವರದಾಗಿತ್ತು.

ಮಹಾದಾನಿಗಳಾಗಿ ಸಮಕಾಲೀನ ಸಮಾಜಕ್ಕೆ ಸೇವೆಸಲ್ಲಿಸಿದ ಸ್ತ್ರೀಯರಿಗೂ ಕೊರತೆಯಿಲ್ಲ. ವಿದ್ಯೆಗಾಗಿ ಭೂದಾನ, ಅನ್ನದಾನ, ಅರವಟ್ಟಿಗೆ, ಛತ್ರ, ಕೆರೆಗಳನ್ನು ಕಟ್ಟಿಸುವುದು, ತೋಪುಗಳನ್ನು ನಿರ್ಮಿಸುವುದೇ ಅಲ್ಲದೆ ತಂತಮ್ಮ ಪತಿಯನ್ನು ಇಂಥ ದಾನಕಾರ್ಯಕ್ಕೆ ಪ್ರೋತ್ಸಾಹಿಸಿದವರಿದ್ದಾರೆ. ನಾಗಿಗಾವುಂಡಿಯೆಂಬಾಕೆ ಪ್ರತಿದಿನವೂ ಬೆಳೆಯುವ ಮಕ್ಕಳಿಗೆ ಹಾಲು ಮತ್ತು ಹಸಿದವರಿಗೆ ಅನ್ನದ ವ್ಯವಸ್ಥೆ ಮಾಡಿದ್ದಲ್ಲದೇ ಬರದ ದಿನಗಳಲ್ಲಿ ನೀರನ್ನು ಪೂರೈಸಲು ಕೆರೆಕಟ್ಟಿಸಿ, ತೋಪುನಡಿಸಿ, ಪರಿಹಾರ ಯೋಜನೆ ಕೈಕೊಂಡಿದ್ದಳು. ಗಿಡ ಮರಗಳನ್ನು ನೆಡುವದನ್ನೆ ವ್ರತವಾಗಿ ಕೈಕೊಂಡು (ಕ್ಷಿತಿರುಹ ನೋಂಪಿ) ತೋಪುಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಕೊಡಮಾಡಿದ ಮಹಾದಾನಿಗಳಾಗಿ ಹೋಗಿದ್ದಾರೆ.

ದಾನಚಿಂತಾಮಣಿ ಅತ್ತಿಮಬ್ಬೆಯನ್ನು ಸ್ಮರಿಸಿಕೊಳ್ಳದೇ ಕರ್ನಾಟಕದ ಚಾರಿತ್ರಿಕ ಮಹಿಳೆಯರ ಕುರಿತಾದ ಯಾವ ಕೃತಿಯೂ ಪೂರ್ಣವಾಗದು! ಕರ್ನಾಟಕದಲ್ಲೆಲ್ಲ ಅವಳ ಸಹಸ್ರವರ್ಧಂತಿಯನ್ನು ಆಚರಿಸಲಾಯಿತು. ಚಿಕ್ಕವಯಸ್ಸಿನಿಂದಲೇ ದಾನ ಮತ್ತು ಧರ್ಮಪ್ರಸಾರಕ್ಕೆ ಬಾಳನ್ನು ಮುಡಿಪಿಟ್ಟ ಆಕೆ, ಮಹಾಕವಿ ರನ್ನನ ಸೃಜನಶೀಲತೆಗೆ ಪ್ರೋತ್ಸಾಹವಿತ್ತು 'ಅಜಿತ ತೀರ್ಥಂಕರ ಪುರಾಣ' ಬರೆಯಿಸಿದ್ದೇ ಅಲ್ಲದೇ ಪೊನ್ನನ ಶಾಂತಿಪುರಾಣದ ಸಹಸ್ರಪ್ರತಿಗಳನ್ನು ಮಾಡಿಸಿ ಉಚಿತವಾಗಿ ಹಂಚಿದಳು. ಮುದ್ರಣವಿಲ್ಲದ ಯುಗದಲ್ಲಿ ಇಂಥ ಗ್ರಂಥ ದಾನದಿಂದ ಆಗುತ್ತಿದ್ದ ಸಾಮಾಜಿಕ ಉಪಕಾರ ಮತ್ತು ಸಾಹಿತ್ಯ ಪ್ರಸಾರ ಊಹೆಗೆ ಬಿಟ್ಟ ವಿಷಯ. ಬಸದಿಗಳ ನಿರ್ಮಾಣ ಮತ್ತು ಜೀರ್ಣೋದ್ಧಾರಗಳನ್ನು ಏರ್ಪಡಿಸಿ ಜನಸಾಮಾನ್ಯರ ವಿಶ್ವಾಸಗಳಿಸಿ, ಆದರ್ಶಜೀವನ ನಡೆಸಿ ದಂತಕತೆಯ ಭಾಗವಾಗಿ ಹೋದಳು. ಅತ್ತಿಮಬ್ಬೆಯ ಸಂಪ್ರದಾಯ 2-3 ಶತಮಾನಗಳವರೆಗೂ ನಡೆದು ಬಂದು ಅಂದಿನ ರಾಣಿಯರು ಅತ್ತಿಮಬ್ಬೆಯನ್ನು ಸರಿಗಟ್ಟಲು ಹವಣಿಸಿದರು.

ಧೈರ್ಯ-ಶೌರ್ಯಗಳಲ್ಲೂ ಕನ್ನಡಿತಿಯರು ಮಿಗಿಲಾಗಿದ್ದರು. ಸಾವಿಯಬ್ಬೆ, ಚಾಗಲದೇವಿ, ಚೊಮ್ಮರಾಂಬೆ ಮೊದಲಾದವರು ರಣರಂಗದಲ್ಲಿ ಹೋರಾಡಿ ವೀರಸ್ವರ್ಗ ಪಡೆದವರು. ಚಾಲುಕ್ಯರಾಣಿ ಕೇತಲದೇವಿ, ಹೊಯ್ಸಳ ರಾಣಿ ಉಮಾದೇವಿ, ಮುಂತಾದವರು ಸೈನ್ಯದ ಮುಂದಾಳ್ತನ ವಹಿಸಿ ಕಾಳಗದಲ್ಲಿ ಜಯಗಳಿಸಿದರು. ಪೋರ್ಚುಗೀಸರಿಗೆ ಬುದ್ಧಿ ಕಲಿಸಿದ ಅಬ್ಬಕ್ಕದೇವಿ,

ಚೆನ್ನಭೈರಾದೇವಿಯರ ಸಾಮರ್ಥ್ಯದ ಬಗ್ಗೆ ಚರಿತ್ರೆ ಸಾರಿ ಹೇಳುತ್ತವೆ. ಬೆಳವಡಿ ಮಲ್ಲಮ್ಮ, ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಮಹಿಳೆಯರ ಪಡೆಯನ್ನೇ ತರಬೇತಿಗೊಳಿಸಿದ್ದಳು. ತನ್ನ ಕೆಚ್ಚು-ಶೌರ್ಯಗಳಿಂದ ಶಿವಾಜಿಯಂಥ ಶ್ರೇಷ್ಠ ಸೇನಾನಿಯನ್ನೇ ಆಕೆ ಬೆರಗುಗೊಳಿಸಿದ್ದು ಪ್ರಸಿದ್ಧ ಕತೆ.

ಲಲಿತಕಲೆಗಳ ಕ್ಷೇತ್ರದಲ್ಲಿ ಹೆಚ್ಚಿನ ಆಸ್ಥೆ ವಹಿಸಿ, ಪ್ರೋತ್ಸಾಹಿಸಿದ, ಸ್ವತಃ ಅವನ್ನು ರೂಢಿಸಿಕೊಂಡು ವಿದ್ವಾಂಸರಿಂದ ಭಲೆ ಅನಿಸಿಕೊಂಡ, ಮಹಿಳೆಯರಿಗೂ ಕೊರತೆಯಿಲ್ಲ. ಸಂಗೀತ-ನಾಟ್ಯ-ನಾಟಕಗಳಲ್ಲಿ ಪರಿಣತೆಯರಾದ ಲಕುಮಾದೇವಿ, ಪಿರಿಯಕೇತಲದೇವಿ, ಲಚ್ಚಲದೇವಿಯರು ಕರ್ನಾಟಕದ ಶಾಸನಾಭ್ಯಾಸಿಗಳಿಗೆಲ್ಲ ಪರಿಚಿತರು. ಬಾಚಲದೇವಿಯೆಂಬಾಕೆಯು ಅಭಿನಯ ಕೌಶಲ್ಯದಿಂದ 'ಪಾತ್ರಜಗದ್ದಳೆ' ಯೆಂಬ ಬಿರುದು ದೊರೆತಿತ್ತು. ಪಿರಿಯಕೇತಲದೇವಿ, 'ಅನೇಕ ದೇಶ ಭಾಷಾ ವಿನುತೆ' ಯಾಗಿದ್ದಳು. ಗೀತ-ನೃತ್ಯ-ನಾಟಕ ಸೂತ್ರಧಾರಿಯೆಂಬ ಬಿರುದಿನ ಶಾಂತಲೆಯಂತೂ ನಾಡಚರಿತ್ರೆಯು ಮಿನುಗುತಾರೆ. ಸೋವಲದೇವಿಯೆಂಬ ಕದಂಬರಾಣಿ ಸಂಗೀತ-ನೃತ್ಯ ಪರಿಣತರ ಸಭೆಯಲ್ಲಿ ಪ್ರಯೋಗಗಳನ್ನು ನೀಡುತ್ತಿದ್ದುದರ ಜೊತೆಗೆ ಆಶುಪದ್ಯ ರಚಿಸುತ್ತಿದ್ದಳೆಂದು ಕ್ರಿ.ಶ. 1174ರ ಶಾಸನ ಸಾರುತ್ತದೆ. ಮುಖವೀಣೆ, ಕಹಳೆ, ಕೊಳಲು, ಖಂಜೀರಾ, ಕಂಸಾಳೆ, ಮುಹರಿ, ವೀಣೆಯ ಪ್ರಕಾರಗಳನ್ನೆಲ್ಲ ನುಡಿಸಬಲ್ಲ ಅಸಂಖ್ಯ ಮಹಿಳೆಯರು ಈ ನಾಡಿನಲ್ಲಿ ಆಗಿಹೋದರು. ಹಲವಾರು ಶಿಲ್ಪ ಕನ್ಯೆಯರು ಇಂದಿಗೂ ಅಪರೂಪದ ವಾದ್ಯಗಳನ್ನು ಹಿಡಿದು ಗತವೈಭವವನ್ನು ಸಾರುತ್ತ ನಿಂತಿದ್ದಾರೆ.

ಹಿಂದಿನಯುಗದ ಹೆಚ್ಚಿನ ಮಹಿಳೆಯರು, ಆಧುನಿಕರ ದೃಷ್ಟಿ ಕೋನದಿಂದ ಸುಶಿಕ್ಷಿತೆಯರಿರಲಿಲ್ಲ. ಆದರೆ ಅವರೆಲ್ಲ ಸುಸಂಸ್ಕೃತ ರಾಗಿದ್ದರು. ಈಗಿನ ಶಿಕ್ಷಣ ಪದ್ಧತಿ, ಎಲ್ಲರಿಗೂ ಗೊತ್ತಿರುವಂತೆ ಅಕ್ಷರ ವಿದ್ಯೆಯ ಮೇಲೆ ಒತ್ತು ಕೊಡುತ್ತಿದೆಯೇ ಹೊರತು ಬೌದ್ಧಿಕ ಸಂಸ್ಕಾರದ ಮೇಲಲ್ಲ. ಕೇವಲ ಡಿಗ್ರಿ, ಸರ್ಟಿಫಿಕೇಟುಗಳಿಗೆ ಹಾತೊರೆಯದ ಹಿಂದಿನ ದಿನಗಳಲ್ಲಿ ವ್ಯಕ್ತಿಯ ಮನೋವಿಕಾಸದ ಕಡೆಗೆ ಗಮನವೀಯಲಾಗುತ್ತಿತ್ತು. ಜೀವನದಲ್ಲಿ ಸಂಕಟ ಪ್ರಸಂಗಗಳನ್ನು ಎದುರಿಸಲಿಕ್ಕೆ, ಆರ್ಥಿಕ ತೊಂದರೆಗಳನ್ನು ಪರಿಹರಿಸಲಿಕ್ಕೆ, ಪ್ರತಿಕೂಲ ಪರಿಸ್ಥಿತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಿಕ್ಕೆ, ತಾಳ್ಮೆ, ಸಹನೆ, ಸಹಕಾರ, ಕಾರುಣ್ಯಗಳಂಥ

ಗುಣಗಳನ್ನು ಬೆಳೆಸಿಕೊಳ್ಳಲಿಕ್ಕೆ ಅಂದಿನ ವಿದ್ಯೆ ಸಹಾಯಕ ವಾಗಿತ್ತು. ಪ್ರತಿಯೊಬ್ಬ ನಾಗರಿಕ, ಪ್ರತಿಯೊಬ್ಬ ಮಹಿಳೆ, ತಾನು ಜೀವಿಸುವ ಸಮಾಜದ ಉತ್ತಮ ಘಟಕವಾಗಲು ಯತ್ನಿಸುತ್ತಿದ್ದರು. ತಾನು ಇತರರಿಗಾಗಿ ಏನು ಕೊಡಬಲ್ಲೆ? ಏನು ಮಾಡಬಲ್ಲೆ ಎಂಬುದು ಅವರ ಮೊದಲ ವಿಚಾರವಾಗಿತ್ತೇ ಹೊರತು, ಈಗಿನವರಂತೆ, 'ಇದನ್ನು ಮಾಡಿದರೆ ನನಗೇನು ಲಾಭವಿದೆ?' ಎಂಬ ಸ್ವಾರ್ಥ ಪ್ರಚೋದನೆಯಲ್ಲ. ನಾಡಿನ ಚರಿತ್ರೆಯನ್ನು ಅವಲೋಕಿಸಿದರೆ ಸಮಾಜದ ಕುರಿತಾದ ಪ್ರೀತಿ, ಕಳಕಳಿ, ಹಳ್ಳಿ ಅಥವಾ ಗ್ರಾಮದ ಒಳಿತು, ಕುಟುಂಬದ ಯೋಗಕ್ಷೇಮ. ಅರಸ, ಊರು, ನಾಡು, ತತ್ವಗಳಿಗಾಗಿ ಮಡಿದವರಿದ್ದಾರೆ. ಲೋಕ ಸಂಗ್ರಹವನ್ನೇ ಜೀವನದ ಆದರ್ಶವಾಗಿಟ್ಟುಕೊಂಡ ಮಹಿಳೆಯರಿದ್ದರಷ್ಟೇ ಅಲ್ಲ. ಸಾರ್ವಜನಿಕವಾಗಿ ಅವರ ಮಕ್ಕಳು ಕೃತಜ್ಞತೆ ತೋರ್ಪಡಿಸಿದ್ದುಂಟು. ವಿಜಯನಗರದ ದೇವರಾಯನ ಅಮಾತ್ಯನಾಗಿದ್ದ ಲಕ್ಷ್ಮೀಧರನು ತನ್ನ ತಾಯಿ ಹಾಲೆರೆಯುವಾಗಲೇ ಎಂಥ ಮಾತುಗಳನ್ನು ಕಿವಿಯಲ್ಲಿ ಉಸುರುತ್ತಿದ್ದಳೆಂದು ಕ್ರಿ.ಶ. 1420ರ ಶಾಸನದಲ್ಲಿ ಹೇಳಿಕೊಂಡಿದ್ದಾನೆ.

> *ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಂ ಮಾಡಿಸು*
> *ಸೆರೆಯೊಳ್ ಸಿಲ್ಕಿದ ಅನಾಥರಂ ಬಿಡಿಸು, ಮಿತ್ರರ್ಗೆ ಇಂಬುಕೆಯ್*
> *ನಂಬಿದರ್ಗೆರ ವೆಟ್ಟಾಗಿರು ಶಿಷ್ಟರಂ ಪೊರೆ ಇತ್ಯಾದಿ.*

ಆತ ಶಿಶುವಿದ್ದಾಗ ತಾಯಿಯಿಂದಲೇ ಪರೋಪಕಾರದ ಪಾಠಗಳನ್ನು ಕಲಿತಸಂತೆ! ಆ ಮಹಾತಾಯಿಯ ಸಂಸ್ಕಾರ ಎಂತಹದಿದ್ದಿತು? ತನ್ನ ಹಿರಿಯರಿಂದ ಕಲಿತಪಾಠವನ್ನೇ ಆಕೆ ಮಗನಿಗೆ ಕೊಡಮಾಡಿದ್ದು ಸ್ಪಷ್ಟ.

ಹಿಂದಿನವರ ದೃಷ್ಟಿಯಲ್ಲಿ ತಾನು ಪಡೆದ ಸಮಾಜದ ಋಣವನ್ನು ಒಂದಿಲ್ಲೊಂದು ರೀತಿಯಲ್ಲಿ ತೀರಿಸುವದು ಪ್ರತಿವ್ಯಕ್ತಿಯ ಕರ್ತವ್ಯ ವಾಗಿತ್ತು. ದೊಡ್ಡ ಪ್ರಮಾಣದಲ್ಲಿ ದಾನ ಮಾಡಲಾಗದವರು ಸಾಧ್ಯವಿದ್ದ ರೀತಿಯಲ್ಲಿ ಮಾಡುತ್ತಿದ್ದರು. ಕೆರೆ-ಬಾವಿ ಕಟ್ಟಿಸಲಾಗದವರು, ಹೂಳೆತ್ತಿಸುತ್ತಿದ್ದರು. ಜೀರ್ಣೋದ್ಧಾರಕ್ಕಾಗಿ ತಮ್ಮ ಕೊಡುಗೆ ನೀಡುತ್ತಿದ್ದರು. ದೇವಾಲಯಕ್ಕೆ ಗಂಟೆಯನ್ನೋ, ದೀಪವನ್ನೋ, ಗಿಡ-ಮರಗಳನ್ನೋ ಕೊಡುತ್ತಿದ್ದರು. ಬಡವಿದ್ಯಾರ್ಥಿಗಳಿಗೆ ಮನೆಯಲ್ಲೇ ಊಟಹಾಕಿ ಜನ್ಮಸಾರ್ಥಕವಾಗಿಸುತ್ತಿದ್ದರು. ಈ ಶತಮಾನದ ಪ್ರಾರಂಭದ ದಶಕಗಳವರೆಗೂ ವಾರಾನ್ನದ ಪದ್ಧತಿ

ರೂಢಿಯಲ್ಲಿತ್ತು. ಮನೆಯೊಡತಿ ಆ ಹುಡುಗರಿಗೆ ಊಟ ಇಕ್ಕುತ್ತಿದ್ದರು. ಎಷ್ಟೋ ಹೆಂಗಸರು, ಗೃಹವೈದ್ಯಕೀಯ ರೂಢಿಸಿಕೊಂಡವರು, ಉಚಿತ ಔಷಧ, ಪಥ್ಯಾಹಾರಗಳನ್ನು ಪೂರೈಸುತ್ತಿದ್ದರು. ನೆರೆಕೆರೆಯ ಹೆಣ್ಣುಮಕ್ಕಳ ಹೆರಿಗೆ, ಕಾಯಿಲೆ, ಕಸಾರಿಕೆಗಳಲ್ಲಿ ನೆರವಾಗುತ್ತಿದ್ದರು. ಈ ಪದ್ಧತಿ ಹೇಳ ಹೆಸರಿಲ್ಲದೇ ಮಾಯವಾಗಿದೆ!

ಇಂದು ನಾವು ಪ್ರತಿಯೊಂದು ಸವಲತ್ತನ್ನು ಸರಕಾರ ಮತ್ತು ಇತರ ಸಂಸ್ಥೆಗಳು ಪೂರೈಸಬೇಕೆಂದು ನಿರೀಕ್ಷಿಸುತ್ತೇವೆ. ಇಂದಿನ ದಿನಮಾನದಲ್ಲಿ ಹೆಂಗಳೆಯರಿಗೆ ಬಹುಶಃ ಹಕ್ಕು ಬಾಧ್ಯತೆಗಳ ಹೋರಾಟದ ಕಲ್ಪನೆಯಿದೆಯೇ ಹೊರತು ಸಾಮಾಜಿಕ ಹೊಣೆಯ ಅರಿವು ಬೆಳೆದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಈ ವಿಷಯದಲ್ಲಿ ನಮಗಿಂತ ನಮ್ಮ ಹಿಂದಿನವರು ಮೇಲುಗೈಯಾಗಿದ್ದರು.

ಈಗಿನ ಸ್ವಾರ್ಥಮನೋಭಾವದ ಬೆಳವಣಿಗೆಗೆ ಆಧುನಿಕ ಶಿಕ್ಷಣ ಕ್ರಮದ ಕೊಡುಗೆ ದೊಡ್ಡದು. ದೇಹ-ಮನಸ್ಸು-ಬುದ್ಧಿಗಳ ಸಮತೋಲನ ಸಾಧಿಸಲು, ನಮ್ಮ ಹಿಂದಿನ ಪದ್ಧತಿಯಲ್ಲೇ ಆಧುನಿಕ ಮಾರ್ಪಾಟುಗಳನ್ನು ಮಾಡಬಹುದಾಗಿತ್ತು. ಹಾಗೆ ಮಾಡದೇ ನಮ್ಮ ಸಂಸ್ಕಾರಕ್ಕೆ ಸರಿಹೋಗದ ಪಾಶ್ಚಾತ್ಯ ಶಿಕ್ಷಣಕ್ರಮವನ್ನು 'ನೊಣಂಪ್ರತಿ' ಇಲ್ಲಿ ಒಗ್ಗೂಡಿಸಲಾಯಿತು. ಆದರೆ ಪಾಶ್ಚಾತ್ಯ ಪದ್ಧತಿಯ ಅತಿ ಮುಖ್ಯ ಅಂಶಗಳಾದ ಸ್ವಾವಲಂಬನ ಮತ್ತು ಶ್ರಮಗೌರವಗಳನ್ನು ಸಲೀಸಾಗಿ ಕೈ ಬಿಡಲಾಯಿತು. ಎಲ್ಲರನ್ನೂ ಒಂದೇ ಅಚ್ಚಿಗೆ ಎರಕ ಹೊಯ್ದು ತಯಾರಿಸುವ ಇಂದಿನ ಶಿಕ್ಷಣದ ಕಾರಖಾನೆಗಳಲ್ಲಿ ಹುಡುಗಿಯರ ವ್ಯಕ್ತಿವಿಕಸನಕ್ಕೆ ಏನೂ ಅವಕಾಶವಾಗಿಲ್ಲವೆಂಬುದು ಕಳವಳಕಾರಿ ಅಂಶವಾಗಿದೆ.

ಹಿಂದಿನ ಯುಗದ ಹೆಚ್ಚಿನ ಸ್ತ್ರೀಯರಿಗೆ ತಮ್ಮ ಪ್ರತಿಭೆ-ಪ್ರೌಢಿಮೆಗಳನ್ನು ವ್ಯಕ್ತಪಡಿಸಲು ಅವಕಾಶಗಳೇ ಇರಲಿಲ್ಲ. ಅವಕಾಶ ದೊರೆತಾಗಲೆಲ್ಲ ಯೋಗ್ಯತೆಯನ್ನು ಮೆರೆದಿದ್ದಾರೆ. ಇಂದಿನವರಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ - ವಿವಿಧ ಕ್ಷೇತ್ರಗಳಲ್ಲಿ ಎಂದಿಲ್ಲದಷ್ಟು ಅವಕಾಶಗಳು ದೊರೆತಿವೆ. ಸ್ಕೂಲು, ಕಾಲೇಜು, ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲೆಲ್ಲ ಹುಡುಗಿಯರು ಮೇಲುಗೈಯಾಗಿದ್ದಾರೆ. ಆಡಳಿತ, ಪೋಲಿಸ್, ಶಿಕ್ಷಣ, ವಿಜ್ಞಾನ, ತಾಂತ್ರಿಕ

ಕ್ಷೇತ್ರ, ವೈದ್ಯಕೀಯ, ಸಂಶೋಧನೆ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಲಭಿಸಿ ಮುಕ್ತಾವಕಾಶಗಳನ್ನು ಕನ್ನಡಿತಿಯರು ಚೆನ್ನಾಗಿ ಬಳಸಿಕೊಂಡಿದ್ದಾರೆ. ಆದರೆ ಅವ ಸರ್ವತೋಮುಖ ಏಳ್ಗೆ ಸಾಧಿಸಿದ್ದಾರೆಯೇ? ಪ್ರತಿಯೊಬ್ಬರೂ ಯೋಚಿಸಿ ಉತ್ತ ಹೇಳ ಬೇಕಾಗಿದೆ. ಅವರ ವಿಕಸನ ತೃಪ್ತಿಕರವಾಗಿಲ್ಲ ವೆಂಬುದನ್ನು ನೋವಿನಿಂ ಒಪ್ಪಿಕೊಳ್ಳಬೇಕಾಗಿದೆ.

ಇದಕ್ಕೆ ಕಾರಣಗಳು ಹಲವಾರು. ಗಂಡು- ಹೆಣ್ಣು ಮಕ್ಕಳನ್ನು ಬೆಳೆಸು ವಿಧಾನದಲ್ಲಿ ಪಕ್ಷಪಾತ ಮುಂದುವರಿದಿದೆ. ಕೆಲವು ಮನೆಗಳಲ್ಲಿ ಹುಡುಗಿಯ ಓದಿನಲ್ಲಿ ಚುರುಕಾಗಿದ್ದರೂ, ಟ್ಯೂಶನ್ ಮತ್ತು ತಾಂತ್ರಿಕ ತರಬೇತಿಗ ಗಂಡುಮಕ್ಕಳಿಗೆ ಮೀಸಲು. ಅವರು ಮುಂದೆ ಬರಬೇಕಾದದ್ದು ಅವ ಮದುವೆಯಾಗಿ ಹೋಗುವ ಹುಡುಗಿಗೆ ಸಾದಾ ಗ್ರಾಜುಯೇಟ್ ಪದವಿ ಸಾಕ ಎಂಬ ಭಾವನೆಯಿದೆ. ಈ ಪದವಿಗಾಗಿ ಕೂಡ ಪರದಾಡಬೇಕಾದ ಪ್ರಸ ಹಲವು ಹುಡುಗಿಯರಿಗೆ ಬರುತ್ತದೆ.

ಸುಶಿಕ್ಷಿತ ಕನ್ಯೆ, ಸೊಸೆಯಾಗಿ ಬರುವಾಗಲೂ, ಅವಳು ಉದ್ಯೋ ಗಸ್ಥೆಯಿರುವಾಗಲೂ, ಸಾಕಷ್ಟು ಆಸ್ತಿ, ವರದಕ್ಷಿಣೆ,ಒಡವೆಗಳನ್ನು ತರಲಿದ್ದಾಳೆಯೆ ಎಂಬ ವಿಚಾರಕ್ಕೆ ಪ್ರಾಧಾನ್ಯ ಕೊಡಲಾಗುತ್ತಿದೆ. ಶ್ರೀಮಂತ ಮನೆತನಗಳಲ್ಲಿ (ಒ ಪ್ರತಿಷ್ಠೆಯ ಸವಾಲಾಗಿ ಇದು ಪರಿಣಮಿಸುತ್ತದೆ. ಕನ್ಯೆಯ ದಕ್ಷತೆ, ಸಾಮಥ ವಿದ್ಯಾರ್ಹತೆಗಳಿಗೆ ಬೆಲೆಯೇ ಇರುವುದಿಲ್ಲ.

ಆರ್ಥಿಕ ಮುಗ್ಗಟ್ಟಿನಿಂದಾಗಿ ಮಧ್ಯಮವರ್ಗದಲ್ಲಿ ಉದ್ಯೋಗಸ್ಥೆಯ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಪತಿ-ಪತ್ನಿಯ ಜಂಟಿ ವರಮಾನ, ಕುಟುಂಬ ಸಹಾಯಮಾಡುತ್ತದೆ, ಎಂಬ ನಿರೀಕ್ಷೆ ಸಹಜವಾದರೂ ಮನೆ-ಮಕ ಜವಾಬ್ದಾರಿಯೂ ಜಂಟಿಯಾಗಿರುತ್ತದೆಂದು ಪತಿಯಾಗಲಿ, ಪತಿಗೃಹ ಹಿರಿಯರಾಗಲಿ ಸಹಸಾಭಾವಿಸುವುದಿಲ್ಲ. ತನ್ನ ನೌಕರಿಯ ಹೊಣೆಯೊಂ ಮನೆಯ ನಿರ್ವಹಣೆ, ಮಕ್ಕಳ ಪಾಲನೆ, ಅವರ ಊಟ-ತಿಂಡಿ, ಆರೋ ಟ್ಯೂಶನ್, ಸುರಕ್ಷಿತತೆಗಳ ಜವಾಬ್ದಾರಿಯನ್ನೂ ಉದ್ಯೋಗಸ್ಥೆ ತಾಯಿಯ ವಹಿಸಬೇಕಾಗುತ್ತದೆ. ಪಿತೃಪ್ರಧಾನವ್ಯವಸ್ಥೆ ಮುಂದುವರಿದ ನಮ್ಮ ಸಮಾಜದ ಪುರುಷರು, ಗೃಹಕೃತ್ಯದಲ್ಲಿ ಸಹಾಯಮಾಡುವದು ಅವಮಾನಕರವೆ

ನಂಬಿಕೆಯೂ ಇದೆ. ನವ ಶ್ರೀಮಂತ ಅಥವಾ ನವಶಿಕ್ಷಿತ ಸಮಾಜದಲ್ಲಿ ಈ ನಂಬಿಕೆ ಜೋರಾಗಿದೆ.

ಸೈಟ್ ಕೊಳ್ಳುವುದು, ಮನೆಕಟ್ಟಿಸುವುದು, ಮಕ್ಕಳ ಉಚ್ಚಶಿಕ್ಷಣದ ಏರ್ಪಾಡು, ಸೀಟುಕೊಡಿಸುವುದು ಮುಂತಾದ ಗುರುತರ ಜವಾಬ್ದಾರಿಗಳಿಂದಲೂ ಮಹಿಳೆ ತಪ್ಪಿಸಿಕೊಳ್ಳುವಂತಿಲ್ಲ. ಸಮಯದ ಹೊಂದಾಣಿಕೆ ಕಷ್ಟವಾಗಿ ದ್ವಿಚಕ್ರವಾಹನ-ಕಾರುಗಳಿಗೆ ಮೊರೆಹೋಗಿ ಅವುಗಳ ಸವಾರರಲ್ಲಿ ಮಹಿಳೆಯರು ಅಧಿಕಾಧಿಕ ಸಂಖ್ಯೆಗಳಲ್ಲಿ ಕಾಣಸಿಗುತ್ತಾರೆ. ಮನೆಯಂತೂ ಅವಳದೇ, ಮನೆಯ ಹೊರಗೂ ಹಲವು ಚಟುವಟಿಕೆಗಳಲ್ಲಿ ಪುರುಷರ ಸಮಾನಸ್ಕಂಧಳು.

ಆದರೆ ಇವೆಲ್ಲ ಸಾಧನೆಗಳಿಂದ ಹೆಮ್ಮೆ ಪಟ್ಟುಕೊಳ್ಳುವಂತಿಲ್ಲ. ಆಕೆಯ ಸುಖ-ಸೌಕರ್ಯಗಳ ನಿರೀಕ್ಷೆ ಹೆಚ್ಚಿದೆ. ಜೊತೆಗೆ ಹೊಣೆಯೂ ಹೆಚ್ಚುತ್ತ ಹೋಗಿದೆ. ಅವಿಶ್ರಾಂತ ದುಡಿತದ ದೈಹಿಕ, ಮಾನಸಿಕ ಕ್ಲೇಶಗಳಿಂದ ಬಳಲುವವರಿಗೆ ಕೊರತೆಯಿಲ್ಲ. ಗಂಡಸರು ಹಣ, ಆಸ್ತಿ, ಪ್ರತಿಷ್ಠೆಗಳನ್ನು ಮಹಿಳೆಯರಲ್ಲಿ ನಿರೀಕ್ಷಿಸಿದರೆ, ಮಹಿಳೆಯರು ಪುರುಷರಿಗೆ ಸರಿಸಮವಾದ ಪಾಲು, ಗೌರವ, ಅಂತಸ್ತುಗಳನ್ನು ಸಹಜವಾಗಿಯೇ ಬಯಸುತ್ತಾರೆ. ಇಲ್ಲಿ ಘರ್ಷಣೆ ಪ್ರಾರಂಭವಾಗುತ್ತದೆ. ಕೆಲವೊಮ್ಮೆ ದುಡಿಯುವ ದಂಪತಿಗಳ ಮಕ್ಕಳು ನಿರ್ಲಕ್ಷ್ಯಕ್ಕೊಳಗಾಗುವ ಪ್ರಸಂಗಗಳೂ ಬರುತ್ತವೆ. ಹೀಗಾದಾಗ ತಾಯಿಯಾದವಳೇ ಹೆಚ್ಚಿನ ನಿಂದನೆಗೆ ಒಳಗಾಗುತ್ತಾಳೆ.

ಬಾಹ್ಯಾಚರಣೆಯಲ್ಲಿ ಸುಧಾರಿಸಿದವರು, ಆಧುನಿಕರು ಅನಿಸಿ ಕೊಳ್ಳುವರು ಗೊಡ್ಡು ಸಂಪ್ರದಾಯಗಳನ್ನು ಕೈಬಿಡುವುದಿಲ್ಲ. ಧಾರ್ಮಿಕ ಕ್ರಿಯೆಗಳು, ಮದುವೆ-ಮುಂಜಿಗಳಲ್ಲಿ ದುಂದು ವೆಚ್ಚಗಳು ಹೆಚ್ಚುತ್ತ ಹೋಗಿವೆ. ಸಮಾಜದಲ್ಲಿ ತೋರಿಕೆಯ ಪ್ರತಿಷ್ಠೆಗೂ ಖರ್ಚುಮಾಡುವ ಚಟ, ಮಧ್ಯಮ ವರ್ಗದವರಿಗೆ ಮೈಗೂಡಿಹೋಗಿದೆ. ಇದಕ್ಕೆ ಗೃಹಿಣಿಯೇ ಹೆಚ್ಚಿನ ಬಾರಿ ಕಾರಣಳಾಗುವದುಂಟು.

ಗಂಡು ಮಕ್ಕಳಿಗಾಗಿ ಹಾತೊರೆಯುವದು, ಹೆಣ್ಣು ಹುಟ್ಟಿದಾಗ ಮೂಗು ಮುರಿಯುವದು, ಹೆಂಗಸರಲ್ಲೂ ಕಾಣಬಹುದು. ಮಕ್ಕಳಾಗದವರನ್ನು ನಿಕೃಷ್ಟರನ್ನಾಗಿ ಕಾಣುವದು ಮುಂದುವರಿದಿದೆ. ಸದ್ಯ ಆಧುನಿಕ ಚಿಕಿತ್ಸೆಯಿಂದ

ಅಪಾರ ಹಣತೆತ್ತು ನಗರಗಳಲ್ಲಿ ಮಕ್ಕಳನ್ನು ಪಡೆಯುವದು ಕೆಲವ
ಸಾಧ್ಯವಾಗಿದ್ದರೂ ಗ್ರಾಮಾಂತರ ಪ್ರದೇಶಗಳ ಹೆಂಗಸರು ಈ ಸೌಲಭ್ಯದಿ
ವಂಚಿತರಾಗಿದ್ದಾರೆ. ನರಕಸಮ ಹೀನಾಯಕ್ಕೆ ಒಳಗಾಗುತ್ತಾರೆ.

ಹಿಂದಿನ ಕಾಲದ ಮಹಿಳೆ ಅವಕಾಶ ದೊರೆತಾಗ ಅಡಿಗೆಮನೆ, ಹಿ
ಕತ್ತಲುಕೋಣೆಗಳಲ್ಲಿ ಕಾಲಸವೆಸಿ ಮಣ್ಣಾಗಲಿಲ್ಲವೆಂದು ನೋಡಿದ್ದೇವೆ. ಕೌಟುಂ
ಹೊಣೆಗಾರಿಕೆ, ಹಿಂದಿನ ಕನ್ನಡಿತಿಯರಂತೆ ಇಂದಿನವರನ್ನೂ ಬಿಟ್ಟಿಲ್ಲ. ಆ
ಮೌಲ್ಯಗಳು ಬಹಳಷ್ಟು ಬದಲಾಗಿವೆ. ಬಗೆ ಬಗೆಯ ನಿರೀಕ್ಷೆಗ
ಅವುಗಳೊಂದಿಗೆ ಹೆಚ್ಚಿನ ಹೊಣೆಯಿಂದಾಗಿ ಆಧುನಿಕ ಕನ್ನಡ ಮಹಿಳೆ ನೆ
ಕಳೆದುಕೊಂಡಿದ್ದಾಳೆ. ಆಕೆ ನಡೆದು ಬಂದ, ನಡೆಯ ಬೇಕಾದ ಪಯಣದ
ತುಂಬದೂರ. ದಾರಿಯಲ್ಲಿ ಹಳ್ಳ-ಕೊಳ್ಳಗಳು, ಕಲ್ಲುಬಂಡೆಗಳು, ಮುಳ್ಳುಕಂಟಿ
ಹಿಂದೆಯೂ ಹೇರಳವಾಗಿದ್ದವು. ಇನ್ನೂ ಇವೆ. ಆದರೆ ಮಾರ್ಗವನ್ನು ಕ್ರಮಿ
ಬೇಕಲ್ಲವೇ?

ಕನ್ನಡತಿ ಮತ್ತು ಲಲಿತ ಕಲೆಗಳು

ಹೆಣ್ಣುಮಕ್ಕಳಿಗೆ ಹಾಡುಗಾರಿಕೆಯೆಂದರೆ ಬಿಡದ ನಂಟು. ಹಕ್ಕಿಗೆ ಇಂಚರ ಸ್ವಾಭಾವಿಕವಾಗಿದ್ದಂತೆ, ಹೆಣ್ಣಿಗೆ ಗುಣಗುಣಿಸುವದು ಸ್ವಾಭಾವಿಕ ವಾಗಿ ಸಾಧಿಸಿರಬೇಕು. ಯುಗಗಳ ಹಿಂದೆ, ಮಗುವನ್ನು ಮಲಗಿಸುವಾಗ, ಮೆಲುದನಿಯ ಲಾಲಿ, ಜೋಗುಳದ ಹಾಡುಗಳು ಮೂಡಿದುವು. ಮನೆಗೆಲಸಗಳ ಏಕತಾನತೆ ಮರೆಯುವಲ್ಲಿ ಸ್ವರ ಎಳೆದ ಓವಿ ಅಥವಾ ಮೊದಲ ಸುವ್ವಿ ಹಾಡುಗಳು, ಸಂಭ್ರಮದ ಪ್ರಸಂಗಗಳಲ್ಲಿ ಹತ್ತು ಜನ ಒಟ್ಟಾದಾಗ ಮೊದಲ ಸಾಮೂಹಿಕ ಹಾಡುಗಳು, ಮಹಿಳೆಯರ ಧ್ವನಿಯಲ್ಲಿ ರೂಪಗೊಂಡಿರಬೇಕು. ಕ್ರಮೇಣ ಹಾಡು, ಕುಣಿತಗಳು ಜೊತೆಗೂಡಿದವು. ನಾಗರಿಕತೆ ಬೆಳೆದಂತೆ, ಇವೂ ಅನೇಕಾನೇಕ ರೂಪಗಳಲ್ಲಿ ಕಲಾತ್ಮಕ ಮೆರುಗನ್ನು ಪಡೆಯುತ್ತ ನಡೆದವು.

ಭಾರತೀಯ ಸಂಗೀತಪದ್ಧತಿಗೆ ವೈದಿಕ ಮಂತ್ರಪಠನ ಅಥವಾ ಸಾಮಗಾನ ಮತ್ತು ಜಾನಪದ ಸಂಪ್ರದಾಯಗಳ ಸಮ್ಮೇಳಗಳು ಮೂಲವೆನ್ನುತ್ತಾರೆ. ಸ್ವರದಿಂದ ರಾಗಗಳು, ಲಯದಿಂದ ತಾಳಗಳು ವರ್ಣದಿಂದ ಕೃತಿಗಳು ಹುಟ್ಟಿಕೊಂಡವೆಂದು ಸಾಮಾನ್ಯನಂಬಿಕೆ. ಮಂತ್ರಘೋಷಗಳು ಸಾಮೂಹಿಕವಾಗಿ ಮೂಲ ಸಂಗೀತದ ರೂಪವಾಗಿದ್ದಾರೆ, ವೇದಕಾಲದಲ್ಲಿ ವೇಣು, ವೀಣಾ, ಮೃದಂಗಗಳು ಪರಿಚಿತ ವಾದ್ಯಗಳಾಗಿದ್ದವು. ಕೆಲವೊಂದು ಯಜ್ಞಪ್ರಸಂಗಗಳಲ್ಲಿ ಇವುಗಳ ಹಿಮ್ಮೇಳದಲ್ಲಿ ಸ್ತ್ರೀಯರು ನೃತ್ಯಮಾಡುತ್ತಿದ್ದರು. ನಮ್ಮ ಪರಂಪರೆಯ ಪ್ರಕಾರ, ಪರಮೇಶ್ವರನಿಂದ ಕಲಿತ ನಾಟ್ಯಶಾಸ್ತ್ರವನ್ನು ಬ್ರಹ್ಮನು ಭರತಮುನಿಗೆ ಉಪದೇಶಿಸಿದನು. ಆತನು ತನ್ನ ಮಕ್ಕಳಿಗೂ ಗಂಧರ್ವ, ಅಪ್ಸರೆಯರಿಗೂ ಹೇಳಿಕೊಟ್ಟ. ನಟರಾಜನಾದ ಶಿವನೆದುರಿಗೆ ಅವರೆಲ್ಲ ನೃತ್ಯಪ್ರದರ್ಶನ ಕೈಕೊಂಡಾಗ ಸಂಪ್ರೀತನಾದ ಶಿವನು ತನ್ನ ಗಣದವರಿಗೆಲ್ಲಾ ನೃತ್ಯಕಲೆಯನ್ನು ಕಲಿಸಲು ಭರತನಿಗೆ ಹೇಳಿದ. ಪಾರ್ವತಿಯು ಭರತನಿಗೆ ಲಾಸ್ಯನೃತ್ಯವನ್ನು ಹೇಳಿಕೊಟ್ಟಳಂತೆ. ಏನಿದ್ದರೂ ಪಂಡಿತ ಪಾಮರರಿಗೆ ಪ್ರಿಯವಾದ, ಗೀತ, ನೃತ್ಯ, ನಾಟ್ಯ, ವಾದ್ಯಗಳನ್ನು ಮೇಳೈಸಿಕೊಂಡ ಸಂಗೀತವು ಶಾಸ್ತ್ರವಾಗಿ, ಕಲೆಯಾಗಿ, ಶತಮಾನಗಳ ಕಾಲ ಭರತಭೂಮಿಯಲ್ಲಿ ಬೆಳೆದು

ಬಂದಿತು. ಅದನ್ನು ಕ್ರಮವಾಗಿ ಅಭ್ಯಸಿಸಿ, ಪ್ರಯೋಗಗಳನ್ನು ಕೈಕೊಂಡು, ಸಭೆಗಳಲ್ಲಿ ಪ್ರದರ್ಶಿಸಿ, ಪಂಡಿತರಿಂದ, ರಾಜರಿಂದ ಪ್ರಶಂಸೆ ಪಡೆದ ಕೀರ್ತಿ, ಕರ್ನಾಟಕದ ಮಹಿಳೆಯರದಾಗಿದೆ.

ಮಹಾಕವಿ ಪಂಪನ ಕಾಲಕ್ಕಾಗಲೇ, ಅಂದರೆ ಹತ್ತನೆಯ ಶತಮಾನದಲ್ಲಿ ಸಂಗೀತ ಗೋಷ್ಠಿಗಳು ಅತ್ಯಂತ ಜನಪ್ರಿಯವಾಗಿದ್ದವು. ಸದಭಿರುಚಿಯ, ರಸಿಕ ವೃಂದದೆದುರು ನೃತ್ಯಾಭಿನಯದ ಕಾರ್ಯಕ್ರಮಗಳು ನಡೆಯುತ್ತಿದ್ದವು, ಎಂಬುದನ್ನು ಪಂಪನ ಆದಿಪುರಾಣದ ಪ್ರಸಿದ್ಧ ಕಾವ್ಯ ಪ್ರಸಂಗವಾದ 'ನೀಲಾಂಜನೆಯ ನೃತ್ಯ' ದಿಂದ ತಿಳಿದು ಕೊಳ್ಳಬಹುದಾಗಿದೆ. ಪಂಪನಿಗೆ ನಾಟ್ಯಶಾಸ್ತ್ರದ ಉತ್ತಮ ಪರಿಚಯವಿತ್ತು ಎನ್ನುವದರ ಜೊತೆಗೆ ಕನ್ನಡನಾಡಿನ ನರ್ತಕಿಯರು ಈ ಕಲೆಯಲ್ಲಿ ಪಡೆಯುತ್ತಿದ್ದಿರಬಹುದಾದ ಪರಿಣತಿಯ ಸುಂದರ ಚಿತ್ರಣವನ್ನು ನಾವು ಕಾಣಬಹುದು. ನಾಟ್ಯಶಾಸ್ತ್ರೋಕ್ತ ರಸಭಾವ, ಕರಣಗಳಿಗೆ ಸರಿಯಾಗಿ ಇಂಬುಕೊಟ್ಟು, ವಾಚಿಕ, ಆಂಗಿಕ, ಆಹಾರ್ಯ ಅಂಶಗಳಲ್ಲೆಲ್ಲ ನೀಲಾಂಜನೆಯು ಮಿಗಿಲಾಗಿದ್ದಳು. ಮೂವತ್ತೆರಡು ಅಂಗಹಾರಗಳು, ಒಂದನೂರ ಎಂಟು ಕರಣಗಳು, ನೀಲಾಂಜನೆಯ ಪರಿಚಾರಿಕೆಗೂ ಗೊತ್ತು! ಅಂದಮೇಲೆ ಅವುಗಳಲ್ಲಾಕೆ ಮೀರಿದ ಶ್ರೇಯಸ್ಸು ಪಡೆದಿದ್ದರೆ ಏನು ಆಶ್ಚರ್ಯ? ಎಂಬ ಪಂಪನ ಉದ್ಗಾರದಲ್ಲಿ, ನೃತ್ಯ ಕಲೆಯನ್ನು ಕೈಕೊಂಡು ಜನಪ್ರಿಯಗೊಳಿಸಿದ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಿರಬೇಕು, ಎಂಬ ಊಹೆಗೆ ಅವಕಾಶ ನೀಡುತ್ತದೆ. ಕರಣ ಚಾರಣ, ಚಲನ, ವರ್ತನಗಳ ವೈವಿಧ್ಯದಿಂದ ಮೆರೆದು ಆಕೆಯ ನೃತ್ಯದ ರಭಸ, ಗತಿಗಳನ್ನು ಪಾಲಿಸಲಿಕ್ಕಾಗದೇ ವಾದಕರ ತಾಳ, ಜತಿಗಳು ಕೈ ತಪ್ಪು ವಂತಾದಾಗ, ಆ ನರ್ತಕಿಯೇ ಸಭೆಗೆ ವಾದಕಿಯಾದಳಂತೆ! ಹೇಗಿದ್ದರೂ ನಾಟ್ಯ ರಸಾನುಭವದಲ್ಲಿ ಮುಳುಗಿದ ಸಭಿಕರು ತಲೆ, ಕೈ, ಕಾಲು, ಕಣ್ಣುಗಳಿಂದ ಅವಳಿಗೆ ಎಡೆಬಿಡದೇ ನೃತ್ಯದಲ್ಲಿ ಜೊತೆ ಕೊಡುತ್ತಲೇ ಇದ್ದರಲ್ಲ! ದೇಹದ ನಶ್ವರತೆಯನ್ನು ಮನಗಾಣಿಸಲೆಂದು ವೃಷಭನಾಥನೆದುರು ದೇವಗಣಿಕೆ ನೀಲಾಂಜನೆಯ ನೃತ್ಯ ಏರ್ಪಟ್ಟ ವಿಚಾರ ಬರುವದಾದರೂ, ಪಂಪನು ತನ್ನ ಸಮಕಾಲೀನ ನೃತ್ಯ ಪ್ರದರ್ಶನವೊಂದನ್ನು ನಿದರ್ಶನವಾಗಿ ಬಳಸಿದ್ದಾನೆಂಬುದು ಸ್ಪಷ್ಟ.

ಪಂಪನ ಬಳಿಕ ಸುಮಾರು ಎರಡುನೂರು ವರ್ಷಗಳ ನಂತರದ ಶಾಸ್ತ್ರಗ್ರಂಥವಾದ 'ಮಾನಸೋಲ್ಲಾಸ' ದಿಂದ ಸಂಗೀತ, ನೃತ್ಯಗಳು

ಕಲಾಶಿಖರಕ್ಕೇರಿದ ವಿಚಾರ ತಿಳಿದು ಬರುತ್ತದೆ. ಚಾಲುಕ್ಯ ವಿಕ್ರಮಾದಿತ್ಯನ ಮಗನಾಗಿದ್ದ ಭೂಲೋಕಮಲ್ಲನು ರಚಿಸಿದ ವಿವಿಧ ಶಾಸ್ತ್ರಗಳನ್ನೊಳಗೊಂಡ ಈ ಕೋಶದಲ್ಲಿ ಸಂಗೀತಶಾಸ್ತ್ರಕ್ಕೇ ಮೀಸಲಾದ ದೊಡ್ಡ ಅಧ್ಯಾಯವಿದೆ. ಆತ ಸ್ವತಃ ಸಂಗೀತ ಪ್ರೇಮಿಯಾಗಿದ್ದ. ಇಂದಿನವರ ಶಾಸ್ತ್ರೀಯ, ಸುಗಮ, ಗಮಕ, ಜಾನಪದ ಸಂಗೀತಗಳೆಂಬ ಕೃತ್ರಿಮಭೇದಭಾವತೋರದೇ ತನ್ನ ಕಾಲದಲ್ಲಿ ಪ್ರಚಲಿತವಿದ್ದ ಯಾವತ್ತೂ ಸಂಗೀತ ಪ್ರಕಾರಗಳನ್ನು ಉಲ್ಲೇಖಿಸಿದ್ದಾನೆ. ಸಂಗೀತ ಶಾಸ್ತ್ರದ ವಿವರವಾದ ವಿಶ್ಲೇಷಣೆಯ ಜೊತೆಗೆ ಸಮಕಾಲೀನ ವಾದ್ಯಪ್ರಕಾರಗಳು, ಅವನ್ನು ತಯಾರಿಸುವ ಪದ್ಧತಿ, ನುಡಿಸುವ ರೀತಿಗಳ ಜೊತೆಗೆ ನೃತ್ಯ-ನಾಟ್ಯದ ಪ್ರಕಾರಗಳನ್ನು ವಿಶದವಾಗಿ ಚರ್ಚಿಸಿದ್ದಾನೆ. ಹನ್ನೆರಡನೆಯ ಶತಮಾನದಲ್ಲಿ ಸಂಗೀತ ನೃತ್ಯ-ನಾಟಕಗಳು ಲಲಿತಕಲೆಗಳ ರೂಪದಲ್ಲಿ ಸೊಂಪಾಗಿ ಬೆಳೆದು ನಿಂತು ಕರ್ನಾಟಕದ ಸ್ಪಷ್ಟ ಪ್ರಾದೇಶಿಕ ಲಕ್ಷಣಗಳನ್ನು ತಳೆದಿದ್ದವು, ಎಂದು ಗೊತ್ತಾಗುತ್ತದೆ. ಮುಂದೆ 17ನೇ ಶತಮಾನದಲ್ಲಿ ಕೆಳದಿಯ ಅರಸು, ಬಸವರಾಜ ವಿರಚಿತ ಕೋಶವಾದ ಶಿವತತ್ವರತ್ನಾಕರದಲ್ಲೂ 'ಸಂಗೀತಕ'ದ ವಿಶ್ಲೇಷಣೆಯಿದ್ದು, ಸಾಮ್ರಾಜ್ಯಗಳು ತಲೆಯೆತ್ತಿ, ಮೇಲೇರಿ,ಉರುಳಿ ಹೋದರೂ ಈ ಜನಪ್ರಿಯ ಕಲೆಗಳು ಚಿಕ್ಕ ರಾಜ್ಯಗಳಲ್ಲಿ, ಪಾಳೆಯ ಪಟ್ಟುಗಳಲ್ಲಿ, ದೇವಸ್ಥಾನಗಳಲ್ಲಿ ಜನಸಾಮಾನ್ಯರ ಆಸಕ್ತಿಯಿಂದಾಗಿ ಉಳಿದುಕೊಂಡು ಬಂದುದನ್ನು ನೋಡುತ್ತೇವೆ.

ವಿಜಯೋತ್ಸವಗಳು, ಸಮಾರಾಧನೆಗಳು, ವಿವಾದ ಸಭೆಗಳು, ಪರೀಕ್ಷೆ, ಪುತ್ರಜನ್ಮ, ಭೂತ, ಮಾತೃಪೂಜೆ, ವಸಂತೋತ್ಸವ ಮುಂತಾದ ಸಂದರ್ಭಗಳಲ್ಲಿ ನೃತ್ಯಕೂಟಗಳು ಏರ್ಪಡುತ್ತಿದ್ದವು. ಯಾವ ಹಬ್ಬ, ಹುಣ್ಣಿಮೆ ಬಂದರೂ ಆಯಾ ಹಬ್ಬದ ಅಧಿದೇವತೆಯ ದೇವಾಲಯದ ನಾಟ್ಯಶಾಲೆಯಲ್ಲಿ ಅಥವಾ ಮಂಡಪದಲ್ಲಿ ನೃತ್ಯ-ಗೀತೋತ್ಸವಗಳು ನಡೆದೇ ಇರುತ್ತಿದ್ದವು. ಮನಸ್ಸಿಗೆ ಮುದ ನೀಡುವ ಸಂದರ್ಭಗಳಿಗೆ ರಾಜ-ಪ್ರಜರೆಂಬ ಭೇದವಿಲ್ಲವಲ್ಲ? ಹೀಗಾಗಿ ಊರೂರುಗಳಲ್ಲಿ ನಡೆಯುವ ಧಾರ್ಮಿಕ ಉತ್ಸವಗಳೆಲ್ಲ, ಸಂಗೀತೋತ್ಸವಗಳಿಗೂ ಹೆಚ್ಚಿನ ಅವಕಾಶ ನೀಡಿದವು. ಈಗಾಗಲೇ ಹೇಳಿದಂತೆ ಪ್ರಾಚೀನ ಕಾಲದ 'ಸಂಗೀತಕ' ವೆಂದರೆ ಗೀತ, ವಾದ್ಯ, ನೃತ್ಯಗಳನ್ನು ಜೊತೆಗೂಡಿಸಿಕೊಂಡ ಪ್ರದರ್ಶನವಾಗಿತ್ತು. ಮೂರನ್ನೂ ಮೈಗೂಡಿಸಿಕೊಂಡಾಕೆ ನಿಜವಾದ ಅಥವಾ ಪರಿಪೂರ್ಣ ಕಲಾವಿದೆ ಅನಿಸಿಕೊಳ್ಳುತ್ತಿದ್ದಳು.

ಹದಿನಾಲ್ಕನೆಯ ಶತಮಾನದವರೆಗೂ ಕರ್ನಾಟಕದ ರಾಣಿಯರು ಸಂಗೀತ-ನೃತ್ಯಗಳನ್ನು ಕಷ್ಟಪಟ್ಟು ಕಲಿತು ಬಹಿರಂಗ ಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದ ನಿದರ್ಶನಗಳಿವೆ. ಅರಸರೇ ಸ್ವತಃ ಈ ಕಲೆಗಳಲ್ಲಿ ಆಸಕ್ತರು ಪರಿಣತರೂ ಇರುತ್ತಿದ್ದರಾದ್ದರಿಂದ ತಾವೂ ಪರಿಶ್ರಮ ಪೂರ್ವಕ ಈ ಕಲೆಗಳನ್ನು ರೂಢಿಸಿಕೊಳ್ಳಲು ರಾಜಪರಿವಾರದ ಮಹಿಳೆಯರಲ್ಲಿ ಪೈಪೋಟಿಯೇ ಇರುತ್ತಿತ್ತು. ಕನ್ನಡಿಗರಿಗೆ ಚಿರಪರಿಚಿತಳಾದ ಹೊಯ್ಸಳ ವಿಷ್ಣುವರ್ಧನನ ರಾಣಿ ಶಾಂತಲೆ ಭರತನಾಟ್ಯಶಾಸ್ತ್ರವನ್ನು ಕ್ರಮವಾಗಿ ಅಭ್ಯಸಿಸಿ ಅದರ ತಿರುಳನ್ನು ಮೈಗೂಡಿಸಿಕೊಂಡಿದ್ದಳು. ಅವಳ ಸಂಗೀತ-ನಾಟ್ಯ ಪರಿಣತಿಯನ್ನು ಅನೇಕ ಶಿಲಾಶಾಸನಗಳು ಹೊಗಳುತ್ತವೆ. 'ವಿಚಿತ್ರನರ್ತನ, ಪ್ರವರ್ತನ, ಪಾತ್ರಶಿಖಾಮಣಿ' ಎಂಬುದು ಅವಳ ಹಲವು ಬಿರುದುಗಳಲ್ಲಿ ಒಂದು. ಅರ್ಥಾತ್ ನೃತ್ಯಪ್ರಕಾರದಲ್ಲಿ ಆ ಆಗಾಗ ಹೊಸ ಬಗೆಯ ಪ್ರಯೋಗಗಳನ್ನು ಕೈಕೊಂಡು, ವಿವಿಧ ಪಾತ್ರಗಳನ್ನು ರೂಪಿಸುವದರಲ್ಲಿ ಮಿಗಿಲಾಗಿದ್ದಳು. ಇನ್ನೊಬ್ಬ ಹೊಯ್ಸಳ ರಾಣಿ ಲಚ್ಚಲದೇವಿಯೆಂಬಾಕೆ, 'ಸಂಗೀತಕ ಪ್ರಸಂಗ ವಿವೇಕ ಚೂಡಾಮಣಿ' ಎನಿಸಿಕೊಂಡಿದ್ದಳು. ಪುರಾಣ, ಕಾವ್ಯ, ಇತಿಹಾಸಗಳ ಪ್ರಸಂಗಗಳನ್ನು ನೃತ್ಯ-ನಾಟಕಕ್ಕೆ ಅಳವಡಿಸಿ ಪ್ರದರ್ಶಿಸುವದು ಅಂದಿನ ಜನಪ್ರಿಯ ಕಲಾಪ್ರಕಾರವಾಗಿತ್ತು. ಲಚ್ಚಲದೇವಿಯು ಬಹುಶಃ ಇವುಗಳ ಔಚಿತ್ಯಪೂರ್ಣ ಪ್ರದರ್ಶನಗಳನ್ನು ಹೊಂದಿಸಬಲ್ಲವಳಾಗಿದ್ದಳು, ಅಥವಾ ಅವುಗಳ ಗುಣಾವಗುಣಗಳನ್ನು ಅಳೆಯ ಬಲ್ಲವಳಾಗಿದ್ದಳು, ಎಂದು ಅರ್ಥೈಸಬಹುದು. ಇದಲ್ಲದೆ ಹೊಚ್ಚಹೊಸ ದೇಸಿಮಾರ್ಗದಲ್ಲಿ ಬಗೆಬಗೆಯ ರಸಗಳನ್ನು ವ್ಯಕ್ತಮಾಡಬಲ್ಲ ವಿವಿಧ ಪಾತ್ರಗಳನ್ನು ಆಕೆ ಅಭಿನಯಿಸಬಲ್ಲವಳಾಗಿದ್ದಳು. ಹೊಯ್ಸಳ ದೊರೆ ಮೊದಲನೆಯ ಬಲ್ಲಾಳನ ಮೂವರು ರಾಣಿಯರು ಪದುಮಲೆ, ಚಾಮಲೆ ಬೊಪ್ಪಾದೇವಿಯರು ಸಂಗೀತ-ನೃತ್ಯಶಾಸ್ತ್ರಗಳಲ್ಲಿ ಪ್ರೌಢೆಯರಾಗಿದ್ದು 'ರಾಯಕಟಕ ಪಾತ್ರ ಜಗದಳಿ'ಯೆಂಬ ಬಿರುದು ಪಡೆದರು. ಬಹುಶಃ ರಾಜಧಾನಿ (ಕಟಕ)ದ ವಿಶೇಷ ಪ್ರಸಂಗದಲ್ಲಿ ಜೊತೆಯಾಗಿ ಅಭಿನಯಿಸಿ ಈ ಬಿರುದು ಪಡೆದರೇನೋ. ಬಾಚಲದೇವಿಯ ಪ್ರತಿಭೆ ಇನ್ನೊಂದು ಬಗೆಯದು. ತನ್ನ ಪತಿಯ ಯುದ್ಧ ಕೌಶಲ್ಯವನ್ನು, ಆತನು ವೈರಿಗಳನ್ನು ಸೋಲಿಸಿದ ಬಗೆಯನ್ನೂ, ಅವರಿಂದ ಮಾಡಿಸಿಕೊಂಡ ಪಾದಪೂಜೆಯ ಪ್ರಸಂಗಗಳನ್ನೂ ನಾಟ್ಯರೂಪದಲ್ಲಿ ಅಭಿನಯಿಸಿ

ತೋರಿಸುವದರಲ್ಲಿ ಮಿಗಿಲಾಗಿದ್ದಳು, ಎಂದು ಶಾಸನವೊಂದು ಬಣ್ಣಿಸುತ್ತದೆ. ಆಳರಸರ ಶೌರ್ಯಗಾಥೆಗಳನ್ನು ಪ್ರಜೆಗಳಲ್ಲಿ ಪ್ರಚಾರ ಮಾಡುವದು ಮುಖ್ಯವಾಗಿತ್ತು. ಹೀಗಾಗಿ ಇಂಥ ಅಭಿನಯ ಕಾರ್ಯಕ್ರಮಗಳು ಬಹಿರಂಗ ಸಭೆಗಳಲ್ಲಿ ಏರ್ಪಡುವದು ಸ್ವಾಭಾವಿಕವೂ ಅವಶ್ಯವೂ ಆಗಿತ್ತು. ಈ ಕೆಲಸವನ್ನು ಕಲಾಕುಶಲತೆಯರಾದ ರಾಣಿಯರು ಕೈಗೊಳ್ಳುತ್ತಿದ್ದರು. ಬಾಚಲದೇವಿಯ ಪತಿ ಮಹಾಮಂಡಳೇಶ್ವರ ಗಂಗಪೆರ್ಮಾಡಿಯು 'ರಾಯಜಗದಳ' ಎಂಬ ಬಿರುದು ಪಡೆದಿದ್ದ. ಈಗ ಆತನು ಆಕೆಗೆ 'ಪಾತ್ರಜಗದಳೆ', ಎಂಬ ಬಿರುದನ್ನು ಕೊಡಮಾಡಿದ!

ಇವೆಲ್ಲ ಶಾಸನಗಳನ್ನು ಸ್ವತಃ ಆಳರಸರು, ಅವರ ದಂಡನಾಯಕರು, ಮಾಂಡಲಿಕರು, ಅನುಯಾಯಿಗಳು ಸಡಲಿಸಿದವುಗಳಾದ್ದರಿಂದ ಈ ಎಲ್ಲಾ ರಾಣಿಯರೂ, ನಮೂದಿಸಿದ ಎಲ್ಲ ಕಲೆಗಳಲ್ಲೂ ಏಕಮೇವಾದ್ವಿತೀಯ ರಾಗಿದ್ದರು, ಎಂದು ನಂಬಬೇಕಾಗಿಲ್ಲ. ಆದರೆ ಮಧ್ಯಯುಗದಲ್ಲಿ ಸ್ತ್ರೀಯರ ಸ್ಥಾನಮಾನಗಳು ತೀರ ಕನಿಷ್ಠವಾಗಿದ್ದವೆಂದೂ, ರಾಣಿಯರ ಜೀವನ, ಹೊನ್ನಿನ ಪಂಜರದ ಅರಗಿಳಿಯಂತಿರುತ್ತಿತ್ತೆಂದೂ ನಂಬಿಕೆಯಿದೆ. ಕೆಲವರ್ಗದವ ರಾದರೂ ವಿವಿಧ ಕಲೆಗಳನ್ನು ಅಭ್ಯಸಿಸಿ ಅವುಗಳ ಬಹಿರಂಗ ಸಭೆಗಳಲ್ಲಿ ಪ್ರದರ್ಶನ ನೀಡಿ ಬಿರುದು ಪಡೆಯುವದು ಸಾಮಾನ್ಯವಾಗಿತ್ತೆಂದು ಊಹಿಸಬಹುದು.

ಹೆಂಗಸರಿಗೇ ಮೀಸಲಾದ ಇತರ ಕಲೆಗಳೂ ಇದ್ದವು. ಈಗಿನ ಮಸಾಜ್ ಅಥವಾ ಅಂಗಮರ್ದನ ಕಲೆ, ಕೇಶ-ಸಂವಾಹನ ಅಥವಾ ಬಗೆಬಗೆಯ ಕೇಶಾಲಂಕಾರಗಳನ್ನು ಮಾಡುವದು, ವಿವಿಧ ಗಂಧಾನುಲೇಪನಗಳನ್ನು, ಋತುಮಾನಕ್ಕೆ, ವ್ಯಕ್ತಿಯ ಅಭಿರುಚಿಗೆ, ಅಥವಾ ಉಡುಗೆಗೆ ಅನುರೂಪ (ಮ್ಯಾಚಿಂಗ್) ವಾಗುವಂತೆ ತಯಾರಿಸುವದು, ಹೂವಿನ ಮಾಲೆಗಳು ಮತ್ತು ದಂಡೆಗಳ ಅಲಂಕಾರಗಳನ್ನು ಕಟ್ಟುವದು. ತಾಂಬೂಲ ತಯಾರಿಸುವ ಕಲೆ ಮುಂತಾದವುಗಳಲ್ಲಿ ಪರಿಣತೆಯರು ರಾಜಸೇವೆಯಲ್ಲಿ ಇರುತ್ತಿದ್ದರು.

ಸಂಗೀತ ಶಾಸ್ತ್ರ ಅಭ್ಯಸಿಸಿದವರು, ವಾದ್ಯನಿಪುಣೆಯರು, ಕಾವ್ಯಶಾಸ್ತ್ರಗಳನ್ನು ಓದಿದವರು, ವಾಕ್ಯಚತುರತೆಯರು, ಪರಿಹಾಸ-ವಿನೋದಗಳಲ್ಲಿ ಎತ್ತಿದ ಕೈಯಾಗಿದ್ದವರು, ಸಾಹಿತ್ಯ ರಸಭಾವಗಳನ್ನು ಗುರುತಿಸಬಲ್ಲವರು, ಅಂದವಾಗಿ ಕಥೆಗಳನ್ನು ಹೇಳಬಲ್ಲ ನಾರಿಯರು ಅರಮನೆಯಲ್ಲಿ ಇರುತ್ತಿದ್ದರು. ರಸಿಕರಾದ

ಅರಸರು ಬಿಡುವಿನ ವೇಳೆಯನ್ನು (ರಾತ್ರಿಯ ಮೊದಲಭಾಗವನ್ನು) ಇಂಥವರ ಸಹವಾಸದಲ್ಲಿ ಕಳೆಯುತ್ತಿದ್ದರು, ಅಥವಾ ಕಳೆಯಬೇಕು ಎಂಬ ಮಾನಸೋಲ್ಲಾಸದ ನಿರ್ದೇಶನ ವಾಸ್ತವಿಕ ಸಂಗತಿಯಾಗಿತ್ತು. ವಿಜಯನಗರ ಸಾಮ್ರಾಜ್ಯ ಶಿಖರಕ್ಕೇರಿದ ದಿನಗಳಲ್ಲಿ ರಾಜಧಾನಿಯನ್ನು ಸಂದರ್ಶಿಸಿದ ಪೋರ್ಚುಗೀಸ್ ಪ್ರವಾಸಿಗಳಾದ ಡೋಮಿಂಗೋ ಪ್ಯಾಸ್ ಮತ್ತು ಫರ್ನಾವೋ ನುನಿಝರ ವೃತ್ತಾಂತಗಳ ಪ್ರಕಾರ ಅರಮನೆಯ ಆವರಣದಲ್ಲಿ ಸಾವಿರಾರು ವೃತ್ತಿನಿರತ ಸ್ತ್ರೀಯರಿದ್ದು, ಅವರಲ್ಲಿ ಸಂಗೀತ, ವಾದ್ಯ, ನೃತ್ಯಗಳಲ್ಲಿ ಪರಿಣತೆಯರು ಇದ್ದರು. ತರಬೇತಿಗಾಗಿ ಏರ್ಪಟ್ಟ ಶಾಲೆಯನ್ನು ಪ್ಯಾಸ್ ನೋಡಿದ್ದೇ ಅಲ್ಲದೇ ಅಲ್ಲಿಯ ಪ್ರತಿ ಕಂಬದ ಮೇಲೆ ನಾಟ್ಯದ ಭಂಗಿಯನ್ನು ನಿರೂಪಿಸುವ ಸ್ತ್ರೀವಿಗ್ರಹಗಳಿದ್ದು, ಅವನ್ನು ನೋಡಿ ಕಲಿಯುವ ವ್ಯವಸ್ಥೆಯಿದ್ದುದನ್ನು ಗಮನಿಸಿದ್ದ. ತರಬೇತಿಯಲ್ಲಾದ ಶ್ರಮ ನಿವಾರಣೆಗೆ ವಿರಮಿಸುವ ಚಿಕ್ಕ ಉದ್ದವಾದ ಹಜಾರದಲ್ಲಿ ಕೈಕಾಲುಗಳನ್ನು ಇಳಿಬಿಟ್ಟು ಮೈ ಹಗುರಗೊಳಿಸಲು ಬಾರ್‌ಗಳನ್ನು ಹೊಂದಿಸಲಾಗಿತ್ತು. ರಾಣೀವಾಸದವರಿಗೆ ತರಬೇತಿಯ ವ್ಯವಸ್ಥೆ ಹಾಗೂ ಕುಶಲಕಲಾವಿದೆಯರ ಪರಂಪರೆ, ನಂತರದ ಶತಮಾನಗಳಲ್ಲಿಯೂ ಮುಂದುವರೆಯಿತು. ಮೈಸೂರಿನ ಅರಸು, ಕಂಠೀರವ ನರಸರಾಜನ (ಕ್ರಿ.ಶ.1638-59) ಅರಮನೆಯ ಆವಾರದಲ್ಲಿ, ಜ್ಯೋತಿಷ್ಯ, ಕಾವ್ಯ-ನಾಟಕ, ಸಂಗೀತ, ನೃತ್ಯ ಕುಶಲೆಯರ, ಭವನಗಳು ಇದ್ದವು. ಇವರೆಲ್ಲ ತಮ್ಮ ಕಲೆಗಳಲ್ಲಿ ಹೆಸರಾಂತವರು, ವೃತ್ತಿಯಲ್ಲಿ ನಿರತರಾಗಿರುವದರ ಜೊತೆಗೆ ಕಿರಿಯರಿಗೆ ತರಬೇತಿ ಒದಗಿಸುತ್ತಿದ್ದರು. ನಾಟಕ-ಶಾಲೆಯ ಹುಡುಗಿಯರ ವಾಸದ ಮಣಿಭವನವೂ ಅದೇ ಆವಾರದಲ್ಲಿತ್ತು. ಕೆಲವು ರಾಣಿಯರು ಬರೆದ ಕಾವ್ಯ ನಾಟಕಗಳನ್ನು ಸಂಗೀತಕ್ಕೆ, ನಾಟ್ಯಕ್ಕೆ ಅಳವಡಿಸುವ ಕೋವಿದೆಯರು ಇದ್ದರು.

ಭಾಗವತ, ರಾಮಾಯಣ, ಮಹಾಭಾರತಗಳನ್ನು ಸುಶ್ರಾವ್ಯವಾಗಿ ಹಾಡುವ ವಿದುಷಿಯರು ಕಂಠೀರವನ ಅರಮನೆಯಲ್ಲಿದ್ದು ಸಾಯಂಕಾಲದ ಸಮಯವನ್ನು ಈ ಕಾವ್ಯವಾಚನ ಗಾಯನ, ಶ್ರವಣಕ್ಕೆ ಮೀಸಲಿಡಲಾಗಿತ್ತು. ಈಗಿನ ಗಮಕಕಲೆಯ ಪ್ರಾಚೀನತೆಯನ್ನು ಗಮನಿಸಿದರೆ, ಕಾವ್ಯವಾಚನ, ತುಂಬ ಶತಮಾನಗಳ ಹಿಂದಿನಿಂದಲೂ ಮಹಿಳೆಯರಿಂದ ಬೆಳೆದು ಬಂದಿದೆಯೆನ್ನ ಬಹುದು. ನಾಡಿನಲ್ಲೆಲ್ಲ ಪ್ರಚಲಿತವಿದ್ದ ಕಾವ್ಯಗಾಯನದ ಸುಂದರ ಚಿತ್ರವನ್ನು ರತ್ನಾಕರವರ್ಣಿ ಕೊಡಮಾಡಿದ್ದಾನೆ.

ಪಡಲಿಗೆಗಿಟ್ಟು ಹೊತ್ತಗೆಯ ದಾರವನೊತ್ತಿ
ಸಡಲಿಸಿ ಕಿರಿದೋಲೆಗಳನು
ಎಡಗೈಯೊಳಾಂತು ಓದಿದಳು ಬಲಗೈಯಿಂದ
ಮಿಡಿವುತ ಭಾರಿದಂಡಿಗೆಯ.

ತಾಳೆಗ್ರಂಥವನ್ನು ಪಡಲಿಗೆಯಲ್ಲಿಟ್ಟು, ದಾರವನ್ನು ಸಡಲಿಸಿ, ಸಂಬಂಧಿತ ಓಲೆಗಳನ್ನು ಎಡಗೈಯಲ್ಲಿ ಎತ್ತಿಹಿಡಿದು ಓದುತ್ತ ಬಲಗೈಯಿಂದ ತೊಡೆಯ ಮೇಲಿದ್ದ ತಂಬೂರಿಯನ್ನು ಮೀಟುತ್ತ ಹಾಡುವ ಕಾವ್ಯಗಾಯಕಿಯ ಈ ಚಿತ್ರ ನಿತ್ಯನೂತನವಾಗಿದೆ. ಇದು ಕೇವಲ ಕವಿ ಕಲ್ಪನೆಯಲ್ಲ, ಎಂದು ಸಾರಲು ಶಿಲ್ಪಸ್ತ್ರೀಯರು, ಓಲೆ ಹಿಡಿದು ವಾಚಿಸುವ ಭಂಗಿಯಲ್ಲಿ ಇಂದಿಗೂ ನಮಗೆ ಲಭ್ಯರಿದ್ದಾರೆ!

ತರಬೇತಿಯ ವಿಧಾನಗಳು: ಉತ್ತಮ ಸಂಗೀತ, ನೃತ್ಯ ಕಲಾವಿದೆಯಾಗಿ ರೂಪಗೊಳ್ಳಲು ಹಲವು ವರ್ಷಗಳ ತರಬೇತಿ, ಹಲವು ಭಾಷೆ, ಶಾಸ್ತ್ರಗಳನ್ನು ಕಲಿಯುವ ಅವಶ್ಯಕತೆಗಳು ತೀವ್ರವಾಗಿದ್ದವು. ನೃತ್ಯಕ್ಕೆ ತುಂಬ ಎತ್ತರವೂ ಅಲ್ಲದ, ಗಿಡ್ಡವೂ ಅಲ್ಲದ, ಒಳ್ಳೆಯ ಮೈಕಟ್ಟಿನ ರೂಪವತಿಯಾದ ಹನ್ನೆರಡು ವರ್ಷದ ಬಾಲಕಿಯರನ್ನು ಆರಿಸಲಾಗುತ್ತಿತ್ತು. ಇಪ್ಪತ್ತು ವರ್ಷದವಳಾಗುವ ಹೊತ್ತಿಗೆ ಆಕೆ ಉತ್ತಮ ನರ್ತಕಿಯಾಗಿ ರೂಪಗೊಳ್ಳುತ್ತಿದ್ದಳು. ಸಂಗೀತ ನೃತ್ಯಾಭಿನಯಗಳ ತರಬೇತಿ ಕಠಿಣವಿದ್ದು, ಗಂಟೆಗಟ್ಲೆ ಆಯಾಸವಿಲ್ಲದೇ ಕುಣಿಯುವದನ್ನು ಆಕೆ ರೂಢಿಸಿಕೊಳ್ಳಬೇಕಿತ್ತು (ಜಿತಶ್ರಮಾ) ಜೊತೆಗೆ ಹಲವಾರು ವಿಷಯಗಳನ್ನು ಅರಿತುಕೊಂಡು (ಬಹುಪ್ರಾಜ್ಞಾ), ಆರೋಗ್ಯವನ್ನು ಕಾಪಾಡಿಕೊಂಡು (ಅರೋಗಾ), ರಾಗಗಳ ಪೂರ್ಣಮಾಹಿತಿ ಪಡೆಯುತ್ತ (ರಾಗಸಂಪನ್ನಾ) ಪ್ರಿಯವಾದಿನಿಯಾಗಿ, ಪ್ರಶ್ನೋತ್ತರಗಳಲ್ಲಿ ಚತುರೆಯಂದು ಹೆಸರು ಪಡೆಯಲು ಸತತವಾಗಿ ಶ್ರಮಿಸಬೇಕಾಗುತ್ತಿತ್ತು. ಗುರು, ದೇವ-ದ್ವಿಜರಲ್ಲಿ ಭಕ್ತಿ ಮತ್ತು ಸುಂದರ ವೇಷ-ಭೂಷಣಗಳಲ್ಲಿ ಸದಾ ಆಸ್ಥೆವಹಿಸುವವಳಾಗಿರುವದು, ಅಪೇಕ್ಷಿತ ಗುಣಗಳಾಗಿದ್ದವು. ಮೂವತ್ತು ವರ್ಷ ಮೀರಿದ ನರ್ತಕಿಗೆ ಬೇಡಿಕೆ ಕಡಿಮೆಯಾಗುತ್ತಿತ್ತು.

ಲಾಟ, ಗುರ್ಜರ, ಸೌರಾಷ್ಟ್ರ, ಮಹಾರಾಷ್ಟ್ರಗಳ ನರ್ತಕಿಯರು ಶ್ರೇಷ್ಠರೆಂದೂ, ಮಧ್ಯದೇಶದವರು, ಮಧ್ಯಮರೆಂದೂ ಕರ್ನಾಟಕ ಆಂಧ್ರ,

ತಮಿಳುನಾಡಿನವರು ಅಧಮರೆಂದೂ ಶಿವತತ್ವರತ್ನಾಕರ ಹೇಳುತ್ತದೆ! ತನ್ನ ಅಥವಾ ಸುಲಭಸಾಧ್ಯ ನೆರೆನಾಡಿನ ಕಲೆಗೆ ಬೆಲೆಯಿಲ್ಲ. ಅತಿ ಪರಿಚಯ, ಅವಜ್ಞೆಗೆ ಅವಕಾಶವೀಯುತ್ತದೆ ತಾನೆ? ಹೊರನಾಡಿನ ಕಲೆ-ವಸ್ತುಗಳಿಗೆ, ಇಂದಿನ ವಿದೇಶಿ ವಸ್ತುಗಳ ವ್ಯಾಮೋಹದಂತೆ, ಅಂದಿಗೂ ಆ ಪರಿಸ್ಥಿತಿ ಇದ್ದಂತೆ ತೋರುತ್ತದೆ! ಹೊರನಾಡಿನ ನರ್ತಕಿಯರಿಗೆ ಹೆಚ್ಚಿನ ಬೇಡಿಕೆಯಿತ್ತು.

ಅಭಿನಯದಲ್ಲಿ, ಗಗನದಲ್ಲಿ ಹಾರುವದು, ನೀರಿನಲ್ಲಿ ತೇಲುವದು ಬಗ್ಗಿಯೇ ಇರುವದು ನೆಲದಲ್ಲಿ ಹರಿದಾಡುವದು (ಪ್ಲವನ, ಲೋಟನ, ಪ್ರಣತಕ, ಸರಣ) ಮುಂತಾದವು ಇದ್ದವು. ಆಕಾಶ, ಜಲ, ಭೂಮಿಗಳಲ್ಲಿ ಚಲಿಸುವ ಪಕ್ಷಿ, ಮತ್ಸ್ಯ, ಪ್ರಾಣಿ, ನಾಗಗಳ ಕುರಿತಾದ ಪುರಾಣ ಪ್ರಸಂಗಗಳು, ಕಥೆಗಳು ನಾಟ್ಯಾಭಿನಯಕ್ಕೆ ಉತ್ತಮವಸ್ತುವಾಗಿದ್ದು ಜನಪ್ರಿಯವಾಗಿದ್ದವು. ಕರಣಾದಿಗಳಿಂದ ಅವನ್ನು ಅಭಿನಯಿಸಿ ತೋರಿಸುವ ವಿಧಾನಗಳನ್ನು ಮಾನಸೋಲ್ಲಾಸವು ವಿವರಿಸುತ್ತದೆ. 'ಜಲಾಶಯೀ' ನೃತ್ಯದಲ್ಲಿ- ನೀರಮೇಲೆ ಮಲಗಿದ ಭಾಸವನ್ನುಂಟುಮಾಡುವ ದೇಹದ ಚಲನೆ (ನಿಶ್ಚಲನ?) ಹಾಗೂ ನಿಯಂತ್ರಿತ ಅಭಿನಯದ ಕುರಿತು ಮಾನಸೋಲ್ಲಾಸದಲ್ಲಿ ನಿರ್ದೇಶನವಿದೆ. ಭರತೇಶ ವೈಭವವು 'ಜಲಕನ್ನಿಕಾ' ಎಂಬ ನಾಟ್ಯವನ್ನು ಹೆಸರಿಸುತ್ತದೆ. ಅಂಚೆಗಳು ಕೊಳದಲ್ಲಿ ತೇಲಿದಂತೆ, ಮೇಲಕ್ಕೆ ನೆಗೆದು ಹಾರಿದಂತೆ, ನಿಧಾನವಾಗಿ ನೆಲಕ್ಕೆ ಇಳಿದಂತೆ ಮಾಡಿದ ಕವಿಯ ಲಾವಣ್ಯಗತಿಯ ವರ್ಣನೆ ನೋಡಿದರೆ, ಇಂದಿನ ಬ್ಯಾಲೆ (ballet) ನರ್ತನದ ಲಘುತರಗತಿಯನ್ನು ಅಂದಿನ ನಾಟ್ಯಯುವತಿಯರು ರೂಢಿಸಿಕೊಂಡಿರಬಹುದೇ? ಎಂಬ ಕುತೂಹಲ ಕಾಡುತ್ತದೆ. ಸಹಜವಾಗಿಯೇ ತುಂಬ ಚಪಲವಾದ, ಹಗುರವಾದ ಮೈಕಟ್ಟು ನರ್ತಕಿಗೆ ಅತ್ಯವಶ್ಯವಿತ್ತು.

ಮಹಾನವಮಿಯ ಉತ್ಸವ : ರಾಜ್ಯದ ಎಲ್ಲಾ ನರ್ತಕಿಯರಿಗೆ ನಾಡಹಬ್ಬದ ಉತ್ಸವದಲ್ಲಿ ಪಾಲುಗೊಳ್ಳಲು ರಾಜಧಾನಿಗೆ ಬರುವಂತೆ ಆಮಂತ್ರಣ ಹೋಗುತ್ತಿತ್ತು, ಎಂದು ಪೋರ್ಚುಗೀಸ್ ಪ್ರವಾಸಿ ಪ್ಯಾಸ್ ಗಮನಿಸಿದ್ದ. ನವರಾತ್ರಿಯ ಒಂಬತ್ತು ದಿನಗಳೂ ಬಿಡದೇ ನೃತ್ಯ ಕಾರ್ಯಕ್ರಮಗಳು ನಡೆಯುತ್ತಿದ್ದು, ಅವಕ್ಕೆ ವಿಶೇಷವಾದ ರಂಗಭೂಮಿಯನ್ನು ಸಜ್ಜು ಮಾಡಿದ್ದನ್ನೂ ಅತ ನೋಡಿದ್ದ. ಮುಂದೆಯೂ ಈ ಪದ್ಧತಿ ನಡೆದುಬಂದು "ಕಂಠೀರವ ನರಸರಾಜ ವಿಜಯ"ವು ಆ ಕಾಲದ ಪ್ರಸಿದ್ಧ ನರ್ತಕಿಯರು ಮತ್ತು ಊರುಗಳನ್ನು

ಹೆಸರಿಸುತ್ತದೆ. ಮೈಸೂರು ದೇಶದವರಷ್ಟೇ ಅಲ್ಲದೇ ತೆಲುಗುನಾಡಿನ, ತುರುಕಪ್ರದೇಶದ, ಮಲೆಯಾಳ, ಕೊಡಗು, ತುಳುವ, ಕೊಂಕಣ ನಾಡಿನವರೂ ಇದ್ದರು. ತಮ್ಮ ತಮ್ಮ ಪ್ರದೇಶದ ನಾಟ್ಯ ಪ್ರಕಾರಗಳಲ್ಲೆಲ್ಲ ಅವರು ನಿಷ್ಣಾತೆಯರಾಗಿರುವದು ಸಹಜವೇ ಇತ್ತು.

ನಾಡಹಬ್ಬದಲ್ಲಿ ಸಂಜೆಯಾಗುವವರೆಗೆ ಹಲವಾರು ವಿನೋದ ಪ್ರದರ್ಶನಗಳು ನಡೆದು, ಸೊಗಸಾದ ಒಡವೆ ವಸ್ತ್ರಗಳನ್ನು ಧರಿಸಿದ ಹೆಂಗಳೆಯರು ತಾಳಮದ್ದಳೆ, ಇತರ ವಾದ್ಯಗಳ ಹಿನ್ನೆಲೆಯಲ್ಲಿ ಹಾಡು ಹೇಳುತ್ತ, ಕೆಲವರು ಕೋಲಾಟವಾಡಿದರೆ, ಕೆಲವರು ನಾಟ್ಯವಾಡಿದರು. "ತದ್ದಿತ್ತೈ ತದಿಗಿಣೆ ತದ್ದಳಾಂಗುಳೆಂಬ ಗಾಯಕರ ಗತಿಗೆ ಗೆಜ್ಜೆಮೆಟ್ಟಿನ ಗತಿಗಳಿಂದ, ಆ ಮುದ್ದು ವೆಣ್ಣುಗಳು" ಕುಣಿದಾಡಿ ಬಗೆಬಗೆಯ ಅಭಿನಯದಿಂದ ಸಭಿಕರ ತಲೆ ದೂಗಿಸಿದರಂತೆ.

ಅಂದಿನ ಪ್ರಸಿದ್ಧ ನಾಟ್ಯಾಭಿನಯಗಳಲ್ಲಿ ಗಿಳಿಯಕಟ್ಟಳೆ, ಸೋಗೆ ನವಿಲಾಟ, ಹಂಸೆಯಗತಿ, ಎರಳೆಗಳಗತಿ, ಗಂಡುವೇಷ ಮುಂತಾದವುಗಳು ಜನಪ್ರಿಯ ವಾಗಿದ್ದಂತೆ ತೋರುತ್ತದೆ. ಭರತನಾಟ್ಯಾಚಾರ್ಯರು (ಕೆಲವು ಸಲ ಇವರನ್ನು ನಯಕಾರರೆಂದೂ, ನಟ್ಟುವರೆಂದೂ ಕರೆದಿದೆ) ವಿಶೇಷ ಗಮನ ಕೊಟ್ಟು ತರಬೇತುಗೊಳಿಸಿ ಅರಸನ ಎದುರಿಗೆ ನಡೆಯುವ ನೃತ್ಯಗಳನ್ನು ಸಿದ್ಧಪಡಿಸುತ್ತಿದ್ದರು. ಉತ್ಕೃಷ್ಟಕಾರ್ಯಕ್ರಮಗಳನ್ನು ನೀಡಿದವರಿಗೆ ರಾಜರ ಕೈಯಿಂದ, ಬಹುಮಾನ-ಪುರಸ್ಕಾರಗಳು ಸಲ್ಲುತ್ತಿದ್ದವು.

ಪ್ಯಾಸ್‌ನು ಗಮನಿಸಿದಂತೆ, ಅನೇಕ ಬಗೆಯ ತುತ್ತೂರಿ, ಮದ್ದಲೆ, ಕೊಳಲು, ಪಿಟೀಲು ಮತ್ತಿತರ ವಾದ್ಯಗಳನ್ನು ನುಡಿಸುವ ಮಹಿಳೆಯರಿದ್ದರು. ಕಾವ್ಯಗಳೂ ಆವುಜ, ವೀಣೆ, ಮದ್ದಳೆ, ರಾವಣ ಹಸ್ತೆ, ಕಿನ್ನರಿ, ಜಂತ್ರ, ಹುಡುಕ್ಕುಗಳಲ್ಲದೇ, ದುಸ್ತರವಾದ ಸ್ವರ ಮಂಡಲಗಳನ್ನು ನುಡಿಸಬಲ್ಲ ಹೆಂಗಳೆಯರಿದ್ದುದನ್ನು ದಾಖಲಿಸುತ್ತವೆ. ಈಗ ಕಣ್ಮರೆಯಾಗಿರುವ ಕೂರ್ಮವೀಣೆ, ಧನುರ್ವೀಣೆ, ಚಂದ್ರಮಂಡಲ, ಕಾಷ್ಠವಾದ್ಯಗಳನ್ನು ನುಡಿಸುವವರೂ ಇದ್ದರು. ಹಲವಾರು ಶಿಲ್ಪಗಳು ವಿವಿಧ ವಾದ್ಯಗಳನ್ನು ನುಡಿಸುವ ಸ್ತ್ರೀಯರನ್ನು ಚಿತ್ರಿಸುತ್ತವೆ. ಸಂಗೀತ ನೃತ್ಯ ಪಾಠ ಹೇಳಿಕೊಡುವ ಗಂಡಸರು ಇದ್ದಂತೆ, ನೃತ್ಯ ತರಬೇತಿ ನೀಡುವ ಹೆಂಗಳೆಯರೂ ಇದ್ದರು. ಹೆಜ್ಜೆ ತಪ್ಪಿದಾಕ್ಷಣ ತಿದ್ದುತ್ತಿದ್ದರು.

ಜನಸಾಮಾನ್ಯರ ರಂಜನೆಗಳು:- ವಿವಿಧ ಕಲಾರಂಜನೆಗಳು ರಾಜವರ್ಗ
ಶ್ರೀಮಂತರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಸಾಮಾನ್ಯ ಜನರೂ ಸಂಗೀತ
ನಾಟಕ, ನೃತ್ಯಾದಿಗಳನ್ನು ಇಷ್ಟಪಡುತ್ತಿದ್ದರು. ಅವನ್ನು ರೂಢಿಸಿಕೊಂಡು
ಆಡಿಪಾಡಿ, ಕೇಳಿ ಆನಂದಿಸುತ್ತಿದ್ದರು. ದು ಆರ್ತೆಬಾರ್ಬೋಸಾ ಎಂಬ ಪ್ರವಾ
ಕ್ರಿ.ಶ. 1521-22 ರಲ್ಲಿ ಕರ್ನಾಟಕಕ್ಕೆ ಬಂದವನು, ಇಲ್ಲಿಯ ಸ್ತ್ರೀಯರು ನೃತ್ಯದ
ಎತ್ತಿದ ಕೈ, ನಾನಾತರದ ವಾದ್ಯಗಳನ್ನು ನುಡಿಸುತ್ತ ಹಾಡುತ್ತಾರೆ. ಅಲ್ಲದೇ ವಿಧವಿ
ಆಟ-ಪಾಟಗಳನ್ನು ಆಡಬಲ್ಲವರೆಂಬುದನ್ನು ಗಮನಿಸಿದ್ದ. ದೈನಂದಿನ ಜೀವನದಲ್ಲಿ
ಬಾರ್ಬೋಸಾ ಊರಲ್ಲಿ ಓಡಾಡುವಾಗ ನೋಡಿದ ನೋಟಗಳಾಗಿದ್ದವು ಇವ
ಆತನ ಬಳಿಕ ಸರಿಯಾಗಿ ನೂರುವರ್ಷಗಳ ತರುವಾಯ ಕರ್ನಾಟಕದ ಕರಾವ
ಮತ್ತು ಕೆಳದಿ ಸಂಸ್ಥಾನದ ಭಾಗವನ್ನೆಲ್ಲ ಸಂಚರಿಸಿದ ಪೀಟ್ರೊಡೆಲ್ಲಾವಾಲೆಯು
ತನ್ನ ಪ್ರವಾಸಾನುಭವಗಳಲ್ಲಿ ಜನರ ಆಟ-ಪಾಟಗಳ ಕುರಿತು ಬರೆದಿದ್ದಾನೆ. ಗೌ
ಹಬ್ಬದ ಸಂದರ್ಭದಲ್ಲಿ, ಇಕ್ಕೇರಿ ಬಳಿ ಹುಡುಗಿಯರೆಲ್ಲ ರೇಶ್ಮೆ ಬಟ್ಟೆ ಉಟ
ತಲೆತುಂಬ ಹೂಮುಡಿದು, ಡೋಲು ಮತ್ತು ಇತರ ವಾದ್ಯಗಳ ಜೊ
ಕೋಲುಹಾಕುತ್ತ ಹಾಡುತ್ತ ಬೀದಿಗಳಲ್ಲಿ ಹೊರಟಿದ್ದರು. ಒಬ್ಬಳು ಹಾಡಿದ
ಇತರರು ಕೋಲೆ, ಕೋಲೆ, ಕೋಲೆ, ಎಂದು ಧ್ವನಿಗೂಡಿಸುತ್ತ ಕಾಲಿನ ಹೆಜ್ಜೆ
ಸರಿಯಾಗಿ ಕೋಲು ಹಾಕುತ್ತ ಸಾಗುತ್ತಿದ್ದರು. ಅದೇ ಸಂಜೆ, ಸಾರ್ವಜನಿಕರಿ
ಪ್ರವೇಶವಿದ್ದ ರಾಜೋದ್ಯಾನದಲ್ಲಿ ಕೋಲಾಟದ ತಂಡವನ್ನು ಆತ ನೋಡಿದ
ಜೊತೆಗೆ ಹಾಡುವ, ನರ್ತಿಸುವ ದೇವದಾಸಿಯರೂ ಅಲ್ಲಿದ್ದು ತುಂಬ ಸೊಗಸಾ
ನರ್ತಿಸಿದ್ದನ್ನು ಹೇಳಿದ್ದಾನೆ. ಆತ ಗಮನಿಸಿದಂತೆ ಬೇರೆ ಬೇರೆ ಊರುಗಳ
ವಿಶೇಷ ಸಂದರ್ಭಗಳಲ್ಲಿ ಅಂದರೆ, ಹಬ್ಬ, ರಥೋತ್ಸವಗಳಲ್ಲಿ ಅಲ್ಲದೇ
ರಾಯಭಾರಿಗಳನ್ನು ಸ್ವಾಗತಿಸುವಾಗ ಆಸ್ಥಾನಕ್ಕೆ ಬರಮಾಡಿಕೊಳ್ಳುವಾಗ, ಅಥವ
ವಿದೇಶೀಯರಿಗೆ ಮನರಂಜನೆ ಒದಗಿಸುವಾಗಲೆಲ್ಲ ಸಂಗೀತ-ನೃತ್ಯಗಳ ಏರ್ಪಾ
ಇರುತ್ತಿತ್ತು.

ಹಂಪಿಯ ಮಹಾನವಮಿಯ ದಿಬ್ಬದ ಶಿಲಾಮಂಟಪದ ಸುತ್ತಲೂ ಕೋ
ಹಾಕುತ್ತ ಬಗೆ ಬಗೆಯಲ್ಲಿ ಮೈಮಣಿಸಿ ಕಸರತ್ತು ಮಾಡುತ್ತಿದ್ದ ಸ್ತ್ರೀ ವಿಗ್ರಹಗಳ
ಕಂಡರಿಸಲಾಗಿದೆ. ನೃತ್ಯ-ನಾಟ್ಯಗಳಿಗೆ ಕಡಿಮೆಯಿಲ್ಲದ ವೈವಿಧ್ಯದಿಂದ ಅಂದ
ಕೋಲಾಟ ಮೆರೆಯುತ್ತಿತ್ತು. ಈ ಅಂಗವಿನ್ಯಾಸ, ನಾಟ್ಯಗತಿಯ ಕೋಲಾಟವ

ಸಂಗೀತ, ವಾದ್ಯ, ತಾಳಗಳ ಹಿನ್ನೆಲೆ ಹೊಂದಿ ಕಿಂಕಿಣಿ, ಗೆಜ್ಜೆಗಳ ನಾದವನ್ನೂ ಹೊಂದಿರುತ್ತಿತ್ತಾದ್ದರಿಂದ ಅದ್ಭುತ ಆಟವಾಗಿ ಪರಿಣಮಿಸಿತ್ತು.

ಮನೆವಾಳ್ತೆಯಲ್ಲಿ ಮುಳುಗಿರುತ್ತಿದ್ದ ಗೃಹಿಣಿಯರೂ ತಮ್ಮ ತಮ್ಮ ಸೀಮಿತ ವರ್ತುಳಗಳಲ್ಲಿಯೇ ಹಾಡು, ನೃತ್ಯ, ಪರಿಹಾಸ-ವಿನೋದಗಳ ಪ್ರಕಾರಗಳನ್ನು ಕೈಕೊಂಡಿರುತ್ತಿದ್ದರು. ಹಬ್ಬ, ಹರಿದಿನಗಳು, ಆರತಕ್ಷತೆ ಪ್ರಸಂಗಗಳು, ಅವರಿಗೆ ಒಟ್ಟಾಗಿ ಆನಂದಿಸಲು ಅವಕಾಶ ಕೊಡುತ್ತಿದ್ದವು. ಪುರಂದರದಾಸರ ಕೀರ್ತನೆಯೊಂದು, ಬಹುಶಃ ಕೃಷ್ಣಾಷ್ಟಮಿಯ ಸಂದರ್ಭದಲ್ಲಿ ಹೆಂಗಸರೆಲ್ಲ ಹಾಡುತ್ತ, ನಲಿಯುತ್ತಿದ್ದ ಸಂದರ್ಭವೊಂದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಮಂಗಳನಾಮವನ್ನು ಹಾಡುತ್ತ ಚಪ್ಪಾಳೆಯಿಕ್ಕುತ್ತ ತಂಡ ತಂಡದಲ್ಲಿ ನೆರೆದು ಹಾಡುತ್ತಿದ್ದರು. ಅವರಲ್ಲಿ ಹಲವರಿಗೆ ಮಲ್ಹಾರಿ, ಭೈರವಿ, ಸಾರಂಗಿ, ದೇಶಿ, ಗುಂಡಕ್ರಿಯೆ, ಗುರ್ಜರಿ, ಕಲ್ಯಾಣಿ ರಾಗಗಳು ಗೊತ್ತಿದ್ದವು. ತಿತ್ತಿರಿ, ಮೌಳಿ, (ಮುಹರಿ, ಮೋರಿ, ಮುಖರಿ ಎಂದೂ ಕರೆಯುತ್ತಾರೆ) ದಂಡಿಗೆ, ಮದ್ದಳೆ, ತಾಳ ಬಾರಿಸಬಲ್ಲವರಾಗಿದ್ದರು. ಶಂಖ ಊದುವವರಿದ್ದರು. ಇವಾವನ್ನು ನುಡಿಸಲಾಗದವರು ಚಪ್ಪಾಳೆ ಹಾಕುತ್ತ ಹಾಡುಗಳಲ್ಲಿ ಪಾಲುಗೊಳ್ಳುತ್ತಿದ್ದರು.

ಸಾಂಸಾರಿಕ ಚಿತ್ರಗಳನ್ನು ಹಾಡುಗಳಲ್ಲಿ ಪಡಿಮೂಡಿಸುವಲ್ಲಿ ಪುರಂದರ ದಾಸರು ಎತ್ತಿದಕೈ. ಈ ವರ್ಣನೆಯಾದರೂ ಕೇವಲ ಕಲ್ಪನೆಯಿರಲಾರದು. ಅಂದಿನ ಹೆಚ್ಚಿನ ಮಹಿಳೆಯರು ಇಂದಿನಂಥ ಅಕ್ಷರಾಭ್ಯಾಸ-ಶಾಲಾಶಿಕ್ಷಣಗಳಿಂದ ವಂಚಿತರಾದರೂ, ಸಂಗೀತ, ಸಾಮೂಹಿಕ ಗೀತ, ವಾದ್ಯಗಳನ್ನು ನುಡಿಸುವದು ಭಕ್ತಿರಚನೆಗಳನ್ನು ಹಾಡುವದು, ಕಾವ್ಯಪಠನ/ಪುರಾಣವಾಚನಗಳಲ್ಲಿ, ಭಜನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಸಾರ್ವಜನಿಕ, ಅಥವಾ ಬಹಿರಂಗ ಸಭೆಗಳಲ್ಲಿ ಗೃಹಿಣಿಯರ ಕಲಾಭಿವ್ಯಕ್ತಿಗೆ ನಿರ್ಬಂಧವಿದ್ದರೂ, ವಿವಾಹಾದಿ ಸಂದರ್ಭಗಳು, ಪೂಜಾರತಿ, ರಥೋತ್ಸವ, ಜಾತ್ರೆ, ಹಬ್ಬ ಹುಣ್ಣಿಮೆಗಳು ಸ್ತ್ರೀವೃಂದಕ್ಕೆ ಒಟ್ಟಾಗಲು ಅವಕಾಶ ಕಲ್ಪಿಸಿ ಕೊಡುತ್ತಿದ್ದವು. ಇನ್ನು, ಕೇವಲ ಸ್ತ್ರೀ ಸಮೂಹವೇ ಪ್ರೇಕ್ಷಕರೂ, ಪಾತ್ರಧಾರಿಗಳೂ, ಹಾಡುವವರೂ, ಕುಣಿಯುವವ್ರೂ ಅದಾಗಿನ ಮುಕ್ತ ವಾತಾವರಣ ಲಭಿಸಿದಾಗ ಕೇಳಬೇಕೇ? ಸಾಮೂಹಿಕವಾಗಿ ಹಾಡುತ್ತ, ವಾದ್ಯನುಡಿಸುತ್ತ ಭಕ್ತಿ ಪರವಶತೆಯ ಕ್ಷಣಗಳನ್ನು ಅವರಿಂದ ಯಾರೂ ಕಿತ್ತುಕೊಳ್ಳುವ ಪ್ರಸಂಗ ಬರುತ್ತಿರಲಿಲ್ಲವಲ್ಲ ಸದ್ಯ?

ಈಗಿನ ಸಮಾಜದಲ್ಲಿ ತೀರ ಕೆಳಗಿನ ಸ್ತರದಲ್ಲಿ ಜೀವನ ಕಳೆದರೂ ಹಿಂ ನಾನಾ ಕಸರತ್ತುಗಳಿಂದ, ನಂಬಲಸಾಧ್ಯವಾದ ಶರೀರದ ಚುರುಕು, ತೋ ತಪ್ಪದ ಅತ್ಯಂತ ನಾಜೂಕಿನ ಮತ್ತು ಅಪಾಯಕಾರಿ ಲಾಗು ಲವಣೆಗಳಿ ಜನರಿಗೆ ವಿಶೇಷ ಮನರಂಜನೆ ಒದಗಿಸುತ್ತಿದ್ದ ಡೊಂಬತಿಯರನ್ನು ಸಂದರ್ಭದಲ್ಲಿ ನೆನೆಸಿಕೊಳ್ಳಲೇಬೇಕು! ವಿದೇಶೀಯರೆಲ್ಲ ಅವರ ಕಸರತ್ತುಗಳ ಕಂಡು ವಿಸ್ಮಯ ಪಟ್ಟಂತೆ, ಪ್ರಾಚೀನಕವಿಗಳಿಗೂ ವರ್ಣನಾವಸ್ತುವ ಒದಗಿಸಬಲ್ಲ ಕನ್ನಡನಾಡಿನ ಡೊಂಬತಿಯರು ಅಪ್ರತಿಮರಾಗಿದ್ದರು.

ಗಣೆಯ ತುದಿಯಲಿ ಶಸ್ತ್ರವನಿಟ್ಟು ಉಂಗುಟದ
ಕೊನೆಯೂರಿ ಪುಟವೆದ್ದು ಲಾಗುಲವಣೆಯ ಕೊಂಡು
ಮಿಣೆಯ ಹುರಿಗಳ ಮೇಲೆ ಮರಕಾಲಕಟ್ಟಿ ದುವ್ವಾಳಿಸುತ
ಡೊಂಬತಿಯ
ಮಣಿದು ಹಿಂಗರಣಮನೆ ಕೊಂಡು ವೊರೆಯುಗದಲಗ!
ಪಣೆಯಲಿ, ಗುಂಜಿಯುಗ್ರ ದೊಳಿಟ್ಟು ಖೋಯೆನುತ
ತ್ರಿಣಯನಾಪರರರೂಪನೇ ನೋಡು ನೋಡೆಂದು
ಡೋಳು ಬಡೆದರು ಡೊಂಬರು.

ಗಳುವಿನ ತುದಿಯಲ್ಲಿ ಶಸ್ತ್ರವನ್ನು ಇಟ್ಟು, ಅದರ ತುದಿಯಲ್ಲಿ ಉಂಗು ಕೊನೆಲೂರಿ, ಲಾಗಹಾಕುವ, ಮರಗಾಲು ಕಟ್ಟಿಕೊಂಡು ಹಗ್ಗದ ಮೇ ನಡೆದಾಡುವ, ಹೊಯ್ದಾಡುವ, ಹಗ್ಗದ ಮೇಲೆಯೇ ಹಿಮ್ಮೊಗವಾಗಿ ಮಣಿ ನಿಲ್ಲಿಸಿದ ಶಸ್ತ್ರದ ತುದಿಗೆ ಗುಲಗಂಜಿಯಂಥ ತೀರ ಚಿಕ್ಕ ಮಣಿಯನ್ನು ಬೀಳ ಇಟ್ಟು, ತಾವೂ ಬೀಳದಂತೆ ಜಾಗ್ರತೆವಹಿಸಬೇಕಾದರೆ, ಅವರಿಗೆ ಎಷ್ಟೊಂ ಸಮತೋಲ, ಏಕಾಗ್ರತೆಗಳನ್ನು ಸಾಧಿಸಬೇಕಾಗಿತ್ತು ಎಂಬುವರ ಕ ಬರುತ್ತದೆ! ಡೊಂಬರಿಗೆ ರಾಜ-ಪ್ರಜರಿಂದ ಕೂಡಿಯೇ ಮನ್ನಣೆ ಸಲ್ಲುತ್ತಿ 'ಮಾನಸೋಲ್ಲಾಸ'ದಲ್ಲಿ ನಟ, ನರ್ತಕಿಯರ ಜೊತೆಗೆ 'ಕೊಲ್ಲಟಿ (ಕೊಲ್ಲಟಿಗಳು, ಡೊಂಬಳು)ಳ ಉಲ್ಲೇಖವೂ ಇರುವದರಿಂದ, ಸರ್ಕಸ್ ಕಾ ಯುಗದಲ್ಲಿ ತಂಡಕಟ್ಟಿಕೊಂಡು ಊರೂರು ತಿರುಗುತ್ತಿದ್ದ ಡೊಂಬ ಡೊಂಬತಿಯರು ವಿಶೇಷ ಆಕರ್ಷಣೆಯಾಗಿದ್ದರೆ ಆಶ್ಚರ್ಯವಿಲ್ಲ. ಎಲ್ಲಕ್ಕನ ಡೊಂಬತಿ, ಗಳುವಿನ ಕಸರತ್ತು ಮಾಡುತ್ತಿದ್ದಾಗ ಬಿದ್ದು ತತ್‌ಕ್ಷಣ ಪ್ರಾಣಬಿಟ್ಟ

ಅವಳಿಗೆ ಸಡಿಲಿಸಿದ ವೀರಗಲ್ಲು, ಅಂದಿನವರು, ಕಲೆಗಾಗಿ ದೇಹ ಮುಡುಪಿಟ್ಟ ಜೀವಗಳನ್ನು ಮರೆಯುತ್ತಿರಲಿಲ್ಲವೆಂಬ ಸಂದೇಶವನ್ನು ಸಾರುತ್ತ ನಿಂತಿದೆ.

ವೇಶ್ಯೆಯರು : ಸಂಗೀತ, ನೃತ್ಯ, ನಾಟಕಾದಿಗಳನ್ನು ತಲೆತಲಾಂತರಗಳಿಂದ ಮೈಗೂಡಿಸಿಕೊಂಡು, ಸಮಾಜದ ಕಣ್ಣು ಕಿವಿಗಳಿಗೆ ಆನಂದವನ್ನೂ ನಿತ್ಯಜೀವನದಲ್ಲಿ ಮೆರುಗನ್ನೂ ನಿರಂತರವಾಗಿ ಕೊಡುತ್ತ ಬಂದ ಕಲಾವಿದೆಯರ ಕೊಡುಗೆಯನ್ನು ಉಲ್ಲೇಖಿಸದಿದ್ದರೆ ಈ ಬರಹ ಪೂರ್ಣವಾಗಲಾರದು! ಕಲೆಗಳಿಗೆ ರಾಜಾಶ್ರಯವಿದ್ದು ಹಲವು ಶತಮಾನಗಳ ಕಾಲ ರಾಣಿಯರೂ ಈ ಕಲೆಗಳಲ್ಲಿ ಪಾರಂಗತೆಯರೆಂದು ಅಭಿಮಾನಪಟ್ಟರೂ, ಮುಸ್ಲಿಂದಾಳಿಗಳ ನಂತರ, ಪರಿಸ್ಥಿತಿ ಬದಲಾಗುತ್ತ, ಕೆಲವೇ ವರ್ಗಗಳಿಗೆ ಕಲಾಪ್ರದರ್ಶನ ಮತ್ತು ಕಲಾಜೀವನಗಳು ಸೀಮಿತಗೊಂಡವು. ಪಾತ್ರಜಗದಳೆ, ಪಾತ್ರಚೂಡಾಮಣಿ ಎಂಬ ಬಿರುದು ತಳೆದ ರಾಣಿಯರ ನಾಡಿನಲ್ಲಿ "ಪಾತ್ರದವರು" ಎಂದರೆ (ಹಾದರ?) ವೇಶ್ಯೆಯರು ಎಂಬ ಪರ್ಯಾಯಾರ್ಥ ಹೊರಡುವಂತೆ ಆಯಿತು. ಕನ್ನಡ ಕಾವ್ಯಗಳ ಅಷ್ಟಾದಶ ವರ್ಣನೆಗಳಲ್ಲಿ ವೇಶ್ಯಾವಿಹಾರದ ವರ್ಣನೆ ತಪ್ಪದೇ ಬರುತ್ತದೆ. ಹೆಚ್ಚಿನವು ಕವಿಸಮಯ ಹೊಂದಿದ್ದರೂ ಕೆಲವೊಂದು, ಅಂದಿನ ಕವಿಗಳಿಗೆ ಕಂಡ, ಪರಿಚಿತವಿದ್ದ ಚಿತ್ರಗಳನ್ನೂ ಹೊಂದಿರುವದುಂಟು. ವಾಸ್ತವಿಕವಿರಬಹುದಾದ ಅಂಶಗಳನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಬೇಕಾಗುತ್ತದೆ. ಇಂಥ ಅಂಶಗಳೊಂದಿಗೆ ಶಾಸನಗಳ ಮಾಹಿತಿ ಮತ್ತು ದೇವಾಲಯಗಳ ಭಿತ್ತಿಚಿತ್ರ, ಶಿಲ್ಪಗಳ ತೌಲನಿಕ ಅಧ್ಯಯನ ಮಾಡಿದಾಗ ಅಂದಿನ ವೇಶ್ಯಾವರ್ಗದವರು ರೂಢಿಸಿಕೊಂಡ ಕಲಾಜೀವನದ ಇಣುಕು ನೋಟಗಳು ದೊರೆಯುತ್ತವೆ. ಪುರುಷರನ್ನು ಆಕರ್ಷಿಸುವ ಹಲವಾರು ಕಲೆಗಳು ಇವರಿಗೆ ಕರಗತವಿದ್ದವು.

ಶತಮಾನಗಳಿಂದ ಹಾಡುಗಾರಿಕೆ, ವಾದ್ಯವಾದನ, ನೃತ್ಯ-ನಾಟಕಗಳೆಲ್ಲ ವಾರಾಂಗನೆಯರಿಗೆ ಮೀಸಲಾಗಿದ್ದು ನಂತರವೂ ಈ ಸಂಪ್ರದಾಯ ಮುಂದುವರೆಯಿತು. ಇವುಗಳ ಹೊಸಪ್ರಯೋಗಗಳು ಸಂಗೀತಗೋಷ್ಠಿ, ವಾದ್ಯಗೋಷ್ಠಿ, ನಾಟ್ಯಗೋಷ್ಠಿಗಳ ರೂಪದಲ್ಲಿ ಅವರ ಮನೆಗಳಲ್ಲೇ ಏರ್ಪಡುತ್ತಿದ್ದವು. ಬಗೆ ಬಗೆಯ ವಾದ್ಯಗಳನ್ನು ಅವರು ನುಡಿಸಬಲ್ಲವರಾಗಿದ್ದು, ಹಲವು ಭಾಷೆಗಳನ್ನೂ, ಮುಖ್ಯವಾಗಿ ಸಂಸ್ಕೃತ, ತೆಲುಗು, ತಮಿಳು ಭಾಷೆಗಳನ್ನು

ಕನ್ನಡದ ಜೊತೆಗೆ ಅಭ್ಯಸಿಸುತ್ತಿದ್ದರು. ಸಂಗೀತ ಶಾಸ್ತ್ರ ಗ್ರಂಥಗಳು, ಜಯದೇವ ಗೀತಗೋವಿಂದ ಮೊದಲಾದ ಸಂಗೀತ ನೃತ್ಯಪ್ರಧಾನ ಕಾವ್ಯಗಳನ್ನು ಪಂಡಿತರಿಂ ಕಲಿತುಕೊಳ್ಳುತ್ತಿದ್ದರು. ಪೋಷಕವರ್ಗವು, ಉನ್ನತ ಮಟ್ಟದ ಹೊಸಹೊಸಕಲ ಪ್ರಯೋಗಗಳನ್ನು ಬಯಸುತ್ತಿತ್ತಾದ್ದರಿಂದ, ಅವರು ನಿರಂತರ ಶ್ರಮಿ ಬೇಕಾಗುತ್ತಿತ್ತು.

ತಿರುಮಲಾರ್ಯ ವಿರಚಿತ, 'ಚಿಕ್ಕದೇವರಾಯ ವಿಜಯ'ದಲ್ಲಿ ಬರು ವೇಶ್ಯಾವಾಟಿಕೆಯ ವರ್ಣನೆ, ವಾಸ್ತವಿಕವಾದದ್ದು, ಎಂಬ ಅಭಿಪ್ರಾಯವಿದ ಸ್ವತಃ ಅರಸು ಚಿಕ್ಕದೇವರಾಯ ಮತ್ತು ಸ್ನೇಹಿತ ಕವಿ ತಿರುಮಲಾರ್ಯನ ಕಂದರ್ಪ- ಕಲಾಧರ, ಎಂಬ ಹೆಸರು ಹೊಂದಿ, ಇತರ ಪರಿವಾರದ ಜೊತೆ ಛದ್ಮವೇಷದಿಂದ ವೇಶ್ಯಾವಾಟಿಕೆಗೆ ಹೋದಾಗಿನ ಪ್ರಸಂಗ, ನಮಗೆ ಪ್ರಸ್ತು ವೆನಿಸುತ್ತದೆ. ಅವರು ಅಲ್ಲಿ ತಲುಪಿದಾಗ 'ಒಳಗರುಡಿ'ಯಲ್ಲಿ (ಬಹುಶಃ ಹಿಂದಿ 'ನಾಗವಾಸ') ಚಿಕ್ಕವಯಸ್ಸಿನ ವೇಶ್ಯೆಯರು 'ಪದಮೇಳ'ದ ಅಭ್ಯಾಸ ನಡೆಸಿದ್ದರು ಮುಂದಾಗಿ ತಲುಪಿಸಿದ, ಒಡೆಯರು ಬರಲಿದ್ದಾರೆ, ಎಂಬ ಸೂಚನೆಯನ ಬಳಸು ಮಾತಿನಿಂದ ವಸಂತಕನೆಂಬ ವಿದೂಷಕನು ಕೊಡಮಾಡಿದಾ ಇಂಗಿತಾರ್ಥ ಅರಿಯದ ಅವರೆಲ್ಲ, ನಾವು ಮೊದಲು ಮೇಳ ಗೊಂಡ ಹಾಡುತ್ತೇವೆ ಎಂದು ತಮ್ಮ ತಮ್ಮ ವಾದ್ಯಗಳನ್ನು ತರಲು ಓಡುತ್ತಾ ಕೊಳಲು,ತಾಳ, ಮದ್ದಳೆಗಳನ್ನು ತಂದು ಬಾರಿಸಲಾರಂಭಿಸುತ್ತಾರೆ. ಆಮೇ 'ಸಿಂಗರವಾಡು'ಗಳನ್ನು ಪ್ರಾರಂಭಿಸುತ್ತಾರೆ. ಅಲ್ಲಿಯ ಇನ್ನೊಂದು ಮನೆಯ 'ಕಾಮಂಗೆ ಜಯಮಕ್ಕೆ' ಎಂಬ ಸಾಂಗತ್ಯದ ಬಣ್ಣವಾಡು, ವೃಂದಗಾನದಲ್ಲಿ ಕೇ ಬರುತ್ತದೆ. ಸಾಂಗತ್ಯವನ್ನು ಎಣೆವೀಣೆ ವೇಣುಗಳನ್ನು ಬಾಜಿಸಿ ಹಾಡುತ್ತಿದ್ದರು ಸಾಂಗತ್ಯ ಪ್ರಕಾರದಲ್ಲಿ ಹದಿನೇಳನೆಯ ಶತಮಾನದಲ್ಲಿ ಹಲವಾರು ಕಾವ್ಯಗಳ ರಚನೆಯಾಗಲಿಕ್ಕೆ, ಮತ್ತು ವೇಶ್ಯೆಯರೆಲ್ಲ ಅಂಥ ಕೃತಿಗಳನ್ನು ವೀಣೆ-ಕೊಳಲುಗ ಹಿಮ್ಮೇಳದಲ್ಲಿ ವೃಂದಗಾನದಲ್ಲಿ ಹಾಡಿ ಜನಪ್ರಿಯಗೊಳಿಸಲಿಕ್ಕೆ ರಾಜಾಶ್ರಯವ ಕಾರಣವೆಂದು ತೋರುತ್ತದೆ.

ಚಿಕದೇವರಾಜನು ಸಂಗೀತಪ್ರಿಯನಿದ್ದು, ವೀಣೆಯಲ್ಲಿ ಆತನಿಗೆ ವಿಶೇ ಶ್ರಮವಿತ್ತು. ಕಲಾವತಿಯೆಂಬ ವೇಶ್ಯೆಯಲ್ಲಿ ಆತ ಅನುರಕ್ತನಾಗಿದ್ದ. ತನ್ನ ವೀಣೆ ಕಲಾವತಿಯೆಂದು ಹೆಸರಿಟ್ಟಿದ್ದ.

ವೇಶ್ಯಾವಾಟಿಕೆಯ ಸುಂದರ ಮತ್ತು ವಿದ್ರೂಪದ ಚಿತ್ರಗಳೆರಡೂ ಅಪೂರ್ಣವಾಗಿರುವ 'ಚಿಕದೇವರಾಯ ವಿಜಯ' ಕೃತಿಯಲ್ಲಿವೆ. ಕಲೆಯೊಂದನ್ನೇ ಉಪಜೀವನದ ಮಾರ್ಗವಾಗಿ ಕೈಕೊಳ್ಳಲು ಅಸಾಧ್ಯವಾದ ವೇಶ್ಯಾಕುಲಕ್ಕೆ ಧನಾರ್ಜನೆಯೂ ಮುಖ್ಯವಾಗಿದ್ದರಿಂದ ವೃತ್ತಿಗೆ ಪೂರಕವಾದ ಎಷ್ಟೋ ಇತರ ವಿಷಯಗಳನ್ನು ಅವರು ರೂಢಿಸಿಕೊಳ್ಳಬೇಕಾಗುತ್ತಿತ್ತು ಮತ್ತು ಆ ಮೂಲಕ ಹಣ ಗಳಿಸಬೇಕಾಗುತ್ತಿತ್ತು.

ಮೋಹನ ತರಂಗಿಣಿ, ಪದ್ಮರಾಜಪುರಾಣ, ಸೋಮನಾಥಚಾರಿತ್ರ್ಯಗಳು ವೇಶ್ಯೆಯರ ಕಲಾಜೀವನದ ಬಗ್ಗೆ ಕೊಂಚ ಮಾಹಿತಿ ಕೊಡುತ್ತವೆ. ಅವರು ನುಡಿಸುತ್ತಿದ್ದ ವಾದ್ಯಗಳು, ರೂಢಿಸಿಕೊಳ್ಳುತ್ತಿದ್ದ ವಿಚಾರಗಳು, ಬೆಳೆಸಿಕೊಂಡಿರುತ್ತಿದ್ದ ಜೀವನ ದೃಷ್ಟಿಕೋನಗಳನ್ನು ಪರಿಚಯಿಸುತ್ತವೆ. ಬಸವಪುರಾಣದಲ್ಲಿ ಮಹಿಳಾವಾದ್ಯವೃಂದದ ಸಿದ್ಧತೆಯ ಚಿತ್ರವೊಂದಿದೆ. ಅದರ ಮುಖ್ಯಸ್ಥೆ, "ಮದ್ದಳೆಯವರೇ! ವಾದ್ಯಗಳನ್ನು ಶ್ರುತಿಗೊಳಿಸಿ, ಜೊತೆ ವಾದ್ಯಗಾರರೇ, ಅನುವಾಗಿರಿ, ಮೇಳದವರೇ ಸಜ್ಜಾಗಿರಿ, ಮಹದೇವಿ, ಕಹಳೆಯನ್ನು ಹಿಡಿ, ದ್ರುಪದವನ್ನು ವೊಯ್ ಎಂದು ನುಡಿಸಿ, ಲಿಂಗಾದೇವಿ ಕೊಳಲು ನುಡಿಸು, ಚಂಗಳೆ, ತಾಳ ಹಿಡಿ ಎಂದೆಲ್ಲ ನಿರ್ದೇಶಿಸುತ್ತಿದ್ದಳು. 'ದ್ರುಪದ'ವು ಒಂದು ತಂತಿವಾದ್ಯವಿದ್ದಿರಬಹುದಾಗಿದೆ.

ಹಿಂದೆ ಕರ್ನಾಟಕದ ಭಾಗವೇ ಆಗಿದ್ದ ಔರಂಗಾಬಾದದ ಸಮೀಪದ ಪೀತಲ್ ಕೋರಾ ಗುಹಾಲಯದಲ್ಲಿ ಮಹಿಳಾ ವಾದ್ಯವೃಂದದ ಶಿಲ್ಪ ಚಿತ್ರವಿದೆ. ಅರಮನೆಯಿರಲಿ, ಸೂಳೆಗೇರಿಯಿರಲಿ, ದೇವಸ್ಥಾನವಿರಲಿ, ಒಲಗವಿರಲಿ, ಲಲಿತಕಲೆಗಳನ್ನು ಕ್ರಮವಾಗಿ ಅಭ್ಯಸಿಸಿ, ರೂಢಿಸಿಕೊಂಡು, ಸಮಾಜದ ಅವಶ್ಯಕತೆಗಳಿಗನುಸಾರವಾಗಿ ಜನಕೋಟಿಗೆ ತಲುಪಿಸಬೇಕಾದ ಮುಖ್ಯ ಸಂದೇಶವನ್ನೂ ಈ ವರ್ಗದ ಕೆಲವರಾದರೂ ಮರೆತಿರಲಿಲ್ಲ. ಅದೆಂದರೆ ಧರ್ಮಶ್ರದ್ಧೆ, ದೈವಭಕ್ತಿ ಮತ್ತು ಯಾವುದೇ ಜನ್ಮವು ವಿಧಿಲಿಖಿತ. ಸನ್ಮಾರ್ಗವು ಮೋಕ್ಷಕ್ಕೆ ದಾರಿಎಂಬ ಅಚಲವಾದ ನಂಬಿಕೆ. ಸಾಧ್ಯವಿದ್ದ ದಾನಧರ್ಮಾದಿಗಳನ್ನು ಕೈಕೊಂಡು ಪುಣ್ಯಪಡೆಯಲು ಯತ್ನಿಸುವ ವೇಶ್ಯೆಯರೂ ಇರುತ್ತಿದ್ದರು.

ಸಮಾಜದ ಋಣವನ್ನು ತೀರಿಸಲು ಇನ್ನಿಲ್ಲದಂತೆ ಯತ್ನಿಸಿದ ಅನೇಕ ವಾರಾಂಗನೆಯರು ಈ ನಾಡಿನ ಚರಿತ್ರೆಯಲ್ಲಿ ಕಂಡುಬರುತ್ತಾರೆ.

ದೇವದಾಸಿ:- ವೇಶ್ಯೆ, ವಾರನಾರಿ. ವಾರಾಂಗನೆ, ಪಣ್ಯಾಂಗನೆ ಸೂಳೆಯರಿಂದ ಭಿನ್ನವಾಗಿದ್ದ ವರ್ಗ ದೇವದಾಸಿಯರದು. ಆದರೂ ಕರ್ನಾಟಕದ ಬಹಳಷ್ಟು ಶಾಸನಗಳಲ್ಲಿ ದೇವಾಲಯದ ಸೇವಕ ವರ್ಗದಲ್ಲಿದ್ದ ಇವರನ್ನೂ ಸೂಳೆಯರು ಎಂದು ಕರೆದಿರುವದರಿಂದ, ಈ ಎರಡೂ ವರ್ಗದಲ್ಲಿದ್ದ ಅಂತರವನ್ನು ಗಮನಿಸಬೇಕಾಗಿದೆ ತೀರ ಪ್ರಾಚೀನಕಾಲದಲ್ಲಿ ನೃತ್ಯ-ಸಂಗೀತಗಳನ್ನು ರೂಢಿಸಿಕೊಂಡ ದಾಸಿಯರು, ಮಾತ್ರ ಇದ್ದರೆ, ಕ್ರಿಸ್ತಶಕದ ಆರೆಂಟನೆ ಶತಮಾನಗಳಲ್ಲಿ ದೇವದಾಸಿಗಳ ಆವಿರ್ಭಾವವು, ಭಾರತೀಯರ ಮೂರ್ತಿಪೂಜೆಯ ನಂಬಿಕೆಯು ವಿಕಟ ರೂಪದಲ್ಲಿ ಸ್ಥಿರವಾಗಿಬಿಟ್ಟಿತು. ದೇವಸ್ಥಾನಗಳ, ಮೂರ್ತಿ ಪೂಜೆಯ ಪ್ರಾಶಸ್ತ್ಯ ಹೆಚ್ಚಿದಂತೆ, ಅರಸರಿಗೆ ಪ್ರತಿಷ್ಠಿತವರ್ಗಕ್ಕೆ ಮಾತ್ರ ಲಭ್ಯವಿದ್ದ ಆದರೆ ಮಾನವ ಮಾತ್ರರೆಲ್ಲರೂ ಬಯಸುತ್ತಿದ್ದ ಭೋಗೋಪಭೋಗಗಳನ್ನೆಲ್ಲ ದೇವಾಧಿದೇವತೆಗಳಿಗೆ ಕೊಡಮಾಡುವ ಪದ್ಧತಿ ಬೆಳೆಯಿತು. ಸ್ನಾನ, ಸುಗಂಧಾದಿ ವಿಲೇಪನ, ಪುಷ್ಪ, ವಸ್ತ್ರ, ಆಭರಣಾದಿಗಳ ಮೂಲಕ ಅರ್ಚಿಸುವ ಪೂಜಾವೈಭೋಗ, ನೈವೇದ್ಯ, ತಾಂಬೂಲ ಸಮರ್ಪಣೆಗಳು ಕಾಣಿಸಿಕೊಂಡವು. ಕ್ರಮೇಣ ದೇವತೆಗಳನ್ನು ಉಲ್ಲಸಿತಗೊಳಿಸುವದಕ್ಕಾಗಿ ಸಂಗೀತ ಸೇವೆ-ನೃತ್ಯಸೇವೆಗಳು ಸೇರ್ಪಡೆಯಾದವು. ಪುಣ್ಯ ಸಂಪಾದನೆಯೇ ಬಾಳಿನ ಆದರ್ಶವಾಗಿದ್ದ ಯುಗದಲ್ಲಿ ಅದಕ್ಕಾಗಿ ಪೈಪೋಟಿಯೂ ಸಹಜವಾಗಿ, ಉಳ್ಳವರು ದೇವರಸೇವೆಗೆ ಕಲಾವಿದೆಯರನ್ನು ಕೊಡಮಾಡಲಾರಂಭಿಸಿದರು. ಸಾಲದ್ದಕ್ಕೆ ಪುರಾಣಗಳು, ದೇವಾಲಯಗಳಿಗೆ ದೇವದಾಸಿಯರನ್ನು ಕೊಡಮಾಡುವದರಿಂದ ಸ್ವರ್ಗಲೋಕ, ಸೂರ್ಯಲೋಕಗಳಿಗೆ ಪ್ರವೇಶವು ಖಾತ್ರಿಯೆಂದು ಬೇರೆ ಸಾರಿದ್ದರಿಂದ ಭರತಖಂಡದ ಉದ್ದಗಲಕ್ಕೂ ಈ ಪದ್ಧತಿ ದೊಡ್ಡ ಪ್ರಮಾಣದಲ್ಲಿ ಆಚರಣೆಗೆ ಬಂದಿತು. ಮುಸ್ಲಿಂ ಆಕ್ರಮಣದ ಪ್ರಾರಂಭಕಾಲದಲ್ಲಿ ಗುಜರಾಥದ ಸೋಮನಾಥ ದೇವಾಲಯದಲ್ಲಿ ಐದುನೂರು ನರ್ತಕಿಯರಿದ್ದರೆ ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ ಚೋಳರ ವೈಭವಕಾಲದಲ್ಲಿ ನಾಲ್ಕುನೂರು ನರ್ತಕಿಯರಿದ್ದರು. ಸಂಗೀತ, ನರ್ತನಾದಿಗಳಿಂದಲೇ ದೇವರ ಸೇವೆ ಮಾಡುವ ಇವರಿಗೆ ದೊಡ್ಡ ಪ್ರಮಾಣದಲ್ಲಿ ಉಂಬಳಿ ಲಭಿಸುತ್ತಿತ್ತು.

ಕರ್ನಾಟಕದಲ್ಲಿಯೂ "ವಾರವಿಲಾಸಿನೀ ವಿರಚಿತ ನೃತ್ಯ ಗೀತ ವಾದ್ಯಸೇವೆ", ಒಂಭತ್ತನೇ ಶತಮಾನದಲ್ಲಿ ಸಾಮಾನ್ಯವಾಗಿತ್ತು. ದೇವಾಲಯ

ಬಸದಿಗಳಲ್ಲಿ ಈ ಪ್ರಕಾರದ ಸೇವೆ, 'ಅಂಗ ಭೋಗ' ಹಾಗೂ 'ರಂಗಭೋಗ'ವೆಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ಇವುಗಳಲ್ಲಿಯ ಸ್ಪಷ್ಟಭೇದವನ್ನು ಗುರುತಿಸುವದು ಕಷ್ಟದ್ದಾದರೂ ಪೂಜೆ ಮಂಗಳಾರತಿಗಳ ಸಮಯದ ಕ್ಲುಪ್ತಕಾಲದಲ್ಲಿ ಹಾಡುವ ನರ್ತಿಸುವ, ದೇವತಾಸ್ತುತಿಯನ್ನು ಬಾಜಿಸುವ ಸೇವೆಯನ್ನು ಅಂಗಭೋಗವೆಂದೂ, ಛತ್ರಹಿಡಿಯುವ ಚಾಮರ ಬೀಸುವ, ಬೆಳ್ಳಿದಂಡ, ಕಲಶಗನ್ನಡಿ ಹಿಡಿಯುವ ಸೇವೆ, ರಂಗಭೋಗವೆಂದೂ ಸ್ಥೂಲವಾಗಿ ಹೇಳಬಹುದೇನೋ! ದೇವಾಲಯದ ಪೌಳಿಯಲ್ಲಿ ವರ್ತುಲಗಳಾಗಲಿ ರಂಗಮಂಟಪವಾಗಲಿ ನೃತ್ಯಕ್ಕೆ ಮೀಸಲಾಗಿರುತ್ತಿದ್ದ ಸ್ಥಳಗಳಾಗಿರುತ್ತಿದ್ದವು. ದೇವಾಲಯದ ಸೂಳೆಯರಲ್ಲಿ ಅಂಗಭೋಗದವರಿಗೆ ಸಲ್ಲುತ್ತಿದ್ದ ದಾನದ ಪ್ರಮಾಣ ಹೆಚ್ಚಿರುತ್ತಿತ್ತು. ಆದ್ದರಿಂದ ಸಂಗೀತ, ನೃತ್ಯದವರು ಕೊಂಚ ಉನ್ನತಮಟ್ಟದವರು ಎಂದು ಊಹಿಸಬಹುದು. ಕೆಲವು ಚಿಕ್ಕದೇವಸ್ಥಾನಗಳಲ್ಲಿ ಎರಡೂ ಪ್ರಕಾರದ ಸೇವೆಗೆ ಒಬ್ಬಳೇ ಇರುತ್ತಿದ್ದಳು. ಇಂಥ ದೇವಸೂಳೆಯರು ಅಥವಾ ದೇವದಾಸಿಯರು ಅರಸರ, ದಂಡನಾಯಕರು ನಿರ್ಮಿಸಿದ ದೇವಾಲಯಗಳಲ್ಲಿ ಅಂತಸ್ತಿಗೆ ತಕ್ಕದತ್ತಿಯನ್ನು ಪಡೆದು ಇತರ ಸಿಬ್ಬಂದಿಯೊಂದಿಗೆ, ಅದೇ ಆವಾರದಲ್ಲಿ ವಾಸಿಸುತ್ತಿದ್ದರು. ದೇವಾಲಯದ ಭವ್ಯತೆಗೆ ಹೊಂದುವ ಸೂಳೆಗೇರಿಗಳಿದ್ದು, ಅಲ್ಲಿ ಹಾಡುವವರು ನಟುವರು, ಮದ್ದಳೆಕಾರರು, ವಂಶಿಗಳು (ಕೊಳಲಿನವರು), ಪಾತ್ರದವರು ಸೂಳೆವಳ (ಸೂಳೆಗಳ ಬಳಗದ ಮುಖ್ಯಸ್ಥ?) ರೂ ಅಕ್ಕಪಕ್ಕದಲ್ಲಿರುತ್ತಿದ್ದರು. ಈಕೇರಿಗೆ ಹೊಂದಿ 'ನಾಗವಾಸ'ವಿದ್ದು ಅದು ದೇವದಾಸಿಯರ ಕಲಾ ತರಬೇತಿಯ ಕೇಂದ್ರವಾಗಿರುತ್ತಿತ್ತು. 'ಪ್ರಭುಲಿಂಗಲೀಲೆ'ಯ ಕವಿ, ಚಾಮರಸನ ಅಲ್ಲಮನು ಬನವಾಸಿಯ ಮಧುಕೇಶ್ವರ ದೇವಾಲಯದ ನಾಗವಾಸದ ಮದ್ದಳೆ ಕಾರನಾಗಿದ್ದ, ಎಂಬುದನ್ನು ಸ್ಮರಿಸಿಕೊಳ್ಳಬಹುದು. ಹಾಡುವ, ಕುಣಿಯುವ, ಪಾತ್ರದ ಹೆಂಗಳೆಯರಿಗೆ ದತ್ತಿಗಳಿದ್ದಂತೆ, ನಾಗವಾಸಕ್ಕೂ ದತ್ತಿಯಿರುತ್ತಿತ್ತು. ನಾಗವಾಸದ ಮೊಖರಿತಿಗೆ ಕೊಡಮಾಡಿದ ದಾನವಿದೆ. ಈಕೆ, ಬಹುಶಃ ಮುಖರಿ ಅಥವಾ ಮುಹರಿಯೆಂಬ ಊದುವಾದ್ಯವನ್ನು ನುಡಿಸುವಾಕೆ ಇರಬಹುದು.

ದೇವಾಲಯದ ಆಡಳಿತದ ರಕ್ಷೆಯಲ್ಲಿ ಇವರು ಇರುತ್ತಿದ್ದರು. ತಪೋಧನರು, ಬ್ರಹ್ಮಚಾರಿಗಳು, ವಿದ್ಯಾರ್ಥಿಗಳು, ಭಕ್ತಾದಿಗಳು ಇರುವ ಪರಿಸರದಲ್ಲಿ ಇವರುಗಳು, ನಿಗದಿತವಾದ ಸೇವೆ ಸಲ್ಲಿಸುತ್ತಿದ್ದು, ಹಬ್ಬ, ಹರಿದಿನ

ರಥೋತ್ಸವಾದಿ ಪ್ರಸಂಗಗಳಲ್ಲಿ ಆಯಾ ದೇವತಾಪುರಾಣದ ಸನ್ನಿವೇಶಗಳನ್ನು ಸಂಗೀತ, ನೃತ್ಯಕ್ಕೆ ಅಳವಡಿಸಿ ಅಭಿನಯಿಸುತ್ತಿದ್ದಿರಬಹುದು. ದೇವಾಲಯದ ಪವಿತ್ರ ವಾತಾವರಣಕ್ಕೆ ಅಪಚಾರವೆಸಗದಂತಹ ನಡತೆಯನ್ನು ದೇವದಾಸಿಯರು ಹೊಂದಿದ್ದು, ಶಿಸ್ತಿನ ನಿಯಂತ್ರಣಕ್ಕೆ ಒಳಪಟ್ಟಿದ್ದರು, ಎಂಬ ಸುಳಿವು ಹಲವು ಶಾಸನಗಳಲ್ಲಿ ದೊರೆಯುತ್ತದೆ.

ದೇವಾಲಯ, ಬಸದಿಗಳು ಹಿಂದೊಮ್ಮೆ ಊರಿನ ಧಾರ್ಮಿಕ-ಸಾಮಾಜಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಅವಕ್ಕೆ ಹೊಂದಿ ಪಾಠಶಾಲೆಗಳು ಇದ್ದಂತೆ, ಪುರಾಣವಾಚನ, ಪುಣ್ಯಕಥಾಶ್ರವಣ, ಕೇಳಿಕೆ, ಕಥಾಕಾಲಕ್ಷೇಪಗಳು, ದೇವಾಲಯದ ಆವರಣದಲ್ಲೇ ನಡೆಯುತ್ತಿದ್ದವು. ಇವುಗಳೊಂದಿಗೆ ಸಂಗೀತ, ನೃತ್ಯಗಳ ಮೂಲಕ ರಂಜನೆ-ಬೋಧನೆಗಳನ್ನು ಒದಗಿಸುವದರಲ್ಲಿ ದೇವದಾಸಿಯರ ಪಾತ್ರ ಹಿರಿದಾಗಿದೆ. ಈ ವೃತ್ತಿ ಆನುವಂಶಿಕವಾಗಿ ಬಂದು, ಕಿರಿಯರೂ ಹಿರಿಯರ ಮಾರ್ಗದರ್ಶನದಲ್ಲಿ, ನಾಗವಾಸದ ತರಬೇತಿಯಿಂದಾಗಿ, ಒಳ್ಳೆಯ ಕಲಾವಿದೆಯರಾಗಿ ರೂಪಗೊಳ್ಳುತ್ತಿದ್ದರು. ನಂತರದ ಶತಮಾನಗಳ ವೃತ್ತಿಕಲಂಕ ಇವರನ್ನು ತಟ್ಟಿರಲಿಲ್ಲ.

ಹದಿನೆಂಟು, ಹತ್ತೊಂಭತ್ತನೇ ಶತಮಾನಗಳಿಂದೀಚೆಗೆ ಕಲಾಜೀವಿಗಳಾಗಿದ್ದ ಗಣಿಕೆಯರ, ವಾರಾಂಗನೆಯರ, ದೇವದಾಸಿಯರ ಅಳಿಗಾಲ ಪ್ರಾರಂಭವಾಯಿತು. ಮೊಗಲರ ಅಳಿಗಾಲದೊಂದಿಗೆ, ಅಂತಃ ಕಲಹಗಳಿಂದ, ಆಶ್ರಯವರ್ಗಗಳ ಕೊರತೆಯೂ ತಲೆದೋರಿ, ಆರ್ಥಿಕ-ಸಾಮಾಜಿಕ ಜೀವನದಲ್ಲಿ ಏರುಪೇರು ಗಳುಂಟಾದವು. ಸುರಕ್ಷತೆ-ಪೋಷಣೆಗಳ ಅಭಾವದಲ್ಲಿ ಕಲೆಗಳು ಬೆಳೆಯ ಲಾರವು! ಸಾಲದ್ದಕ್ಕೆ ಬ್ರಿಟಿಶರು ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳುತ್ತಿದ್ದಂತೆ, ಕಂಡುಬಂದ ಬದಲಾವಣೆ, ಲಲಿತಕಲೆಗಳ ಅಸ್ತಿತ್ವಕ್ಕೇ ಕೊಡಲಿಯೇಟು ಹಾಕಿತು.

ಇಂಗ್ಲಿಷ್ ಪದ್ಧತಿಯ ಶಿಕ್ಷಣದ ಉದ್ದೇಶ, ಭಾರತೀಯರನ್ನು ಆಧುನಿಕ ಯುಗದತ್ತ ಕರೆದೊಯ್ಯುವದು ಮುಖ್ಯವಾಗಿದ್ದರೂ, ಸರಕಾರವು ಈ ವಿಚಾರದಲ್ಲಿ ಪಡೆದ ನೆರವು ಪಾಶ್ಚಾತ್ಯ ಮಿಶನರಿಗಳಿಂದ. ಇವರಲ್ಲಿ ಹೆಚ್ಚಿನವರು ಇಂಗ್ಲಂಡಿನಲ್ಲಿ ಆಗ ಪ್ರಚಲಿತವಿದ್ದ ಬಿಗುವಾದ ಮಡಿವಂತಿಕೆಯವರಾಗಿದ್ದರು. ಸಹಸ್ರಾರು ವರ್ಷಗಳಿಂದ ಬಂದ ಈ ನೆಲದ ಸಾಂಸ್ಕೃತಿಕ ಬೇರುಗಳ ಪರಿಚಯವೇ ಅವರಿಗಿ

ಲಿಲ್ಲ. ಶಿಕ್ಷಣ, ಜೊತೆಗೆ ಸಾಮಾಜಿಕ ಸುಧಾರಣೆಗಳು ಮುಖ್ಯವೆಂದವರು, ಗಣಿಕಾವರ್ಗ, ದೇವದಾಸಿಯರು, ಸಾಮಾನ್ಯ ವೇಶ್ಯೆಯರು, ಬಿಡುಸೂಳೆಯರು, ಅಗ್ಗದ 'ನಾಚ್' ಹೆಂಗಳೆಯರಲ್ಲಿ ವ್ಯತ್ಯಾಸವನ್ನೇ ಕಾಣಲಿಲ್ಲ. ಸಂಗೀತ-ನೃತ್ಯ-ನಾಟಕಗಳೆಲ್ಲ ಅವರಿಗೆ ಕೀಳುದರ್ಜೆಯ ಮನರಂಜನೆಗಳಾಗಿ ಕಂಡವು. ಇಂಗ್ಲಿಷ್ ಮಾದರಿಯ ಶಿಕ್ಷಣ ಪಡೆದ ವರ್ಗದವರಲ್ಲಿ ಆ ಕುರಿತಾದ ತಿರಸ್ಕಾರ ಹುಟ್ಟುವಂತೆ ಪ್ರಚಾರ ಮಾಡಿದರು. ಹಾಗೂ ಹೀಗೂ ಉಳಿದು ಬಂದ, ಸಂಗೀತ-ನರ್ತನಾದಿಗಳಿಂದ ಜೀವಿಸುತ್ತಿದ್ದ ವರ್ಗವು, ದೇಹ ವಿಕ್ರಯವೊಂದನ್ನೇ ಅವಲಂಬಿಸಬೇಕಾಗಿ ಬಂದಿತು.

ಮತ್ತೆ, ಈ ಕಲೆಗಳು ಪುನಶ್ಚೇತನ ಕಾಣಬೇಕಾದರೆ ಮುಕ್ಕಾಲು ಶತಮಾನವೇ ದಾಟಬೇಕಾಯಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕೊನೆಗೊಮ್ಮೆ ಜಾತಿ ಭೇದವಿಲ್ಲದೇ ವಿದ್ಯಾವಂತರಲ್ಲಿ ಸಂಗೀತದ, ವಿವಿಧ ನೃತ್ಯ ಪ್ರಕಾರಗಳ ಪ್ರಾಚೀನತೆಯ ಕುರಿತು ಆಸಕ್ತಿ ಹುಟ್ಟಿ, ಪ್ರತಿಭಾವಂತ ಕಲಾಕಾರರನೇಕರು ಕಾಣಿಸಿಕೊಳ್ಳುವಂತಾದಾಗ, ಇತ್ತೀಚೆಗೆ ಇನ್ನೊಂದು ಅಪಾಯಕಾರಿ ಬೆಳವಣಿಗೆ ಕಾಣಿಸಿಕೊಂಡಿದೆ. ಪಾಶ್ಚಾತ್ಯ ಪದ್ಧತಿಯನ್ನು ಸರ್ವವಿಧದಲ್ಲಿ ಅನುಕರಿಸುತ್ತಿರುವ ಯುವಜನಾಂಗ, ಬೇರಿಲ್ಲದ, ನಿರ್ದಿಷ್ಟ ರೂಪ-ಉದ್ದೇಶಗಳಿಲ್ಲದ ಸರ್ವಜನಾಂಗೀಯ, ಗ್ಲೋಬಲ್ ಸಂಸ್ಕೃತಿಯ ಪ್ರತೀಕವೆಂದು ಕರೆಯಲ್ಪಡುವ ಚಿತ್ರವಿಚಿತ್ರ-ಸಂಗೀತ, ವಾದ್ಯ, ನೃತ್ಯಗಳಿಗೆ ಮಾರುಹೋಗಿದೆ. ಕೆಲವೇ ಎಳೆಯರು ಶಾಸ್ತ್ರೀಯ ಸಂಗೀತ, ಶಾಸ್ತ್ರೀಯ ನೃತ್ಯಪ್ರಕಾರಗಳನ್ನು ಅಭ್ಯಸಿಸುತ್ತಿದ್ದರೂ ಪತ್ರಿಕೆಗಳ ವಿದ್ಯುನ್ಮಾನ ಮಾಧ್ಯಮಗಳ, ಕ್ಷಣಿಕ ಪ್ರಸಿದ್ಧಿ-ಪ್ರಚಾರಗಳಿಗೆ ಮಾರುಹೋಗಿದ್ದಾರೆ. ದಿಢೀರ್ ಯಶಸ್ಸಿಗೆ ಹಪಹಪಿಸುತ್ತಿದ್ದಾರೆ. ಹೀಚುಗಾಯಿಯಾಗಿ ಉದುರಿದ, ಉದುರುತ್ತಿರುವ ಅನೇಕ ಮುಖಗಳು ಕಾಣಿಸುತ್ತಿವೆ. ಲಲಿತಕಲೆಗಳ ಭವಿಷ್ಯ ಈಗ್ಗೆ, ಒಂದೆರಡು ದಶಕಗಳ ಹಿಂದಿನಷ್ಟು ಆಶಾದಾಯಕವಾಗಿಲ್ಲವೇನೋ ಅನಿಸುತ್ತಿದೆ! ಕಾಲಾಯ ತಸ್ಮೈ ನಮಃ

❖

ಆದಿವಾಸಿ ಮಹಿಳೆಯರು

ಇಂದಿನ ದಿನಗಳಲ್ಲಿ ಆದಿವಾಸಿಗಳು ಅಥವಾ ಬುಡಕಟ್ಟಿನ ಸಮೂಹದವರು ಯಾರೆಂದು ಗುರುತಿಸುವದೇ ಕಠಿಣವಾಗಿಬಿಟ್ಟಿದೆ! ಒಂದೆರಡು ತಲೆಮಾರುಗಳ ಹಿಂದೆ ಬುಡಕಟ್ಟಿನ ಜನಾಂಗಕ್ಕೆ ಕೇವಲ ಹುಟ್ಟಿನಿಂದ ಸೇರಿದ ಅರ್ಥಾತ್ ಅಂಥ ತಾಯ್ತಂದೆಗಳಿಗೆ ಹುಟ್ಟಿದ್ದ ರಿಂದಲೇ ಸೇರ್ಪಡೆಯಾಗಿ, ಯಾವತ್ತೂ ಸೌಲಭ್ಯಗಳನ್ನು ಪಡೆದು, ಉಚ್ಚಶಿಕ್ಷಣ, ವಿದೇಶ ಪ್ರಯಾಣ, ದೊಡ್ಡಹುದ್ದೆ, ಅತ್ಯಾಧುನಿಕ ವಿಡಿಯೋ, ಕಾರು, ಸುಸಜ್ಜಿತ ಬಂಗಲೆಗಳನ್ನು ಹೊಂದಿ ಮಹಾ ನಗರಗಳಲ್ಲಿ ಸುಖಜೀವನ ನಡೆಸುತ್ತಿರುವ ಆದಿವಾಸಿ ನಾಗರಿಕರು ನಮ್ಮ ದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸರಕಾರಿ 'ಯಾದಿಯ ಪ್ರಕಾರ ಅವರ ಪೂರ್ವಜರು ಪರಿಶಿಷ್ಟವರ್ಗದ ಪಂಗಡಕ್ಕೆ ಸೇರಿದವರಿರುತ್ತಿದ್ದರು. ಹೀಗಾಗಿ ಸರಕಾರವು ನಿಯೋಜಿಸಿದ ಎಲ್ಲ ಅನುಕೂಲಗಳ ಲಾಭ ಇವರಿಗೆ ದೊರೆತು, ನಗರಗಳ ನಯ-ನಾಜೂಕಿನ, ಥಳಕು-ಷೋಕಿಯ ಜೀವನವನ್ನು ಬಲುಬೇಗ ರೂಢಿಸಿಕೊಂಡು ಬಿಡುತ್ತಾರೆ. ಆದರೆ ಈ ಯಾವತ್ತೂ ಸೌಕರ್ಯಗಳಿಂದ ವಂಚಿತವಾದ ಅತ್ಯಂತ ದೊಡ್ಡವರ್ಗವು, ಭಾರತದ ಹಲವಾರು ಗುಡ್ಡಗಾಡು, ಕಾಡು-ಮೇಡು ಪ್ರದೇಶಗಳಲ್ಲಿ ತುಂಬ ದುರ್ಭರವಾದ ಜೀವನ ನಡೆಸುತ್ತಿದೆ. ಯಾವುದೇ ನಾಗರಿಕ ಸೌಲಭ್ಯಗಳು ಅವರಿಗೆ ಕನಸಿನಲ್ಲಿಯೂ ಎಟುಕಲಾರವು!

ತಮ್ಮ ಪಾಡಿಗೆ ತಾವು ಬದುಕುತ್ತಿದ್ದವರನ್ನು ನಾವು ಬದುಕ ಗೊಟ್ಟಿಲ್ಲ! ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯನಾಶದೊಂದಿಗೆ, ಉದ್ದಿಮೆಗಳು, ಖಣಿಗಳು, ಕಾರ್ಖಾನೆಗಳು ಹುಟ್ಟಿಕೊಂಡು, ಬಗೆಬಗೆಯಲ್ಲಿ ನೆಮ್ಮದಿ ಕೆಡಿಸಿದ್ದೇ ಅಲ್ಲದೇ, ಸಹಸ್ರಾರು ವರ್ಷಗಳಿಂದ ರೂಢಿಸಿಕೊಂಡ ಅವರ ಸಂಪ್ರದಾಯಗಳನ್ನು, ನೀತಿ, ನಡಾವಳಿಗಳನ್ನು, ನಿಸರ್ಗದೊಂದಿಗೆ ನಡೆಸುತ್ತಿದ್ದ ಸಹಜೀವನವನ್ನು, ಹಾಳುಗೆಡವಿವೆ. ಕೇವಲ ಎರಡು ದಶಕಗಳಲ್ಲಿ ಈ ಉಪಪಂಗಡಗಳ ಜೀವನಕ್ರಮವು, ಸಂಪೂರ್ಣವಾಗಿ ಬದಲಾದದ್ದನ್ನು ನೋಡುತ್ತಿದ್ದೇವೆ. ಈ ಬದಲಾವಣೆಯು ಆ ಕಷ್ಟ ಜೀವಿಗಳಿಗೆ ಸುಖ, ನೆಮ್ಮದಿಗಳನ್ನು ಒದಗಿಸಿದರೆ

ಬೇರೆ ಮಾತಿತ್ತು. ಬದಲಿಗೆ "ನಾಗರಿಕ ಜೀವನ"ವೆಂಬ ಶಾಪಕ್ಕೆ ಈ ಮಣ್ಣಿನ ಮಕ್ಕಳು ಬಲಿಯಾಗುವಂತಾದದ್ದು ಪರಿತಪಿಸುವಂಥ ವಿಚಾರವೇ!

ದೇಶವಿಡೀ ವ್ಯಾಪಿಸಿಕೊಂಡ, ಬೇರೆ ಬೇರೆ ಆದಿವಾಸಿ ಉಪ ಪಂಗಡಗಳ ನಾಗರೀಕರಣ, ಏಕಪ್ರಕಾರವಾಗಿ ನಡೆದಿಲ್ಲ. ಪಶ್ಚಿಮ ಬಂಗಾಲ, ಓಡಿಸ್ಸಗಳ ಸಂತಾಲರು, ಬಹುಮಟ್ಟಿಗೆ, ಅವರಿಗೆ ಲಭ್ಯವಿರುವ ಸವಲತ್ತುಗಳನ್ನು ಬಳಸಿ, ಕೃಷಿ, ಉದ್ದಿಮೆಗಳಲ್ಲಿ, ಬೇರೆ ಬೇರೆ ಸರಕಾರಿ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಮಧ್ಯಪ್ರದೇಶದ ಗೊಂಡರು, ಭಿಲ್ಲರು, ಹಲ್ಬೀಜನಾಂಗದವರು, ಸುತ್ತಲಿನ ಹಿಂದು ಧರ್ಮದ ನಿವಾಸಿಗಳಿಂದ ಬಹುಮಟ್ಟಿಗೆ ಪ್ರಭಾವಿತರಾಗಿ, ತಮ್ಮ ಜೀವನಕ್ರಮವನ್ನು ಮಾರ್ಪಡಿಸಿಕೊಂಡಿದ್ದಾರೆ. ಅಮೇರಿಕೆಯಲ್ಲಿ ರೆಡ್ ಇಂಡಿಯನ್ ಜನಾಂಗಕ್ಕಾಗಲಿ, ನ್ಯೂಝಿಲ್ಯಾಂಡ್ದ ಮಾವೊರಿಗಳಿಗಾಗಲಿ, ಆಯಾದೇಶಗಳು, ಪ್ರತ್ಯೇಕ ಜೀವನ ನಡೆಸುವ ಅವಕಾಶ ಕಲ್ಪಿಸಿಕೊಡುವದರ ಜೊತೆಗೆ ಅವರ ವಾಸಸ್ಥಾನಗಳನ್ನು ಪ್ರವಾಸಿ ಆಕರ್ಷಣೆಯ ತಾಣಗಳನ್ನಾಗಿ ಬೆಳೆಸಿವೆ. ನಮ್ಮಲ್ಲಿ ನೀಲಗಿರಿಯ ಉದಕಮಂಡದಲ್ಲಿ ಅಕ್ಕಪಕ್ಕದ ಕೆಲವು ತೋಡರಿಗೆ ಮಾತ್ರ ಈ ಸೌಲಭ್ಯ ಪ್ರಾಪ್ತವಾಗಿದೆ. ಉತ್ತರಕನ್ನಡ ಜಿಲ್ಲೆಯ ಹಾಲಕ್ಕಿಗೌಡರು, ತುಂಬ ಹಿಂದಿನಿಂದ ಕೃಷಿಯನ್ನು ಕೈಕೊಂಡರೂ ಜೀವನಕ್ರಮದಲ್ಲಿ ಸ್ವಂತಿಕೆಯನ್ನು ಉಳಿಸಿಕೊಂಡೇ ಬಂದಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅವರನ್ನೂ ಇತರರಿಂದ ಬೇರ್ಪಡಿಸುವದು ಕಷ್ಟಸಾಧ್ಯ!

ಮಧ್ಯಪ್ರದೇಶದ ಬಸ್ತರಜಿಲ್ಲೆಯ ತೀರ ಒಳನಾಡಿನಲ್ಲಿ ವಾಸಿಸುತ್ತಿರುವ ಕೆಲವು ಬುಡಕಟ್ಟಿನ ಜನಾಂಗಗಳಿವೆ. ಸಾರಿಗೆ ವ್ಯವಸ್ಥೆ ಅರಿಯದವರು, ಅಷ್ಟೇಕೆ, ಪಕ್ಕಾರಸ್ತೆಯಿಂದ ಹರದಾರಿಗಟ್ಟಲೆ ದೂರದ ಅರಣ್ಯಾವೃತ ಭೂಮಿಯಲ್ಲಿ ವೈಶಿಷ್ಟ್ಯಪೂರ್ಣ ಜೀವನ ನಡೆಸುತ್ತಾರೆ. ಮೊದಲಿಗೆ ಅವರನ್ನೆಲ್ಲ ಗೊಂಡರೆಂದು ಕರೆದರೂ ಅವರ ಅನುವಂಶಿಕ ಮತ್ತು ಭೌಗೋಲಿಕ ಪ್ರಭೇದಗಳಿಂದಾಗಿ ಪರ್ವತಮಾರಿಯರು; ಕಾಡುಕೋಣ ಮಾರಿಯರು (ನೃತ್ಯಗಳಲ್ಲಿ ಕಾಡುಕೋಣದ ಕೋಡುಗಳನ್ನು ಲಾಂಛನವಾಗಿ ಇವರು ಬಳಸುತ್ತರಾದ್ದರಿಂದ ಈ ಹೆಸರು), ದಂಡಾಮಿ ಮಾರಿಯರು, ಹಾಗೂ ಮುರಿಯರೆಂದು ವರ್ಗೀಕರಿಸಲಾಗಿದೆ. ಅವರ ಭಾಷೆಗಳು ಭಿನ್ನ, ಊಟ-ಉಡಿಗೆ, ಜೀವನಕ್ರಮಗಳೂ ಬೇರೆ ಬೇರೆಯಾಗಿವೆ. ಉಪಪಂಗಡಗಳಲ್ಲಿ ಯಾವುದೇ ಸಂಪರ್ಕ ಇರುವುದಿಲ್ಲ. ಇಪ್ಪತ್ತು-ಮೂವತ್ತು

ಗುಡಿಸಲುಗಳ ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ ಅವರು ವಾಸಿಸುತ್ತಾರೆ. ಒಂದು ಬಡುಕಟ್ಟಿಗೆ ಸೇರಿದ ಉಪಪಂಗಡದ ಹಳ್ಳಿಯೆಂದರೆ ದೊಡ್ಡದೊಂದು ಅವಿಭಕ್ತ ಕುಟುಂಬದಂತೆಯೇ ಭಾಸವಾಗುತ್ತದೆ. ಅವರ ಯಾವತ್ತೂ ದೈನಂದಿನ ಚಟುವಟಿಕೆಗಳು ಸಾಮೂಹಿಕವಾಗಿಯೇ ಜರುಗುತ್ತವೆ. ಕೃಷಿ, ಬೇಟೆ, ತೋಟಗಾರಿಕೆ, ವನ್ಯವಸ್ತುಗಳ ಸಂಗ್ರಹ, ಮನರಂಜನೆಗಳು ಇತ್ಯಾದಿ. ಇಂಥ ಬೃಹತ್ ಕುಟುಂಬದಲ್ಲಿ ತೀರ ಎಳೆಯರಿಂದ ಹಿಡಿದು, ವೃದ್ಧರವರೆಗೆ ಆಯಾಜನರು ನಿತ್ಯಜೀವನದಲ್ಲಿ ಪಾಲುಗೊಳ್ಳುವಂತೆ ನೋಡಿಕೊಳ್ಳುವ ಜಂಟೀಜವಾಬ್ದಾರಿಯನ್ನು ಆದಿವಾಸಿ ಸ್ತ್ರೀ ಪುರುಷರು ಹೊತ್ತಿರುತ್ತಾರೆ. ಪ್ರತಿಮನೆಯಲ್ಲಿಯೂ ಗೃಹಿಣಿಯಾದವಳು ಕುಟುಂಬದ ಕೇಂದ್ರಬಿಂದು ವಾಗಿರುತ್ತಾಳೆ.

ಗ್ರಾಮದ ಸಾಮೂಹಿಕ ಚಟುವಟಿಕೆಗಳಲ್ಲಿ ಆಕೆಯ ಪಾಲು ಇದ್ದರೂ, ಗೃಹಕೃತ್ಯದ ಹೊಣೆ ತಪ್ಪಿದ್ದಲ್ಲ. ದೂರದೂರದ ಸಂತೆಗೆ ಮಕ್ಕಳ ಜೊತೆಗೆ, ತಾನು ಬೆಳೆದ ಅಥವಾ ಸಂಗ್ರಹಿಸಿದ ವಸ್ತುಗಳ ಹೊರೆಯನ್ನೂ ಹೊತ್ತ ಮಾರಾಟ ಮಾಡುತ್ತಾಳೆ. ನಡಿಗೆಯಲ್ಲಿ ಗಂಡಸರಷ್ಟೆ ವೇಗ ಆಕೆಯದು. ಕೆಲವೊಮ್ಮೆ ಬೆನ್ನು, ತಲೆ, ಒಂದು ಕೈಯಲ್ಲಿ ಕೂಡ ಗಂಟೋ, ಬುಟ್ಟಿಯೋ, ಸೊಂಟದ ಮೇಲೆ / ಬೆನ್ನ ಮೇಲೆ ಮಗು ಇದ್ದರೂ ಅಳುಕುವವಳಲ್ಲ.ಮನೆಯಲ್ಲಿದ್ದರೆ, ಉಳಿದಷ್ಟೇ, ಕಾಳು ನುಚ್ಚು ಹಾಕಿ ಗಂಜಿಯನ್ನೂ, ತಾನೇ ಬೆಳೆದ ತರಕಾರಿಗಳಿಂದ ಸಾಧ್ಯವಿದ್ದ ಅಡಿಗೆ ತಯಾರಿಸುತ್ತಾಳೆ. ಆಹಾರವನ್ನು ಇತರರೊಂದಿಗೆ ಹಂಚಿಕೊಂಡು ಉಣ್ಣುವದರ ಜೊತೆಗೆ, ಅಭಾವದ ದಿನಗಳಲ್ಲಿ ಎಷ್ಟೋ ಬಾರಿ ಉಪವಾಸ ಇರಬಲ್ಲಳು. ಆದರೆ ಗೆಲುವಾಗಿಯೇ ಇರಲು ಯತ್ನಿಸುವಳು.

ನಗರದಲ್ಲಿ ಬೆಳೆದ ಸೋದರಿಯರೊಂದಿಗೆ ಹೋಲಿಸಿದರೆ, ಈ ಆದಿವಾಸಿ ನಾರಿಗೆ ತನ್ನವೆಂಬ ವಸ್ತು-ಒಡವೆಗಳು ಇರುವದು ಅತ್ಯಲ್ಪ. ಹೆಣ್ಣುತನವನ್ನಷ್ಟೆ ಮರೆಮಾಡುವ ಅತ್ಯಲ್ಪ ಉರುಟುಬಟ್ಟೆಯೇ ಅವಳ ಉಡುಪು. ಬಣ್ಣದ ಮಣಿಗಳ ಒಂದೆರಡು ಸರಗಳು ಕೊರಳಲ್ಲಿದ್ದರೆ ಗಾಜಿನ ಅಥವಾ ಲೋಹದ ಬಳೆಗಳೇ ಭೂಷಣ, ಸಿಕ್ಕರೆ, ಆಗೀಗ ಕಾಡು ಹೂಗಳು ತಲೆಯಲ್ಲಿ ಕಾಣಿಸಿಕೊಳ್ಳುತ್ತವೆ. ಸುಖವೆಂಬುದು ಐಹಿಕ ವಸ್ತುಗಳಲ್ಲಿಲ್ಲ, ಎಂಬುದನ್ನು ಮನಗಾಣಬೇಕಿದ್ದರೆ, ಮುರಿಯ, ಮಾರಿಯ ಮಹಿಳೆಯರನ್ನು ನೋಡಬೇಕು. ತಿಳಿಹೃದಯ, ಮುಕ್ತವಾದ

ನಗು, ಗಟ್ಟಿಯಾದ ಮಾತು, ಸಹಜೀವನಗಳು ಅವಳ ದೈನಂದಿನ ಕಷ್ಟ-ಕಾರ್ಪಣ್ಯಗಳನ್ನು ಮರೆಯಿಸಿಬಿಡುತ್ತವೆ. ಸರಳ ಮನೋವೃತ್ತಿಯವಳಾದ್ದರಿಂದ ತಪ್ಪುಮಾಡಿದಾಗ ಅದನ್ನು ಒಪ್ಪಿಕೊಳ್ಳಲಿಕ್ಕೆ, ಅದಕ್ಕಾಗಿ ರೂಪಿತವಾದ ಬುಡಕಟ್ಟಿನ ಶಿಕ್ಷೆಗೆ ಒಳಪಡಲಿಕ್ಕೆ ಹಿಂದೆ ಮುಂದೆ ನೋಡುವವಳಲ್ಲ. ಬಹುಶಃ ಈ ನಿಯತ್ತೇ ಈ ನಾರೀ ವರ್ಗವನ್ನು ನಾಗರಿಕರಿಂದ ಸ್ಪಷ್ಟವಾಗಿ ಬೇರ್ಪಡಿಸುತ್ತದೆ.

ವೈವಾಹಿಕ ಜೀವನದಲ್ಲಿ ಈ ವರ್ಗವು ನಿರ್ವಹಿಸುವ ಪ್ರಮುಖ ಪಾತ್ರ, ಈಗಿನ ಸುಶಿಕ್ಷಿತ, 'ಲಿಬ್ಬರ್ ಮಹಿಳೆಯರನ್ನೂ ಕದಾಚಿತ್ ಅಚ್ಚರಿಗೊಳಿಸೀತು! ತನ್ನ ಬಾಳ ಸಂಗಾತಿಯೊಂದಿಗೆ ಜೊತೆ ಜೊತೆ ಯಾಗಿ ದುಡಿಯುವಂತೆ, ಆತನನ್ನು ಮಗುವಿನಂತೆ ಸಂರಕ್ಷಿಸುವಳು. ಆತ್ಮಸ್ನೇಹಿತನಂತೆ ವರ್ತಿಸುವಳು. ಯಾವತ್ತೂ ರಹಸ್ಯಗಳಲ್ಲಿ ಪಾಲ್ಗೊಳ್ಳುವಳು. ಪ್ರಣಯದಾಟದಲ್ಲೂ ಆಕೆಯದೇ ಮೇಲುಗೈ! ಪತಿಯು ಆ ಸಮಾಜದಲ್ಲಿ ಒಡನಾಡಿಯೇ ಹೊರತು ಸ್ವಾಮಿಯಲ್ಲ. ಸುಖ-ದುಃಖದಲ್ಲಿ ನಿರಂತರ ಜೊತೆಗಾತಿಯಾಗಿ, ಏನು ಬೇಕಾದರೂ ಮಾಡಲು ಸಿದ್ಧಳಿದ್ದರೂ ಆತನ ಅಡಿಯಾಳಲ್ಲ. ಈ ಹೆಚ್ಚಿನ ಅಂತಸ್ತನ್ನು ಆಕೆಗಳಿಸಿದ್ದು ಕಠಿಣ ದುಡಿಮೆಯಿಂದ, ಸಹನೆ ಮತ್ತು ಸಂಯಮಗಳಿಂದ. ಸ್ಪರ್ಧೆಯಿಂದಲ್ಲ, ಘರ್ಷಣೆಯಿಂದಲ್ಲ, ಘೋಷಣೆಯಿಂದಲ್ಲ. ಜನನ-ಮರಣಗಳ, ಜೀವನ ವ್ಯಾಪಾರಗಳಲ್ಲೆಲ್ಲ ಅವಳದು ಸಮಪಾಲು, ಸತ್ತವರ ನೆನಪಿಗೆ ಆಕೆ ಸ್ವತಂತ್ರವಾಗಿ ಸ್ಮಾರಕಗಳನ್ನು ನಿಲ್ಲಿಸಬಲ್ಲಳು.

ಈ ಸಹಜ, ಸ್ತ್ರೀಪುರುಷ ಸಮಾನತೆಯಿಂದಲೇ ಏನೋ ಆದಿವಾಸಿಗಳಲ್ಲಿ ಗಂಡುಮಗು ಹುಟ್ಟಿದರೆ, ವಿಶೇಷ ಸಂಭ್ರಮವೇನೂ ಇಲ್ಲ! ಭಾರತದಲ್ಲೆಲ್ಲ ಬಲುಬೇಗ ಜನಪ್ರಿಯವಾಗಿ, ಹಬ್ಬಿಕೊಳ್ಳುತ್ತಿರುವ ಸ್ತ್ರೀಭ್ರೂಣ ಹತ್ಯೆ (ಆಮ್ನಿಯೋ ಸಿಂಟೆಸಿಸ್) ತಪ್ಪಿಕೂಡ ಆ ಸೋದರಿಯ ತಲೆಯಲ್ಲಿ ಸುಳಿಯಲಾರದು! ಪ್ರತಿಮಗುವೂ ಆದಿವಾಸಿಗಳಿಗೆ ದೇವರ ಕೊಡುಗೆ. ತಾಯಿಯಾಗುವದು ಹೆಣ್ಣಿಗೆ ಹೆಮ್ಮೆಯ ವಿಚಾರ. ತಿರುಗಿ ಹೆರುವ ಸಮಯವನ್ನು ನಿರ್ಧರಿಸುವ ತನಕ ಆಕೆ ಗಂಡನನ್ನು ಬಳಿಗೆ ಸೇರಿಸುವದೂ ಇಲ್ಲ! ಹೆರಿಗೆಯೆಂಬುದು ಹೆಣ್ಣಿನ ಸ್ವಾಭಾವಿಕ ಸ್ಥಿತಿ ಎಂಬುದನ್ನು ಪರಿಗಣಿಸುತ್ತಳಾದ್ದರಿಂದ ಸೂಲಗಿತ್ತಿಯ ಅವಶ್ಯಕತೆ ಆಕೆಗಿಲ್ಲ.

ಕುಕ್ಕುರುಗಾಲಿನಲ್ಲಿ ಕುಳಿತು, ಸಹಜವೆನಿಸುವ ಪ್ರಸವ ಪದ್ಧತಿಯನ್ನು ಅನುಸರಿಸುತ್ತಾಳೆ. ಪ್ರಣಾಲವನ್ನೂ ತಾವೇ ಕತ್ತರಿಸಿಕೊಳ್ಳುವವರೂ ಇಲ್ಲದಿಲ್ಲ. ಮಗುವಿನ ಲಾಲನೆ-ಪಾಲನೆಯ ಸಂಪೂರ್ಣ ಜವಾಬ್ದಾರಿ ಆಕೆಯದು. ಹಳೆಯ ಬಟ್ಟೆಯಲ್ಲಿ ಮಗುವನ್ನು ಸುತ್ತಿ, ಬೆನ್ನಿಗೆ ಕಟ್ಟಿಕೊಂಡು, ಮನೆಗೆಲಸ ಮಾಡುತ್ತಾಳೆ. ಹೋದಲ್ಲೆಲ್ಲ ಒಯ್ಯುತ್ತಾಳೆ, ಅನಿವಾರ್ಯವಾದಾಗ ಬೆತ್ತದ ತೊಟ್ಟಿಲು, ಮಗುವಿಗೆ ಆಶ್ರಯ ವೀಯುತ್ತದೆ. ಆದಿವಾಸಿ ಹುಡುಗಿಯರು, ಎಳೆತನದಲ್ಲಿ, ಪ್ರಾಯದಲ್ಲಿ ಅಂದವಾಗಿರುತ್ತಾರೆ. ನಂತರ ಮಾತ್ರ ಹೆರಿಗೆ, ಅನಿಶ್ಚಿತ ಕಠಿಣ ಜೀವನ, ಕಾಡಿನ ಕಷ್ಟ-ಕಾರ್ಪಣ್ಯಗಳಿಂದ ಕೋಮಲತೆಯನ್ನು ಕಳೆದುಕೊಂಡಿರುತ್ತಾರೆ. ಆದರೆ ಹರೆಯದ ಮುಖಕ್ಕಾಗಿ ಹಾತೊರೆದು, ಕೃತ್ರಿಮ ಸಾಧನಗಳ ಬಳಕೆ, ಅವರ ಕಲ್ಪನೆಗೆ ನಿಲುಕದ್ದು!

ನಿಸರ್ಗಸಹಜ ವಾತಾವರಣದಲ್ಲಿ ಬೆಳೆಯುವ ಕಿಶೋರ-ಕಿಶೋರಿಯರು ಸಾಂಘಿಕವಾಗಿ ಬೆಳೆಯುತ್ತಲೇ ಹಳ್ಳಿಯ ಜೀವನದಲ್ಲಿ ಪಾಲುಗೊಳ್ಳುತ್ತಾರೆ. ಎಳೆತನದಿಂದ ಸಾಕುಪ್ರಾಣಿಗಳ ಒಡನಾಟ ಸಾಧಿಸಿಕೊಂಡಿರುತ್ತಾರೆ. ಗಿಳಿ-ಮೈನಾಗಳಿಗೆ ಮಾತು ಕಲಿಸುವದು, ಕೋತಿಗಳನ್ನು ಕುಣಿಸುವದು, ನಾಯಿಗಳಿಗೆ ಬೇಟೆಯಾಡಲು ಕಲಿಸುವುದು, ವಾದ್ಯಗಳನ್ನು ನುಡಿಸುವದು ಮುಂತಾದವುಗಳನ್ನು ಮಕ್ಕಳು ಬೆಳೆಯುತ್ತಿದ್ದಂತೆ, ರೂಢಿಸಿಕೊಳ್ಳುತ್ತವೆ. ಹುಡುಗ-ಹುಡುಗಿಯರು ಲಿಂಗ ಭೇದವಿಲ್ಲದೇ 'ಘೋಟುಲ್' ಎಂಬ ಸಾಂಘಿಕ ಚಟುವಟಿಕೆಯ ಕೇಂದ್ರವಾದ ಗುಡಿಸಲಿನಲ್ಲಿ ಒಟ್ಟಾಗಿ ಸಂಜೆಯ ಚಟುವಟಿಕೆಗಳಾದ, ಹಾಡು, ಕುಣಿತ, ಕಥೆ ಹೇಳುವುದು, ಕಾಡಿನ ಸಾಹಸಗಳನ್ನು ವರ್ಣಿಸುತ್ತ, ರಾತ್ರಿಯಲ್ಲಿ ಒಟ್ಟಾಗಿ ಮಲಗಿ ಕೊಳ್ಳುತ್ತವೆ. ಅದು ಅವರ ಸಾಮಾಜಿಕ ವ್ಯವಸ್ಥೆಯ ಭಾಗ. ಲಿಂಗ ಸಮಾನತೆ ರೂಢಿಸಿಕೊಳ್ಳುವದಕ್ಕೆ ಸಾಮಾಜಿಕ, ಸಾಂಸ್ಕೃತಿಕ ಕೇಂದ್ರವಾದ ಈ ಘೋಟುಲ್, ಬಹುಮಟ್ಟಿಗೆ ಸಹಾಯವಾಗುತ್ತಿರಬೇಕು, ಸಭೆ ಸೇರುವವರು, ಹಳ್ಳಿಗೆ ಬಂದ ಅಧಿಕಾರಿಗಳು, ಅತಿಥಿಗಳು ಈ ಘೋಟುಲಗಳಲ್ಲಿ ಆಶ್ರಯ ಪಡೆಯುವದು ವಾಡಿಕೆ. ಹಬ್ಬಹರಿದಿನಗಳ ಕಾರ್ಯಕ್ರಮಗಳನ್ನು ಜನರೆಲ್ಲ ಆಚರಿಸುವದು ಇಲ್ಲಿಯೇ. ಕಾಡುಪ್ರಾಣಿಗಳು ಆಕ್ರಮಿಸದಂತೆ ಬೇಲಿಗಳಿಂದ ಭದ್ರಗೊಳಿಸಿದ ಗುಡಿಸಲಿನಲ್ಲಿ ವಿಶಾಲವಾದ ಮಲಗುವ

ಅಥವಾ ವಿಶ್ರಮಿಸುವ ಸ್ಥಳ ಘೋಟುಲದಲ್ಲಿ ಮಾತ್ರ ಇರುತ್ತದೆ. ಹಳ್ಳಿಯ ಗುಡಿಸಲುಗಳೆಲ್ಲ ಅತಿಕಿರಿದಾಗಿರುತ್ತವೆ.

'ಘೋಟುಲ್'ದ ಮುಕ್ತವಾತಾವರಣದಲ್ಲಿ ಬೆಳೆಯುವ ಹೆಣ್ಣು ಮಕ್ಕಳಿಗೆ ತನ್ನ ಬಾಳ ಸಂಗಾತಿಯನ್ನು ಮೊದಲಿನಿಂದ ಅರಿಯುವ ಅವಕಾಶ ತಂತಾನೇ ಲಭಿಸಿರುತ್ತದೆ. ಮದುವೆಯನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಪ್ರತಿಯೊಂದು ಉಪಪಂಗಡವು ತನ್ನದೇ ಅಧಿದೇವತೆಯನ್ನು ಹೊಂದಿರುತ್ತದೆ. ಒಂದು ಒಳಪಂಗಡವೆಂದರೆ ಒಂದೇ ಭ್ರಾತೃಜನಾಂಗ (ದಾದಾಭಾಯಿ) ಎಂದು ತಿಳುವಳಿಕೆಯಿದ್ದು ಅಂಥಲ್ಲಿ ಅಂತರ್ ವಿವಾಹಗಳು ನಿಷಿದ್ಧ. ಸೋದರಮಾವನ ಮಗಳನ್ನು ಅಥವಾ ಮಗನನ್ನು ಕೆಲವು ಗುಂಪುಗಳಲ್ಲಿ ಮದುವೆಯಾಗುವ ಪದ್ಧತಿಯಿದ್ದು, 'ಅಕೋ ಮಾಮಾ' ಎಂದು ಇದನ್ನು ಕರೆಯಲಾಗುತ್ತದೆ. ತರುಣಿಯು ಇಷ್ಟಪಡದವನನ್ನು ಮದುವೆ ಆಗುವ ಪ್ರಮೇಯ ಇಲ್ಲವೇ ಇಲ್ಲ. ಆಯ್ಕೆ ಅವಳದೇ! ಬಾಲವಿವಾಹಗಳು ರೂಢಿಯಲ್ಲಿಲ್ಲ.

ಆದಿವಾಸಿಗಳಲ್ಲಿ ಯಾವಾಗಲೂ ವಧುಗಳಿಗೆ ಬೇಡಿಕೆ ಹೆಚ್ಚು! "ತೆರ" ಸಾಮಾನ್ಯ. ತೆರದ ಮೊತ್ತವು, ವಧುವಿನ ವಯಸ್ಸು, ಕುಟುಂಬದ ಸ್ಥಾನ-ಮಾನವನ್ನು ಅವಲಂಬಿಸಿದ್ದು, ವರನ ಆರ್ಥಿಕ ಸ್ಥಿತಿ ಚೆನ್ನಾಗಿರ ದಿದ್ದರೆ, ವಧುವಿನ ಮನೆಯಲ್ಲಿ ಆತ ಕೆಲ ವರ್ಷ ಜೀತದಾಳಾಗಿ ದುಡಿಯಬಹುದು. ನಂತರವೇ ವಧುವನ್ನು ಹೊಂದಲು ಯೋಗ್ಯ ನಾಗುತ್ತಾನೆ! 'ತೆರವು' ಹಣದ ರೂಪದಲ್ಲಿ ಇರುವದಿಲ್ಲ ದವಸಧಾನ್ಯ, ಕುರಿಕೋಳಿ, ಹಂದಿಗಳು, ಸೆರೆಯ ರೂಪದಲ್ಲಿರುತ್ತದೆ. ಮದುವೆಯ ಖರ್ಚಿಗೆ ಅದರ ಉಪಯೋಗವಾಗುತ್ತದೆಯೇ ಹೊರತು, ಶೇಖರಣೆಗಂತೂ ಖಂಡಿತ ಅಲ್ಲ. ಇಡೀಹಳ್ಳಿ, ಊಟ ಹಾಗೂ ಸೆರೆಯ ಸರಬರಾಜಿನಲ್ಲಿ ಪಾಲುಗೊಳ್ಳುತ್ತದೆ. ಸಂಭ್ರಮದ ಸಡಗರದಲ್ಲಿ ಗ್ರಾಮಸ್ಥರು ಮೈಮರೆಯುತ್ತಾರೆ.

ಪ್ರತಿಯೊಂದು ಒಳಪಂಗಡದ ಪದ್ಧತಿಯಂತೆ ಅವರ ಕೌಟುಂಬಿಕ ಜೀವನ ರೂಪುಗೊಳ್ಳುತ್ತದೆ. ಕೆಲವು ಬಾರಿ ವಧು, ಅತ್ತೆ-ಮಾವಂದಿರೊಡನೆ-ವಾಸಮಾಡಿದರೆ, ಕೆಲವು ಪಂಗಡಗಳಲ್ಲಿ ನವವಿವಾಹಿತರು ಬೇರೆಯೇ ಗುಡಿಯನ್ನು ಕಟ್ಟಿಕೊಂಡು, ಸಂಸಾರ ಹೂಡುತ್ತಾರೆ. ಅವಿಭಕ್ತ ಕುಟುಂಬಗಳಲ್ಲಿ ಮೈದುನ, ನಾದಿನಿಯರು, ಅತ್ತಿಗೆಯನ್ನು ವಿಶೇಷ ಆದರದಿಂದ ಕಾಣುತ್ತಾರೆ. ವರದಕ್ಷಿಣೆಯ

ನೆವದ ಹಿಂಸೆ-ಕಿರುಕುಳಗಳನ್ನು ಅವರು ಅರಿಯರು. ಆಕಸ್ಮಿಕವಾಗಿ ಪತಿಯು ಮೃತನಾದರೆ, ಹಿರಿಯ ಮೈದುನನೇ ಅವಳನ್ನು ಮದುವೆಯಾಗುತ್ತಾನೆ. ಆಕೆಗೆ ಆತ ಒಪ್ಪಿಗೆ ಆಗದಿದ್ದಲ್ಲಿ ನಿರಾಕರಿಸುವ ಹಕ್ಕು ಅವಳಿಗಿದೆ. ಆದರೆ ಒಬ್ಬಳಿಗಿಂತ ಹೆಚ್ಚಿನವಳನ್ನು ಯಾರೂ ವರಿಸುವಂತೆ ಇಲ್ಲ! ವಿಧುರನು, ವಿವಾಹ ವಿಚ್ಛೇದ ಹೊಂದಿದವನು, ವಯಸ್ಸಾದವನು, ಎಳೆಯ ಹುಡುಗಿಯನ್ನು ಮದುವೆ ಆಗುವಂತಿಲ್ಲ! ತನ್ನಂತಹ ಸಮದುಃಖಿಯನ್ನೇ ಆತ ವರಿಸಬೇಕು. ಪುನರ್‌ವಿವಾಹಿತನಿಗೂ ತೆರಕೊಡುವದು ತಪ್ಪಿದ್ದಲ್ಲ.

ಅವರಲ್ಲೂ ವೈವಾಹಿಕ ವಿರಸ ಸಾಮಾನ್ಯ. ಕ್ರೂರಿ, ಕುಡುಕ, ಭ್ರಮಿಷ್ಠ, ನಪುಂಸಕ, ಘಾತಕಿಪತಿ ದೊರೆತಾಗ, ಪತ್ನಿಗೆ ಆತನ ನಡಾವಳಿಕೆಯ ಕುರಿತು ಪಂಗಡದ ಮುಖ್ಯಸ್ಥನಿಗೆ ದೂರಿಕೊಳ್ಳಲು ಹಕ್ಕಿದೆ. ಆತ ಪಂಚಾಯತಿಯನ್ನು ಕರೆದು, ದೂರನ್ನು ಪರಿಶೀಲಿಸುತ್ತಾನೆ. ಪತಿ-ಪತ್ನಿಯರನ್ನು ಕಳಿಸಿ ವಿಚಾರ ವಿಮರ್ಶೆ ನಡೆಸಲಾಗುವುದು. ಪತಿ, ತಪ್ಪಿತಸ್ಥನೆಂದು ಸಿದ್ಧವಾದರೆ ಪತ್ನಿಗೆ ವಿಚ್ಛೇದನ ದೊರೆಯುತ್ತದೆ. ನಂತರ ತನಗೆ ಒಪ್ಪಿಗೆಯಾದಾತನನ್ನು ಆಕೆ ಪುನಃ ಮದುವೆಯಾಗಬಹುದು. ಮೊದಲ ಪತಿ ಆ ಬಳಿಕವೂ ಪುನರ್‌ವಿವಾಹಿತಳಿಗೆ ತೊಂದರೆ ಕೊಡುವುದುಂಟು. ಒಮ್ಮೊಮ್ಮೆ ಕೊಲೆಯೂ ನಡೆಯುವದುಂಟು. ಹೀಗಿದ್ದಾಗ ಪಂಚಾಯತಿ ಸೇರಿ ಹೆಣ್ಣನ್ನು ದೋಷಮುಕ್ತಳನ್ನಾಗಿಸುವರು. ಬುಡಕಟ್ಟಿನವರ ಮಾನವೀಯತೆಯುಳ್ಳ ಇಂಥ ವ್ಯಾವಹಾರಿಕವಾದ ನ್ಯಾಯ ಪದ್ಧತಿ ಈಗ ಮಾಯವಾಗಿ, ಆಧುನಿಕರ ನ್ಯಾಯಾಲಯದಲ್ಲಿ ಆಕೆ ಕೊಲೆಯಲ್ಲಿ ಪಾಲುಗಾತಿಯೆಂದು ಸಾಬೀತಾಗಿ, ಜೈಲಿನಲ್ಲಿ ಕೊಳೆಯುವ ಪ್ರಸಂಗಗಳೂ ಬಂದಿವೆ.

ಆದಿವಾಸಿಗಳಲ್ಲಿ ಹೆಣ್ಣಿನ ಸ್ಥಾನ ಕೀಳಲ್ಲ, ಕಿರಿದಲ್ಲ. ಗಂಡು-ಹೆಣ್ಣು ಗಳು ಪರಸ್ಪರ ಪೂರಕಶಕ್ತಿಗಳೆಂದೇ ಅವರ ನಂಬಿಕೆ. ಈ ಪ್ರದೇಶದಲ್ಲಿ ತೀರ ಪ್ರಾಚೀನವಾದ ಶಿಲಾಚಿತ್ರ, ಗುಹಾಚಿತ್ರಗಳು, ಆದಿಜನಾಂಗಗಳ ಜೀವನ ಪದ್ಧತಿಯ ಮೇಲೆ ಬೆಳಕು ಚೆಲ್ಲುತ್ತವೆ. ಅವುಗಳಲ್ಲಿ ಬೇಟೆ, ಕಾಳಗ, ಪ್ರಾಣಿಬಲಿಗಳ ಚಿತ್ರಗಳು, ಪ್ರಸಂಗಗಳು ಚಿತ್ರಿತವಾಗಿವೆ. ಸ್ತ್ರೀ-ಚಿತ್ರಗಳಿಲ್ಲ. ಆದರೆ ದೈನಂದಿನ ಜೀವನ-ಚಿತ್ರಣಗಳಲ್ಲಿ ಹಣ್ಣು-ಕಾಯಿ ಸಂಗ್ರಹ, ಬುಟ್ಟಿ ಹೆಣೆಯುವುದು, ಹಾಡಿಕುಣಿಯುವದು, ಮಕ್ಕಳ ಆರೈಕೆ ಮುಂತಾದವುಗಳಲ್ಲಿ ಸ್ತ್ರೀರೂಪಗಳು

ಚಿತ್ರಿತವಾಗಿವೆ. ಉದರಂಭರಣೆ ಯಲ್ಲಿ ತಾಯಿಯಾದವಳದು ಮುಖ್ಯಪಾತ್ರವಲ್ಲವೇ? ಇದರಿಂದಾಗಿಯೇ ಮಾತೃಪೂಜೆ, ದೇವಿಪೂಜೆಯ ಪದ್ಧತಿ ಪ್ರಾರಂಭವಾಗಿರಬೇಕು. ಬಸ್ತರದ ಆದಿವಾಸಿಗಳಲ್ಲಿ 'ದಂತೇಶ್ವರಿ'ಯ ಉಪಾಸಕರೇ ಹೆಚ್ಚಿನ ಜನ. ಆನೆಯ ಮೇಲೆ ಆರೂಢ ದೇವತೆ ಈಕೆ.

ಪ್ರತಿವಾರ ನಡೆಯುವ ಸಂತೆ, ವರುಷಕೊಮ್ಮೆ ನಡೆಯುವ ಜಾತ್ರೆ, ದಸರಾ ಹಬ್ಬಗಳೆಂದರೆ ಮುರಿಯ ಮಹಿಳೆಗೆ ಹೆಚ್ಚಿನ ಆಕರ್ಷಣೆ. ತಾನು ಸಾಕಿದ ಕೋಳಿ, ಹೆಣೆದ ಚಾಪೆ, ಬುಟ್ಟಿ, ಸಾಮೂಹಿಕ ಕೃಷಿಯಲ್ಲಿ ತನ್ನ ಪಾಲಿಗೆ ಬಂದ ಸಾಸಿವೆ, ಕಾಳು-ಕಡಿ, ಲಾಂದಾ-ತಂಬಾಕುಗಳೊಂದಿಗೆ ಮುಂಜಾನೆಯೇ ಪತಿಯೊಂದಿಗೆ ದೂರದಹಳ್ಳಿಯ ಸಂತೆಗೆ ಹೊರಟು ಬಿಡುವಳು. ಸರಕುಗಳನ್ನು ಹಣಕ್ಕೆ ಮಾರುವ ಬದಲು, ಬೇಕಾದವು ಗಳೊಂದಿಗೆ ಅದಲು-ಬದಲು ಮಾಡಿಕೊಳ್ಳುವದು ರೂಢಿ. ತಂದ ತೂಕದ ಸಾಸಿವೆಯಷ್ಟೆ ಉಪ್ಪನ್ನು ಪ್ರತಿಯಾಗಿ ಕೊಡುವ ಕ್ಷುದ್ರ ವ್ಯಾಪಾರಿಗಳು, ಅಲ್ಲಿರುವುದು ಜಾಸ್ತಿ! ಎಣ್ಣೆ, ಬೆಲ್ಲ, ಮಿಠಾಯಿಗಳನ್ನು ಕೊಳ್ಳುವಾಗಲೆಲ್ಲ ತಾನು ಮೋಸಹೋಗುತ್ತಿದ್ದೇನೆ, ಎಂಬ ಅರಿವೇ ಆಗದಷ್ಟು ಮುಗ್ಧಜೀವಿ ಅವಳು. ಹಳ್ಳಿಯ ವ್ಯಾಪಾರಿಗಳ ಕುಹಕ ಪ್ರಶ್ನೆಗಳಿಗೆ ಕುಲುಕುಲು ನಗೆಯೇ ಅವಳ ಉತ್ತರ. ಪರಪುರುಷರೆಂಬ ಸಲ್ಲದ ಮಡಿವಂತಿಕೆಯ ವಿಚಾರ ಅವಳಲ್ಲಿಲ್ಲ. ಯಾರೊಡನೆಯೂ ಮಾತನಾಡುವ, ನಗುವ ಸರಳತೆ ಅವಳದು. ಸಂತೆ-ಜಾತ್ರೆಗಳಲ್ಲಿ ತನ್ನ ಪರಿಚಯದವರನ್ನೆಲ್ಲ ಭೇಟಿ ಮಾಡುವದೇ ದೊಡ್ಡ ಆಕರ್ಷಣೆ ಅವಳಿಗೆ. ಸಂತೆಯ ಕೊಡು-ಕೊಳಿಯಲ್ಲಿ ಕಾಸು ಉಳಿದರೆ, ಹಚ್ಚೆ ಹಾಕಿಸಿ ಕೊಳ್ಳಬಹುದು. ಕನ್ನಡಿ, ಬಾಚಣಿಗೆ, ರಿಬ್ಬನ್ ಕೊಳ್ಳಬಹುದು ಎಂಬ ಕನಸು ಆಕೆಯದು. ಆದರದು ನನಸಾಗದಿರುವ ಪ್ರಸಂಗಗಳೇ ಹೆಚ್ಚು! ಅದು ಅವಳಿಗೂ ಗೊತ್ತು. ಅಲ್ಪದರಲ್ಲಿ ತೃಪ್ತಿ ಪಡುವದೇ ಅವಳ ನೆಮ್ಮದಿಯ ಬಾಳಿನ ಗುಟ್ಟು.

ಗುಡಿಸಲು ತೀರ ಚಿಕ್ಕದಾಗಿರುವದರಿಂದ ನಿಸರ್ಗಸಾನ್ನಿಧ್ಯದಲ್ಲೇ ಅವರ ಒಡನಾಟ, ಪ್ರೀತಿಯಾಟಗಳು ನಡೆಯುವವು. ಜೊತೆಗೆ ಉದರ ನಿರ್ವಹಣೆಯ ಚಟುವಟಿಕೆಗಳು. ಕಾಡಿಗೆ ಗಂಡು-ಹೆಣ್ಣು ಜೊತೆ-ಜೊತೆಯಾಗಿ ನಗುತ್ತ, ಕೆಲೆಯುತ್ತ, ನೆಗೆಯುತ್ತ, ಜಿಗಿಯುತ್ತ ಹೊರಟಾಗ ಈ ಮನುಷ್ಯರೂಪಗಳು ಪ್ರಾಣಿಯ ಚಪಲತೆಯನ್ನು ಸಾಧಿಸಿದ ಬಗೆ, ಅಚ್ಚರಿ ಮೂಡಿಸುವಂಥದು!

ಗಂಡಸರು, ಬಿಲ್ಲು-ಬಾಣಗಳನ್ನು ಹಿಡಿದು ಕಾಡುಮೃಗಗಳ ಬೆಂಬತ್ತಿದಾಗ ಈ ಹೆಂಗಳೆಯರು ಹಣ್ಣುಹಂಪಲು, ಗಡ್ಡೆಗೆಣಸು, ಒಣಸೌದೆಯ ಶೇಖರಣೆ ದ್ರೋಣ ಗಳನ್ನು ಮಾಡಲು ಎಲೆಗಳ ಸಂಗ್ರಹ ಮುಂತಾದವುಗಳಲ್ಲಿ ತೊಡಗುತ್ತಾರೆ ನಂತರ ಗೃಹಾಭಿಮುಖರಾಗುತ್ತಾರೆ.

ಒಟ್ಟಾಗಿದ್ದ ಒಂದರ ಹಿಂದೊಂದು ಕೆಲಸಗಳನ್ನು ಮಾಡಿ ಮುಗಿಸುವ ಆತುರ ಪ್ರಾರಂಭವಾಗುತ್ತದೆ. ಮಕ್ಕಳು, ಕುಕ್ಕುಟ, ಶ್ವಾನಗಳತ್ತ ಲಕ್ಷ ಪೂರೈ ಪತಿ, ಬೇಟೆಯಾಡಿ ತಂದ ಮೊಲ, ಕಾಡು ಅಳಿಲು, ಅಥವಾ ಹಿಡಿದು ತಂದ ಮೀನಿನ ವ್ಯಂಜನ ತಯಾರಿಸುತ್ತಾಳೆ. ಕುಚ್ಚಕ್ಕಿ ಅನ್ನ ಸಿದ್ಧ ಮಾಡುತ್ತಾಳೆ ಮನೆಯೊಡೆಯನ ಕೂದಲು ವಿಪರೀತ ಬೆಳೆದು ನಿಂತಿದ್ದರೆ, ಕ್ಷೌರಕ್ಕೆ ಸಹಾಯ ಒದಗಿಸುವಳು. ಆತ ತುಂಬಾ ದಣಿದಿದ್ದರೆ, ಎಣ್ಣೆಯೊತ್ತಿ ಸ್ನಾನ ಮಾಡಿಸುವಳು ಊಟವಾದ ಬಳಿಕವೂ ಕಾಲಹರಣಮಾಡದೇ ಎಲೆಗಳಿಂದ ದೊನ್ನೆಗಳನ್ ತಯಾರಿಸುವಳು. (ಅವರು ಪೇಯಗಳಿಗೆಲ್ಲ ಈ ದೊನ್ನೆಗಳನ್ನೇ ಬಳಸುವರು ಬುಟ್ಟಿಗಳನ್ನು ಹೆಣೆಯುವಳು. ದೊಡ್ಡ ಮಕ್ಕಳನ್ನು ಘೋಟುಲಕ್ಕೆ ಕಳಿಸಿಯೆ ನಿಶ್ಚಿಂತಳು.

ದೀಪದ ಅನುಕೂಲವಿಲ್ಲದ್ದರಿಂದ ಸೂರ್ಯಾಸ್ತದೊಂದಿಗೆ ಆಕೆಯ ಯಾವತ್ತೂ ಕಾರ್ಯಕಲಾಪಗಳು ಮುಗಿಯಬೇಕು. ಗುಡಿಸಲಲ್ಲಿ ಸದಾ ಉರಿಯುವ ಮಂದ ಪ್ರಕಾಶದ ಬೆಂಕಿಯನ್ನು ಒಟ್ಟಿರುತ್ತಾರೆ. ಚಳಿ ಕಾಯಿಸಿಕೊಳ್ಳು ಪತಿಯೊಂದಿಗೆ ಹರಟೆ-ನಗೆಚಾಟಿಕೆ ಸಾಗುತ್ತವೆ. ತಂಬಾಕನ್ನು ತೀಡಿ ಅವನಿ ಕೊಟ್ಟು ತಾನೂ ಸೇವಿಸುವಳು. ಮನೆಯಲ್ಲಿ ಮದ್ಯ ಉಳಿದಿದ್ದರೆ ದೊನ್ನೆಗಳಿ ಸುರುವಿ ಇಬ್ಬರೂ ಪಾಲುಗೊಳ್ಳುವರು. ಬೆಚ್ಚಗೆ, ಅಮಲೇರಿದಾಗ ಅವನ ಪಿಳ್ಳಂಗೋವಿಯನ್ನು ಊದುವ. ಅಥವಾ 'ಮಾಂದ್ರಿ' (ಮೃದುಂಗ) ಯನ್ ಎತ್ತಿಕೊಂಡು ಬಾರಿಸುವ ಅವಳು ದೇವತೆಯ ಹಾಡು ಅಥವಾ ಪ್ರೇಮಗೀ ಗುಣಗುಣಿಸುವಳು. ಹಾಸಿಗೆ, ಹೊದಿಕೆ, ದಿಂಬುಯಾವುದೂ ಇಲ್ಲದಿದ್ದರೂ ಚಾಪೆಯಮೇಲೆ ಕಂಬಳಿಯೊಂದರಲ್ಲೇ ಹುದುಗಿದಾಗ ಸುಖನಿದ್ರ ಆವರಿಸಿಬಿಡುತ್ತದೆ.

ಆದಿವಾಸಿಗಳ ಜೀವನವನ್ನು ಹತ್ತಿರದಿಂದ ಅವಲೋಕಿಸಿದಾಗ ಸ್ತ್ರೀ ಪುರುಷರ ಅಸಮಾನತೆಯೆಂಬುದು, ನಾಗರಿಕತೆಯ ಶಾಪವೆಂಬ ಅನಿಸಿಕೆ

ದೃಢವಾಗುತ್ತ ಹೋಗುತ್ತದೆ. ಸುಶಿಕ್ಷಿತ, ಸುರಕ್ಷಿತ ನೌಕರಸ್ಥ, ಸಾಮಾಜಿಕ ಪ್ರಜ್ಞೆಯ ನಗರವಾಸಿ ಮಹಿಳೆಯರೇ ಸ್ತ್ರೀಯರ ಹಕ್ಕು ಬಾಧ್ಯತೆಗಳಿಗಾಗಿ ಬಡಿದಾಡುವದರಲ್ಲಿ ಪ್ರಧಾನ ಪಾತ್ರ ವಹಿಸುತ್ತಿರುವದನ್ನು ಕಂಡಾಗ ಇದು ಸ್ಪಷ್ಟವಾಗುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಅಸಮಾನತೆ ಭದ್ರವಾಗಿ ನೆಲೆಗೊಂಡದ್ದು ನಿಜವಾದರೂ, ನಾರಿಯ ದುಃಖ-ಕಷ್ಟಗಳಿಗೆ ಅದು ಒಂದೇ ಕಾರಣವಲ್ಲ. ಮುಖ್ಯ ಕಾರಣ, ಕೊನೆಯೇ ಇಲ್ಲದ ಲೋಭ ಪ್ರವೃತ್ತಿ, ಮಹಿಳಾ ಶಿಕ್ಷಣ ಹೆಚ್ಚಿದಂತೆ ಇದೂ ಹೆಚ್ಚುತ್ತಲೇ ಹೋಗಿರುವದು ಕಳವಳದ ವಿಚಾರವಾಗಿದೆ. ಸುಶಿಕ್ಷಿತರಿದ್ದರೂ ವರನ ಕಡೆಯವರೆಲ್ಲ ಪ್ರತಿಷ್ಠೆ, ಧನ, ಟೊಳ್ಳು ಅಂತಸ್ತುಗಳ ಹಪಹಪಿ ಹೆಚ್ಚಿಸಿಕೊಳ್ಳುತ್ತ ಹೋಗಿರುವದನ್ನು ನೋಡಿದರೆ ಶಿಕ್ಷಣಕ್ಕೂ ಸಂಸ್ಕೃತಿಗೂ ಸಂಬಂಧವೇ ಇಲ್ಲವೇ? ಎಂದು ಮರುಗುವಂತಾಗುತ್ತದೆ. ಹಿಂದೆ 'ತೆರ'ದ ಪದ್ಧತಿಯಿದ್ದ ಎಷ್ಟೋ ಜನಾಂಗಗಳಲ್ಲಿ ಸಹ ವರದಕ್ಷಿಣೆಯ ಭೂತ ಕೇವಲ ಎರಡು ಮೂರು ದಶಕಗಳಲ್ಲಿ ಬೃಹದಾಕಾರ ತಾಳಿದ್ದನ್ನು ನೋಡಿದರೆ, ನಾಗರಿಕತೆ ಬೆಳೆದಂತೆ, ಮನುಷ್ಯರೇ ಮನುಷ್ಯರನ್ನು ಸುಲಿಯುವ ವಿಧಾನಗಳು ಬೆಳೆಯುತ್ತವೆ, ಕಷ್ಟಪಡದೇ ಹಣಗಳಿಸುವ, ಮೆರೆಯುವ ಪ್ರವೃತ್ತಿ ಹೆಚ್ಚುತ್ತ ಹೋಗುತ್ತದೆ, ಎಂಬುದು ಸ್ಪಷ್ಟವಾಗುವದಿಲ್ಲವೇ? ಇಂಥ ನಾಗರಿಕತೆಯಿಂದ ನೂರು ಹರದಾರಿ ದೂರವಿರುತ್ತಿದ್ದ ಆದಿವಾಸಿ ಮಹಿಳೆಯರು, ಯಾವ ಪ್ರತಿಭಟನೆ, ಆಕ್ರೋಶ, ಘೋಷಣೆಗಳಿಲ್ಲದೆಯೇ ತಮ್ಮ ಸ್ವಂತಿಕೆಯನ್ನು ಮೇಲ್ಮೆಯನ್ನು ಅನಾದಿಕಾಲದಿಂದ ರಕ್ಷಿಸಿಕೊಂಡು ಬಂದಿದ್ದರು. ಆದರೆ ಅವರ ನೆಮ್ಮದಿ, ನಂಬಿಕೆಗಳೆಲ್ಲ ದುರ್ದೈವದಿಂದ ಈಚೆಗೆ ಮಣ್ಣು ಪಾಲಾಗುತ್ತ ಬಂದಿವೆ.

ಪ್ರಾರಂಭದಲ್ಲಿ ಹೇಳಿದ 'ಪ್ರಗತಿಯೆಂಬ ಅಧೋಗತಿ'ಯತ್ತ ಈ ಜನಾಂಗಗಳು, ಬಲಾತ್ಕಾರವಾಗಿ ತಳ್ಳಲ್ಪಟ್ಟಿದ್ದಾರೆ. ಅವರ ನಾಡಾದ ಅರಣ್ಯ ಭೂಮಿ ಭರದಿಂದ ನಾಶವಾಯಿತು. ಅವರ ಪ್ರದೇಶದಲ್ಲಿ ಕಲ್ಲಿದ್ದಲು, ತವರು, ಮ್ಯಾಂಗನೀಜಗಣಿಗಳು ಕಾಣಿಸಿಕೊಂಡವು. ಕೂಲಿಗಾಗಿ ಹೊರಗಿನ ಜನ ಬರತೊಡಗಿದರು. ಹೊಟ್ಟೆಪಾಡಿಗೆ ಮಣ್ಣಿನ ಮಕ್ಕಳಾದ ಆದಿವಾಸಿಗಳೂ ನಿರಾಶ್ರಿತರಾಗಿ ಕೂಲಿಕೆಲಸಕ್ಕೆ ಸೇರಿಕೊಳ್ಳಬೇಕಾಯಿತು. ಹೊರಗಿನವರ ಕೆಟ್ಟಚಾಳಿಗಳು ಹರಡಿಕೊಳ್ಳಲು ತಡವಾಗಲಿಲ್ಲ. ಆರೋಗ್ಯಕರವಾದ ಲೈಂಗಿಕ ಜೀವನವನ್ನು ರೂಢಿಸಿ ಕೊಂಡವರು, ಈಗ ಲೈಂಗಿಕ ಕಾಯಿಲೆಗಳಿಗೆ

ಬಲಿಯಾದರು. ನಗರಗಳಿಂದ ಬಂದ ಕಂಟ್ರಾಟುದಾರರು, ಅವರ ಏಜಂಟರು ಸರಕಾರಿ ನೌಕರರು, ಉದ್ದಿಮೆ ಕಂಪನಿಗಳ ಸಿಬ್ಬಂದಿಯವರು, ಇವರೆಲ್ಲ ಮನೆಗಳಲ್ಲಿ ಕೆಲಸದ ಆಳಾಗಿ ಬಂದ ಆದಿವಾಸಿ ತರುಣಿಯರು ಬಗೆ ಬಗೆ ಶೋಷಣೆಗೆ ಒಳಗಾದರು. ದುರ್ದೈವದಿಂದ ಗರ್ಭಿಣಿಯಾದವರು, ಅನಾ ರಾಗುವ ಪ್ರಸಂಗ ಬಂದಿತು. ಆದಿವಾಸಿ ಕಟ್ಟು ಪಾಡುಗಳ ಪ್ರಕಾರ ಹೀ ಹೊರಗಿನವರಿಂದ ಗರ್ಭಿಣಿಯರಾದರೆ, ಅವರನ್ನು ಪುನಃ ಸೇರಿಸಿಕೊಳ್ಳುವದಿ ಕೆಲಸವನ್ನೂ, ಆಶ್ರಯವನ್ನೂ ಒಟ್ಟಿಗೇ ಕಳೆದುಕೊಂಡು ಬೀದಿ ಪಾಲಾದವ ಅದೆಷ್ಟೋ ಜನ. ಸ್ವತಃ ಭ್ರಷ್ಟ, ಪತಿತ ಅಧಿಕಾರಿಗಳಿಗೆ ಈ ದುರದೃಷ್ಟೆಯ ನೈತಿಕತೆಯನ್ನು ನಿರ್ಧರಿಸುವ ಅಧಿಕಾರವಿತ್ತರೆ ಕೇಳಬೇಕೇ?

ಹೀಗೆ ಉದ್ದಿಮೆಗಳಿಂದ ಪ್ರಗತಿ ತೋರಿಸುತ್ತಿದೆಯೆಂದು, ಸಾರಲ್ಪಡು 'ಹಿಂದುಳಿದ ಪ್ರದೇಶ'ವೆಂದೇ ಗುರುತಿಸಲ್ಪಡುತ್ತಿದ್ದ ಬಸ್ತರದಲ್ಲಿ ಆದಿವಾಸಿ ಮಹಿ ಭರದಿಂದ ಪರದೇಶಿಯಾಗುತ್ತಿದ್ದಾಳೆ. ಸರಕಾರದವರು, ಸ್ವಯಂಸೇವಕ ಸಂಸ್ಥೆಗಳ ಸ್ತ್ರೀ ಜಾಗೃತಿಗಾಗಿ ಶ್ರಮಿಸುವ ಸಂಘಗಳು ಮನಗಂಡು, ಆಕೆಯ ಶೋಷಣೆಯ ನಿಯಂತ್ರಿಸುವ ಪ್ರಯತ್ನ ಕೈಕೊಳ್ಳದಿದ್ದರೆ, ಶತಮಾನಗಳಿಂದ ರೂಢಿಸಿಕೊಂ ನಿಜವಾದ ಸ್ವಾತಂತ್ರ್ಯಯುತ ಮುಕ್ತಜೀವನವನ್ನು, ಈ ಅಪರೂಪದ ಮಹಿ ಶಾಶ್ವತವಾಗಿ ಕಳೆದುಕೊಂಡು, ಆಕೆಯ ಹಿಂದಿನ ಜೀವನವೆಂಬುದು ಕೇವ ಕವಿಕಲ್ಪನೆಯಾಗಿಯೋ, ಸಾಮಾಜಿಕ ಚರಿತ್ರೆಯ ಭಾಗವಾಗಿಯೋ ಉಳಿಯು ದರಲ್ಲಿ ಸಂದೇಹವಿಲ್ಲ.

ಅಂಬಿಕಾತನಯದತ್ತರ ಸ್ತ್ರೀ ದೃಷ್ಟಿಕೋನ

ವರಕವಿ, ದ.ರಾ.ಬೇಂದ್ರೆಯವರ ಜನ್ಮಶತಾಬ್ಧಿ ಸಂದರ್ಭದಲ್ಲಿ ಅವರ ಕಾವ್ಯ ಪ್ರತಿಭೆಯ ಅಸಂಖ್ಯ ಆಯಾಮಗಳನ್ನು ಗುರುತಿಸಲು, ಚರ್ಚಿಸಲು, ಹಲವಾರು ಕಮ್ಮಟಗಳು, ಗೋಷ್ಠಿಗಳು, ವಿಚಾರ ಸಂಕಿರಣಗಳು ಏರ್ಪಟ್ಟವು. ವಿದ್ವಜ್ಜನರ ಭಾಷಣಗಳಾದವು. ಅವರ ಕಾವ್ಯಚಿಂತನ ಕುರಿತಾದ 'ಭುವನದ ಭಾಗ್ಯ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಸನ್ಮಾನವೂ ಸಂದಿದೆ. ಎಷ್ಟೇ ಚರ್ಚಿಸಿದರೂ, ಅವರ ಕವಿತೆಗಳನ್ನು ಪ್ರತಿಸಲವೂ ಓದಿದಾಗ ಹೊಸಹೊಳಹುಗಳು ಕಂಡು ಬರುವದು, ಬೇಂದ್ರೆ ಕಾವ್ಯಪ್ರಿಯರ ಅನುಭವವಾಗಿದೆ. ವೇದ-ಪುರಾಣಗಳ ಅಧ್ಯಯನದ ಗಟ್ಟಿನೆಲೆಗಟ್ಟು, ಹಾಗೂ ಅನನ್ಯವಾಗಿ ರೂಢಿಸಿಕೊಂಡ ಆಡುಮಾತಿನ ನುಡಿಗಟ್ಟುಗಳನ್ನು ಅವರು ಮೇಳವಿಸಿಕೊಂಡ ಬಗೆಯನ್ನು ಅರ್ಥೈಸಿಕೊಂಡವರಿಗೆ, ಕವಿತಾಸ್ವಾದ ಸಾಧ್ಯವಾಗುತ್ತದೆ. ಅವರೇ ವಾಚಿಸಿದ ಕವಿತೆಗಳನ್ನು ಕೇಳಲು ಸಾಧ್ಯವಿದ್ದ ಸುದೈವಿಗಳೆಲ್ಲ ಅವರ 'ಶ್ರಾವಣ ಪ್ರತಿಭೆ'ಯಿಂದ ಮುಗ್ಧರಾದರೆ ಆಶ್ಚರ್ಯವಿರಲಿಲ್ಲ. ಕವಿ ಕೇಳುಗರಲ್ಲಿ ಅನಿರ್ವಚನೀಯ ಸಂಬಂಧವುಂಟು ಮಾಡುವ ಗಾರುಡಿಗರು ಅವರಾಗಿದ್ದಂತೆ, ಕೌಟುಂಬಿಕ ಸಂಬಂಧಗಳ, ಸಖ್ಯದ ಆಖ್ಯಾನ ಕೊಡ ಮಾಡುವದರಲ್ಲಿ ಮಿಗಿಲಾಗಿ ದ್ದರು. ನಾರೀ ರೂಪವನ್ನು ಅವರು ಕಂಡ ಬಗೆ, ಹಾಡಿದಬಗೆ, ಚಿತ್ರಿಸಿದ ಬಗೆಯನ್ನು ಮಹಾಪ್ರಬಂಧವೊಂದರಲ್ಲಿಯೇ ಮೂಡಿಸಲು ಸಾಧ್ಯ! ಒಂದು, ಉದ್ಗಾರ, ಒಂದೇ ಅನಿಸಿಕೆ, ಚಿಕ್ಕ ಶ್ರದ್ಧಾಂಜಲಿಗಳನ್ನು ಸಶಕ್ತ ಕವಿತೆಯನ್ನಾಗಿಸಿದರ ಜೊತೆಗೆ ಗಂಗಾವತರಣ, ಗಾಯತ್ರಿಸೂಕ್ತ. ಸರಸ್ವತಿಗೆ ಆವಾಹನೆಯಂಥ ಆಧ್ಯಾತ್ಮದ ಶಿಖರ ತಲುಪಿದ ಕವನಗಳು ಅವರಿಂದ ಹೊಮ್ಮಿವೆ. ಸ್ತ್ರೀ ಕಲ್ಪನೆ, ಶಕ್ತಿಯ ರೂಪತಾಳಿ ಅವರ ಹಲವಾರು ಕವನಗಳಲ್ಲಿ ಕಂಗೊಳಿಸಿದ ರೀತಿಗೆ ಅವರ ಹಿನ್ನೆಲೆಯೂ ಕಾರಣವಾಗಿದೆ. ಸಖಿ, ಗೆಣತಿ, ಪತ್ನಿ, ಮಗಳು, ಮಾತೆ, ಭೂದೇವಿ, ವಾಗ್ದೇವಿಯರಿಗೆ ಅವರು ಕೊಡಮಾಡಿದ ಕವನಾಂಜಲಿಯ ಕೆಲವು ಮಾದರಿಗಳನ್ನು ಮಾತ್ರ ಇಲ್ಲಿ ನೋಡಬಹುದು.

'ಅಂಬಿಕಾತನಯದತ್ತ'ನೆಂಬ ಕಾವ್ಯನಾಮ ಹೊಂದಿ, 'ಶ್ರೀಮಾತಾ' ಎಂಬ ಹೆಸರಿನ ಮನೆಯಲ್ಲಿ ಕಾವ್ಯೋಪಾಸನೆ ಕೈಕೊಂಡ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಸುಸಂಸ್ಕೃತ ಆದರೆ ಅತಿ ಬಡಕುಂಟಬಕ್ಕೆ ಸೇರಿದವರಾಗಿದ್ದರು. ತಂದೆ ಚಿಕ್ಕ ವಯಸ್ಸಿನಲ್ಲಿ ಕಾಯಿಲೆಯಿಂದ, ಆ ಬಳಿಕ ಬುದ್ಧಿಭ್ರಮಣೆಯಿಂದ ಬಳಲಿದರು. ಅವರ ಅಜ್ಜಿ ಮತ್ತು ತಾಯಿ ಸಣ್ಣ ಖಾನಾವಳಿಯೊಂದನ್ನು ನಡೆಸಿ ಮನೆ-ಮಕ್ಕಳನ್ನು ಸಂಭಾಳಿಸಿದರು. ಸೂಕ್ಷ್ಮಸಂವೇದನಾಶೀಲರಾಗಿದ್ದ ಕವಿಯ ಮೇಲೆ ಎಳೆತನದಿಂದಲೇ ಹೆಂಗರುಳಿನ ಪ್ರಭಾವ ದಟ್ಟವಾಗಿ ಬೀರಿದ್ದರಲ್ಲಿ ಆಶ್ಚರ್ಯವಿಲ್ಲ. ತಮ್ಮ ಚಿಕ್ಕದಾದ ಆತ್ಮಚರಿತ್ರೆಯಲ್ಲಿ ಬೇಂದ್ರೆಯವರು ಅಜ್ಜಿಯ ಅಜ್ಜಿ, ಅಜ್ಜಿ ಮತ್ತು ತಾಯಿಯವರನ್ನು ಕೃತಜ್ಞತಾಪೂರ್ವಕವಾಗಿ ನೆನೆಸಿಕೊಂಡಿದ್ದಾರೆ. ಬೇಂದ್ರೆಯವರ ತಾಯಿಯನ್ನು ಅವರ ತಾಯಿ ತಲವಾಯಿ ಗ್ರಾಮದ ಒಬ್ಬ ಬಡಿಗನ ಮನೆಯ ಗೋದಲೆಯಲ್ಲಿ ಪ್ರಸವಿಸಿದರಂತೆ! ಸಾವುಗಳ ಸರಮಾಲೆಯನ್ನೇ ಧೈರ್ಯದಿಂದ ಎದುರಿಸುತ್ತ ತಾಯಿಗೆ ಅಜ್ಜಿ, ಅಜ್ಜಿಗೆ ತಾಯಿ, ಈ ಎರಡು ಜೀವ ಒಂದನ್ನೊಂದು ಅಂಟಿ ನಿಂತವು. ಬೇಂದ್ರೆಯವರ ತಾಯಿಯ ಹೆಸರು ಅಂಬೂತಾಯಿ, ಅವರ ಹೆಸರನ್ನೇ ಕಾವ್ಯನಾಮದಲ್ಲಿ ಧರಿಸಿ ಅಂಬಿಕಾ ತನಯದತ್ತರಾದರು. 'ಮಾತೃನಾಮಖ್ಯಾತ'ನಾಗುವದು ಸಂಪ್ರದಾಯವಂತರಿಗೆ ಸರಿಕಾಣಲಿಲ್ಲವಂತೆ! ಈ ಕಾವ್ಯನಾಮದ ಹಿನ್ನೆಲೆಯಲ್ಲಿ ಬೇಂದ್ರೆಯವರ ಉದ್ಗಾರಗಳು ಗಮನಾರ್ಹವಾಗಿವೆ: ಕಾವ್ಯನಾಮ - ಅಂಬಿಕಾತನಯದತ್ತ ಅಂದಮೇಲೆ ಜೀವನದತುದ್ದಕ್ಕೂ ಸ್ತ್ರೀರೂಪದ ಮಾತೃಶಕ್ತಿ ಅವರ ಕಾವ್ಯಸ್ಫೂರ್ತಿಯಾಗಿದ್ದರೆ ಆಶ್ಚರ್ಯವಿಲ್ಲ. ಅವರದೇ ಭಾಷೆಯಲ್ಲಿ ಹೇಳುವುದಾದರೆ 1) ದೇಹಕೊಟ್ಟ ತಾಯಿ, 2) ಮಾತು ಕಲಿಸಿದ ತಾಯಿ, 3) ಸಂಸ್ಕಾರಸಂಪನ್ನ ಮಾಡಿದ ತಾಯಿ 4) ಭೂಮಂಡಲದ ಮಾನವತೆಯಲ್ಲಿ ನೆಲೆಸಿದ ತಾಯಿ 5) ವಿಶ್ವೋದರ ಧರಿಸಿದ ತಾಯಿ, ಈ ಐದು ಐದೆಯರು ದತ್ತನ ತಾಯಂದಿರು. ಇದು ಪಂಚಕೋಶ ಗರ್ಭ. ಅಂಬಿಕೆಯ ತೊಡೆ, ಹೊಟ್ಟೆ, ಎದೆ, ಕೊರಳು, ತುಟಿ, ಕಣ್ಣು, ಒಂದೊಂದರಲ್ಲಿಯೂ ಈ ಮಹಾಸ್ಪರ್ಶವಿತ್ತು. ಆಕೆಯ ದೀಕ್ಷೆಯಲ್ಲಿ ಅನಂತ ಸಹನೆ ಇತ್ತು. ಯುಗಯುಗದ ಕೊಂಡಿಯ ಕಂಪು ಇತ್ತು. ತಂದೆಯ, ಅವನ ಬಳಗದ ನಿಕಟ ಸಾನ್ನಿಧ್ಯದಿಂದ ದೈವವಂಚಿತನಾದ ನಾನು, ನನ್ನ ತಾಯಿ, ತಾಯಿಯ ತಾಯಿ, ಆಕೆಯ ತಾಯಿ, ಇವರ ಪ್ರತ್ಯಕ್ಷ ಚಾರಿತ್ರ್ಯದಲ್ಲಿ ಪೌರುಷವನ್ನು

ಕಂಡೆ. ನರಗುಂದ ಬಂಡಾಯದ ಗುಂಡಾಯದಲ್ಲಿ ನನ್ನ ಅಜ್ಜಿಯ ತಾಯಿಯು ಕಾಶೀ ವಿಶ್ವೇಶ್ವರನಲ್ಲಿ ಪ್ರಾಣಾರ್ಪಣೆ ಮಾಡಹೊರಟ ಯಜಮಾನನನ್ನು ಅನುಸರಿಸಿ ಆರೆಂಟು ವರ್ಷದ ಒಬ್ಬಳೇ ಒಬ್ಬ ಮಗಳನ್ನು ದೈವಕ್ಕೊಪ್ಪಿಸಿ ಕಾಶಿಯಲ್ಲಿ ದೇಹವಿಟ್ಟಳು. ನನ್ನ ಅಜ್ಜಿಯು ಹದಿನೇಳು ಮಕ್ಕಳಲ್ಲಿ ನನ್ನ ತಾಯಿಯನ್ನು ಉಳಿಸಿಕೊಂಡು, ಆಕೆಯ ಮಗನಿಗೆ (ದತ್ತನಿಗೆ) ವಿದ್ಯೆ ಕಲಿಸಿ ಬಾಳು ನೀಗಿದಳು. ನನ್ನ ತಾಯಿ ಮರಣಕಾಲದಲ್ಲಿ (ಬೇಂದ್ರೆಗೆ 29,ತಾಯಿಗೆ-45 ವಯಸ್ಸು) ಒಂದು ಕನಸುಕಂಡಳು. ದೇವಿಯ ಗುಡಿ. ಅವಳಿದಿರು ಈಕೆ ಪ್ರಾರ್ಥನೆ ಮಾಡುತ್ತಾಳೆ. ಮತ್ತೇತಕ್ಕೂ ಅಲ್ಲ. ದಾನ-ಧರ್ಮಕ್ಕಾಗಿ ಸಾಕಷ್ಟು ಸಂಪತ್ತು ಕೊಡು' ಎಂದು. ಪ್ರದಕ್ಷಿಣೆ ಹಾಕಿಬಂದು ನೋಡುತ್ತಾಳೆ. ದೇವಿಯಿದ್ದಲ್ಲಿ ದತ್ತಮೂರ್ತಿ! ಈ ಕನಸಿನ ಅರ್ಥವೇನು? ಎಂದು ಕೇಳಿದಳು ತಾಯಿ. ನಾನೋ ಆಗ ರಾಷ್ಟ್ರೀಯ ಶಾಲೆಯ ಬಡಶಿಕ್ಷಕ. ಕೆಲವು ಕವನಗಳು ಮುದ್ರಿತವಾಗಿದ್ದವು. 'ಕೃಷ್ಣಾಕುಮಾರಿ' ಪ್ರಕಾಶ ಕಂಡಿತ್ತು. ಕನಸಿನ ಅರ್ಥಹೇಳಿದೆ. "ನೀನು ಗೋದೂಬಾಯಿಯ ಮಗಳು, ಅಂಬಾಬಾಯಿ. ನಾನು ಅಂಬಿಕಾತನಯಕವಿ. ಕನ್ನಡನಾಡಿಗೆ ಈ ದತ್ತನನ್ನೇ ದಾನ ಮಾಡಿದ್ದೀಯಾ? ಮತ್ತೇನು, ಬೇಕು?" ಸಂಪಾದನೆ ಇಲ್ಲದವನ ಈ ಮಹಾಭಾಷ್ಯ ಅವಳನ್ನು ಆವಾಕ್ಕಾಗಿ ಮಾಡಿತು".

ಮುಂದೆ ಕೆಲವೇ ದಿನಗಳಲ್ಲಿ ಸಾವನ್ನಪ್ಪಿದ ತಾಯಿಗೆ 'ಗಂಗಾಷ್ಟಕ' ಬರೆದು ಬೇಂದ್ರೆ ತಾಯಿಗೆ ಪಿಂಡಾರ್ಪಣ ಮಾಡಿದ. ಮಾತೆಯ ಪ್ರಪಂಚದಲ್ಲಿ ಮಾತಿನ ಪಿಂಡ! 'ಮಾತೆ ಜ್ಯೋತಿರ್ಲಿಂಗ' ಎಂದು ಕಾಣುವದು ಜನ್ಮಜನ್ಮದ ಸಾಧನ. ಜಾತ್ಯಂತರ ಸಿದ್ಧಿ ಅಲ್ಲವೇ?" ಎಂದಿದ್ದಾರೆ.

'ಅಂಬಿಕಾತನಯದತ್ತ' ಹೆಸರಿನಲ್ಲಿ ಮೊದಲಕವಿತೆ ಮುದ್ರಿತವಾದದ್ದು 1918 ಶ್ರಾವಣದಲ್ಲಿ. ಅವರ ಕಾವ್ಯೋಪಾಸನೆ, ಈ ಹೆಸರಿನಲ್ಲಿ ಅವರ ಕೊನೆಯುಸಿರಿನವರೆಗೆ, 1981ರ ತನಕ ಮುಂದುವರಿಯಿತು.

ಇನ್ನು ಬೇಂದ್ರೆಯವರು ವಿವಿಧ ಕವನಗಳಲ್ಲಿ ರೂಪಿಸಿದ ಸ್ತ್ರೀ ಸಂಕೇತಗಳನ್ನು ತಿಳಿದುಕೊಳ್ಳೋಣ. ಶೃಂಗಾರ ಗೀತಗಳಿಂದಾಗಿ ಪ್ರಾರಂಭಿಸುವದೇ ಸರಿ. ನಮ್ಮಲ್ಲಿ ಈ ಕಾವ್ಯಪ್ರಕಾರವನ್ನು ಚೆನ್ನಾಗಿ ಪಳಗಿಸಿಕೊಂಡು ಜನಪ್ರಿಯಗೊಳಿಸಿದ ಕವಿಗಳಿಗೆ ಕೊರತೆಯಿಲ್ಲ ಕುವೆಂಪು, ಕೆ.ಎಸ್. ನರಸಿಂಹಸ್ವಾಮಿಗಳು ಮಿಗಿಲೆನಿಸಿದರೆ ನಂತರದ ತಲೆಮಾರಿನ ಬಹಳಷ್ಟು ಕವಿಗಳು ಈ ಕಾವ್ಯಪ್ರಕಾರವನ್ನು

ಶ್ರೀಮಂತಗೊಳಿಸಿದ್ದಾರೆ. ಆದರೆ ಬೇಂದ್ರೆಯವರು ಸಖೀಗೀತೆಗಳನ್ನು ಬರೆದಾ ಆ ಕಾಲಕ್ಕೆ ಅವು ಕ್ರಾಂತಿಕಾರಿಯೆನಿಸಿದ್ದವು. 'ನಾನು ಬಡವಿ. ಆತ ಬಡವ ಒಲವ ನಮ್ಮ ಬದುಕು! ಬಳಸಿಕೊಂಡೆವದನೆ ನಾವು, ಅದಕು ಇದಕು ಎದಕು! ಆತ ಕೊಟ್ಟ ವಸ್ತು ಒಡವೆ ನನಗೆ ಅವಗೆ ಗೊತ್ತು ! ತೋಳುಗಳಿಗೆ ತೋಳಬಂದಿ ಕೆನ್ನೆ ತುಂಬ ಮುತ್ತು" ಈಗಿನ ಝೀ ಮತ್ತು ಸ್ಟಾರ್ ಟಿ.ವಿ.ಗಳ ದೃಶ್ಯಯುಗದಲ್ ಈ ಶಬ್ದಗಳು ವಿಶೇಷ ಅನಿಸದಿದ್ದರೂ ಅರ್ಧಶತಮಾನದ ಹಿಂದೆ ಮಡಿವಂತಿ ಯೆಂಬುದು ಕಾವ್ಯಲೋಕಕ್ಕೂ ವ್ಯಾಪಿಸಿತ್ತು. ಬೇಂದ್ರೆಯವರ ಸಖೀಗೀತ ವಿಪರೀತ ಟೀಕೆ ಬಂದಿತು. ಬೇಂದ್ರೆಯವರೇ ಒಂದೆಡೆ ಹೇಳಿಕೊಂಡಿದ್ದಾರ "ನನ್ನ ಪ್ರಣಯ ಗೀತೆಗಳನ್ನು ಓದಿ, ಕೇಳಿ ಕೆಲವು ಆಧ್ಯಾಪ್ರಾಪಂಚಿಕರು ಮೂಗ ಮುರಿದರಂತೆ! ಮುರಕೊಂಡ ಮೂಗು ಮುಖಕ್ಕೆ ಏಕೆ ಮೂಗಬಟ್ಟಿಗೂ ಅಂದ ತರುವದಿಲ್ಲ! ಗೋಪಿಚಂದನಕ್ಕೂ ಒಂದು ಕಂಪು ಇರ್ತದ. ಅದು ದ್ವಾರಕೆಯ ಭೂಮಿಯ ಗುಣ" ಅಂತ. ತಾವು ಬರೆದದ್ದು ಈ ನೆಲಕ್ಕೆ ಎಷ್ಟು ಸಮೀಪಿಸಿದ್ದು ಮಾನವವ್ಯಾಪಾರಗಳಿಗೆ, ಎಷ್ಟು ಸಹಜವಾದದ್ದು ಎನ್ನುವ ಅರ್ಥದಲ ಉದ್ಗರಿಸಿದ್ದರು. 'ನಾನು ಬಡವಿ' ಬರೆದ ದಿನಗಳಲ್ಲಿ ಅದನ್ನು ಹಾಡಲು ಯಾ ಹೆಣ್ಣುಮಗಳೂ ಮುಂದೆ ಬಂದಿರಲಿಲ್ಲ. ಹೀಗಾಗಿ ಭೀಮಸೇನ ಜೋಶಿ, ಅದನ ಹಾಡಬೇಕಾಯಿತು!

'ಸಖೀಗೀತ' ದೊಡ್ಡ ಅಲೆಯನ್ನೇ ಎಬ್ಬಿಸಿತು. ತನ್ನ ಪತ್ನಿಗಾಗಿ ಅದನ ಕವಿ ಬರೆದಿದ್ದರು. ತರುಣ ಕವಿಯೊಬ್ಬ ನವಪತ್ನಿಗಾಗಿ ಕವನ ಬರೆದಿದ್ದರೆ ಮತ ಅದು ಭಾವಪೂರ್ಣವಾಗಿದ್ದರೆ ಆಶ್ಚರ್ಯವಿಲ್ಲ. ಆದರೆ 40 ವರ್ಷ ಸಂಸಾ ಹೂಡಿದ ನಂತರವೂ ಪ್ರಾಣಸಖಿಯ ಕುರಿತು ಬರೆದ ಕವಿಗಳು ಹೆಚ್ಚು ಜ ಇರಲಿಕ್ಕಿಲ್ಲ. ಅವರ ಶ್ರೀಮತಿ ಬಹಳ ಕಾಯಿಲೆ ಬಿದ್ದು, ಎಲ್ಲರೂ ಆಸೆ ಬಿಟ್ಟಿದ್ದರು ಮುತ್ತೈದೆಗೆ ತಾನು ಹೊರಬಿದ್ದರೇ ಗೆಲುವು ಅನಿಸಿತು. 'ಈ ಮುತ್ತಯ್ಯ' ಮು ಮುಳು ಅತ್ತನಂತೆ! ಆ ಮೇಲೆ ಹೇಳಿದ:-

ಗೌರಿ, ನೀ ಮುಂದಾಗಿ ಹೋಗಿ
ಬಾಗಿಲು ತೆರೆಸು ವೈಕುಂಠದಲಿ, ಧೃಷ್ಟರನು
ಒಳಗೆ ಬಿಡುವರೆ? ಅಲ್ಲಿರುವ ದಿಂಡಿಗರು, ದಾಂಡಿಗರು
ನಾನೂ ಬಂದೆ. ನೀಮುಂದೆ, ನಾನು ಹಿಂದೆ ಹಿಂದೆ!

ಸಾವನ್ನು ಎದುರಿಸಿದಾಗಲೆಲ್ಲ ಅವರ ಕವಿತ್ವ ಉಕ್ಕಿ ಬರುತ್ತಿತ್ತು. ಆ ಹೊತ್ತಿಗೆ ಲಕ್ಷ್ಮೀಬಾಯಿ, (ಅವರ ಪತ್ನಿ) ಹೇಗೋ ಚೇತರಿಸಿಕೊಂಡರು. ಹತ್ತು ವರ್ಷಗಳ ನಂತರ ಅಂತಿಮ ಕರೆ ಬಂದಿತು. ಮೃತ್ಯುಶಯ್ಯೆಯಲ್ಲಿದ್ದ ಪತ್ನಿಯನ್ನು ಕುರಿತು 'ಸಖ್ಯದ ಆಖ್ಯಾನ' ಇನ್ನೊಮ್ಮೆ ಉಕ್ಕಿತು.

"ಸಖೀ, ನಮ್ಮ ಸಖ್ಯದ ಆಖ್ಯಾನ ಮುಗಿದಿಲ್ಲ
ಗುರುಸೇವೆ ಉಳಿದಿದೆ ಇನ್ನೂ
ಒಂದೇ ಧಾಟಿಲೇ, ಸಮರಸ ಸಾಟೀಲೆ. ಒಂದೇ ಭಜನೆಯ ಅನ್ನೋಣು"

ಎಂದು ದೀರ್ಘವಾದ ಕವನವನ್ನೇ ಬರೆದರು. ಇದರಲ್ಲಿ ತನ್ನ ಕಾವ್ಯೋಪಾಸನೆಯಲ್ಲಿ ಪತ್ನಿ, ಬಾಳಿನುದ್ದಕ್ಕೂ ಸಲ್ಲಿಸಿದ ಸೇವೆ, ಕೊಡಮಾಡಿದ ಸಹಕಾರಗಳನ್ನು ಸ್ಮರಿಸಿಕೊಂಡಿದ್ದಾರೆ. ಈಗ ಲಿಂಗ ಸಮಾನತೆಯ ಯುಗದಲ್ಲಿ ಇದೇನು ಮಹತ್ವದ್ದು ಎನಿಸದಿದ್ದರೂ ಈ ದೃಷ್ಟಿಕೋನದಲ್ಲಿ ಅರ್ಧಶತಮಾನದ ಹಿಂದೆಯೇ ತಮ್ಮ ಗೀತಗಳ ಮೂಲಕ ಅವರು ಸಹಧರ್ಮ ಪ್ರಚಾರಕ್ಕೆ ಕಾರಣರಾಗಿದ್ದು ಅವರ ಸಾಹಸವನ್ನು ಎತ್ತಿ ತೋರಿಸುತ್ತದೆ.

ನೀನಾಗು ಕಿನ್ನರಿ, ನಾನು ಕಿನ್ನರನಾಗಿ
ಬಾರಿಸಿ ನೋಡುವೆ ಸಂಧಾನಾ
ನೀ ದೇವ ಗಾಂಧಾರಿ, ದೇವಗಂಧರ್ವ ನಾ
ದನಿ ಎತ್ತಿ ಹೇಳುವೆ, ನವಗಾನಾ

ಎಂದು ಪ್ರಜ್ಞಾಹೀನಳಾದ ಪತ್ನಿಗೆ ಕಾವ್ಯಾಂಜಲಿ ಅರ್ಪಿಸಿದರು.

ಸಖಿ ಏಳು ಬಂತೇಳು, ಅಧಿಕ ತೀರುತ್ತಲೆ
ತಾಯಿ ಕಳಿಸಿರುವಂಥ ನವಶ್ರಾವಣಾ ॥ ಶ್ರಾವಣಮಾಸ ಬೇಂದ್ರೆಯವರ ಜೀವನದಲ್ಲಿ ಅತಿಮಹತ್ವದ ಸ್ಥಾನವನ್ನು ಆಕ್ರಮಿಸಿತ್ತು. ಇಲ್ಲಿ ಅವರು ಪತ್ನಿಯ ಮೊದಲ ಮಂಗಳಾಗೌರಿಯ ನೆನಪು ಮಾಡಿ ಕೊಟ್ಟು ತಾಯಿಯನ್ನೂ ನೆನೆಸಿಕೊಂಡಿದ್ದಾರೆ.

ಒಂದು ಸಾದಾ ಸಾಂಸಾರಿಕ ಘಟನೆಯೂ ಈ ಮಹಾಕವಿಯ ಲೇಖನಿಯಲ್ಲಿ, ಸಾರ್ವತ್ರಿಕತೆಯನ್ನು ಪಡೆದ ಕವನದ ರೂಪ ತಾಳುತ್ತಿತ್ತು. ಇವರ ಆತ್ಮೀಯ ಸ್ನೇಹಿತನಿಗೆ ಒಬ್ಬಳು ಮಗಳು. ತುಂಬ ಅಕ್ಕರೆಯಿಂದ ಬೆಳೆಸಿದ್ದರು. ಕವಿಗಳ ಕಣ್ಣೆದುರೇ ಆಡುತ್ತ, ನಲಿಯುತ್ತ ಬೆಳೆದಳು. ಬಲುಬೇಗ ಬೆಳೆದು

ಮದುವೆಯಾಗಿ ಗಂಡನ ಮನೆಗೆ ಹೋದಳು. ಬಸಿರಾದಳು. ಮೊದಲ ಬಾಣಂತನದಲ್ಲೇ ಸತ್ತು ಹೋದಳು. ತಲ್ಲಣಿಸಿದ ಕವಿಹೃದಯ, ಕವನ ಹೆಣೆಯಿತು. ಸಹಜವಾಗಬಹುದಾಗಿದ್ದ ಕುಟುಂಬದ ಒಂದು ದುಃಖದ ಘಟನೆ, ಮನತಟ್ಟುವ ಕವಿತೆಯಾಗಿ ಮಾರ್ಪಟ್ಟಿತು. ಹೂಗಿಡದ ಸಸಿ, ತಂದು ನಟ್ಟು, ನೀರು ಹಾಕಿಬೆಳೆಸಿದ್ದು ಮೊಗ್ಗು ಬಿಡುತ್ತದೆ. ಹೂ ಅರಳುತ್ತದೆ. ಅದು ಅರಳಿ ತಲೆ ತೂಗುತ್ತ ಇತರರನ್ನೂ ನಲಿಸಬಹುದೆಂಬ ನಿರೀಕ್ಷೆಯಲ್ಲಿದ್ದಾಗ ಹೂ ಉದುರಿಬಿದ್ದೇ ಹೋಯಿತು. ಸ್ವಾನುಭವ, ಲೋಕಾನುಭವವಾಗಿ , ಸಾರ್ವಕಾಲಿಕವಾಯಿತು. ಅವರ 'ಕಥೆಯಾದಳು ಹುಡುಗಿ' ಕನ್ನಡ ಸಾಹಿತ್ಯದಲ್ಲಿ ಪ್ರತಿಮೆಯಾಗಿ ಬೆಳೆದುಬಂದಿತು.

ಹಸಿಯಿದ್ದಳು, ಬಿಸಿಯಾದಳು, ಸಸಿಯಿದ್ದಾ ಹುಡುಗಿ
ಹುಸಿಯರಿಯದ ಹುಡುಗಿ! ಕಣ್ಣೆದಿರಲ್ಲೆ ಬೆಳೆದಳು
ಹೊಸ ದೇಸಿಯ ಬೆಡಗಿ.
ಸೊಸೆಯಿದ್ದಳು, ಚಿಗುರಿಟ್ಟಳು, ಉಗುರ್ಗಂಪಿನ ಹುಡುಗಿ
ಉಸಿರ್ಗಂಪಿನ ಹುಡುಗಿ!
ಆಡುತ ನೋಡುತ ಬಿಟ್ಟಳು, ಊರೆಲ್ಲವನುಡುಗಿ.
ಚಿಗುರಿದ್ದಳು ಚಿಗರೆಮರಿ! ಹೂ ಬಿಟ್ಟಳು ಹುಡುಗಿ! ಮೊಗ್ಗಿದ್ದಾ ಹುಡುಗಿ
ಕಣ್ ಕುಣಿತಕೆ, ನಗೆ ಭಣಿತಕೆ ಮನಹೋಯಿತು ನಡುಗಿ
ಹಾ!ಹಾ! ಎನ್ನುತ ಬೆಳೆದಳು ಕೂಸೆನಿಸಿದ ಹುಡುಗಿ
ಒಗರಳಿದಿತು, ಹುಳಿಯಿಳಿದಿತು, ಬೆಳಗುಳಿದಿತು ಅಡಗಿ,
ಆಪಾಕವೊ, ಆ ಪಾಡೊ, ತಾಯಾದಳು ಹುಡುಗಿ, ಹಾಯಾದಳು
ಹುಡುಗಿ ಪಡೆದಷ್ಟೂ ಹಿಗ್ಗವಳಿಗೆ, ಮಮತೆಯ ಕಂಪಿಡುಗಿ
ಪಾಡಾದಳು, ಹಣ್ಣಾದಳು, ಮಣ್ಣಾದಳು ಹುಡುಗಿ
ನೆನಪಾದಳು, ವ್ಯಥೆಯಾದಳು, ಕಥೆಯಾದಳು
ಎದೆಯಲ್ಲಿಯೇ ಮಡಗಿ!

ಇನ್ನು ಅವರ ಅತ್ಯಂತ ಜನಪ್ರಿಯ ಭಾವಗೀತೆಯಾದ 'ಹುಬ್ಬಳ್ಳಿಯಾಂವ'ದ ಕಡೆಗೆ ಹೊರಳೋಣ. ಸಿಟ್ಟು ಮಾಡಿಕೊಂಡು ಹೋದ ಪ್ರಿಯಕರನ ದಾರಿ ಕಾಯುತ್ತ ಕುಳಿತ ಸೂಳೆಯ ವಿರಹಭಾವದ ತೀವ್ರತೆಯನ್ನು ಸೂಚಿಸುವ ಕವನ

ಬರೆದಾಗ ಅದೊಂದು ಕೀಳು ಅಭಿರುಚಿಯ ಪದ್ಯವೆಂದು ಕಡುಟೀಕೆಗೆ ಒಳಗಾಗಿತ್ತು. ಗೆಳೆಯನ ಬರವಿಗಾಗಿ ಕಾಯುತ್ತ, ಒಂದೇ ಸವನೆ ಹಲುಬುತ್ತ ಕುಳಿತ ತರುಣಿಯ ಕಳವಳದಲ್ಲಿ ಆತನ ಬಗ್ಗೆ ಬಾಹ್ಯ ಹಾಗೂ ಆಂತರಿಕ ಮೆಚ್ಚಿಗೆ, ಹಂತಹಂತವಾಗಿ ತೆರೆದುಕೊಳ್ಳುತ್ತ ಹೋದ ಹಾಗೆ, ಆ ವ್ಯಾಪಾರಿ ತರುಣನ ವ್ಯಕ್ತಿತ್ವವೂ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ತರುಣ ತರುಣಿ ಕಲಿತವರಲ್ಲ. ತಂತಮ್ಮ ಆಡುನುಡಿಯಲ್ಲೇ ಪರಸ್ಪರರ ಕುರಿತಾದ ಮೆಚ್ಚಿಗೆಯನ್ನು ಬೀರಿಕೊಂಡವರು. ಒಬ್ಬರಿಗೊಬ್ಬರು ಮಾರು ಹೋದವರು.

ಆ ತರುಣಿ ಮೆಚ್ಚಿಕೊಂಡವ ಹೇಗಿದ್ದ?
ಭಾರೀ ಜರದ ವಾರಿರುಮಾಲ್ ಸುತ್ತಿಕೊಂಡಾವಾ
ತುಂಬಮೀಸಿ ತೀಡಿಕೋತ ಹುಬ್ಬ್ ಹಾರಸಾಂವಾ
ಮಾತು ಮಾತಿಗೆ ನಕ್ಕು ನಗಿಸಿ ಆಡಿಸಿ ಆಡಾಂವಾ
ಏನೋ ಅಂದರ ಏನೋ ಕಟ್ಟಿ ಹಾಡ ಹಾಡಾಂವಾ
ಚಹಾದ ಜೋಡಿ, ಚೂಡಾದ್ಹಾಂಗ ನೀ ನನಗಂದಾಂವಾ। ಚೌಡಿ ಅಲ್ಲ,
ನೀ ಚೂಡಾಮಣಿ ಅಂತ ರಮಿಸ ಬಂದಾಂವಾ
ಜಲ್ಮ ಜಲ್ಮಕ ಗೆಣ್ಯಾ ಆಗಿ ಬರತೀನಂದಾಂವಾ। ಎದಿಮ್ಯಾಗಿನ ಗೆಣತಿ
ಮಾಡಿ ಇಟ್ಟುಕೊಂಡಾಂವಾ.

ಮುಖದ ಮೇಲೆ, ಮೈ ಮೇಲೆ ಕಪ್ಪು ಚುಕ್ಕಿ ಇದ್ದರೆ ಶುಭದ ಲಕ್ಷಣವೆನಿಸಿಕೊಳ್ಳುತ್ತದೆ. ಉತ್ತರ ಕರ್ನಾಟಕದಲ್ಲಿ ಅದಕ್ಕೆ ಗೆಳತಿ ಅಥವಾ ಗೆಣತಿ ಅನ್ನುತ್ತಾರೆ. ಈ ತರುಣ ಆಕೆಯನ್ನು ಎದಿಮ್ಯಾಗಿನ ಗೆಳತಿಯನ್ನಾಗಿ ಇಟ್ಟುಕೊಂಡಿದ್ದನಂತೆ! 'ಗೆಳತಿ' ಶಬ್ದದ ಶ್ಲೇಷೆಯೊಂದಿಗೆ ಅವರ ಸಂಬಂಧದ ಗಾಢತೆಯನ್ನು ಸೂಚಿಸುತ್ತದೆ. ತರುಣಿಯ ವಿರಹದ ತಾದಾತ್ಮ್ಯವನ್ನು ಕವಿ ತೋರಿಸಿದ ರೀತಿ ಅನನ್ಯವಾದದ್ದು.

ಮಾನವೀಯತೆಯಲ್ಲಿ ದೈವತ್ವಕಾಣುತ್ತಿದ್ದ ಕವಿಗೆ ಎಳೆಕಂದನಲ್ಲೂ ಅದು ವ್ಯಕ್ತವಾಗಿದ್ದರೆ ಅಚ್ಚರಿಯಿಲ್ಲ. ವರ್ಡ್ಸ್‌ವರ್ತ್ ಕವಿಯ My heart leaps up when I behold, a ranibow in the sky ಕವಿತೆಯಲ್ಲಿ Child is father of the man.

ಮುಂತಾದ ಶಬ್ದಗಳು ಬರುತ್ತವೆ. ಮಗುವಿನ ಮುಗ್ಧತೆಯಲ್ಲಿ ವರ್ಡ್ಸ್‌ವರ್ತ್ ದೈವಿಕತೆಯನ್ನು ಗುರುತಿಸಿದಂತೆ, ಈ ಕವಿಯ 'ಕರುಳಿನ ವಚನ'ಗಳಲ್ಲಿ ಅದು ಇನ್ನೂ ಸ್ಫುಟವಾಗಿ ಗೋಚರಿಸುತ್ತದೆ. ಎಳೆಮಗುವನ್ನು ಕಂಡಾಗ ಮಗು ಯಾರಂತಿದೆ? ಎಂಬ ಕುತೂಹಲವನ್ನು ಪ್ರತಿಯೊಬ್ಬರೂ ವ್ಯಕ್ತಪಡಿಸುತ್ತಾರೆ. ತಾಯಾದವಳು ಏನನ್ನು ಕಾಣುತ್ತಾಳೆ?

ಕಂದಾ, ನಿನ್ನ ಮುಖದ ಮುದ್ರಾಕೃತಿಯು ನನ್ನಂತಿದೆ
ಆದರೆ ದೇಹದ ಭದ್ರಾಕೃತಿಯು, ಅವರಂತಿದೆ
ಕಂದಾ, ನಿನ್ನ ಕಣ್ಣೊಳಗಿನ ಕರುಣೆ ನನ್ನಂತಿದೆ.
ಆದರೆ ನೋಟದೊಳಗಿನ ಸರಣಿ ಅವರಂತಿದೆ
ನಿನ್ನ ಹುಬ್ಬಿನ ಕೊನೆಯು ನನ್ನಂತಿದೆ,
ಆದರೆ ಮೂಗಿನ ತೆನೆಯು ಅವರಂತಿದೆ.
ಆಹಾಹಾ! ಹುಟ್ಟಾಗೆಲ್ಲಬಲ್ಲ ಸೋಲಲದ ಸೊಬಗುಗಾರ!
ಗಂಡುಗಾಡಿಯಲ್ಲಿ ಹೆಣ್ಣ ಮೋಡಿ ಬೆರೆತು
ಅರ್ಧನಾರೀ ನಟೇಶ್ವರನ ಅಭಿನವ ಸೃಷ್ಟಿಯಾದೆಯಲ್ಲ!

ಕವಿಗೆ ಪ್ರತಿಮಗುವೂ ಅರ್ಧನಾರಿ-ನಟೇಶ್ವರ. ಬೇರ್ಪಡಿಸಲಾಗದ ಅಮೋಘ ಸೃಷ್ಟಿ.

ಎಳೆಮಕ್ಕಳು ಮುಷ್ಟಿ ಬಿಗಿದುಕೊಂಡೇ ಮಲಗಿರುತ್ತವೆ. ಆ ಮುಷ್ಟಿಯಲ್ಲಿ ಏನಿರಬಹುದು? ತಾಯಿಯ ಕಲ್ಪನಾವಿಲಾಸ ನೋಡಿ!

ನನ್ನ ಮಗುವಿನ ಮುಚ್ಚಿದ ಮುಟ್ಟಿಗೆಯಲ್ಲಿ
ಕುಬೇರನ ಸಂಪತ್ತುಯಿರಬಹುದು
ತೆರೆದು ನೋಡಲೇ? ಬೇಡ
ಕೊಡುಗೈ ದೊರೆಯಾದ ಮೇಲೆ ಕೈ ತೆರೆವುದೇನು ತಡ?

ಈಗಿನ ಜ್ವಲಂತ ಸಮಸ್ಯೆಯಾದ ಪರಿಸರದ ಧ್ವಂಸ, ಐವತ್ತು ವರ್ಷಗಳ ಹಿಂದೆಯೇ ಕವಿಯನ್ನು ಕಾಡಿದ್ದಿತು. ಭೂಮಿತಾಯಿಯನ್ನು ಮಾನವ ಪ್ರಾಣಿ ಕಾಡಿದ್ದರ ಬಗ್ಗೆ, ಅವರ ಕಳವಳ ವ್ಯಕ್ತವಾದದ್ದು 'ಚಿಗರಿಗಂಗಳ ಚೆಲುವಿ' ಕವನದಲ್ಲಿ

ಚಿಗರಿಗಂಗಳ ಚೆಲುವಿ ಚೆದರಿ ನಿಂತಾಳ
ನೋಡೋ, ಬೆದರಿ ನಿಂತಾಳ.
ಹೊಳಿ ಹೊಳ್ಳ ತೊರೆದಾವೋ
ಗೆಣೆಹಕ್ಕಿ ಬೆರೆದಾವೋ

ಆಗದವರ ಹೊಟ್ಟಿ ಉರದಾವೋ। ಅಂಥವರ ದಿಟ್ಟ ಮನಿಮುರದಾವೋ ಅದನ ತಾ ಕಂಡು ಕೊರಗ್ಯಾಳೋ, ಮರುಗ್ಯಾಳೋ, ಸೊರಗ್ಯಾಳೋ ಹೂ,ಕಾಯಿ, ಹಣ್ಣು ತುಂಬಿದ ಬನದಾಗ । ಚಿಗರಿಗಂಗಳ ಚೆಲವಿ ಬೆದರಿ ನಿಂತಾಳೋ.

ಮಾನವ ಭೂಯಿನ್ನು ಸೂರೆಗೊಳ್ಳುತ್ತಲೇ ಇದ್ದಾನೆ. ಆ ಬಗ್ಗೆ ಭೂಮಿತಾಯಿಗೆ ಅನುತಾಪವಿದೆ.

ಬ್ಯಾಟಿನಾಯೊದರ್‍ಯಾವೊ। ಹಸುಜೀವ ಬೆದರ್‍ಯಾವೋ
ಗಳಗಳನೆ ಗಿಡದಲಿ ಉದರ್‍ಯಾವೊ। ದಿನ್ನಿಮಡ್ಡಿ, ಗುಡ್ಡ ಅದರ್‍ಯಾವ
ಅದನ ತಾ ಕಂಡು ನೊಂದಾಳೊ, ಬೆಂದಾಳೊ ಅಂದಾಳೋ
ಇದು ಎಂಥಾ ಜೀವದ ಬ್ಯಾಟಿ ಹಾಡೇ ಹಗಲ।

ಭೂಮಿ ತನ್ನ ಸುತ್ತ ತಿರುಗುತ್ತ, ಚಂದ್ರನನ್ನು ಬಗಲಲ್ಲಿ ಎತ್ತಿಕೊಂಡು, ಸೂರ್ಯನ ಬೆನ್ನು ಹತ್ತಿ, ಕಾಲ-ದೇಶಗಳಲ್ಲಿ ನಡೆಯುವ ಬದುಕಿನ ಇತಿಹಾಸಕ್ಕೆ ಸಾಕ್ಷಿಯಾಗಿದ್ದಾಳೆ.

ತನ್ನ ತಾಸುತ್ಯಾಳೋ। ಹೊತ್ತಿನ ಬೆನ್ನತ್ಯಾಳೋ
ತಿಂಗಳನ ಬಗಲಾಗ ಎತ್ಯಾಳೋ। ಗೆಣೆಯಾ, ಎತ್ತ್ಯಾಳೋ
ಉಕ್ಕುಕ್ಕುವ ದುಃಖ ಒಳಗೊತ್ತ್ಯಾಳೋ।

ನಿಂತ ನೆಲವೆಂದು ಕಡಿಲಾಕೊ, ಹಡಿಲಾಕೋ ಬಡಿಲ್ಯಾಕೋ ಇದು "ಒಡವ್ಯಲ್ಲೋ ಮಗನೇ ಉಸಿರಿದ್ದ ಒಡಲು ಅಂತಾಳೋ। ಎಡಬಿಡದೇ ತನ್ನನ್ನು ಹೊಡೆಯುವ, ಒಡೆಯುವ, ಕಡಿಯುವ ಜನಕ್ಕೆ ಭೂದೇವಿ ಹೇಳ್ತಾಳೆ-ಇದು ಆಟದ ಒಡವೆ ಅಲ್ಲಪ್ಪಾ ತಮ್ಮಾ! ಉಸಿರಾಡಿಸೋ ಒಡಲು ಕಣಪ್ಪಾ! ಎಂದು. ಆಕೆಯ ಬಿಸಿಯುಸಿರು ನಮ್ಮನ್ನು ತಬ್ಬಿತೇ? ಹಸಿರಿನಿಂದ ತುಂಬಿದ ನಿಸರ್ಗ, ಸ್ವಾರ್ಥಿ ಮನುಷ್ಯನಿಗೆ ಬೇಟೆಯ ವಸ್ತು ಮಾತ್ರ!

ಬೇಂದ್ರೆಯವರ 'ಚಳಿಯಾಕೆ' ಒಂದು ಸೊಗಸಾದ ಪ್ರಕೃತಿಗೀತ. ಚಳಿ ಕವಿಗೆ ಒಂದು ವೈಯಾರದ ಹೆಣ್ಣು. ಆಕೆಯ ಹೆರಳಿಗೆ ಹೊನ್ನ ಸೇವಂತಿಗೆ ಬಿಳಿಯ ಕೈಗೆ ಬಿಳಿಯ ಸೇವಂತಿಗೆಯ ಬಳೆಗಳ ಅಲಂಕಾರವಿದೆ. ಕಿವಿಗಳಲ್ಲಿ ಮುಗಿಲಲ್ಲಿ ಅಲ್ಲಾಡುವ, ಓಲೆಕೊಪ್ಪುಗಳಿವೆ. ಹೊಳೆ-ಹೊಂಡಗಳ ಉಸಿರನ್ನೇ ನಯವಾಗಿ ನೇಯ್ದು ತಯಾರಿಸಿದ ಮಂಜಿನ ಮೇಲ್ಸೆರಗು ಬೇರೆ. ಸೇವಂತಿಗೆ ಚಳಿಗಾಲದ ಹೂ, ಉಗಿಯಿಂದಾದ ಮಂಜು ಕಾಣುವದು ಇದೇ ಋತುವಿನಲ್ಲಿ, ಕವಿ ಕಲ್ಪನೆ ಹರಿದ ಬಗೆ ನೋಡಿ:

ಸೀಗೆ ಹುಣ್ಣಿಮೆ ಮುಂದೆ ಸೋಗಿನ ಚಂದ್ರಮು। ಸಾಗಿ ಬರುವೊಲು ಬರುವ ಚಳಿಯಾಕೆ। ಹೊನ್ನ ಸೇವಂತಿಗೆಯ ಹೆರಳು ಬಂಗಾರದ ಬೆಳ್ಳಿ ಸೇವಂತಿಗೆಯ ಬಳೆಯಾಕೆ।। ಮುಗಿಲಲ್ಲಾಡುವ ಬಾವಲಿಲ್ಲಿಗೆ. ಕಿವಿಗೊಪ್ಪ ಓಲೆಕೊಪ್ಪ ಚಳಿತುಂಬ। ಹೊಳೆಹೊಂಡದುಸಿರೆನ್ನ ನಯವಾಗಿ ನೇಯ್ದಂಥ ಮಂಜಿನ ಮೇಲ್ಸೆರಗು ಮೈತುಂಬ।।

ಕಣ್ಣಿಗೆ ಕಾಣದೆ ಮೈ ಮುಟ್ಟಿ, ತುಟಿಮುಟ್ಟಿ ಮಿಸುಕದೆ ಮುಸುಕಿಗೆ ಹೋಗುವಾಕೆ। ಅಡಿಗೊಮ್ಮೆ ನಡುನಡುಗಿ ಇರುಳ ಬೆಳದಿಂಗಳಕೆ। ಬಿಳಿಮೋಡ ನಗುವಂತೆ ಇರುವಾಕೆ ಈ 'ಚಳಿಯಾಕೆ'ಗೆ ಅತಿಮಾನುಷ ವ್ಯಕ್ತಿತ್ವ ಇದೆ ತಾನೆ? ಆದ್ದರಿಂದ ಜಾನಪದ ನಂಬಿಕೆಯ ಮೋಹಿನಿಯ ಚೇಷ್ಟೆ ಇಲ್ಲಿ ವ್ಯಕ್ತವಾಗಿದೆಯಂತೆ. ಉಸಿರುಸುಲಿಗೆ ಮರುಕ। ಹೆಜ್ಜೆ ಹೆಜ್ಜೆಗೂ ಬೆಡಗು, ಮೆಲ್ಲಗೆ ಮುಂಗೈ ಹಿಡಿವಾಕೆ. ಯಾವ ಜಾತಿಯ ಹೆಣ್ಣೋ? ಹಾವಭಾವವೇ ಬೇರೆ ಅಪ್ಪಿದ ಅಪ್ಪಿಕೆ ಬಿಡದಾಕೆ। ಚಳಿಯಾಕೆ। ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಗಾದೆ ಈ ಕವಿತೆಯ ಕೊನೆ ನುಡಿಯಲ್ಲಿ ವ್ಯಕ್ತವಾಗಿದೆ. 'ಚಳಿ ಬರೋಮುಂದ ಕಾಲುಬಿದ್ದು ಬರ್ತದ! ಹೋಗೋ ಮುಂದ ಮುದ್ದು ಕೊಟ್ಟು ಹೋಗ್ತದ' ಮೊದಲಿಗೆ ಕಾಲು ಒಡದು, ನಂತರ ತುಟಿ ಒಡೆಯುವದು ಸಾಮಾನ್ಯವಲ್ಲವೇ? ಬೇಂದ್ರೆಗೆ ಇದು ಚಳಿಯಾಕೆಯ ಚೇಷ್ಟೆ!

ಬೇಂದ್ರೆಯವರ 'ಗಂಗಾವತರಣ' ಅವರ ಪ್ರಸಿದ್ಧ ಕವಿತೆಗಳಲ್ಲಿ ಒಂದು. ದಿ.ಪಿ. ಕಾಳಿಂಗರಾಯರು ಸೊಗಸಾಗಿ ಹಾಡಿ ಅದರ ಭಾವಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಕವಿ, ಶಿವಮೊಗ್ಗೆಯ 1943ರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾಗ ಹಾಡಿ, ನೆರೆದ ಜನರ ಮೇಲೆ ಮೋಡಿ ಹಾಕಿದ್ದು ಆ ಕವಿತೆ.

ನಂತರ ಅತ್ಯಂತ ಜನಪ್ರಿಯವಾಯಿತು. ಮೊದಲೇ ತಾಯಿಗಾಗಿ ಗಂಗಾಷ್ಟಕ ಬರೆದಿದ್ದರು. ಈ ಕವಿತೆಯಲ್ಲಿ ಬೇಂದ್ರೆಯವರು ತಮ್ಮ ಮೆಚ್ಚಿನ ವೇದಪುರಾಣಗಳ ಭಾವ-ಸಂದರ್ಭಗಳನ್ನೆಲ್ಲ ಬಿಂಬಿಸಿದ್ದಾರೆ. ಗಂಗೆ ಮೂರು ಲೋಕದ ನದಿ, ತ್ರಿಪಥಗಾ! "ಸ್ವರ್ಗ ತೊರೆದು ಬಾ। ಬಯಲ ಜರೆದು ಬಾ। ನೆಲದಿ ಹರಿದು ಬಾ"ಎಂದಾಗ ಭಗೀರಥನು ಆಕೆಯನ್ನು ಬರಮಾಡಿಕೊಂಡಿದ್ದು ಕಣ್ಣಿಗೆ ಕಟ್ಟುತ್ತದೆ. ಅವಳ ಪ್ರಚಂಡ ಸಾಮರ್ಥ್ಯವನ್ನು ತಡೆದುಕೊಳ್ಳುವ ತ್ರಾಣ, ಭೂಮಿಗೆ ಇಲ್ಲ. ಆದ್ದರಿಂದಲೇ ಶಿವನು ಅವಳನ್ನು ಜಡೆಯಲ್ಲಿ ಇಟ್ಟುಕೊಂಡ ಎನ್ನುವುದು, ಎಲ್ಲರೂ ಬಲ್ಲ ಕಥೆ. "ಹರನ ಜಡೆಯಿಂದ, ಹರಿಯ ಅಡಿಯಿಂದ, ಋಷಿಯ ತೊಡೆಯಿಂದ ನುಸುಳಿ ಬಾ. ದೇವದೇವರನು ತಣಿಸಿಬಾ, ದಿಗ್ ದಿಗಂತದಲಿ ಹಣಿಸಿ ಬಾ। ಚರಾಚರಗಳಿಗೆ ಉಣಿಸಿಬಾ । ಇಳಿದು ಬಾ ತಾಯಿ, ಇಳಿದು ಬಾ"ಇಲ್ಲಿ ಪ್ರತಿ ಸಾಲಿಗೂ ಒಂದು ಪುರಾಣದ ಕಥೆಯಿದ್ದು ಅದನ್ನು ಹೇಳುವ ಅಗತ್ಯ ಇಲ್ಲ. ಇಲ್ಲಿ ಗಂಗೆ, ವಾಗ್ದೇವತೆಯಾಗಿದ್ದು ವಿಶೇಷ! ಇದು ಗಂಗಾವತರಣ ಎಂದೆನಿಸಿಕೊಂಡರೂ ಸರಸ್ವತಿಗೆ ಪ್ರಾರ್ಥನೆ ಎಂಬುದು ಒಳಾರ್ಥ. 'ಶಂಭು ಶಿವಹರನ ಚಿತ್ತೆ ಬಾ। ದತ್ತ ನರಹರಿಯ ಮುತ್ತೆ ಬಾ। ಅಂಬಿಕಾತನಯನತ್ತೆ ಬಾ' - ಎಂಬುದು ಕವಿಯ ಪ್ರಾರ್ಥನೆ.

1942ರಲ್ಲಿ ಬಂಗಾಲದಲ್ಲಿ ಭೀಕರ ಬರಗಾಲ ಬಿದ್ದು 2ನೇ ಮಹಾಯುದ್ಧದ ಬೇಗೆಯ ಜೊತೆಗೆ ಸಹಸ್ರಗಟ್ಟಲೆ ಜನ ಕೂಳಿಲ್ಲದೇ ಗಂಗಾನದಿಯ ದಂಡೆಗುಂಟ ಸತ್ತು ಬಿದ್ದಿದ್ದರು. ಆ ನೆಪವೇ ಈ ಕವನದ ಕೆಲಸಾಲುಗಳಲ್ಲಿ ಆರ್ತತೆಯಿಂದ ಮರುಕಳಿಸಿದೆ.

"ಕೊಳೆಯ ತೊಳೆವವರು ಇಲ್ಲಬಾ
ಬೇರೆ ಶಕ್ತಿಗಳು ಹೊಲ್ಲ ಬಾ
ನಾಡಿ ನಾಡಿಯನು ತುತ್ತ ಬಾ
ನಮ್ಮ ನಾಡನ್ನೇಸುತ್ತ ಬಾ
ಸತ್ತಜನರನ್ನು ಎತ್ತಬಾ"ಎಂದು ನಾಡಿನ ನೋವಿಗೇ ಈ ಕವಿ ಸ್ಪಂದಿಸಿದರು.

ಇದೇ ಸಂದರ್ಭದಲ್ಲಿ ಬೇಂದ್ರೆಯವರು ಗಾಯತ್ರೀ ಸೂಕ್ತವನ್ನು ಕನ್ನಡನಾಡಿಗೆ ಕೊಡಮಾಡಿದ್ದರು. ಗಾಯತ್ರಿಯೆಂದರೆ ಬೇಂದ್ರೆಯವರ ಮಟ್ಟಿಗೆ ಸರಸ್ವತಿಯೇ! ಎಲ್ಲ ವಿದ್ಯೆಕಲೆಗಳ ಈ ಮೂಲದೇವತೆ ಬೇಂದ್ರೆಯವರಿಗೆ

ಗಾಯತ್ರಿಮಂತ್ರದಲ್ಲಿ ಮೂರ್ತಿವತ್ತಾಗಿ ತೋರುತ್ತಾಳೆ. ಅವರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯಭಾಷಣ 'ಸಾಹಿತ್ಯದ ವಿರಾಟ್ ಸ್ವರೂಪ' ಎಂಬ ವಿಷಯವನ್ನು ಒಳಗೊಂಡಿತ್ತು. ಅದಕ್ಕೆ ಪೂರ್ವಭಾವಿಯಾಗಿ ಗಾಯತ್ರೀ ಸೂಕ್ತ ಓದಿದರು. 6 ನುಡಿಗಳಲ್ಲಿ ಅವರು ಸಾಹಿತ್ಯದೇವಿಯಾದ ಸರಸ್ವತಿಯ ವಿರಾಟ್ ರೂಪ ಸೆರೆಹಿಡಿದಿದ್ದಾರೆ ಎಂದರೆ ತಪ್ಪಲ್ಲ. ಋಗ್ವೇದದ ಈ ಮಂತ್ರ. ಗಾಯಿತ್ರಿ ಸರಸ್ವತಿಯಲ್ಲಿ ರೂಪತಾಳಿ, ಬ್ರಹ್ಮನರಾಣಿ, ಸ್ಕಂದಪುರಾಣದ ಶಿವೆ ಆಗಿ, ಶಕ್ತಿ ಸಾಮರ್ಥ್ಯಗಳ ಪ್ರತೀಕವಾಗಿ, ಕೋಟಿ ಚಿಕ್ಕೆಗಳಿಂದ ಕೂಡಿದ ಆಕಾಶವೆಂಬ ಗ್ರಂಥದ ಪುಟಗಳನ್ನು ಓದುವವಳೇ ಆದಳು. ಬ್ರಹ್ಮನರಾಣಿಯಂತೂ ಸರಿ. ವತ್ಸಲಾಂಛನ ಉಳ್ಳ ಶ್ರೀಕೃಷ್ಣನ ಹೃದಯ ಕಮಲದಲ್ಲಿ ನೆಲೆಸುವ ಲಕ್ಷ್ಮಿ ಯಲ್ಲದೇ ಶಿವನ ಅರ್ಧಾಂಗಿ ಶಕ್ತಿ ಎಂದು ವಿವಿಧ ಪುರಾಣಗಳ ಆಧಾರದ ಮೇಲೆ ಆಕೆಯನ್ನು ಆಹ್ವಾನಿಸಿದ್ದಾರೆ. 'ಆಕೆ' ಎಂದು ಅಂತ್ಯಪ್ರಾಸ ಹೊಂದಿದೆ, ಈ ಕವನ. ವೇದದ ಸಂಸ್ಕೃತದಲ್ಲಿ ಕ:'ಕೆ' ಎಂದರೆ 'ಶಕ್ತಿ ಸಾಮರ್ಥ್ಯ ಉಳ್ಳ ಧೀಮತಿ ಎಂಬ ಅರ್ಥವಿದೆ.

ಲಯದ ಬಸಿರ ಬಯಲಲ್ಲಿ ದೇವಭವಬೀಜ ಬಿತ್ತಿದಾಕೆ
ಮೂಕು ಮೊಗ್ಗೆ ಮುನ್ನೂಕಿ ಬಂಡಿನಲಿ ತಲೆಯನೆತ್ತಿದಾಕೆ.
ಜಗದ ಪ್ರಾಣಗತಿ ಜಡಿದು ಮಿಡಿದು ಸ್ವರಮೇಳ ಕೋದಿದಾಕೆ
ಕೋಟಿಚಿಕ್ಕೆ ಪುಟಕಿರುವ ಬಯಲ ಹೊತ್ತಿಗೆಯನೋದಿದಾಕೆ
ಪಿಂಡಗಳನು ಬ್ರಹ್ಮಾಂಡಗಳನು ಮಣಿಮಾಲೆ ಮಾಡಿದಾಕೆ
ನಿನ್ನತಾಳಗತಿಯಲಿ ವಿಶ್ವಗಳ ಗೀತ ಹಾಡಿದಾಕೆ
ಕೀಟಕೀಟದಲಿ ಮಾಟಮಾಡಿ ಹಲಚೆಲವು ತೂರಿದಾಕೆ
ಪಶುವಿನಿದಿರು ಮರಿದೂಡಿ ಮೋಡಿಯಲಿ ಒಲವಹೀರಿದಾಕೆ
ಹಾವಭಾವದಲಿ ಭೋಗಯೋಗದಲಿ ನಲಿವ ತೋರಿದಾಕೆ
ಸಕಲವಿಕಲಗಳ ಕಲೆಯ ಜಾಲದಲಿ ಬಲವ ಮೀರಿದಾಕೆ
ಚತುರ್ಮುಖನ ನಾಲಗೆಯ ಹಾಸಿ ತುಟಿದಿಂಬು ಮಾಡಿದಾಕೆ
ವತ್ಸಲಾಂಛನದ ಹೃದಯಕಮಲದಲಿ ಮನೆಯ ಹೂಡಿದಾಕೆ
ಹರನ ಮೈಯ ನರೆಮುಂಬಿ ಲೀಲೆಯಲಿ ತಲೆಯನೇರಿದಾಕೆ
ವರದ ಅಭಯಕರವಿರುವ ತಾಯಿ ಬಾ, ಬೇರೆ ಕರೆಯಬೇಕೆ?

ಎಂದು ವಿರಾಟ್ ಸ್ವರೂಪದ ತಾಯಿ ಸರಸ್ವತಿಯನ್ನು ಆಹ್ವಾನಿಸಿದ್ದಾರೆ. ವೇದ, ಉಪನಿಷತ್ತು ಪುರಾಣೇತಿಹಾಸಗಳನ್ನು ಮೂಲರೂಪದಲ್ಲಿ ಅರಗಿಸಿಕೊಂಡ ಕವಿಯ ಅಂತಃಚಕ್ಷುವಿಗೆ ಕಂಡ ವಾಣಿಯ ರೂಪ ಇದು. ಇದೇ ಕವಿ ಸಾದಾಜಾನಪದ ದೇವತೆ ಮಾರಮ್ಮ. ದುರ್ಗಮ್ಮನನ್ನು ಕಂಡರೂ ಅದೇ ಭಾವಾವೇಶದಿಂದ ಶಕ್ತಿ ಸ್ವರೂಪಿಣಿಯ ರೂಪವನ್ನು ಹಾಡುತ್ತಿದ್ದರು. ಅಣ್ಣಿಗೇರಿಯ ಒಂದು ಹಳ್ಳಿಯಲ್ಲಿ ಮಾಹೂರಗಡದ ಭವಾನಿ, ಬಂದು ನೆಲೆಸಿದ್ದಾಳೆ ಎಂಬ ಪ್ರತೀತಿಯಿದೆ. ಆ ಹಳ್ಳಿಯಲ್ಲಿ ದೇವಿಯನ್ನು ಜಾತ್ರೆಯ ವೈಭವದಲ್ಲಿ ಕಂಡು ಬೆರಗಾಗಿ ಕವಿತೆ ಸ್ಫುರಿಸಿತು.

ನಮ್ಮ ತಾಯಿ ಮಾಹೂರ ಗಡದಾಕಿ
ಕತ್ತಲಿಯಲಿ ಹಗಲು ಪಂಜು ಹಿಡಿಸಿದಾಕಿ
ರಥಾಏರಿ, ಮದ್ದಾನಿ ಎಳಸಿದುಡದಾಕಿ
ರಥಕ್ಕಿಂತ ಮುಂದ ತಾನ ನಡದಾಕಿ
ನತ್ತಿನಾಕಿ।ಗತ್ತಿನಾಕಿ। ಸುತ್ತಿನಾಕಿ। ಹೊತ್ತೊತ್ತಿಗೆ ನಾಡಿಗೆಲ್ಲಾ ಒದಗೋ ಆಕಿ।
ಹೃದಯದಾಗ ಮೂರುದೇವರ ಪಡದಾಕಿ। ಉಧೋ ಅನಿಸಿ
ಓಂ ತಾನ ನುಡಿ ಬಾಕಿ ಬೇಕು ಬೇಡ ನೋಡಿಕೊಂಡು ಸಾಕಿದಾಕಿ
ಜನ್ಮ ಮರಣ ಮುಕ್ತಿಗಾಗಿ ಹಾಕಿದಾಕಿ
ಎಲ್ಲಾರ ನಾಲಗಿ ಮ್ಯಾಲೆ ಇರುವಾಕಿ। ಎತ್ತತ್ತೋ ಹಾಜರು ಇರುವಾಕಿ.
ನಜರಹಾಕಿ ಸಾವಿರ ಚವರಿ ಬೀಸಿ ಬೀಸಿ ಪ್ರಾಣ ತ್ರಾಣ ಉಳಿಸಿದಾಕಿ
ಆರ್ತಿ ಕೀರ್ತಿ ಬೆಳಗಿಸಿ ರಾಜ್ಯೇನಡೆಸಿದಾಕಿ

ಜನರ ಮುಗ್ಧ ಭಾವ, ಶುದ್ಧಭಕ್ತಿಗಳ ಅರಿವಿದ್ದಕವಿ ಈ ಸುಲಭದ ಪದ್ಯ ಬರೆದರು.

'ಸರಸೋತಿ ಅಂತ ನಿನ್ನ। ಅರಸೊತ್ತಿಗೆ ಒಪ್ಪಿಕೊಂಡೆ
ಬರಸೋ ಹೊತ್ತಿಗೆ ಬರಸು। ಇನ್ನ ಪುರುಸೊತ್ತಿಲ್ಲಾ?
ಕರಸೋದು ಯಾಕ ನಿನ್ನ? ಮರಸೋದ ಯಾಕ ನನ್ನ?
ಸುರಸೋ ವೇದದ ಮಳಿ ಸುರಸು ಇನ್ನ!

ಎಂದು ಇನ್ನೊಂದೆಡೆ ಸರಸ್ವತಿಯನ್ನು ಆಹ್ವಾನಿಸಿದ್ದಾರೆ!

ಒಟ್ಟಿನಲ್ಲಿ ಬೇಂದ್ರೆಯವರು ಶಕ್ತಿದೇವಿಯ ಹಲವಾರು ರೂಪಗಳನ್ನು ಹಲವು ಬಗೆಯಲ್ಲಿ ಕಂಡಿದ್ದಾರೆ. ಅವರ ಕಾವ್ಯೋಪಾಸನೆಯಲ್ಲಿ ನಾರೀರೂಪ ಎಷ್ಟು ರೂಪತಾಳಿದೆ ಎಂದು ಸ್ವಲ್ಪದರಲ್ಲಿ ಗ್ರಹಿಸುವುದು ಕಷ್ಟ! ಅವರ ಕೊನೆಗಾಲದಲ್ಲಿ ಉಕ್ಕಿದ ಒಂದು ಪದ್ಯದಲ್ಲಿ ಈ ಶಕ್ತಿ ದೇವತೆಯ ಅನಂತರೂಪಗಳನ್ನು ಶತಮಾನದ ರೂಪದಲ್ಲಿ ಕಂಡಿದ್ದಾರೆ. ಮಹಾಸರಸ್ವತಿ, ಮಹಾಲಕ್ಷ್ಮೀ, ಮಹಾಕಾಳಿ, ಮಾಹೇಶ್ವರಿ, ಕರೆವ್ವ, ಕಂಜೆವ್ವಾ, ದುರ್ಗವ್ವಾ ಹಲವು ದೇವಿಯರೆಲ್ಲ ಈ ಅನಂತರೂಪದ ಪ್ರತೀಕ. ಮನೆ ಮನೆಯಲ್ಲಿ ಈ ಮಾಯೆಯೆ ರೂಪ ಪೂಜಿಸಲ್ಪಡುತ್ತದೆಯೆಂಬುದನ್ನು ಈ ಶತಮಾನದಲ್ಲಿ ತಿಳಿಯಪಡಿಸಿದರು.

ಯಾವೂರಾಕಿ, ನೀ ಮಾಯಾಕಾರತಿ?
ನಿನಗೆ ಎತ್ತ್ಯಾವ ಮನಿಮನಿ ಆರತಿ
ಶೃಂಗೇರಿ ತುಂಗಿ ಆಗಿ, ಕಾಶಿಯ ಗಂಗಿ ಆಗಿ, ಕೂಡಲ ಸಂಗಿ ಮುಂದ ಸರದಿ!

ಮಾಹೂರಗಡದ ಭವಾನಿಯಾಗಲೀ, ಭೂಮಾತೆಯಾಗಲಿ
ಶಕ್ತಿಯಾಗಲಿ, ಗೌರಿ ಆಗಲಿ, ಎಲ್ಲಮ್ಮನಾಗಲಿ, ಕವಿಗೆ ಆಕೆ
ಆದಿಮಾತೆ, ಸರಸ್ವತಿ,
ವಿಶ್ವವ್ಯಾಪಿನಿ, ಭುವನೇಶ್ವರಿ.
'ಮಕ್ಕಳನ್ನು ಮುದ್ದಿಟ್ಟು ಮುಗಿಲಾಗ ತೊಟ್ಟಿಲುಕಟ್ಟಿ
ಬೇರೇನ ಹಣೇಬರಾ ಬರದಿ'

ಈ ಸಾಲು ಬರೆದಾಗ ವಿಧಾತನರಾಣಿ ವಾಣಿಯೇ ಮಕ್ಕಳ ಹಣೆಬರಹ ಬರೆಯುತ್ತಿರುವಂತೆ ಕವಿಗೆ ಭಾಸವಾಗುತ್ತಾಳೆ.

'ಅಸರಂತ ತಿರಗೋ ಆಕಿಗೆ ಯಾವೂರಂತ ಏನು ಕೇಳ್ತಿ?' ಊರಿಂದೂರಿಗೆ ಸ್ತ್ರೀ ಗ್ರಾಮದೇವತೆಯ ಹೆಸರು, ರೂಪ ಬದಲಾಗುತ್ತಿದ್ದುದರ ಸ್ಪಷ್ಟ ಕಲ್ಪನೆ ಕವಿಗೆ ಇತ್ತು.

ಯಾರೆ ನೀ ಯಾರೇ ಇರು ಬಹುರೂಪಿನೀ। ಮಾಯಾವಿ ನೀ
ಎನಲಾರೆ ನಾ। ನಾನಾ ದಿಶಾ। ಆಶಾವಶಾ॥
ಓಂ ವ್ಯಾಪಿನೀ.

ಇಲ್ಲಿ ಶಕ್ತಿಮಾತೆಯ ಸರ್ವವ್ಯಾಪಕತೆಯನ್ನು ಒಪ್ಪಿಕೊಂಡಿದ್ದಾರೆ. ಋಗ್ವೇದದ ಮಂತ್ರದ್ರಷ್ಟಾರರು ಕಂಡುಕೊಂಡು ಉದ್ಗರಿಸಿದ ಅದಿತಿಯ, ಪ್ರಕೃತಿಮಾತೆಯ, ಪೃಥ್ವಿಯ ರೂಪವನ್ನು ಈ ಕಾವ್ಯಸೃಷ್ಟಾರರೂ ಕಂಡಿದ್ದಾರೆ! ಬಹುರೂಪಗಳಲ್ಲಿ ಸ್ತುತಿಸಿದ್ದಾರೆ. ಈ ಮಾತೆಯೇ ಸರಸ್ವತಿಯ ರೂಪದಲ್ಲಿ ಅವರಿಗೆ ಉಸುರಾಡಿದಷ್ಟು ಸುಲಭವಾಗಿ ಬರೆಯಲು ಸಾಧ್ಯವಾಗಿಸಿದಳು ಎಂಬ ದೃಢನಂಬಿಕೆ ಅವರದಾಗಿತ್ತು. ಅವರ ಕೊನೆಗಾಲದಲ್ಲಿ ಹೊರಹೊಮ್ಮಿದ ಈ ಸಾಲುಗಳಲ್ಲಿ ಅದು ಸ್ಪಷ್ಟವಿತ್ತು.

ಹೀಗೆ ಸಖಿಯಾಗಿ, ಗೆಣತಿಯಾಗಿ, ತಾಯಿಯಾಗಿ, ಮಗನಾಗಿ, ಮಗಳಾಗಿ, ದೇವಿಯಾಗಿ, ತಾದಾತ್ಮ್ಯಭಾವದಿಂದ ಸ್ತ್ರೀಯ, ಕಾವ್ಯಶ್ರೀಯ ಆರಾಧನೆ ಕೈಕೊಂಡು ಅಂಬಿಕಾತನಯದತ್ತರು ಅನನ್ಯರಾಗಿದ್ದಾರೆ. ವಾಗ್ದೇವಿಯನ್ನು ಪೂರ್ಣತಃ ಒಲಿಸಿಕೊಂಡಿದ್ದಾರೆ.

ಪಾಂಡಿಚೇರಿಯ ಶ್ರೀ ಅರವಿಂದರೂ, ಶ್ರೀಮಾತೆಯೂ ಕವಿಯ ಮೇಲೆ ಗಾಢ ಪ್ರಭಾವ ಬೀರಿದ್ದರು. ಅನೇಕ ಪ್ರಾರ್ಥನಾಪದ್ಯಗಳು ಶ್ರೀಮಾತೆಗೆ ಅರ್ಪಿತವಾಗಿದ್ದಂತೆ, ಅವರ ಕಾವ್ಯತಪಸ್ಸಿನ ತಾಣವೂ ಅದೇ ಹೆಸರನ್ನು ತಾಳಿದ್ದು ಆಕಸ್ಮಿಕವಲ್ಲ.

❖

ಮಹಿಳೆ ಮತ್ತು ಕಾನೂನು ರಕ್ಷಕರು

ಪೋಲಿಸರೆಂದರೆ ರಕ್ಷಕರು, ನಮ್ಮ ಮಿತ್ರರು, ಎಂಬ ಭಾವನೆಯ
ಎಳೆಯರಲ್ಲಿ ಬಿತ್ತಿ ಬೆಳೆಸುವ ಯತ್ನ ನಮ್ಮಲಿಲ್ಲ. ಪೋಲಿಸ್ ಎಂದ
ಭಯಪಡಬೇಕಾದ ವ್ಯಕ್ತಿ. ಜೈಲಿಗೊಯ್ದು ಕೂಡ್ರಿಸುವ ಭಯಂಕರಪ್ರಾಣಿ ಎಂ
ನಂಬಿಸುವ ಜನ ಜಾಸ್ತಿ! ಚಿಕ್ಕಂದಿನಲ್ಲಿ ಸ್ಕೂಲಿಗೆ ಹೋಗುವದನ್ನು ತಪ್ಪಿಸಿದ
ಪಾಠ ಓದದಿದ್ದರೆ, ಗಲಾಟೆ ಮಾಡಿದರೆ ಪೋಲಿಸರ ಕೈಗೆ ಕೊಟ್ಟು ಬಿಡುತ್ತೇ
ಎಂದು ಪಾಲಕರು ಹೆದರಿಸುವದು ಸಾಮಾನ್ಯವಾಗಿತ್ತು. ಆ ರೀತಿ ಹೆದರಿಸಿಕೊಂ
ಬೆಳೆಯುತ್ತಿದ್ದ ಅಸಂಖ್ಯರಿದ್ದರು! ನಾಲ್ಕೈದು ದಶಕಗಳ ನಂತರವೂ ಪರಿಸ್ಥಿತಿ ಬ
ಬದಲಾಗಿದೆ ಅನಿಸುವುದಿಲ್ಲ. ಈಗಲೂ ಮಕ್ಕಳು ಪೋಲಿಸರಿಗೆ ಹೆದರುತ್ತಾ
ಕಳ್ಳ ಹಾಗೂ ಪೋಲಿಸ್ ಮಕ್ಕಳಿಗೆ ಪ್ರಿಯವಾದ ಆಟವೇ!

ಹಿರಿಯರಿಗೂ ಪೋಲಿಸ್ ಭಯ, ಕಾರಣವಿಲ್ಲದೆಯೂ ಕಾಡುತ್ತಿರುತ್ತ
ಇತ್ತೀಚೆಗೆ ನಡೆದ ಘಟನೆಯನ್ನು ತೆಗೆದುಕೊಳ್ಳೋಣ. ಹತ್ತು ದಿನಗಳ ಹಿಂ
ಬೆಳಗಿನ ಜಾವವೇ, ಸಮವಸ್ತ್ರದಲ್ಲಿದ್ದ ಇಬ್ಬರು ಅಧಿಕಾರಿಗಳು ನನ್ನ ಪುಟ್ಟ ಮ
ನುಗ್ಗಿದರು. ನೆರೆಹೊರೆಯವರೆಲ್ಲ ಬೆಪ್ಪಾಗಿ ನಿಂತು ಬಿಟ್ಟರು. ನಿಮಿಷಾರ್ಧದ
ಕೇರಿಯ ಜನ ಗೇಟಿನಾಚೆ ಒಟ್ಟಾದರು ಹೆಣ್ಣು ಮಕ್ಕಳೂ ಆಚೆ ಈಚೆ, ಮ
ಹಿಂದೆ, ಅಡಿಗೆ ಮನೆ ಸಂದಿ ಗೊಂದಿಗಳಿಂದ ಮುಖ ತೂರಿಸಿ ಇಣಕಿ ಇ
ನೋಡುವವರೇ! ಈಯಮ್ಮ ಏನೋ ಗಲಾಟೆ ಮಾಡಿ ಸಿಕ್ಕಾಕಿಕೊಂಡಿರು
ಹಾಗಿದೆ! ಗುಸು ಗುಸು.

"ಹೇಗಿದೆ ದಿನಮಾನ? ಹೆಂಗ್ಸಾದ್ರೆ ಏನಂತೆ? ಕಳ್ಳರೇ ದೊಡ್ಡ ಹುದ್ದೆ
ಬಂದು ಕೂರ್‍ತಾರೆ. ದರ್ಬಾರು ಬೇರೆ ಮಾಡ್ತಾರೆ! ಹಿರಿಯನೊಬ್ಬನ ತೀರ್ಮಾ
"ಅಂಟೀನ ಇನ್ನೇನು ಪೋಲಿಸ್ ವ್ಯಾನಲ್ಲಿ ದಬ್ತಾರೆ! ವ್ಯಾನ್ ಬಂದಿಲ್ಲವ
ಬೇಡಿ ಹಾಕದೇ ಹಾಗೇ ಕರಕೊಂಡು ಹೋಗ್ತಾರಾ?" ಕುತೂಹಲದಿಂದ ಕಿರಿಯ
ಕೇಳುವ ಪ್ರಶ್ನೆಗಳಿಗೆ ಲೆಕ್ಕವೇ ಇರಲಿಲ್ಲ.

ಬಂದ ಪೋಲಿಸ್ ಅಧಿಕಾರಿಗಳಾದರೋ ವಂದಿಸಿ, ವಿನಯದಿ
ಮಾತನಾಡಿಸಿ, 'ಮ್ಯಾಡಂ, ನಿನ್ನೆ ನಮ್ಮ ಎಸ್.ಪಿ.ಯವರೇ ನಿಮ್ಮ

ಭೇಟಿಮಾಡಲು ಬಂದಿದ್ದರು. ಮನೆಗೆ ಬೀಗವಿತ್ತು. ರಾಜ್ಯ ಪೋಲಿಸ್ ಶತಾಬ್ದಿ ಸಂದರ್ಭದಲ್ಲಿ ವಿಶೇಷ ಸಮಾರಂಭದ ಏರ್ಪಾಡು ಮಾಡಿದೀವಿ. ತಮ್ಮಂಥ ಕೆಲವರಿಗೆ ವಿಶೇಷ ಆಮಂತ್ರಣವನ್ನು ಕೈಯಾರೆ ತಲುಪಿಸಲೆಂದೇ ವರಿಷ್ಠರು ಬಂದಿದ್ದರು. ದಯವಿಟ್ಟು ತಾವು ಬರಬೇಕು. ಈ ಪತ್ರ ತಮಗೆ ತಲುಪಿಸಲು ಡಿ.ಐ.ಜಿ. ಸಾಹೇಬರು ಹೇಳಿದ್ದಾರೆ.' ಎಂದು ಪತ್ರ ಹಾಗೂ ಆಮಂತ್ರಣವನ್ನು ಕೊಟ್ಟು ಪುನಃ ವಂದಿಸಿ ಹೊರಟು ಹೋದರು. ವಠಾರದ ಎಲ್ಲರಿಗೂ ನಿರಾಶೆಯಾಯಿತು! ಅದಾಗಲೇ ಅಲ್ಲಲ್ಲಿ ತುಂಬಿಕೊಂಡ ಜನಕರಗಿದರು. ಪೋಲೀಸರ ಆಗಮನದ ಕಾರಣ ಗೊತ್ತಿದ್ದರೆ ಅವರ ಪ್ರತಿಕ್ರಿಯೆ ಹೇಗೆ ಇರುತ್ತಿತ್ತೋ ನಾನರಿಯೆ. ಪೋಲೀಸರ ಬಗೆಗಿನ ಜನಸಾಮಾನ್ಯರ ಅಭಿಪ್ರಾಯ ತಿಳಿಯಲು ಸ್ವಾನುಭವದ ಈ ಉದಾಹರಣೆ ಒಂದೇ ಸಾಕು.

ಕಾನೂನು ರಕ್ಷಕರಾದ ಪೋಲೀಸರು ಭಾರತದೇಶವೆಂಬ ರಂಗದ ಮೇಲೆ ಕಾಣಿಸಿಕೊಳ್ಳುವ ಮೊದಲು, ಅಂದರೆ ಸುಮಾರು 150 ವರ್ಷಕ್ಕೂ ಮೊದಲು ಸಹಸ್ರ ಸಹಸ್ರವರ್ಷಗಳ ಕಾಲ, ಮಹಿಳೆಯರಿಗೆ ದೊರೆಯುತ್ತಿದ್ದ ರಕ್ಷಣಾಕ್ರಮಗಳು ಹೇಗೆ ಇದ್ದವು? ಎಂಬುದರ ಸ್ಥೂಲ ಕಲ್ಪನೆ ಪಡೆಯುವದು ಸಮಯೋಚಿತ ವಾಗಿದೆಯೆನಿಸುತ್ತದೆ. ತುಂಬ ಪ್ರಾಚೀನಕಾಲದಲ್ಲಿ ನಾರೀ ರಕ್ಷಣೆಯೆಂಬುದು ಮನೆಗಳು ಸಮೂಹವಾಗಿರುತ್ತಿದ್ದ 'ಕುಲ'ಕ್ಕೆ ಸೇರಿತ್ತು. ಕುಲದ ಹಿರಿಯರ ಶ್ರೀರಕ್ಷೆ ಸದಾ ಸ್ತ್ರೀಯರಿಗೆ ಇರುತ್ತಿತ್ತು. ಕೆಲವು ಜನಸಮುದಾಯಗಳಲ್ಲಿ ಕುಲದ ಸರ್ವಮಾನ್ಯತೆ ಈಗಲೂ ನಡೆದುಬಂದಿದೆ. ಮನೆಯ ಮಟ್ಟಿಗೆ ಹಿಂದಿನ ಅವಿಭಕ್ತಕುಂಟುಂಬಗಳಲ್ಲಿಯ ಪದ್ಧತಿಯಂತೆ, ಯಜಮಾನ ಆ ಹೊಣೆ ಹೊರುತ್ತಿದ್ದುದು ಸಾಮಾನ್ಯವಾಗಿತ್ತು. ಕ್ರಮೇಣ ಗ್ರಾಮದ ಹಿರಿಯರು ಸಾಮೂಹಿಕ ರಕ್ಷಣೆಯ ಹೊಣೆಗಾರರಾದರು. ಹೆಂಗಸರ ಮಾನರಕ್ಷಣೆ, ಸ್ಥಳೀಯರ ಜವಾಬ್ದಾರಿಯೆಂದು ಯಾರೂ ಹೇಳಿಕೊಡಬೇಕಾಗಿರಲಿಲ್ಲ. ಆ ನಂಬಿಕೆ, ಅನೂಚಾನವಾಗಿ ದೈನಂದಿನ ಜೀವನದಲ್ಲಿ ಬೆಳೆದುಬಂದಿತ್ತು. ಪ್ರವಾಸ, ಯಾತ್ರೆಗಳಂಥ ಸಂದರ್ಭಗಳಲ್ಲಿ ಜನ ಗುಂಪುಗಳಲ್ಲಿ ಹೊರಡುತ್ತಿದ್ದರು. ಆಪತ್ತು ಎದುರಾದಾಗ, ಜೊತೆಗಿದ್ದ ಯುವ ಜನರು ಧೈರ್ಯವಾಗಿ ಕಳ್ಳರ ಗುಂಪುಗಳನ್ನೋ, ಕಾಡುಪ್ರಾಣಿಗಳನ್ನೋ ಎದುರಿಸಿ ಹೆಂಗಳೆಯರನ್ನು, ಮಕ್ಕಳನ್ನು ರಕ್ಷಿಸುತ್ತಿದ್ದರು. ಹಲವು ಬಾರಿ ಇಂಥ ಯತ್ನಗಳಲ್ಲಿ ಪ್ರಾಣಕ್ಕೆ ಎರವಾಗುತ್ತಿದ್ದರು. ಇಂಥವರನ್ನು

ಕೃತಜ್ಞತೆಯಿಂದ ಗ್ರಾಮಸ್ಥರು ನೆನಪಿಸಿಕೊಂಡು ವೀರಗಲ್ಲುಗಳನ್ನು, ಶಾಸನಗಳನ್ನು ಸಡಲಿಸುತ್ತಿದ್ದರು. ಸಾಮಾಜಿಕ ಸೇವೆಯಲ್ಲಿ ಮಡಿದ ವೀರರನ್ನು ದೇವರೆಂದು ಪೂಜಿಸಿದ್ದೂ ಇದೆ.

ಸ್ಥಳೀಯ ಪಂಚಾಯಿತಿಗಳು, ಹಲವಾರು ಅನ್ಯಾಯ-ಅಪರಾಧಗಳನ್ನು ತನಿಖೆ ಮಾಡಿ, ವ್ಯಕ್ತಿಗೆ ಸಲ್ಲಬೇಕಾದ ದಂಡ-ಶಿಕ್ಷೆಗಳನ್ನು ನಿರ್ಧರಿಸಿ, ಗ್ರಾಮಕ್ಕೂ, ಜನಸಮುದಾಯಕ್ಕೂ ಹೆಚ್ಚಿನ ಅನ್ಯಾಯವಾಗದಂತೆ ನೋಡಿಕೊಳ್ಳುತ್ತಿದ್ದವು. ಕಾಲಬದಲಾಯಿತು, ಜನರ ಸುರಕ್ಷಿತತೆಯ ಜವಾಬ್ದಾರಿ ತನ್ನದೇ ! ಎಂದು ಸರಕಾರ, ಆ ಜವಾಬ್ದಾರಿ ವಹಿಸಿಕೊಂಡಿತು. ನಮ್ಮ ಈ ಪ್ರಾಚೀನ ದೇಶದಲ್ಲಿ ಪೋಲಿಸ ವ್ಯವಸ್ಥೆ ತೀರ ಇತ್ತೀಚಿಗಿನದು! ಎಂಬ ವಿಚಾರಕ್ಕೆ ಸೋಜಿಗ ಪಡಬೇಕಾದದ್ದೇ. ನಮ್ಮ ಸುಖ-ದುಃಖಗಳಿಗೆ ಜವಾಬ್ದಾರರು ನಾವಲ್ಲ ಸರಕಾರವೇ! ಎಂಬ ಭಾವನೆಯನ್ನು ಬೆಳೆಸುವ ಹಲವಾರು ಕ್ರಮಗಳಲ್ಲಿ ಆಧುನಿಕ ಪೋಲಿಸ್ ವ್ಯವಸ್ಥೆಯು ರೂಪಗೊಂಡಿದೆ.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯ ರಕ್ಷಣೆ ಆತನಿಗೇ ಸೇರಿದ್ದು. ಅದನ್ನು ಶಬ್ದಶಃ ಪಾಲಿಸಬೇಕು, ಎಂದು ಹಿಂದಿನ ಕಾಲದ ಕೂನೂನುಗಳನ್ನೇ ಅನುಸರಿಸುತ್ತ ಬಂದ ಅರಬ್ ಹಾಗೂ ಇಸ್ಲಾಂ ಮತದ ಪಾಲನೆಯ ಇತರ ದೇಶಗಳಿವೆ. ಮುಖ್ಯವಾಗಿ ಅರಬ್ ದೇಶಗಳಲ್ಲಿ ಸ್ತ್ರೀಯ ಕುರಿತಾದ ಅಪರಾಧ ಮಾಡಿದವರಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಬಾರುಕೋಲಿನ ಏಟು, ಅಂಗಾಂಗಗಳನ್ನು ಕಡಿದು ಹಾಕುವ ಚಿತ್ರಹಿಂಸೆಯ ಪ್ರಕಾರಗಳು ಜಾರಿಯಲ್ಲಿವೆ. ಪ್ರಜೆಗಳೇ ಅಪರಾಧಿಯನ್ನು ಕಲ್ಲಿನೇಟುಗಳಿಂದ ಸಾಯಿಸುವ ಶಿಕ್ಷೆಯಿದೆ. ಇಂಥ ಶಿಕ್ಷೆಗಳ ಭೀಕರತೆಯೇ ಅಲ್ಲಿಯ ಮಹಿಳೆಯರಿಗೆ ರಕ್ಷಣೆ ಒದಗಿಸುತ್ತದೆ. ಕೆಲ ಕಾಲ ಪಾಕಿಸ್ತಾನದಲ್ಲೂ ಇಂಥ ಶಿಕ್ಷೆಗಳನ್ನು ಜಾರಿಯಲ್ಲಿ ತಂದಾಗ ಮಹಿಳೆಯರ ಮೇಲಿನ ಅತ್ಯಾಚಾರಗಳು ಗಮನಾರ್ಹ ರೀತಿಯಲ್ಲಿ ಕಡಿಮೆಯಾದ ವಿಚಾರ ಪತ್ರಿಕೆಗಳಲ್ಲಿ ಬಂದಿತ್ತು. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವವೆನಿಸಿಕೊಂಡ ನಮ್ಮ ದೇಶದಲ್ಲಿ ಪೋಲೀಸರು ಹಾಗೂ ಮಹಿಳೆಯರ ಸಂಪರ್ಕ ಬರುವ ಸಂದರ್ಭಗಳನ್ನು ಯೋಚಿಸಬೇಕಾಗಿದೆ.

ಇಂದು ಭಾರತೀಯನಾರಿ, ತೀರಾ ಸೂಕ್ಷ್ಮವಾದ ಕವಲುದಾರಿಯ ತುದಿಗೆ ಬಂದು ನಿಂತಿದ್ದಾಳೆ. ಅವಳಿಗೆ ಪ್ರಾಚೀನಕಾಲದಲ್ಲಿ ಸಲ್ಲುತ್ತಿದ್ದ ರಕ್ಷಣೆ ಬೇಕು

ಜೊತೆಗೆ ಪಾಶ್ಚಾತ್ಯನಾರಿಯು ಸಾಧಿಸಿಕೊಂಡ ಸರ್ವಪ್ರಕಾರದ ಸ್ವಾತಂತ್ರ್ಯವೂ ಬೇಕು. ಅವಳು ಎಷ್ಟೆಂದರೂ ಕೋಮಲೆ, ಅಬಲೆ, ಅಲಕ್ಷಿತೆ, ಶತಮಾನಗಳಿಂದ ಶೋಷಿತೆಬೇರೆ! ಆದ್ದರಿಂದ ಸರ್ವರೀತಿಯ ಸಂರಕ್ಷಣೆಯ ಸವಲತ್ತುಗಳು ಬೇಕು. ಸಂವಿಧಾನಬದ್ಧವಾಗಿ, ಪುರುಷರಿಗೆ ಸರಿಸಮಾನಳು. ಸಮಾನ ಹಕ್ಕು, ಪಾಲು, ಸ್ವಾತಂತ್ರ್ಯಗಳು ಬೇಕೇ ಬೇಕು. ದುರ್ದೈವದಿಂದ ಈ ಎರಡೂ ಬಗೆಯ ಸೌಕರ್ಯ ಹಕ್ಕುಗಳನ್ನು ಏಕಕಾಲಕ್ಕೆ ಪಡೆಯಲಾಗುವುದಿಲ್ಲವೆಂಬ ವಿಚಾರ ಹೆಚ್ಚಿನವರಿಗೆ ಅರ್ಥವಾಗುವದಿಲ್ಲ. ಮೀಸಲಾತಿ-ಸಮಾನತೆಗಳ ಹೊಂದಾಣಿಕೆಯಂತೆ, ವಿಶೇಷ ಸಂರಕ್ಷಣೆ-ಸಮಾನತೆಗಳು ಅರಗಿಸಿಕೊಳ್ಳಲು ಕಷ್ಟವಾದ ವಿಚಾರಗಳೇ! ಶಿಫ್ಟ್ ಡ್ಯೂಟಿ ಸಲ್ಲ. ವರ್ಗಾವರ್ಗಿ ಕೂಡದು, ಅತಿ ಜವಾಬ್ದಾರಿಯ ಕೆಲಸ ಕೊಡಬಾರದು, ಆದರೆ ಪ್ರಮೋಷನ್‌ಗೆ ಚ್ಯುತಿ ಬರಕೂಡದೆಂದು ಹೋರಾಡುವ ಉದ್ಯೋಗಸ್ಥೆಯರೂ ಇದ್ದಾರೆ.

ಆದರೆ ಯೋಚನೆಗೆ ಕಾರಣವಾಗುತ್ತಿರುವದು ಈಚೀಚೆಗೆ ತುಂಬ ಹೆಚ್ಚಿಕೊಳ್ಳುತ್ತಿರುವ ಸರಗಳ್ಳತನ, ಕಾನೂನುರಕ್ಷಕರು ಹಾಗೂ ಪಾತಕಿಗಳ ನಂಟು, ಮತ್ತು ರಾಜಕಾರಣಿಗಳು ಕಾನೂನಿಗಳ ಭಂಗಕ್ಕೆ ಪ್ರಚೋದನೆ ನೀಡುತ್ತಿರುವದು. ಈ ಮೂರು ಅಹಿತಕಾರಿ ಬೆಳವಣಿಗೆಗಳು ಮಹಿಳೆಯರ ಜೀವನದ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ.

ಸರಗಳ್ಳತನ, ಹಿಂದಿನ ದಿನಗಳಲ್ಲಾದರೆ ಬಹಿರಂಗ ಸಾರ್ವಜನಿಕ ಶಿಕ್ಷೆಗೆ ಗುರಿಯಾಗುತ್ತಿತ್ತು. ಅಪರಾಧಿಯ ಅರ್ಧತಲೆಬೋಳಿಸಿ ಕತ್ತೆ ಮೇಲಿನ ಮೆರವಣಿಗೆ. ಚಿಕ್ಕಮಕ್ಕಳಿಂದ, ಬೋಳಿಸಿದ ತಲೆಯಮೇಲೆ ಉಚ್ಚೆಹೊಯ್ಯಿಸುವಟು, ಇಂಥ ಸಾಮಾನ್ಯ ಆದರೆ ಅತ್ಯಂತ ಅವಮಾನಕಾರಿ ಶಿಕ್ಷೆಗಳಿದ್ದವು. ಮಾಂಗಲ್ಯದಂಥ, ಪವಿತ್ರ ಸಂಬಂಧದ ಒಡವೆಗೆ ಕೈಹಾಕುವ ಪಾಪಿಯ ಕಳ್ಳಮಾಲನ್ನು ಸಹಸಾ ಸ್ವೀಕರಿಸುವ ಇನ್ನೊಂದು ಪಾಪವನ್ನು ಧರ್ಮಬೀರುಗಳಾದ "ಚಿನ್ನವರದರು" (ಅಕ್ಕಸಾಲಿಗರು) ಮಾಡುತ್ತಿರಲಿಲ್ಲ. ಇಂಥ ಅಪರಾಧಗಳು ಬೆಳಕಿಗೆ ಬಂದಲ್ಲಿ ಆಯಾ ವ್ಯಕ್ತಿ ಅಥವಾ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಒದಗುತ್ತಿತ್ತು. ಹಿಂದಿನ ಯುಗದಲ್ಲಿ ಇಂಥ ಬಹಿಷ್ಕಾರಗಳಿಗೆ ತುಂಬ ಹೆದರುತ್ತಿದ್ದ ಜನ ಊರು ಬಿಟ್ಟೇ ಹೋಗಬೇಕಾಗುತ್ತಿತ್ತು. ಈಗ ಸರಗಳ್ಳತನ ವ್ಯವಸ್ಥಿತ ಉದ್ದಿಮೆಯಾಗಿ ಬೆಳೆಯುತ್ತಿದೆ! ಸ್ಕೂಟರ್, ಆಟೋ, ಕಾರುಗಳಲ್ಲಿ ಶಸ್ತ್ರಾಸ್ತ್ರಗಳಿಂದ ಸಜ್ಜಿತರಾಗಿ ಬರುವ

ಯುವಕರು, ಅಮಾಯಕ ಮಹಿಳೆ-ವೃದ್ಧೆಯರ ಮೇಲೆ ಎರಗಿ ಸರವನ್ನೆಳೆದು ಮಿಂಚಿನಂತೆ ಮಾಯವಾಗುತ್ತಾರೆ. ಸಮೀಪದಲ್ಲೇ ಅವರ ಹಸ್ತಕರು ಕಾಯುತ್ತಿದ್ದು ಕದ್ದ ಒಡವೆ, ಕೈ ಬದಲಿಸುತ್ತ ಯಾವುದೋ ಮೂಲೆಯ ಗಿರವಿ ಅಂಗಡಿ ಸೇರುತ್ತದೆ ಅಥವಾ ಕುಲುಮೆಸೇರಿ ರೂಪಬದಲಿಸಿಕೊಳ್ಳುತ್ತದೆ. ಧರ್ಮ ನೀತಿ-ನಡಾವಳಿಗಳಿಗೆ ಬೆಲೆಯಿಲ್ಲದ ದಿನಗಳಲ್ಲಿ ಜೀವನವಿಧಾನವನ್ನು ಬದಲಿಸಿಕೊಳ್ಳುವದೊಂದೇ ಉಪಾಯ. ಆಭರಣಪ್ರಿಯತೆಯ ಪ್ರಕಾರವನ್ನು ಮಹಿಳೆಯರು ಬದಲಿಸಿಕೊಳ್ಳಬೇಕು.

ಉಳಿದೆಲ್ಲ ವಿಚಾರಗಳಲ್ಲಿ ಪಾಶ್ಚಾತ್ಯ ಮಹಿಳೆಯರನ್ನು ಅನುಕರಿಸಲೆತ್ನಿಸುವ ನಮ್ಮವರು ಅವರ ನಿರಾಭರಣತೆಯನ್ನು ಏಕೆ ಮೆಚ್ಚಿಕೊಳ್ಳುವದಿಲ್ಲ? ಅವರು ಆಭರಣ ತೊಡುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಮಾತ್ರ. ನಮ್ಮಲ್ಲಿ ಸಾಮಾಜಿಕ ಅನಿಷ್ಟವಾಗಿ ಬೆಳೆಯುತ್ತಿದ್ದರೂ, ಅರಕ್ಷತೆಗೆ ಮುಖ್ಯಕಾರಣವಾದರೂ ಮಕ್ಕಳಿಂದ-ಮುದುಕರವರೆಗೆ ಒಡವೆಯ ವ್ಯಾಮೋಹ ಎದ್ದು ಕಾಣುವಂತಹದು. ಇತ್ತೀಚೆಗೆ ಚೈನು, ಕಡಾ(ಬಳೆ) ತೊಡುವ ಗಂಡಸರೂ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತಾರೆ! ಪ್ರದರ್ಶನಪ್ರಿಯತೆ ಮನುಷ್ಯರಿಗೆ ಸಹಜವಾದರೂ ಧನಹಾನಿ ಜೀವಹಾನಿಗಳಿಗೆ ಕಾರಣವಾಗಬಾರದು. ಮುಂಬೈ ಮಹಾನಗರದ ಮಹಿಳೆಯರು ತಮ್ಮದೇ ಉಪಾಯ ಕಂಡುಹಿಡಿದಿದ್ದಾರೆ. ಉದ್ಯೋಗಸ್ಥೆಯರು, ಶಿಕ್ಷ ಕೆಲಸಗಾತಿಯರು, ಗೃಹಿಣಿಯರು ಸಹ, ಚಿನ್ನದ, ಒಡವೆ ತೊಡುವದೇ ಇಲ್ಲ ಇಲ್ಲದಿದ್ದರೆ ಜನರಿಂದ ಕಿಕ್ಕಿರಿದ ಟ್ರೇನು, ಸಾರ್ವಜನಿಕ ಸ್ಥಳಗಳಲ್ಲಿ ಚೈನು, ಬಳೆ ಹಾರಿಸುವದು ಕಷ್ಟದ್ದಲ್ಲ. ಕಲಕತ್ತೆಯಲ್ಲೂ ಅಷ್ಟೆ. ದಿಲ್ಲಿಕೂಡ ಅಪವಾದವೇ ಕೃತ್ರಿಮ ಹಾರ ಓಲೆ-ಬಳೆಗಳನ್ನೇ ಧರಿಸುತ್ತಾರೆ. ಅಲ್ಲದೇ ಅಲ್ಲಿಯವರಿ ನಮ್ಮಲ್ಲಿಯಂತೆ ಮಂಗಳಸೂತ್ರ ಮಾಂಗಲ್ಯಸೂಚಕವಲ್ಲ. ಬಂಗಾಲಿ ನಾರಿ ಶಂಖದ, ಕೆಂಪು ಅರಗಿನ ಹಾಗೂ ಒಂದು ಕಬ್ಬಿಣದ ಬಳೆ ಧರಿಸಿ ಬೈತಲೆಯ ಸಿಂಧೂರವಿಟ್ಟರೆ, ಉತ್ತರ ಭಾರತದಲ್ಲಿ ಕಾಲುಬೆರಳಿನ ಉಂಗುರ (ಬಿಛುಯೆ ಮತ್ತು ಮೂಗುತಿಗೆ ಸುಮಂಗಲ ಚಿಹ್ನೆಯ ಸ್ಥಾನವಿದೆ. ಇವನ್ನು ಕೊರಳಸ ಹಾರಿಸುವಷ್ಟು ಸುಲಭದಲ್ಲಿ ಹಾರಿಸಲಾಗದಲ್ಲ!

ಮಹಾರಾಷ್ಟ್ರೀ ಮಹಿಳೆಗೆ ಸಹ ಮಂಗಳಸೂತ್ರ ಮುಖ್ಯ. ಆದ 'ಸೂತ್ರ'ವನ್ನು ಮೂಲ ಅರ್ಥದಲ್ಲಿಯೇ ಸ್ವೀಕರಿಸಿದ್ದಾಳೆ. ಕರಿಮಣಿಗಳನ

ತಾಳಿಯೊಂದಿಗೇ ದಪ್ಪ ಎಳೆಗಳಲ್ಲಿ ಪೋಣಿಸಿದ "ತಾಳಿ"ಯೇ ಮೊನ್ನೆ ಮೊನ್ನೆಯ ತನಕ ಸಿರಿವಂತ-ಬಡವರೆಂಬ ಭೇದವಿಲ್ಲದೇ ನಮ್ಮಲ್ಲಿಯೂ ಬಳಕೆಯಲ್ಲಿತ್ತು. ಹಾಗೆ ನೋಡಿದರೆ, ಹಿಂದಿನಿಂದ ನಡೆದುಬಂದ ಮಾಂಗಲ್ಯ ಸೂಚಕವಾದ, ಮಂಗಳಸೂತ್ರ (ದಾರದ್ದು), ಓಲೆ (ತಾಳೆಗರಿಯದು), ಬಳೆ, (ಗಾಜಿನವು), ಇವಾವೂ ತುಂಬ ಬೆಲೆಯವು ಅಲ್ಲವೇ ಅಲ್ಲ. ಆಭರಣ ಪ್ರಿಯನಾರಿಯರು, ಅವಕ್ಕೆ ಚಿನ್ನದ ಸ್ಥಾನ ಕೊಟ್ಟು ಅಂತಸ್ತಿನ ಪ್ರತಿಷ್ಠೆಯ ಸ್ಥಾನ ಒದಗಿಸಿದ್ದಾರೆ. ಉಳಿದ ರಾಜ್ಯಗಳ ಮಹಿಳೆಯರು ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿ ಕೊಂಡರೆ, ಕನ್ನಡಿತಿ ಮಾತ್ರ ತನ್ನತನ ಬಿಟ್ಟುಕೊಡದೇ ಪ್ರತಿದಿನವೂ ತನ್ನ ಹಾರಕ್ಕೆ ಎರವಾಗುತ್ತಿದ್ದಾಳೆ!

ಆದರೆ ತಾನು ಧರಿಸುವ ಒಡವೆಗಳಿಗೆ ಪೋಲೀಸರ ರಕ್ಷಣೆ ಬಯಸುವದು, ಕೆಲವೊಮ್ಮೆ ಹಾಸ್ಯಾಸ್ಪದವಾಗಿ ತೋರುತ್ತದೆ.

ನಮ್ಮಲ್ಲಿ ಸದಾಕಾಲ ಕಾನೂನನ್ನು ಉಲ್ಲಂಘಿಸಿಯೇ ಜೀವನ ನಡೆಸುವವರ ವರ್ಗ ಒಂದಿದೆ. ನರಭಕ್ಷಕರದು! ಈ ವರ್ಗ, ಸದಾಕಾಲ ಪೋಲೀಸರ ಸ್ನೇಹ ಮತ್ತು ಅಭಯಹಸ್ತಕ್ಕಾಗಿ ಹಾತೊರೆಯುತ್ತಿರುತ್ತದೆ. ಇವರೇ ಪೋಲೀಸರಿಗೆ ಲಂಚ, ಮಾಮೂಲು ಕೊಡಮಾಡಿ ಅವರನ್ನು ಕರ್ತವ್ಯಚ್ಯುತರನ್ನಾಗಿ ಮಾಡುತ್ತಾರೆ. ಸ್ತ್ರೀ ಜನಾಂಗಕ್ಕೆ ಅವಹೇಳನಕಾರಿಯಾದ ವೇಶ್ಯಾವೃತ್ತಿ, ಕಾನೂನಿನಂತೆ ಪ್ರತಿಬಂಧಿಸ ಲಾಗಿದೆಯಾದರೂ ಅದರಿಂದಲೇ ಜೀವನ ನಡೆಸಿ ಧನಿಕರಾದ, ಆಗುತ್ತಿರುವ ಜನರಿಲ್ಲವೇ? ಅವರಲ್ಲೂ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರೆಲ್ಲ ನಿಯಮಿತರೂಪದಲ್ಲಿ ಪೋಲೀಸರಿಗೆ ಮಾಮೂಲು ಕೊಡಮಾಡುತ್ತಾರೆ. ಅದರಂತೆ ವರದಕ್ಷಿಣೆಗೆ ಸಂಬಂಧಿಸಿದ ಕಾನೂನು. ಪ್ರತಿಬಂಧ ಹೆಚ್ಚಿದಂತೆ ಹೆಮ್ಮರವಾಗಿ ಈ ದುಷ್ಟಪದ್ಧತಿ ಬೆಳೆಯುತ್ತಲೇ ಹೋಗಿದೆ. ಪತಿಯ ಕುಟುಂಬದವರು ತನಗೆ ಮಾಡುತ್ತಿರುವ ಅನ್ಯಾಯವನ್ನು ಕುರಿತು ಹೆಂಗಳೆಯರು ಪೋಲೀಸರಿಗೆ ದೂರಿ ಕೊಳ್ಳುವುದಿಲ್ಲ, ಎಂಬ ದೂರು ಕೇಳಿ ಬರುತ್ತಿದೆ. ಇಂಥ ದೂರುಗಳಿಗೆ ಯಾವ ಬೆಲೆಯೂ ಇಲ್ಲವೆಂಬುದು ಎಲ್ಲರೂ ಅರಿತುಕೊಂಡ ಸತ್ಯವಾಗಿದೆ. ಕೊನೆಗೆ ಬಡಿತ, ಹೊಡೆತ, ಚಿತ್ರಹಿಂಸೆ ತಾಳಿಕೊಳ್ಳದೇ ಆತ್ಮಹತ್ಯೆಯನ್ನು ಕೆಲವರು ಹೆಂಗಳೆಯರು ಮಾಡಿಕೊಂಡರೆ, ಇನ್ನು ಕೆಲವರನ್ನು ಸಾಯಿಸಿಯೇ ಬಿಡುವದು ನಿತ್ಯಘಟನೆಗಳಾಗಿವೆ. ಆದರೆ ಸಾವು-ಕೊಲೆಗೆ

ಕಾರಣರಾದವರು, ಶಿಕ್ಷೆ ತಪ್ಪಿಸಿಕೊಳ್ಳಲು, ವಿಚಾರಣೆ ಕೈ ಬಿಡುವಂತೆ ನೋಡಿಕೊಳ್ಳಲು ಹಣದ ಗಂಟಿನೊಡನೆ ಪೋಲೀಸರ ಬಳಿ ಧಾವಿಸುತ್ತಾರೆ. ಸಹಸ್ರ-ಲಕ್ಷ ತೆತ್ತು ನೌಕರಿಗಿಟ್ಟಿಸಿದ ಪೋಲೀಸಿನವರು ಇಂಥ ಅವಕಾಶ ಹುಸಿಹೋಗಗೊಟ್ಟಾರೆಯೇ? ನಮ್ಮ ಸಮಾಜದಲ್ಲಿ ಲೋಭ-ಲಂಚಗಳು ಪರಸ್ಪರಾವಲಂಬಿಗಳಾಗಿ ಬೆಳೆಯಲು ನಿದರ್ಶನವಾಗಿದೆ, ವರದಕ್ಷಿಣೆಯ ಪಿಡುಗು.

ರಾಜಕಾರಣಿ ಹಾಗೂ ಪಾತಕಿಗಳ ನಂಟು ಹಿಂದಿನಿಂದ ಬೆಳೆದು ಬಂದು ಈಗ ಅದು ಎಂದೆಂದಿಗೂ ಮುರಿಯದ ಹಂತತಲುಪಿದೆ. ಗೂಂಡಾಗಳೆಂದೋ ಗೂಂಡಾಗಳ ಬೆಂಬಲವಿದ್ದವರೆಂದೋ ಹೆಸರುವಾಸಿಯಾದವರು ಶಾಸನ ಸಭೆ-ಲೋಕಸಭೆಗಳಲ್ಲಿ ರಾರಾಜಿಸುವುದು ಸಾಮಾನ್ಯ. ಒಂದೊಮ್ಮೆ ಲಕ್ಷಲಕ್ಷ ರೂಪಾಯಿಗಳ ಸರಕಾರಿ ಆಸ್ತಿಯನ್ನು ಹಾಳುಗೆಡವಿದ ವಿದ್ಯಾರ್ಥಿಮುಖಂಡ ಮುಂದೆ ವಿದ್ಯಾಮಂತ್ರಿಯಾದ ಯೋಗವನ್ನು ಕಾಣುವ ಭಾಗ್ಯ ಕರ್ನಾಟಕಕ್ಕೆ ಲಭಿಸಿತು! ಬಂಧಿಸಲ್ಪಟ್ಟ ದಂತಗಳ್ಳ ವೀರಪ್ಪನ್ ತಪ್ಪಿಸಿಕೊಂಡು ಹೋಗಿ ಎಲ್ಲರಿಗೂ ಚಳ್ಳೇಕಾಯಿ ತಿನ್ನಿಸಿದ ಸಂದರ್ಭಕ್ಕೆ ಹೊಣೆಗಾರರು ಯಾರೆಂದು ಗೊತ್ತೇ ಇದೆಯಲ್ಲ! ಕ್ರಿಮಿನಲ್ ರಿಕಾರ್ಡ್ ಇರುವಾತ ಮಂತ್ರಿಯೂ ಆದ ಉದಾಹರಣೆಗಳು ಸಾಕಷ್ಟಿವೆ. ಇಂಥವನ ಪೂರ್ವಾಶ್ರಮದ ವಿವರಗಳು ಪೋಲೀಸರಿಗೆ ಗೊತ್ತಿದ್ದರೂ ಈಗ ಆತ ಪ್ರಭುಗಳ ಹಂತಕ್ಕೆ ತಲುಪಿದ್ದರಿಂದ ಆತನ ಆಜ್ಞೆ ಶಿರಸಾವಹಿಸುವ ಪ್ರಸಂಗ ಬರುತ್ತದೆ. ಆಪಾದಿತನ ತಪ್ಪು ಸಾಬೀತಾದರೂ ರಾಜಕಾರಣಿಗಳ ಹಸ್ತಕ್ಷೇಪದಿಂದ ಅಂಥವರ ಬಿಡುಗಡೆ ಆಗುವದು ತೀರ ಸಾಮಾನ್ಯವಾಗಿದೆ.

ರಾಜಕೀಯ ವಿರೋಧಿಗಳನ್ನು ಬಗ್ಗುಬಡಿಯಲು ಪೋಲೀಸರ ಬಳಕೆಯು ಸಾಮಾನ್ಯ. ಆಡಳಿತ ಪಕ್ಷಕ್ಕೆ ಅನುಕೂಲವಿರದ ಅಧಿಕಾರಿಗಳ ವರ್ಗ ಹಾಗು ಕಿರುಕುಳಗಳು ಕೇಳಿಬರುತ್ತವೆ. ಪ್ರತಿಷ್ಠಿತರಿಗೆ ಸಂಬಂಧಿಸಿದ ಅಪರಾಧಗಳು ಬೆಳಕು ಕಾಣುವದಿಲ್ಲ. ಹಿಂದೊಮ್ಮೆ ಮಹಿಳೆಯೇ ಮುಖ್ಯಮಂತ್ರಿಯಾಗಿದ್ದ ರಾಜ್ಯದಲ್ಲಿ ಆಕೆಯ ನಿಕಟ ಬಂಧು ಹಾಗೂ ಸಿನೇತಾರೆಯನ್ನೊಳಗೊಂಡ ಪ್ರಕರಣದಲ್ಲಿ ಸಂಭವಿಸಿದ ಸಾವು, ಅಪಘಾತವೇ? ಆತ್ಮಹತ್ಯೆಯೇ? ಕೊಲೆಯೇ? ಎಂಬುದು ಕೊನೆಗೂ ಜನಸಾಮಾನ್ಯರಿಗೆ ಗೊತ್ತಾಗಲಿಲ್ಲ.

ಕೋಮುವಾರು ಗಲಭೆ, ನದಿನೀರು, ಗಡಿವಿವಾದಗಳಲ್ಲಿ ವಿಶಿಷ್ಟರೀತಿಯಲ್ಲಿ ನಡೆದುಕೊಳ್ಳುವಂತೆ ಪೋಲೀಸರಿಗೆ ಆಳರಸರ ಆದೇಶವಿರುತ್ತದೆ. ಜನರಿಗೆ ತೋರುವ ತಪ್ಪು ಪೋಲೀಸರದು ಮಾತ್ರ. ಪೋಲೀಸರಿಗೂ ಇರುವ ಆಡಳಿತ ವರ್ಗದ ಬೆಂಬಲ, ಅವರಿಗೆ ಗೈರ ಕಾನೂನಿನ ಕೆಲಸ ಕೈಕೊಳ್ಳಲು ಪ್ರೋತ್ಸಾಹಿಸಿದರೆ ಆಶ್ಚರ್ಯವಿಲ್ಲ. ತಾವು ಕಾನೂನಿಗೆ ಹೊರತಾದವರು ಎಂದು ನಂಬಿದ್ದರಿಂದಲೇ ಕಸ್ಟಡಿ ಸಾವು, ಪೋಲೀಸರಿಂದಲೇ ಮಹಿಳೆಯರ ಮೇಲೆ ಅತ್ಯಾಚಾರಗಳು ಕಂಡುಬರುತ್ತಿವೆಯಲ್ಲವೇ? ಮಾಯಾತ್ಯಾಗಿ, ಮಥುರಾ ಅಥವಾ ತುಳಸಿಯ ಪ್ರಕರಣಗಳಂತಹವು, ಬೆಳಕಿಗೆ ಬಂದವುಗಳು ಅತಿವಿರಳ. ಅಲ್ಲಲ್ಲಿಯೇ ಅಂಥ ಪ್ರಕರಣಗಳನ್ನು ಹೊಸಕಿಹಾಕಲು, ಕಾನೂನುರಕ್ಷಕರು, ಸ್ಥಳೀಯ ಮುಖಂಡರು ಇದ್ದೇ ಇರುತ್ತಾರೆ. ಇವಾವುಗಳಲ್ಲಿಯೂ ಭಾಗವಹಿಸಿದ, ಕಂಡರೂ ಕಾಣದಂತೆ ತೆಪ್ಪಗಿರುವ ಸಾಮಾನ್ಯಜನರೇ ಹೆಚ್ಚು. ಏಕೆಂದರೆ ಇವುಗಳಲ್ಲಿ ಆಸ್ಥೆ ತೋರಿದವರಿಗೆ ಕಾನೂನಿನ ಹೆಸರಲ್ಲಿ ಕಿರುಕುಳ ತಪ್ಪುವದಿಲ್ಲ.

ನಮ್ಮಲ್ಲಿ ಕಾನೂನು ಪಾಲಿಸುವವರಿಗಿಂತ ಮುರಿಯುವವರೇ ಬಹು ಸಂಖ್ಯಾತರು. ವಾಹನಗಳಿಗೆ ಸಂಬಂಧಿಸಿದವಿರಲಿ, ಪೌರಸೌಕರ್ಯಗಳಿಗೆ ಹೊಂದಿದವು ಇರಲಿ, ಇನ್ನೊಬ್ಬರ ಸ್ಥಳ, ಆಸ್ತಿಗಳು, ಆಕ್ರಮಣ ಮುಂತಾದವು ಇರಲಿ, ಬಲವಾಗಿ ಬೆಳೆದುಬಂದ ರೂಢಿ ಎಂದರೆ, "ಬೇಕಾದ್ದು ಮಾಡು, ಪೋಲೀಸರ ಕೈಗೆ ಸಿಕ್ಕಾಕಿಕೋಬೇಡ!" ಎಂಬುದು. ಯಾವ ಕಾನೂನನ್ನು ಎಷ್ಟು ಬಾರಿ ಉಲ್ಲಂಘಿಸಿದರೂ ನಡೆದೀತು, ಪೋಲೀಸರ ಗಮನಕ್ಕೆ ಬಾರದಿದ್ದರೆ ಆಯಿತು. ಕಾನೂನು ಪಾಲಿಸಬೇಕೆಂಬ ಕಡ್ಡಾಯವಿಲ್ಲದ ದೇಶದಲ್ಲಿ 'ಬೇಕಾದ್ದಾಗಲಿ! ಮೇಲಧಿಕಾರಿಗಳ ಗಮನಕ್ಕೆ ಬಾರದಿದ್ದರೆ ಆಯಿತು!' ಎಂಬ ನಿಲುವನ್ನು ಪೋಲೀಸರು ತಳೆದರೆ ಅಚ್ಚರಿಯಿಲ್ಲ. ಮುಖಂಡರೇ ದೀನದಲಿತರ ಶೋಷಣೆ, ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕಾರಣರಾದರೆ ಪೋಲೀಸರು ವಾಮಮಾರ್ಗ ಹಿಡಿಯದಿರುತ್ತಾರೆಯೇ? ಪೋಲೀಸ್, ಸಮವಸ್ತ್ರದಲ್ಲಿದ್ದರೂ, ಕಳವು-ಹಿಂಸೆಗಳಲ್ಲಿ ಒಲವಿದ್ದವನು ಕಳ್ಳನೇ! ಕೊಲೆ-ಸುಲಿಗೆ-ದರೋಡೆಗಳಲ್ಲಿ ಪಾಲುಗೊಳ್ಳುವ ಪೋಲಿಸ್ ಪ್ರಕರಣಗಳ ಕುರಿತು ವರದಿಗಳು ಆಗೀಗ ಬರುತ್ತಲೇ ಇರುತ್ತವೆ.

ಆದರೆ ಇಡಿಯ ಪೋಲಿಸ್ ಪಡೆ- ಅಥವಾ ವ್ಯವಸ್ಥೆಯೇ ಹಾಳಾಗಿದೆ! ಎಂದು ತೀರ್ಮಾನಿಸುವುದು ತಪ್ಪು. ಅವರಲ್ಲಿ ಕೆಲ ಅಧಿಕಾರಿಗಳಲ್ಲಿ ಕಂಡುಬರುವ

ಸೌಜನ್ಯ, ಕಳಕಳಿ, ಹೊಣೆಗಾರಿಕೆಗಳು ಅಸಾಧಾರಣವಾಗಿವೆ. ಕರ್ನಾಟಕದ ತೆರೆದ ಜೈಲಿನ ಪ್ರಯೋಗ, ದೇಶದಲ್ಲೇ ಅನನ್ಯವಾಗಿದೆ. ಪೋಲೀಸರಲ್ಲಿ ಸಂಸ್ಕೃತ ಪಂಡಿತರು, ಕತೆ, ಕಾದಂಬರಿ ಬರೆಯುವವರು, ಕವಿ-ವಾಗ್ಮಿಗಳು, ನಾಟಕ ಕಲಾವಿದರು, ಸಂಗೀತಗಾರರು, ಉತ್ತಮ ವರದಿಕಾರರನ್ನು ಕನ್ನಡನಾಡು ಹೊಂದಿದೆ. ಬಹುಶಃ ದೇಶದಲ್ಲೆ ಅದ್ವಿತೀಯವಾದ ಪಾಶ್ಚಾತ್ಯ, ಕರ್ನಾಟಕ, ಹಿಂದುಸ್ಥಾನಿ ಪದ್ಧತಿಯಲ್ಲಿ ಸಂಗೀತ ಹೊಂದಿಸಿದ ಪೋಲಿಸ್ ಬ್ಯಾಂಡ್‌ದ ಹೆಮ್ಮೆ ನಮ್ಮದಾಗಿಲ್ಲವೇ?

'ಪೋಲೀಸರು ಶೋಷಕರಲ್ಲ, ಮಿತ್ರರು' ಎಂಬ ಭಾವನೆ ಬೆಳೆದುಬರಲು, ಕೆಲವೊಂದು ಆಡಳಿತ ಸುಧಾರಣೆಗಳು ಅತ್ಯವಶ್ಯಕವಾಗಿವೆ. ಮಹಿಳೆಯರಿಗೆ ಸಹಾಯವಾಗಲೆಂದು ಕೆಲವು ಕೇವಲ ಮಹಿಳಾ ಪೋಲೀಸರೇ ಇದ್ದ ಕೇಂದ್ರಗಳನ್ನು ಬೆಂಗಳೂರಿನಲ್ಲಿ ತೆರೆದಿದ್ದಾರೆ. ಅದರಿಂದ ಹೆಂಗಸರಿಗೆ ಎಷ್ಟು ಸಹಾಯ ದೊರೆಯಿತೋ ಗೊತ್ತಾಗಲಿಲ್ಲ. ಯಥಾಪ್ರಕಾರ ಬಂದ ದೂರುಗಳನ್ನು ನೋಂದಾಯಿಸಿ, ಮೇಲಧಿಕಾರಿಗಳಿಗೆ ಕಳಿಸುವದರಲ್ಲಿ ಮಹಿಳಾ ಪೋಲೀಸರ ಕಾರ್ಯಸಮಾಪ್ತಿ ಆಗುವಂತಿದ್ದರೆ ಅದಕ್ಕೆ ಮಹಿಳೆಯರು ಯಾಕೆಬೇಕು? ಬೀಟ್ ಡ್ಯೂಟಿ, ಕಳ್ಳಕಾಕರ ಬೀಡೆಂದು ಕುಖ್ಯಾತಿಯ ಪ್ರದೇಶದ ಗಸ್ತು, ಅಥವಾ ಕೇಡಿಗಳನ್ನು ಬೆಂಬತ್ತಿ ಹೋಗುವಂಥ ಪುರುಷಪರ ಹೊಣೆಗಳನ್ನು ಅವರು ನಿರ್ವಹಿಸಲಾರರು! ಹೆಚ್ಚೆಂದರೆ ಪ್ರತಿಭಟನೆ-ಗಲಭೆಗಳ ಸಂದರ್ಭದಲ್ಲಿ ಮುಂದಾಗಿ ಸಾರ್ವಜನಿಕ ಶಾಂತಿಗೆ ಭಂಗ ತರುವ ಮಹಿಳೆಯರನ್ನು ಬಂಧಿಸುವ, ಕೆಲಸ ಮಾಡಿಯಾರು. ಜೈಲುಗಳಲ್ಲಿ ಸ್ತ್ರೀ ಕೈದಿಗಳ ಮೇಲ್ವಿಚಾರಣೆ ಅವರದೇ ಇದ್ದರೂ ಅವರಿಗೆಲ್ಲ ಅದೊಂದು ವೃತ್ತಿಯಷ್ಟೆ. ಅರ್ಥಾತ್ ನಮ್ಮ ಮಹಿಳಾ ಪೋಲಿಸರೂ ಸುರಕ್ಷೆಯಿರುವ ಪ್ರದೇಶಗಳಲ್ಲಿಯೇ ಕಾರ್ಯನಿರ್ವಹಿಸಿ ನೆಮ್ಮದಿಯಿಂದ ಬಾಳುತ್ತಿರುತ್ತಾರೆ. ಸಿ.ಓ.ಡಿ. ಕಕ್ಷೆಯಲ್ಲಿ ವರದಕ್ಷಿಣೆಗೆ ಸಂಬಂಧಿತ ಹಿಂಸಾಚಾರಗಳು, ಮಹಿಳಾ ಪೋಲಿಸ್ ಅಧಿಕಾರಿಗಳ ಗಮನಕ್ಕೆ ಬರುವುದು ವಿರಳ. ಇದಕ್ಕೆ ಸಾರ್ವಜನಿಕರ ಅಸಹಕಾರವೂ ಕಾರಣವಾಗಿದೆ.

ನಮ್ಮ ಕರ್ನಾಟಕದಲ್ಲಿ ಸಾಮಾಜಿಕ ಕಾರ್ಯಕರ್ತೆಯರ ಅಭಾವ ತುಂಬ ದೊಡ್ಡದಿದೆ. ಪೋಲೀಸರಿಂದ ಅತ್ಯಾಚಾರಕ್ಕೊಳಗಾದ ಮಥುರಾಳ ಪ್ರಕರಣವಾಗಲಿ, ಬಾಲವೇಶ್ಯೆ ತುಳಸಿಯದಾಗಲಿ, ಬೆಳಕಿಗೆ ಬಂದದ್ದು, ಹಾಗೂ

ದೇವದಾಸಿಯರ ಪುನರ್ವಸತಿ ಆಗಲಿ, ವೇಶ್ಯೆಯರಿಗೆ ಆರೋಗ್ಯ ಶಿಕ್ಷಣವಾಗಲಿ, ಈ ಕುರಿತಾದ ವಿಧಾಯಕ ಕಾರ್ಯಕ್ರಮಗಳು ನಡೆಯುತ್ತಿರುವುದು ಮಹಾರಾಷ್ಟ್ರದಲ್ಲಿ. ಅದರಂತೆ ಬಾಲಕರ ಲೈಂಗಿಕ ಶೋಷಣೆಯು ಗೋವಾದಲ್ಲಿ ನಡೆಯುತ್ತಿದ್ದ ಪ್ರಸಂಗ ಹೊರಬಂದದ್ದೂ ಅದೇ ರಾಜ್ಯದ ಹೆಸರಾಂತ ಕಾರ್ಯಕರ್ತೆಯಿಂದಲೇ. ಮಹಿಳಾ ಜಾಗೃತಿಯಲ್ಲಿ ಮುನ್ನಡೆ, ಸಂಘಟನೆ, ಜೊತೆಗೆ ಸಹಜೀವಿಗಳ ಕುರಿತಾದ ಕಳಕಳಿಯಿಂದಾಗಿ ಆ ರಾಜ್ಯದ ಅನೇಕ ಸಂಸ್ಥೆಗಳು, ಹೆಣ್ಣುಮಕ್ಕಳನ್ನು ರಾಜಕಾರಣ + ಪೋಲೀಸರ ದಮನನೀತಿಯಿಂದ ರಕ್ಷಿಸುವಲ್ಲಿ ಸಹಾಯಕವಾಗಿವೆ. ನಮ್ಮಲ್ಲೂ ಮಹಿಳೆಯರು ಸಾಮೂಹಿಕವಾಗಿ ಮಹಿಳಾಜಾಗೃತಿಯ ಸಲುವಾಗಿ ಸಕ್ರಿಯ ಪ್ರಯತ್ನ ಮಾಡದಿದ್ದಲ್ಲಿ ಪೋಲೀಸರು ಹಾಗೂ ಮಹಿಳೆಯರ ನಡುವೆ ಸೌಹಾರ್ದ ಸಂಬಂಧ ಬೆಳೆಯಲಾರದು!

❖

ಬಾನುಲಿ ಮತ್ತು ಮಹಿಳಾ ಜಾಗೃತಿ

ದೇಶದಲ್ಲಿ ಬಾನುಲಿ ವಿಸ್ತರಣಾ ಕಾರ್ಯ ಹೆಚ್ಚಿದಂತೆ, ಕಾರ್ಯಕ್ರಮಗಳ ಅವಧಿಯೂ ಬೆಳೆಯುತ್ತಿದೆ. ಅದಕ್ಕನುಗುಣವಾಗಿ ಮಹಿಳೆಯರಿಗೆಂದೇ ಮುಡಿಪಾದ ಪ್ರಸಾರದ ಅವಧಿಯೂ ಹೆಚ್ಚುತ್ತಿದೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ಆಕರ್ಷಿಸಬಲ್ಲ ಬಾನುಲಿ ಸಾಹಿತ್ಯ ನಿರ್ಮಿಸುವವರ ಸಂಖ್ಯೆ ಪ್ರೋತ್ಸಾಹಕಾರಿಯಾಗಿಲ್ಲ. ಚಲನಚಿತ್ರ, ಪತ್ರಿಕೆ, ದೂರದರ್ಶನಗಳ ಧಾರಾವಾಹಿಗಳಿಗೆ ಬರೆಯುವವರು ಸಾಕಷ್ಟು ಜನರಿದ್ದಾರೆ. ಅವು ಹೆಚ್ಚಿನ ಪ್ರಸಿದ್ಧಿ, ಗೌರವಧನ ತರುತ್ತಿರಬಹುದು. ಇತ್ತೀಚೆಗೆ ಆಕಾಶವಾಣಿಯೂ ಬರೆಸಿದ, ಸ್ವೀಕೃತವಾದ ಬರಹಗಳಿಗೆ ಒಳ್ಳೆಯ ಸಂಭಾವನೆ ನೀಡುತ್ತಿದೆ. ಆದರೆ ಮಹಿಳೆಯರಿಗಾಗಿ ಬರೆಯುವವರಿಗೆ ಗೌರವಧನ ಗೌಣವಾಗಿದ್ದರೆ, ಅವರಿಂದ ಹೆಚ್ಚಿನ ಸಾಧನೆ ನಿರೀಕ್ಷಿಸಬಹುದು. ಮಹಿಳೆಯರ ಹಿತಕ್ಕಾಗಿ, ಒಳಿತಿಗಾಗಿ ಬಾನುಲಿಯ ಒಳಗಿನವರೂ, ಹೊರಗಿನವರೂ ಕಟಿಬದ್ಧರಾಗಿ ಹೊಸ ಹೊಸ ಪ್ರತಿಭಾವಂತರನ್ನು ಗುರುತಿಸಿ, ಒಳ್ಳೊಳ್ಳೇ ಲೇಖನಗಳನ್ನು ಬರೆಸಿದರೆ ಮಾತ್ರ ಬಾನುಲಿ (ಸ್ತ್ರೀ) ಸಾಹಿತ್ಯದ ಹಲವಾರು ಪ್ರಕಾರಗಳು ಮೂಡಿ ಬಂದಾವು.

ಮಹಿಳೆಯರಿಗೆಂದೇ ಮೀಸಲಾದ ಬರವಣಿಗೆ ಹೇಗಿರಬೇಕು? ಪುರುಷರಂತೆ ಸ್ತ್ರೀಯೂ ಮಾನವ ಜೀವಿಯಾಗಿದ್ದರೂ ಆಕೆಯ ಆಸೆ-ಆಕಾಂಕ್ಷೆಗಳು, ಯತ್ನ, ಸಾಧನೆಗಳು, ಸಮಸ್ಯೆಗಳು ತೀರ ಭಿನ್ನವಾಗಿವೆ. ಅಂತೆಯೇ ಅವರಿಗಾಗಿಯೇ ಪ್ರಸಾರವಾಗುವ ಕಾರ್ಯಕ್ರಮಗಳು ಇನ್ನಿತರ ಕಾರ್ಯಕ್ರಮಗಳಿಗಿಂತ ಭಿನ್ನವಾಗಿರುವುದು ಅನಿವಾರ್ಯ. ಅವರ ಶೈಕ್ಷಣಿಕ ಹಿನ್ನೆಲೆಯನ್ನು ಗುರುತಿಸಿ, ಭಿನ್ನ ಸಾಮಾಜಿಕ ಸ್ತರಗಳನ್ನೂ ಗಮನಿಸಿ, ಸ್ತ್ರೀಯರ ಸ್ಥಾನಮಾನ ಎಲ್ಲಿದೆ? ಎಂದು ಅರಿತುಕೊಂಡು ಮುಂದುವರಿಯುವುದು ಅತ್ಯವಶ್ಯ. ಸಾಮಾನ್ಯವಾಗಿ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳನ್ನೂ ಅವುಗಳ ಪರಿಹಾರೋಪಾಯಗಳನ್ನು ಕಂಡುಹಿಡಿದು, ಅವರ ಆಶೋತ್ತರಗಳನ್ನು ಗುರುತಿಸಿ ಅವುಗಳ ಸಾಧನೆಗೆ ಪ್ರೋತ್ಸಾಹಿಸಬೇಕು. ಇಂಥ ಬರವಣಿಗೆ ರಂಜಕವಾಗಿ ಮೂಡಿಸುವದು ಅಷ್ಟು ಸುಲಭವಲ್ಲ.

ಆಕಾಶವಾಣಿಯ ಇತರ ಕಾರ್ಯಕ್ರಮಗಳಂತೆ, ಇವನ್ನೂ ಕೂಡ ಲಕ್ಷ್ಯಗೊಟ್ಟು ಕೇಳಿಯೇ ಶ್ರೋತೃಗಳು ಮಾಹಿತಿ ಸಂಗ್ರಹಿಸಬೇಕಾದ್ದರಿಂದ ಇವುಗಳ ಭಾಷೆ ಸುಲಭ, ಸರಳ, ನೇರ ಮತ್ತುದೋಷರಹಿತವಾಗಿರಲೇಬೇಕು. ವಾಕ್ಯಗಳು ಚಿಕ್ಕದಿದ್ದು ಓದಿದರೂ ಆಡಿದಂತೆ ಅನಿಸಬೇಕು. ಇಂಗ್ಲಿಷ್, ಹಿಂದಿ, ಸಂಸ್ಕೃತ ಶಬ್ದಗಳು ನುಸುಳಿಕೊಳ್ಳಲು ಅವಕಾಶವಿರದಂತೆ ನೋಡಿಕೊಳ್ಳಬೇಕು. ಬರಹಗಾರ ಅಥವಾ ಬರೆಹಗಾತಿಗೆ ವಿನೋದ, ಹಾಸ್ಯಗಳು ಕರಗತವಾದರಂತೂ ಬಂಗಾರಕ್ಕೆ ಪುಟಕೊಟ್ಟಂತೆ. ವಸ್ತುವಿಗಂತೂ ಕೊನೆ ಮೊದಲಿಲ್ಲ. ಕಾರ್ಯಕ್ರಮಗಳ ಮಂಡನೆಯ ರೂಪದಲ್ಲೂ ಬೇಕಾದ ವೈವಿಧ್ಯ ತರಲು ಸಾಧ್ಯವಿದೆ. ಜಾನಪದ ಶೈಲಿಯ ಹಾಡುಗಳು, ಲಾವಣಿ, ಹರಿಕಥೆ, ನಾಟಕ, ಶಬ್ದಚಿತ್ರ, ಸಂವಾದ, ಸರಸ ಸಂಭಾಷಣೆ, ಪ್ರಶ್ನೋತ್ತರ ಇಲ್ಲವೇ ಕಿರು ಭಾಷಣಗಳ ಮೂಲಕ ಬಾನುಲಿ ಬರವಣಿಗೆ ರೂಪಿಸಲು ಬರಹಗಾರರಿಗೆ ಸ್ವಾತಂತ್ರ್ಯವಿದೆ. ಅನೌಪಚಾರಿಕ ಆಕರ್ಷಕ ಮಾತುಕತೆಯ ಮೂಲಕ ಸ್ವಭಾವತಃ "ಹರಟೆ-ಪ್ರಿಯ" ರಾದ ಮಹಿಳೆಯರನ್ನು ಬಾನುಲಿ ಕೇಳಲು ಹಚ್ಚಿ, ತನ್ಮೂಲಕ ಅವರ ತಿಳವಳಿಕೆಯನ್ನು ಹೆಚ್ಚಿಸುವ ಪ್ರಯತ್ನ ಸಫಲವಾಗಬಹುದೆಂದು ತೋರುತ್ತದೆ.

ನಗರ ಮತ್ತು ಗ್ರಾಮವಾಸಿ ಮಹಿಳೆಯರ ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಅಂತಸ್ತು ಮತ್ತು ಅಭಿರುಚಿಗಳಲ್ಲಿ ಆಕಾಶ-ಪಾತಾಳಗಳಷ್ಟು ಅಂತರವಿರುವದರಿಂದ, ಜನಸಾಮಾನ್ಯರನ್ನೇ ಹೆಚ್ಚಾಗಿ ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮಗಳನ್ನು ರಚಿಸುವುದು ಹಿತಕಾರಿ. ನಮ್ಮ ದೇಶದಲ್ಲಿ ಅಶಿಕ್ಷಿತ, ಅರೆಶಿಕ್ಷಿತ ಸ್ತ್ರೀಯರೇ ಬಹು ಸಂಖ್ಯಾತರಾಗಿರುವದರಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ಅವರಿಗಾಗಿಯೇ ರಚಿಸುವುದು ಅನಿವಾರ್ಯ. ಅವರಿಗೆ ನ್ಯಾಯ-ಅನ್ಯಾಯ, ಸುಳ್ಳು-ಸತ್ಯ, ಧರ್ಮ-ಅಧರ್ಮಗಳ ಅಂತರ ತಿಳಿಸಿ ಹೇಳುವಾಗ ಅವರ ಹಿನ್ನೆಲೆ, ಪರಂಪರೆಯಲ್ಲಿ ವಿಶ್ವಾಸ, ಬೌದ್ಧಿಕ ಇತಿ-ಮಿತಿಗಳನ್ನು ಅಭ್ಯಸಿಸಲೇ ಬೇಕಾಗುವದು. ಶತಮಾನಗಳಿಂದ ಬಂದ ಜೋಗವ್ವ, ದೇವದಾಸಿ, ಸತಿ, ಬತ್ತಲೆ ಸೇವೆಗಳು ಅನೈತಿಕ, ಅನಾಗರಿಕವೆಂದು ಬಿಂಬಿಸಲು ಯತ್ನಿಸುವಾಗ, ಮುನ್ನೆಚ್ಚರಿಕೆ ವಹಿಸದಿದ್ದರೆ ಧಾರ್ಮಿಕರು ಬಂಡೆಬ್ಬಿಸ ಬಹುದು. ಕಥೆಯ ಮೂಲಕ ಇಂಥ ಸತ್ಯ ಬಿಂಬಿಸಲು ಸಾಧ್ಯವೆಂಬುದನ್ನು ಆನಂದರ ಶ್ರೇಷ್ಠಕತೆ "ನಾ ಕೊಂದ ಹುಡುಗಿ"ಯ ರೇಡಿಯೋ ರೂಪಾಂತರ, ಸಾರುತ್ತದೆ. ಸತಿಪದ್ಧತಿಯಲ್ಲಿ

ಅಡಗಿರುವ ಕ್ರೌರ್ಯವನ್ನು ಮೊಗಲರ ಮತ್ತು ಬ್ರಿಟಿಶರ ಕಾಲದ ಪ್ರವಾಸಿಗ
ಹತ್ತಾರು ಸತ್ಯ ಕಥನಗಳ ಮೂಲಕ ತಿಳಿಸಿ ಹೇಳಬಹುದು.

ಕೃಷಿ-ಕಾರ್ಮಿಕ ಮಹಿಳೆಯರು ಹೊಲದ ಒಡೆಯರಿಂದ, ಗ್ರಾಮ
ಮುಖಂಡರಿಂದ ಶೋಷಣೆಗೆ ಒಳಗಾಗುವದು ತೀರ ಸಾಮಾನ್ಯ. ಇಂ
ಸನ್ನಿವೇಶಗಳನ್ನು ಹೇಗೆ ಎದುರಿಸಬೇಕೆಂದು ಅರಿಯದ ಅಬಲೆಯರು ತಮಗಾ
ಅನ್ಯಾಯವನ್ನು ಅರಗಿಸಿಕೊಂಡು ಸುಮ್ಮನಿರುತ್ತಾರೆ. ಇಂದು ಹಲವಾ
ಕಾನೂನುಗಳು ಮಹಿಳೆಯರಿಗೆ ಆರ್ಥಿಕ, ಸಾಮಾಜಿಕ ಭದ್ರತೆ ನೀಡಲ
ಹುಟ್ಟಿಕೊಂಡಿವೆ. ಅವುಗಳ ಪರಿಚಯವನ್ನು ಆಗಾಗ ನೀಡುತ್ತಿರಬೇಕ
ಅನ್ಯಾಯಕ್ಕೊಳಗಾದ ಹೆಂಗಳೆಯರು ಪೋಲೀಸರಿಗೆ ದೂರ ಕೊಡುವಂ
ಪ್ರೋತ್ಸಾಹಿಸುವ ಬರವಣಿಗೆ ಬೇಕು.

ಕಿರಿಯ ಟ್ರಾನ್ಸಿಸ್ಟರ್, ಕೈ ರೇಡಿಯೋಗಳು ಇಂದು ಬಡವರಿಗೂ ನಿಲುಕು
ಬೆಲೆಗೆ ಮಾರಾಟವಾಗುತ್ತಿರುವುದರಿಂದ ಬಾನುಲಿ ಪ್ರಸಾರ ಕೇಳುತ್ತಲೇ ಕೆಲ
ಮಾಡುವುದು ಅನೇಕ ಮಹಿಳೆಯರಿಗೆ ರೂಢಿಯಾಗಿ ಬಿಟ್ಟಿದೆ. ಈ ಸಮಯದ
ಲಘು ಹಾಸ್ಯದ, ಮನರಂಜನೆಯ ಕಾರ್ಯಕ್ರಮಗಳನ್ನು ನೀಡಿದರೆ ಮನಸ
ಉಲ್ಲಸಿತವಾದೀತು. ಜಾನಪದ ಗೀತೆಗಳು, ಕೋಲಾಟದ ಪದಗಳ
ಬೇಂದ್ರೆಯವರ 'ಕುಣಿಯೋಣು ಬಾರ' ದಂತಹ ಪದಗಳ ರಿಂಗಣದ ಹಾಡುಗಳ
ಭಾವಗೀತೆಗಳು ಪ್ರಸಾರವಾದಲ್ಲಿ ಹೆಚ್ಚೆಚ್ಚು ಸ್ವಾಗತ ಸಿಗುವುದರಲ್ಲಿ ಸಂಶಯವಿ
ಶರೀಫ ಸಾಹೇಬರ ಪದಗಳು ಜೀವನದ ತತ್ವಗಳನ್ನು ರೂಪಿಸುವ ದಾಸ
ಪದಗಳು, ವಚನಗಳು ಮುಂತಾದವುಗಳನ್ನು ಒಳ್ಳೆಯ ಆಕರ್ಷಕ ಧಾಟಿಯ
ಹೊಂದಿಸಿದರೆ, ರೇಡಿಯೋದೊಂದಿಗೆ ಹೆಂಗಳೆಯರೂ ಧ್ವನಿಗೂಡಿಸುವುದರ
ಸಂಶಯವಿಲ್ಲ. (ಅಮೆರಿಕೆಯಲ್ಲಿ ಖಾಸಗಿ ರೇಡಿಯೋ ಕೇಂದ್ರಗಳು, ಜನಪ್ರಿಯ
ಗಾಗಿ ಹುಡುಗಿಯರಿಗೆ ನೃತ್ಯ ಮಾಡುವ ಹಾಡುಗಳನ್ನು ಬಿತ್ತರಿಸುತ್ತವೆ. ಕಲ್ಕ
ಕೇಂದ್ರದಿಂದ ಬಿತ್ತರವಾಗುವ ರವೀಂದ್ರ ಸಂಗೀತದ ಪಾಠಗಳು 30-4
ವರ್ಷಗಳಿಂದ ಎಡಬಿಡದ ಜನಪ್ರಿಯತೆ ಉಳಿಸಿಕೊಂಡು ಬಂದಿವೆ. ಮಹಿ
ಗುರುಗಳೇ ಪ್ರಧಾನವಾಗಿ ಇದನ್ನು ನಡೆಸಿ ಕೊಡುತ್ತಾರೆ.) ಕೇವಲ ಜೋಳ
ಭಕ್ರಿ, ಅನ್ನ ಮ[illegible]ವಾಗಿ ಹಿಟ್ಟಿನ ಮುದ್ದೆಯ ಊಟದ ಪರಿಚಯವಿರು
ಜನಸಾಮಾನ್ಯ ಮ[illegible]ರ ರಾಜ್ಯಗಳಲ್ಲಿ ಪ್ರಚಲಿತವಿರುವ ಅಡಿಗೆಂ

ವೈವಿಧ್ಯದ ಪರಿಚಯ ಮಾಡಿಸುವ ಬರವಣಿಗೆ ಒಳ್ಳೇ ಆಕರ್ಷಣೀಯವಾಗ ಬಹುದು. ಕಳ್ಳೇಕಾಯಿ ಬೀಜ ಹಾಕಿ ತಯಾರಿಸುವ ವಿವಿಧ ಮಹಾರಾಷ್ಟ್ರದ ವ್ಯಂಜನಗಳು, ಗುಜರಾಥದ ಢೋಕಳಾ, ಖಾಕ್ರಾ, ರಾಜಸ್ಥಾನದ ಕಚೋಡಿ, ಸರ್ಸೋಕಾ ಸಾಗ್ (ಸಾಸಿವೆ ಎಲೆಯ ಪಲ್ಯ), ಪಂಜಾಬಿ ಛೋಲೆ, ಕಾಶ್ಮೀರದ ಮಾಂಸಾಹಾರಿ ಪ್ರಕಾರಗಳು, ಬಂಗಾಲದ ರಸಗುಲ್ಲದಂತಹ ಹಗುರಾದ ಮಿಠಾಯಿ, ಆಂಧ್ರದವರ ಬಗೆಬಗೆಯ ಉಪ್ಪಿನಕಾಯಿಗಳು, ತಮಿಳುನಾಡಿನ ಪೊಂಗಲ್ ಪ್ರಕಾರಗಳು, ಕೇರಳದವರ ತೆಂಗು, ಅಕ್ಕಿ, ಬೆಲ್ಲದ ಪಕ್ವಾನ್ನಗಳನ್ನು ಪರಿಚಯಿಸುವುದರ ಮೂಲಕ ಆಯಾ ಪ್ರದೇಶದ ಸೋದರಿಯರ ಜೀವನ ಪದ್ಧತಿಗಳನ್ನೂ ಬಿತ್ತರಿಸಬಹುದು. ಈ ಕಾರ್ಯಕ್ರಮಗಳನ್ನು ರಚಿಸುವಾಗ, ಭೌಗೋಳಿಕವಾಗಿ, ಈ ರಾಜ್ಯಗಳು ಎಲ್ಲಿ ಇವೆ? ಅಲ್ಲಿ ಹೋಗಲು ಯಾವ ಸೌಕರ್ಯಗಳು ಲಭ್ಯವಿವೆ. ಅವರ ಆಚಾರ, ವಿಚಾರ, ಹಬ್ಬ-ಹುಣ್ಣಿಮೆಗಳ ಬಗ್ಗೆ ಕಿರು ಪರಿಚಯ ಮಾಡಿಸಬಹುದು. ಅಲ್ಪ-ಸ್ವಲ್ಪ ಇತಿಹಾಸದ ಹಿನ್ನೆಲೆ ಸೇರಿಸಿದರೆ ಇನ್ನೂ ಉತ್ತಮ.

ಕೆಲವೊಮ್ಮೆ ಬರಹಗಾರರು, ಲೇಖನಿಯ ಬದಲಾಗಿ ಟೇಪರಿಕಾರ್ಡರ್ ಹೊತ್ತು ಹಳ್ಳಿಗಳಲ್ಲಿ ಅಲೆದಾಡಿ ಪತಿಯಿಂದ, ಮನೆಯ ಇನ್ನಿತರ ಸದಸ್ಯರಿಂದ, ರಾಜಕಾರಣಿಗಳಿಂದ, ಸಮಾಜದಿಂದ ವಂಚಿತರಾದವರೊಡನೆ ವಿಚಾರ ವಿನಿಮಯದಲ್ಲಿ ತೊಡಗಬಹುದು. ಆಗಂತುಕನೂ ತಮ್ಮವನೇ ಎಂಬ ಭಾವನೆ ಅವರಲ್ಲಿ ಮೂಡಿ ಬಂದರೆ ಅವರು ತಮ್ಮ ಹೃದಯ ತೋರಿಕೊಂಡಾರು! "ಈ... ಮಗ ತಾಳಿಕಟ್ಟಿ ಹತ್ತು ಮಕ್ಕಳ ತಾಯಿಯನ್ನಾಗಿ ಮಾಡುವದರ ಹೊರತಾಗಿ ಇನ್ನೇನು ಮಾಡಲಿಲ್ಲ. ತಾನು ಗಳಿಸಿದ್ದನ್ನ ಬರೆ ಸೆರೆ ಕುಡಿದು ಕುಡಿದು ತಾನೂ ಸತ್ತು ನಮಗೂ ಕೈ ಕೊಟ್ಟ. "ಸಾಲಿ ಪಾಲಿ ನಮಗ ಹೇಳಿದ್ದಲ್ರಿ! ನಾವೆಲ್ಲ ಮೈಮುರಿ ದುಡಿದರೂ ಒಂದು ಹೊತ್ತು ಹೊಟ್ಟೆ ತುಂಬದಿದ್ದಾಗ, ಚೂರು-ಚೂರು ದುಡಿದು ರೊಕ್ಕ ತರುವ ಮಕ್ಕಳನ್ನು ಸಾಲಿಗೆ ಕಳಸಿದ್ರ ಅವು ಏನು ತಿನ್ನಬೇಕ್ರಿ?" ಎನ್ನುತ್ತಾರೆ. ನಮ್ಮಲ್ಲಿ ದೀನ-ದಲಿತರಿಗೆ ಕೊರತೆಯಿಲ್ಲ. ಆದರೆ ಅವರ ಕೂಗನ್ನು ಕೇಳುವವರೇ ಇಲ್ಲ. ಮಹಿಳಾ ಕಾರ್ಯಕ್ರಮಗಳಲ್ಲಿ ಕೊಂಚ ಸಮಯವನ್ನು ಇಂಥ ಮಹಿಳೆಯರಿಗೆ ಮೀಸಲಿಡಬಹುದು.

ಜನಸಾಮಾನ್ಯರಲ್ಲೂ ಅದ್ವಿತೀಯ ಸಾಧನೆ ಮಾಡಿದ ಸೋದರಿ ಯರಿಗೇನೂ ಕೊರತೆಯಿಲ್ಲ. ಮೃದಂಗ, ಘಟಂ, ನಾಗಸ್ವರಗಳಂಥ ಗಂಡಸರಿಗೇ

ಮೀಸಲಾದವೆಂದು ಎಣಿಸಲ್ಪಟ್ಟ ವಾದ್ಯಗಳನ್ನು ನುಡಿಸುವವರಿದ್ದಾರೆ. ಹರಿಕಥೆ ಮಾಡುವವರಿದ್ದಾರೆ. ಗಮಕಿಗಳಿದ್ದಾರೆ. ಹಲವಾರು ಉದ್ಯಮಿಗಳು, ಅಪರೂಪದ ಕಲಾವಿದೆಯರಿದ್ದಾರೆ. ಕಸೂತಿ, ಚಿತ್ರಕಲೆ ರಂಗೋಲಿಗಳಲ್ಲಿ ಮಿಗಿಲಾದವರು, ತರಕಾರಿಯ ಕಲೆ ಕೈಗೂಡಿಸಿಕೊಂಡವರು, ಹೂ ಜೋಡಣೆ, ಹೊಲಿಗೆಗಳಲ್ಲಿ ನಿಷ್ಣಾತೆಯರು, ನೃತ್ಯ, ನಾಟಕಗಳಲ್ಲಿ ಅನುಭವಿಗಳು-ಹತ್ತಾರು ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಬಾನುಲಿ ಮೂಲಕ ಪರಿಚಯಿಸುವ ಸಾಧ್ಯತೆ ಸದಾಕಾಲ ಇದೆ.

ಮಧ್ಯಮ ವರ್ಗದ ಮಹಿಳೆಯರು ಗ್ರಾಮೀಣರ ನಂತರ ಸಂಖ್ಯೆಯಲ್ಲಿ ದ್ವಿತೀಯ ಸ್ಥಾನವನ್ನು ಆಕ್ರಮಿಸಿದ್ದಾರೆ. ಇವರಲ್ಲಿ ಬಹು ಸಂಖ್ಯಾತರು ಮಾಧ್ಯಮಿಕ ಶಿಕ್ಷಣ ಮುಗಿಸಿದರೂ ಕೆಲವರಾದರೂ ಶಾಲೆ-ಕಾಲೇಜುಗಳ ದರ್ಶನ ಲಾಭ ಪಡೆದವರು. ಅಡಿಗೆ, ಮಕ್ಕಳ ಪಾಲನೆ, ಮನೆಯ ಮೇಲ್ವಿಚಾರಣೆಗಳಷ್ಟೇ ಇವರ ಜವಾಬ್ದಾರಿಗಳಾದ್ದರಿಂದ, ಆಕಾಶವಾಣಿ ಕಾರ್ಯಕ್ರಮಗಳನ್ನು ಮನರಂಜನೆಯ ಜೊತೆಗೆ ಜ್ಞಾನಾರ್ಜನೆಗೂ ಬಳಸಿಕೊಳ್ಳುವ ಸಾಮರ್ಥ್ಯ ಇವರಲ್ಲಿದೆ. ಇವರು ಆಧುನಿಕರಾಗಲು ಬಯಸಿದರೂ ಮನೆತನದ ಹಳೆ ಸಂಪ್ರದಾಯಗಳು, ಹಳೆ ತಲೆಮಾರಿನ ಅತ್ತೆ ಮಾವ-ನಾದಿನಿಯರಿಂದಾಗಿ ಅದು ಸಾಧ್ಯವಾಗುವುದಿಲ್ಲ. ಯಾರನ್ನೂ ಎದುರು ಹಾಕಿಕೊಳ್ಳುವ ಮನಸ್ಸಿಲ್ಲದ ಪತಿಯ ತಟಸ್ಥ ಧೋರಣೆಯಿಂದಾಗಿ ಘಾಸಿಯಾದ ತಂಡವಿದು. ಮಗನಿಗೆ ಅತ್ಯುಚ್ಚ ವಿದ್ಯಾಭ್ಯಾಸ ಮಾಡಿಸಲು, ಮಗಳ ಸಂಸಾರ ಸುಖಿಯಾಗುವಂತೆ ವರದಕ್ಷಿಣೆ ಕೊಡಲು ತಮ್ಮಿಂದ ಸಾಧ್ಯವೇ? ಎಂದು ಸದಾ ತೊಳಲಾಡುತ್ತಿರುತ್ತಾರೆ. ಕೆಲವರು ಗಿಂಬಳದಿಂದ ಧನಿಕರಾಗುತ್ತಿರುವಾಗ ತನ್ನವರಿಗೆ ಇದೇಕೆ ಸಾಧಿಸುವುದಿಲ್ಲ? ಎಂದು ಗೊಂದಲದಲ್ಲಿರುತ್ತಾರೆ. ಇವೆಲ್ಲ ಜಟಿಲವಾದ ಸಮಸ್ಯೆಗಳ ಜೊತೆಗೆ ಇಂದಿನ ಭ್ರಷ್ಟಾಚಾರದ ವಿವಿಧ ಮುಖಗಳು, ನ್ಯಾಯ ಅನ್ಯಾಯ ಮತ್ತು ಕಪ್ಪು ಹಣದ ಬಲು ದೊಡ್ಡ ಪಾತ್ರದ ಪರಿಚಯ ಮಾಡಿ ಕೊಡಬೇಕಾದ ಬರಹಗಾರ/ತಿ ಹೆಚ್ಚಿನ ಹೊಣೆಯಿಂದ ಮುಂದುವರಿಯಬೇಕಾಗುತ್ತದೆ.

ಜಾಹೀರಾತುಗಳು ಮತ್ತು ಟಿವಿ, ಚಲನಚಿತ್ರಗಳಿಂದಾಗಿ, ಅವುಗಳಿಗೆ ಸಿಕ್ಕಿರುವ ಪ್ರಾಧಾನ್ಯದಿಂದಾಗಿ, ನವಯೌವನೆಯರು ಮಾಡೆಲ್ಲು-ತಾರೆ, ವಿಶ್ವ ಸುಂದರಿಯಾಗುವ ಕನಸು ಕಟ್ಟುತ್ತಾರೆ. ಕೆಲವರು ಮರೀಚಿಕೆಯ ಬೆನ್ನು ಹತ್ತಿ

ಹೋಗಿ ಭವಿಷ್ಯವನ್ನು ಕೆಡಿಸಿಕೊಳ್ಳಬಹುದು. ಸೌಂದರ್ಯ ಪ್ರದರ್ಶನ ದೇಹ ಪ್ರದರ್ಶನ ಮತ್ತು ಕೊನೆಗೆ ದೇಹ ವಿಕ್ರಯಕ್ಕೆ ಇಳಿದ ಅಭಾಗಿನಿಯರಿದ್ದಾರೆ. ಈ ಸ್ಥಿತಿಯನ್ನು ಮೊಳಕೆಯಲ್ಲೇ ಗುರುತಿಸಿ ಸರಿಪಡಿಸಲು ಸಾಧ್ಯವಿದೆ. ಇದಕ್ಕಾಗಿ ಕಿಶೋರಿಯರಿಗೆ ಮುನ್ನೆಚ್ಚರಿಕೆ ನೀಡಲು ಸತ್ಯ ಕಥೆಗಳ ಮೇಲೆ ಆಧಾರಿತ ಬಾನುಲಿ ನಾಟಕಗಳನ್ನು ಸಿದ್ಧಪಡಿಸಬಹುದು. ಜಾರಿದವರ ಸ್ವಾನುಭವಗಳನ್ನು ಹೆಸರು ಹೇಳದೆ ಪ್ರಸ್ತುತ ಪಡಿಸಬಹುದು. ರೂಪಕಗಳೂ ಈ ದಿಸೆಯಲ್ಲಿ ಪರಿಣಾಮಕಾರಿಯಾಗಬಲ್ಲವು.

ಸ್ವಾತಂತ್ರ್ಯದ ನಂತರ ಭರದಿಂದ ಬೆಳೆಯುತ್ತಿರುವ ಗುಂಪೆಂದರೆ ಉದ್ಯೋಗಸ್ಥ ಮಹಿಳೆಯರದು. ತಮ್ಮ ವಿವಾಹಕ್ಕೆ ಸಹಾಯವಾಗಲೆಂದೋ, ಕುಟುಂಬದ ಉತ್ಪನ್ನ ಹೆಚ್ಚಿಸಲೆಂದೋ ಅಥವಾ ತಮ್ಮ ಶಿಕ್ಷಣದ ಸದುಪಯೋಗ ಮಾಡಿಕೊಳ್ಳಲೆಂದೋ ವಿವಿಧ ಸೇವೆಗಳಿಗೆ ಅವರು ಸೇರಿಕೊಳ್ಳುತ್ತಾರೆ. ಸಂಸಾರಸ್ಥರಾಗಿ ಕುಟುಂಬದ ಜವಾಬ್ದಾರಿಗಳು ಬೆಳೆಯುತ್ತಿದ್ದರೂ ಕೈತುಂಬ ಸಂಪಾದನೆ ಬಿಟ್ಟು ಕೊಡಲು ಮನಸ್ಸು ಮಾಡದೇ ನೌಕರಿ, ಪತಿ, ಮಕ್ಕಳು, ಗೃಹ ಕೃತ್ಯಗಳ ಜಂಜಾಟಕ್ಕೆ ಸಿಲುಕಿಕೊಂಡು ಜಗತ್ತಿನಲ್ಲಿ ತಮ್ಮಷ್ಟು ದುಡಿಮೆಗಾರರು, ಅಸಂತುಷ್ಟರು ಬೇರೆಲ್ಲೂ ಕಾಣಸಿಗರು, ಎಂಬುದನ್ನು ದೃಢವಾಗಿ ನಂಬಿದ ಇಂಥವರಿಗಾಗಿ ಸಾಮಾಜಿಕ, ಬೌದ್ಧಿಕ ಪ್ರಜ್ಞೆ ಬೆಳೆಸುವ ಕಾರ್ಯಕ್ರಮಗಳನ್ನು ಬರೆದು ಪ್ರಸ್ತುತ ಪಡಿಸಬೇಕಾಗುತ್ತದೆ. ವಿಶ್ವದಲ್ಲಿಯೇ ಮುಂದುವರಿದ ರಾಷ್ಟ್ರವೆನಿಸಿ ಕೊಂಡ ಅಮೆರಿಕೆಯಲ್ಲಿಯೂ ಬಹುಸಂಖ್ಯಾತ ಹೆಂಗಳೆಯರು ಇಂಥ ಸಮಸ್ಯೆ ಗಳನ್ನು ಹೇಗೆ ಎದುರಿಸುತ್ತಾರೆ ಎಂಬುದನ್ನು ಅನುಭವ ಕಥನ, ಶಬ್ದ ಚಿತ್ರ ಇಲ್ಲವೇ ವಿಚಾರಗೋಷ್ಠಿಗಳ ಮೂಲಕ ತಿಳಿಸಲು ಯತ್ನಿಸಬಹುದು. ಸ್ವಂತ ವಾಹನಗಳು ಮತ್ತು ಸ್ವಚಾಲಿತ ಯಂತ್ರಗಳು ಮನೆಗೆಲಸಕ್ಕೆ ಲಭ್ಯವಿದ್ದರೂ ಅವುಗಳಿಂದ ಅವರ ಜವಾಬ್ದಾರಿಗಳು ಇನ್ನಷ್ಟು ಬೆಳೆದಿವೆಯೇ ಹೊರತು ಕಡಿಮೆಯಾಗಲೇ ಇಲ್ಲ. ಅಂತೆಯೇ ಇಂಥವರಿಗೆ ಅತ್ಯಾಧುನಿಕ ಸಲಕರಣೆಗಳನ್ನು ಹೊಂದುವ ಸಾಮಾಜಿಕ ಸ್ಪರ್ಧೆಗಿಂತ ಇದ್ದುದರಲ್ಲಿ ಕುಟುಂಬದವರ ನೆಮ್ಮದಿಗೆ ಬೇಕಾದ ಪರಸ್ಪರ ಸಹಕಾರ, ಕೆಲಸದ ವಿಭಜನೆ, ಸಮಯದ ಸದುಪಯೋಗಗಳ ಮೇಲೆ ಜೋರು ಕೊಡಬೇಕು. ಇಲ್ಲದಿದ್ದರೆ ಇವರು ಧನ ಸಂಪಾದನೆ, ಸುಖಜೀವನದ ಸಲಕರಣೆಗಳು, ಪಾರ್ಟಿ. ಔತಣಕೂಟಗಳತ್ತ ಲಕ್ಷ್ಯ ಹಾಕಿದಾಗ,

ಹೇಗೆ ಅವರ ಮಕ್ಕಳು ಪೋಲಿಯಾಗಿ, 'ಡ್ರಗ್' ಅಥವಾ ಮಾದಕ ಸೇವನೆಯಂಥ ದುಶ್ಚಟಗಳಿಗೆ ಬಲಿಯಾಗುತ್ತಾರೆ ಎಂಬುದನ್ನು ಸೋದಾಹರಣವಾಗಿ ಬಿಂಬಿಸಲು ಮರೆಯಕೂಡದು . ಜಗತ್ತಿನಲ್ಲಿಯೇ ವಿಲಾಸಿ ಜೀವನದ ಉಪಾಸಕರೆನಿಸಿಕೊಂಡ ಫ್ರಾನ್ಸ್‌ದೇಶದ ಮಹಿಳೆಯರು ಕೂಡ ಎಷ್ಟು ಕಷ್ಟದ ಜೀವನ ನಡೆಸುತ್ತಾರೆ? ವಿಶ್ವಾದ್ಯಂತ ದುಡಿಯುವ ಮಹಿಳೆಯರ ಸುಖ-ದುಃಖಗಳು ಹೇಗೆ ಏಕ ಪ್ರಕಾರವಾಗಿವೆ? ಎಂಬುದನ್ನು ಬ್ರಿಟಿಷ್, ರಶಿಯನ್, ಜಪಾನೀ ಮತ್ತಿತರ ಮಹಿಳೆಯರ ಜೀವನ ಕ್ರಮವನ್ನು ಪ್ರಶ್ನೋತ್ತರಗಳ ಮೂಲಕ, ಚರ್ಚೆಗಳ ಮೂಲಕ ತಿಳಿಹೇಳಬಹುದು.

ಆತ್ಮಹತ್ಯೆ, ಸ್ತ್ರೀಯರಲ್ಲಿ ಬೆಳೆಯುತ್ತಿರುವ ಪಿಡುಗು. ಹತ್ತಾರು ಕನಸುಗಳನ್ನು ಕಟ್ಟಿಕೊಂಡು, ಒಂದೂ ನನಸನ್ನಾಗಿ ಮಾಡಿಕೊಳ್ಳದಾದಾಗ, ಕುಟುಂಬದ ಇನ್ನಿತರರೊಂದಿಗೆ ಹೊಂದಾಣಿಕೆಯಾಗದಿದ್ದಾಗ, ಹಿರಿಯರ ಕೀಟಲೆ, ಕಾಟಗಳು ಸಹಿಸಲಾಗದೆ ಹೋದಾಗ, ಅವರು ಮೊರೆ ಹೋಗುವ ಏಕಮಾತ್ರ ಉಪಾಯವೆಂದರೆ, ಇಹಲೋಕದಿಂದ ಪರಲೋಕಕ್ಕೆ ಧಾವಿಸುವುದು. ದೇವದತ್ತವಾದ ಈ ಶರೀರವನ್ನು ಅಂತ್ಯಗೊಳಿಸುವ ಅಧಿಕಾರ ಯಾರಿಗೂ ಇಲ್ಲ ಎಂಬುದನ್ನು ಬಿಂಬಿಸುವುದು ಅತ್ಯಂತ ಸೂಕ್ತ. ವಿಷಮ ವಿವಾಹ ಕೊನೆಗೊಂಡು, ಮತ್ತೆ ಹೊಸ ಸಂಸಾರ ಹೂಡಿ ಸುಖಿಯಾದ ಜೋಡಿಗಳು ಹಲವಾರು ಸಿಗುತ್ತವೆ. ಇಂಥವರ (ಒಪ್ಪಿದರೆ) ಸ್ವಾನುಭವ, ಇಲ್ಲವೆ ಉದಾಹರಣೆಗಳ ಮೂಲಕ ಪರಸ್ಪರ ಒಳಿತಿಗಾಗಿ ವಿಚ್ಛೇದನದ ಅಗತ್ಯವನ್ನು ರೂಪಿಸಬಹುದು. ಆಕಸ್ಮಿಕವಾಗಿ ವೈಧವ್ಯ ಹೊಂದಿದವರಿಗೆ ತರಬೇತಿ, ಶೈಕ್ಷಣಿಕ ಸೌಲಭ್ಯಗಳ ಕುರಿತು ತಿಳಿಹೇಳಿ, ಸ್ವಾವಲಂಬನೆಯ ಹತ್ತಾರು ಪ್ರಕಾರಗಳನ್ನು ಪರಿಚಯಿಸಬಹುದು. ಅನಾಥಾಶ್ರಮ, ವೃದ್ಧಾಶ್ರಮ, ಅಭಯಾಶ್ರಮಗಳು, ಆಸ್ಪತ್ರೆ, ಪ್ರಸೂತಿ-ಗೃಹಗಳನ್ನು ನಡೆಸುವ ಹಲವಾರು ಸೇವಾಸಂಸ್ಥೆಗಳಿಗೆ, ನಿಷ್ಠೆಯಿಂದ ದುಡಿಯುವ ಮಹಿಳೆಯರ ಕೊರತೆ ಸದಾಕಾಲವೂ ಇದ್ದೇ ಇರುತ್ತದೆ. ಆತ್ಮಹತ್ಯೆಗಾಗಿ ಯತ್ನಿಸುವ ಹತಾಶರಿಗೆ ಇಂಥ ಸಂಸ್ಥೆಗಳ ಬಗ್ಗೆ ಮಾಹಿತಿ ನೀಡಿದರೆ, ಅವರು ಅನಾಥರಿಗೆ ತಾಯಿಯಾಗಿ, ವೃದ್ಧರಿಗೆ ಮಗಳಾಗಿ ಜನ್ಮದ ಕೃತಕೃತ್ಯತೆ ಕಾಣುವಂತೆ ಆಗಬಹುದು. ಇಂಥ ಕಾರ್ಯಕ್ರಮಗಳ ಬರಹಗಾರರೇ ಸಲಹಾಕಾರರಾದರೆ, ಕೇಳುಗರಿಗೆ ಅವರು ಆತ್ಮೀಯರಾಗಿ, ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಬಲ್ಲವು.

ಬಳಕೆ ವಸ್ತುಗಳ ಜಾಹೀರಾತುಗಳು, ಕಪ್ಪು ಹಣ, ಅನಾರೋಗ್ಯಕರ ಸ್ಪರ್ಧೆ, ಎಣೆಯಿಲ್ಲದ ಸ್ವಾರ್ಥಗಳು, ರಾಷ್ಟ್ರೀಯ ನಾರೀ ಜೀವನದ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರುತ್ತಿವೆ. ಇದರಿಂದಾಗಿ ವರದಕ್ಷಿಣೆಯ ಪಿಡುಗು ಹೊಸ ಹೊಸ ವಿಕೃತ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಈ ಪಿಡುಗು ದೊಡ್ಡ ಪ್ರಮಾಣದಲ್ಲಿ ಹಬ್ಬಲು ಕಾರಣರು ಯಾರು? ಹೇಗೆ ತಡೆಗಟ್ಟಬಹುದು? ಮುಂತಾದ ವಿಚಾರಗಳು ಪ್ರಸಾರವಾಗಬೇಕು. ಧೈರ್ಯವಾಗಿ ಇದನ್ನು ಎದುರಿಸಿ ಯಶಸ್ವಿಯಾದವರು, ವಧೂ-ವರರು, ಅವರ ತಾಯ್ತಂದೆಗಳು ಅಥವಾ ಪೋಷಕರು, ಮದುವೆಗಳನ್ನು ಹೊಂದಿಸುವ ಸಂಸ್ಥೆಗಳು, ಸಮಾಜ ಸೇವಕರುಗಳ ಮೂಲಕ ಸತ್ಯಕಥೆ, ಅನುಭವ ಕಥನ, ವಿಚಾರ ಸಂಕಿರಣ, ಸಂದರ್ಶನ, ಸಂವಾದ, ನಾಟಕ, ರೂಪಕ, ಸಂಸ್ಥೆಗಳ ಭೇಟಿಯ ಶಬ್ದ ಚಿತ್ರಗಳನ್ನು ಪ್ರಸಾರ ಮಾಡಬಹುದು. ಇಂಥ ಜ್ವಲಂತ ಸಮಸ್ಯೆಗಳ ಬಗ್ಗೆ ಕಾರ್ಯಕ್ರಮಗಳನ್ನು ಮಾಡಿದಷ್ಟೂ ಕಡಿಮೆ.

ಸಮಾಜದ ಕೆಲವರು, ಸರಕಾರಿ ಸಂಸ್ಥೆಗಳು ಸ್ತ್ರೀ ಶಿಕ್ಷಣದತ್ತ ಹೆಚ್ಚೆಚ್ಚು ಗಮನ ಕೊಟ್ಟಂತೆ, ಭಾರತೀಯ ಸಮಾಜದಲ್ಲಿ ಹೆಣ್ಣು-ಗಂಡಿನ ಸ್ಥಾನಮಾನಗಳ ಅಸಮಾನತೆ ಹೆಚ್ಚುತ್ತಲೇ ಇರುವುದು ನಮ್ಮ ನಾಡಿನ ದುರಂತ; ಇದು ಇತ್ತೀಚೆಗೆ ಯಾವ ವಿಕೋಪಕ್ಕೆ ಹೋಗಿದೆಯೆಂದರೆ, ಹುಟ್ಟುವ ಶಿಶು ಹೆಣ್ಣೆಂದು ಕಂಡು ಹಿಡಿದೊಡನೆ ಭ್ರೂಣಹತ್ಯೆ ಮಾಡಿಸಿ ಬಿಡುತ್ತಾರೆ. ಇದರಲ್ಲಿ ಬಹುಸಂಖ್ಯಾತರು ಹೆಂಗಳೆಯರು. ತಾನು ಮಗಳು, ಪತ್ನಿ, ತಾಯಿ, ಅಜ್ಜಿ ಎಂದು ಅಭಿಮಾನ ಪಡುತ್ತಿದ್ದ ವರ್ಗವೇ, ಗಂಡು ಮಕ್ಕಳಿಗೆ ವಿಶೇಷ ಆರೈಕೆ, ಊಟ-ತಿಂಡಿ, ಶೈಕ್ಷಣಿಕ ಸವಲತ್ತು ಒದಗಿಸಿ, ಹೆಣ್ಣು ಮಕ್ಕಳನ್ನು ಕಡೆಗಣಿಸುವುದು ಸಾಮಾನ್ಯ. ಹಿಂದೊಮ್ಮೆ ಸಹಜವಾಗಿಯೇ ನಮ್ಮ ಸಮಾಜದಲ್ಲಿ ಗಟ್ಟಿಯಾಗಿ ನಿಂತಿತ್ತು – ಸ್ತ್ರೀಯ ಸ್ಥಾನಮಾನ. ನಾರಿಯಿಲ್ಲದೆ ನಾಗರೀಕತೆಯಿಲ್ಲ. ಜೀವಿ ಕೋಟಿಗಳಲ್ಲಿ ಪುರುಷರಿಲ್ಲದ ಗುಂಪುಗಳಿವೆ. ಆದರೆ ಹೆಣ್ಣಿಲ್ಲದೆ ವಿಶ್ವವೇ ನಡೆಯದು ಎಂಬ ವೈಜ್ಞಾನಿಕ ಸತ್ಯವನ್ನು ರೂಪಿಸುವ ನಾಟಕ, ರೂಪಕ, ಕಥಾ ಸಂವಾದಗಳನ್ನು ರಚಿಸಿ ಪ್ರಸ್ತುತಪಡಿಸಬೇಕು.

ಪುರುಷರಿಗೆ ಕಡಿಮೆಯಿಲ್ಲದ ಸ್ತ್ರೀವೈದ್ಯರು, ವಿಜ್ಞಾನಿಗಳು, ಉದ್ದಿಮೆ ದಾರರು, ಎಲ್ಲೆಡೆ ತಲೆಯೆತ್ತುತ್ತಿದ್ದಾರೆ. ಎಷ್ಟೋ ವ್ಯಾಪಾರ-ಉದ್ದಿಮೆಗಳಲ್ಲಿ ಸ್ತ್ರೀಯರು ಮೇಲ್ವಿಚಾರಣೆ ವಹಿಸಿ ಅತ್ಯಂತ ಯಶಸ್ವಿಯಾದವರಿದ್ದಾರೆ. ಇಂಥವರ

ಹಾದಿ ತುಳಿಯಲು ಎಷ್ಟೋ ಜನ ಆತುರರಿದ್ದರೂ, ಮಾರ್ಗದರ್ಶನವಿಲ್ಲದೆ ತಡಕಾಡುತ್ತಿರುತ್ತಾರೆ. ಯಾವ ಯಾವ ಉದ್ದಿಮೆಗಳನ್ನು ಬ್ಯಾಂಕ್ ಅಥವಾ ಸರಕಾರಿ ಸಾಲದಿಂದ ಪ್ರಾರಂಭಿಸಬಸಹುದು? ಸಹಕಾರಿ ಸಂಸ್ಥೆಗಳು ಯಾವುವು? ಖಾಸಗಿ ಉದ್ದಿಮೆಗಳಿಗೆ ಸರಕಾರಿ ಅನುಮತಿ ಪಡೆಯುವ ಕ್ರಮ ಯಾವುದು? ಸಾಲ ಪಡೆಯುವ ವಿಧಾನಗಳು, ಅದನ್ನು ಮರುಪಾವತಿ ಮಾಡುವ ಕ್ರಮಗಳು ಮುಂತಾದವನ್ನು ಆಯಾ ಪರಿಣತರಿಂದಲೇ ಹೇಳಿಸಬೇಕು. ಆಗಾಗ ಯಶಸ್ವಿ ಸ್ತ್ರೀಯರ ಆತ್ಮಕಥನ, ಯಶಸ್ಸಿನ ಗುಟ್ಟುಗಳನ್ನು ಬಳಸಿ ಕಾರ್ಯಕ್ರಮ ನಿರ್ಮಿಸಿದರೆ, ಅವು ಹೆಚ್ಚೆಚ್ಚು ಲಾಭಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ಪುರುಷರೂ ಮಹಿಳಾ ಕಾರ್ಯಕ್ರಮಗಳ ಪ್ರಸಾರಕ್ಕೆ ಕಾದಿದ್ದು ಅವನ್ನು ಕೇಳುವಂತಾದರೆ, ಬಾನುಲಿ ಬರವಣಿಗೆಯಲ್ಲಿ ಸುವರ್ಣಯುಗ ಪ್ರಾರಂಭವಾಗಿದೆ ಎಂದು ಅಭಿಮಾನದಿಂದ ಹೇಳಿಕೊಳ್ಳಬಹುದು.

❖

ಮಹಿಳೆ : ಉದ್ಯೋಗ-ಗೃಹಕೃತ್ಯಗಳ ಮಧ್ಯೆ

(ಸ್ವಾನುಭವದ ಹಿನ್ನೆಲೆಯಲ್ಲಿ)

'ಮಹಿಳೆಯ ಸ್ಥಾನ ಮನೆಯಲ್ಲಿ' ಅನ್ನುವ ವಿಚಾರ ಚರಿತ್ರೆಗೆ ಸೇರಿ ಆಗಲೇ ಅರ್ಧ ಶತಮಾನ ಸಂದಿದೆ. ಅದಕ್ಕೂ ಮೊದಲು ಸ್ಕೂಲು ಉಪಾಧ್ಯಾಯಿನಿ, ನರ್ಸ್, ವೈದ್ಯೆಯರನ್ನು ಬಿಟ್ಟರೆ ನೌಕರಿಗೆ ಹೋಗುವ ಮಹಿಳೆಯರು ಅತ್ಯಲ್ಪ ಸಂಖ್ಯೆಯಲ್ಲಿದ್ದರು. ದೇಶದ ಸ್ವಾತಂತ್ರ್ಯ ಚಳುವಳಿ, ಮಹಿಳೆಯರಿಗೆ ಆಯಾಚಿತ ಮಹದುಪಕಾರವೆಸಗಿದೆ. ಗಾಂಧೀಜಿಯವರ ಮುಂದಾಳ್ತನದಲ್ಲಿ ದೇಶದಾದ್ಯಂತ, ಮಹಿಳೆಯರೆಲ್ಲ ಚಳುವಳಿಯಲ್ಲಿ ಪಾಲ್ಗೊಂಡರು. ರಾಜಕೀಯ ಸ್ವಾತಂತ್ರ್ಯದೊಂದಿಗೆ ಅತ್ಯಂತ ಸಹಜವೆನಿಸುವ ರೀತಿಯಲ್ಲಿ ಸ್ತ್ರೀ-ಸ್ವಾತಂತ್ರ್ಯ-ಸಮಾನತೆಗಳು ಒದಗಿಬಂದವು. ಇಂಗ್ಲೆಂಡ್ ಅಮೇರಿಕೆಯಂಥ ಪ್ರಗತಿಪರ ದೇಶದಲ್ಲಿ ಕೂಡ, ಸ್ತ್ರೀಗೆ ಮತಾಧಿಕಾರದ ಹಕ್ಕು ದೊರೆತು ಕೇವಲ 75 ವರ್ಷಗಳಾಗಿವೆ, ಎಂದು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕು. 'ಸಫ್ರಜೆಟ್' ಚಳುವಳಿಯೆಂಬುದು 20ನೇ ಶತಮಾನದ ಮೊದಲ ದಶಕದಲ್ಲಿ ಪ್ರಾರಂಭವಾಗಿ, ಉಲ್ಬಣಗೊಂಡು, ಬಂಧನ-ಜೈಲುವಾಸವಾಗಿ, ಸ್ತ್ರೀಯರು ಸಂಘಟಿತ ಹೋರಾಟಕ್ಕಿಳಿದು, ರಕ್ತಪಾತವಾದ ಬಳಿಕವೇ ಆಂಗ್ಲಮಹಿಳೆಗೆ ಮತಚಲಾಯಿಸುವ ಹಕ್ಕು ಬಂದಿತು. ನಮಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಹಕ್ಕು ಹಾಗೂ ನ್ಯಾಯಗಳಿಗಾಗಿ ಹೋರಾಟ ಮಾಡುವ ಸಂದರ್ಭ ಬರಲೇ ಇಲ್ಲ! ಇತರ ದೇಶಗಳೊಂದಿಗೆ ಹೋಲಿಸಿದಾಗ ಇದು ಎಷ್ಟು ದೊಡ್ಡ ವರದಾನವೆಂಬುದನ್ನು ಅರಿತುಕೊಳ್ಳುವದು ಉಚಿತ. ಜೊತೆಗೆ ಆಯಾಚಿತವಾಗಿ ಲಭಿಸಿದ್ದಕ್ಕೆ, ಸಲ್ಲಬೇಕಾದ ಮನ್ನಣೆ ದೊರೆತಿದೆಯೇ? ಎಂದು ಆಗಾಗ ಯೋಚಿಸುವಂತೆಯೂ ಆಗುತ್ತದೆ!

ಎಷ್ಟೋ ದೇಶಗಳಲ್ಲಿ ಮಹಿಳೆ, ಮೈಮುಖ ಮುಚ್ಚಿಕೊಳ್ಳದೇ ಹೊರಗೆ ಕಾಲಿಡುವಂತಿಲ್ಲ. ಗಂಡಸರೊಡನೆ ಒಂದೇ ಆಫೀಸಿನಲ್ಲಿ ಕೆಲಸಮಾಡುವಂತಿಲ್ಲ. ಡ್ರೈವ್ ಮಾಡುವಹಾಗಿಲ್ಲ. ಲಿಪ್‌ಸ್ಟಿಕ್, ಮುಖಬಣ್ಣ ಬಳಸುವಂತಿಲ್ಲ! 1995ರ ಬೀಜಿಂಗ್ ಜಾಗತಿಕ ಮಹಿಳಾ ಸಮ್ಮೇಳನದ ವಿಚಾರ ಹಾಗೂ ಮಂಡನೆಯಾದ ಗೊತ್ತುವಳಿಗಳಿಂದಾಗಿ ಸ್ತ್ರೀ ಪುರುಷ ಸಮಾನತೆಯೆಂಬುದು ಕಾಗದದ ಮೇಲೆ

ಕೂಡ ಮೂಡಿ ಬಾರದೇ ಇದ್ದ ಕನಸಿನ ಕಲ್ಪನೆಯೆಂಬುದು ಅನೇಕ ರಾಷ್ಟ್ರಗಳ ಮಹಿಳಾ ಪ್ರತಿನಿಧಿಗಳಿಂದ ಅರಿಯುವಂತಾಗಿದೆ. ಅಷ್ಟೇಕೆ? ನಮ್ಮ ದೇಶದಲ್ಲೆ, ಕೆಲವು ಪ್ರದೇಶಗಳಲ್ಲಿ, ಕೆಲವು ಸಮುದಾಯಗಳಲ್ಲಿ ಗಂಡಸರ ರಕ್ಷಣೆಯಿಲ್ಲದೇ ಹೆಂಗಸರು ಹೊರಬೀಳುವ ಹಾಗಿಲ್ಲ. ಮುಖ-ಮೈಗೆ ಮುಸುಕು ಹಾಕದೇ ಸಾರ್ವಜನಿಕ ಸ್ಥಳಗಳಿಗೆ ಹೋಗುವಂತೆ ಇಲ್ಲ. ರಾಜಸ್ಥಾನ, ಉತ್ತರಪ್ರದೇಶ, ಬಿಹಾರಗಳ ನಗರಗಳಾಚೆಯ ಪ್ರದೇಶಗಳಲ್ಲಿ ಉದ್ಯೋಗಸ್ಥೆಯರು ಎದುರಿಸ ಬೇಕಾದ ಸಂಕಟಗಳಿಗೆ ಲೆಕ್ಕವಿಲ್ಲ. ಕರ್ನಾಟಕದ ವಾತಾವರಣ, ಈ ವಿಚಾರದಲ್ಲಿ ಔದಾರ್ಯಪೂರ್ಣವಿದ್ದಂತೆ ಮುಕ್ತವೂ ಇದೆ. ಹೆಣ್ಣುಮಕ್ಕಳು ಮೈಚಳಿ ಬಿಟ್ಟು ಓಡಾಡಿಕೊಂಡು, ಸ್ಕೂಲು-ಕಾಲೇಜುಗಳಲ್ಲಿ ಸಹ-ಶಿಕ್ಷಣ ಹೊಂದಿ, ಇಷ್ಟಪಡುವ ತರಬೇತಿ ವರ್ಗಗಳನ್ನು ಸೇರಿ, ಉಚ್ಚ ಶಿಕ್ಷಣ ಪಡೆದು ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸುತ್ತ ದಶಕಗಳೇ ಸಂದಿವೆ.

ಬಹುಸಂಖ್ಯಾತ ಉದ್ಯೋಗಸ್ಥೆಯರು ಕಾಣಿಸಿಕೊಂಡದ್ದು ಅರವತ್ತರ ದಶಕದಿಂದೀಚೆಗೆ. ಸಾರ್ವಜನಿಕ ಉದ್ದಿಮೆಗಳ ವಲಯದಲ್ಲಿ ಬೆಂಗಳೂರು ಭಾರತದ ಕಣ್ಮಣಿಯಾಯಿತು. ಬ್ಯಾಂಕುಗಳ ರಾಷ್ಟ್ರೀಕರಣ, ಆರೋಗ್ಯ, ಸಮಾಜ ಕಲ್ಯಾಣ, ಶಿಕ್ಷಣ, ತಾಂತ್ರಿಕಕ್ಷೇತ್ರಗಳಿಗೆ ಸಂಬಂಧಿಸಿದ ವಿಸ್ತೃತ ಕಾರ್ಯಕಲಾಪಗಳು ಅಸಂಖ್ಯ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಟ್ಟವು. ಇವುಗಳಲ್ಲಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ, ಉದ್ಯೋಗಗಳಲ್ಲಿರುವ ಮಹಿಳೆಯರ ಒಟ್ಟು ಸಂಖ್ಯೆ ಬೇರ್ಪ ಡಿಸುವದೇ ಕಷ್ಟದ್ದಾಗಿದೆ. ಊಟ ಮಾಡಿದಂತೆ, ಸ್ಕೂಲ್-ಕಾಲೇಜಿಗೆ ಹೋದಂತೆ, ನೌಕರಿಗೆ ಹೋಗುವದು ನಗರಗಳಲ್ಲಿ ಸಾಮಾನ್ಯ ಘಟನೆಯಾಗಿ ಬಿಟ್ಟಿದೆ!

ಈ ಬೆಳವಣಿಗೆಗೆ ಮುಖ್ಯ ಮೂರು ಕಾರಣಗಳು. ಮಧ್ಯಮವರ್ಗವು ಸಾಧಿಸಿಕೊಂಡಿರುವ ವಿದ್ಯಾಸೌಕರ್ಯಗಳು, ಮುಕ್ತ ಸ್ಪರ್ಧೆ ಮತ್ತು ಅತಿಮುಖ್ಯ ವಾದದ್ದು, ಆರ್ಥಿಕ ದುರ್ಭರತೆ. ಕೊನೆಯದು ಹೆಚ್ಚಿನ ಯುವತಿಯರಿಗೆ ಶಿಕ್ಷಣದ ಅನಿವಾರ್ಯತೆಯನ್ನು ಮನಗಾಣಿಸಿಕೊಟ್ಟಿದೆ.

ಯಾವುದೇ ಸ್ಕೂಲು-ಕಾಲೇಜುಗಳ ವಿದ್ಯಾರ್ಹತೆಯ ಪರೀಕ್ಷೆಗಳಲ್ಲಿ ಹುಡುಗಿಯರದೇ ಮೇಲುಗೈ.

ಕೈಚಳಕಕ್ಕೆ ಪ್ರಾಮುಖ್ಯತೆ ಇರುವ, ಟೈಪಿಂಗ್, ಡ್ರಾಯಿಂಗ್, ಸ್ಕೆಚಿಂಗ್, ಕಂಪ್ಯೂಟರ್ ನಿರ್ವಹಣೆಗಳಲ್ಲಿ ಹೆಣ್ಣುಮಕ್ಕಳು ಬಲುಬೇಗ ಪರಿಣತಿ ಸಾಧಿಸುತ್ತಾರೆ.

ಸೂಕ್ಷ್ಮಯಂತ್ರ ಭಾಗಗಳ ಜೋಡಣೆಯೂ ಅವರಿಗೆ ಹಸ್ತಗತವಾಗಿದ್ದಂತೆ ಕಲಾತ್ಮಕ ಚಟುವಟಿಕೆಗಳಲ್ಲೂ ಪ್ರಗತಿ ಅವರದೇ! ಹೆಚ್ಚಿನವರ ಹಸ್ತಾಕ್ಷರ ಚೆನ್ನಾಗಿರುತ್ತದೆ. ತಮ್ಮ ಕೆಲಸದಲ್ಲಿ ಗಂಡಸರಿಗಿಂತ ಒಪ್ಪ-ಓರಣಗಳನ್ನು ತೋರ್ಪಡಿಸುತ್ತಾರೆ. ಜಾಗ್ರತೆ, ವ್ಯಾವಹಾರಿಕತೆ, ದಕ್ಷತೆ, ನಮ್ರತೆಗಳಲ್ಲೂ ಹೆಣ್ಣು ಮಕ್ಕಳು ಮಿಗಿಲಾಗಿರುತ್ತಾರೆ.

ಬುದ್ಧಿಬಲ, ಸ್ತ್ರೀಪುರುಷರಿಗೆ ಸಮಾನವಷ್ಟೆ? ಹೀಗಿದ್ದಾಗ ಕೆ.ಪಿ.ಎಸ್.ಸಿ., ಎಸ್.ಎಸ್.ಸಿ. ಹಾಗೂ ಇತರ ಕಿರುಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೆಲ್ಲ ಹುಡುಗಿಯರದೇ ಕೈಮೇಲು. ಈಗೀಗ ಎಂಜಿನಿಯರಿಂಗ್, ವೈದ್ಯಕೀಯ, ಆಡಳಿತ, ಕೃಷಿವಿಜ್ಞಾನ, ಇನ್ನಿತರ ತಾಂತ್ರಿಕ ಕ್ಷೇತ್ರಗಳಲ್ಲೂ ಗಮನಾರ್ಹ ಮೇಲ್ಮೆಯನ್ನು ಸಾಧಿಸಿದ್ದಾರೆ. ಅರ್ಹತೆಗೆ ಯತ್ನಿಸುವಾಗ ಅವರ ಸಂಖ್ಯೆ ಅತಿ ಕಡಿಮೆಯಿದ್ದರೂ ಯಶಸ್ವಿಯಾಗುವವರ ಸಂಖ್ಯೆ ಹೆಚ್ಚಿನದೇ!

ಈ ಪ್ರಗತಿಗೆ ಅವ್ಯಕ್ತವಾದರೂ ಪ್ರಬಲವಾದ ಕಾರಣ ಇನ್ನೊಂದಿದೆ! ಶಿಕ್ಷಣ ಮತ್ತು ಉದ್ಯೋಗಗಳಿಗೆ ದೊರೆತ ಮುಕ್ತಾವಕಾಶಗಳೇನೋ ಸರಿ, ಆದರೆ ಒಂದಿಲ್ಲೊಂದು ಬಗೆಯಲಿ ನಮ್ಮ ಸಮಾಜದಲ್ಲಿ ಬೆಳೆದು, ಉಳಿದು ಬಂದಿರುವ, ಪುರುಷಪಕ್ಷಪಾತದ ಪ್ರಭಾವ ಹೋಗಿಲ್ಲ. ಗಂಡು ಹುಡುಗರತ್ತ ಪಾಲಕರ ಗಮನ-ಮಮತೆಗಳು ಹೆಚ್ಚು ಎನ್ನುವುದನ್ನು ಮರೆಯುವಂತಿಲ್ಲ. ಉದ್ಯೋಗಸ್ಥ ಮಹಿಳೆಯರೂ ಇದಕ್ಕೆ ಹೊರತಾಗಿರುವದಿಲ್ಲ. ಹೀಗಾಗಿ ಚಿಕ್ಕಂದಿನಿಂದಲೇ ಗಂಡು-ಹೆಣ್ಣು ಮಕ್ಕಳು ಈ ಅಂತರವನ್ನು ಗಮನಿಸುತ್ತಲೇ ಬೆಳೆಯುತ್ತವೆ. "ಕಲಿಸುವದು ತಾಯ್ತಂದೆಗಳ ಕರ್ತವ್ಯ. ಡೊನೇಶನ್ ಕೊಟ್ಟು ಉತ್ತಮ ಸ್ಕೂಲು ಸೇರಿಸುವದು ಅವರ ಜವಾಬ್ದಾರಿ" ಎಂದು ಗಂಡು ಮಕ್ಕಳೂ, ಇತರರೂ ನಂಬಿದರೆ ಹೆಣ್ಣುಮಕ್ಕಳಲ್ಲಿ ಇಷ್ಟರಮಟ್ಟಿಗೆ ಓದಿಸುತ್ತಾ ಇದ್ದಾರಲ್ಲ! ಅದೇ ಸಂತೋಷ, ನಾನು ಚೆನ್ನಾಗಿ ಓದಿದರೆ, ರ್‍ಯಾಂಕ್ ಗಿಟ್ಟಿಸಿದರೆ ಮಾತ್ರ ಬೇಕಷ್ಟು ಓದಬಹುದು! ಎಂದು ಕುಶಾಗ್ರಮತಿಗಳು ತುಂಬ ಪರಿಶ್ರಮದಿಂದ ಓದಿ ಯಶಸ್ವಿಯಾಗುತ್ತಾರೆ. ಇತರ ಹುಡುಗಿಯರು ಸಾಧ್ಯವಿದ್ದಷ್ಟು ಬೇಗ ಸ್ವಾವಲಂಬಿಗಳಾಗಿ ತಾಯ್ತಂದೆಗಳ ಆರ್ಥಿಕ ಹೊಣೆ ಕಡಿಮೆ ಮಾಡಲು ಯತ್ನಿಸುತ್ತಾರೆ. ಈ ಅರಿವೇ, ಹೆಚ್ಚಿನ ಹುಡುಗಿಯರಿಗೆ ಸ್ಪರ್ಧೆಗಳಲ್ಲಿ ಚೆನ್ನಾಗಿ ಮಾಡುವಂತೆ ಪ್ರೇರಣೆ ಒದಗಿಸುತ್ತದೆ. ಗಂಡುಮಕ್ಕಳಾದರೋ, ತಾವು ಇಷ್ಟ ಪಟ್ಟ ಕೋರ್ಸ್‌ಗಳಿಗೆ

ಸೀಟು ದೊರೆಯದಿದ್ದಾಗ, ಮೇಲು ದರ್ಜೆಯ ಹುದ್ದೆಗಳಿಗೆ ತಿರಸ್ಕೃತರಾದಾಗ, ಅಥವಾ ನಿರ್ವಾಹವಿಲ್ಲದಿದ್ದಾಗ ಮಾತ್ರ ಕಿರುಸಂಬಳದ ಹುದ್ದೆಗಳಿಗೆ, ಮನಸ್ಸಿಲ್ಲದ ಮನಸ್ಸಿನಿಂದ ಅರ್ಜಿಗುಜರಾಯಿಸುತ್ತಾರೆ. ಹೀಗಾಗಿ ಸಹಜವಾಗಿಯೇ ಸಮವಯಸ್ಕ ಹುಡುಗಿಯರು, ಹುಡುಗರನ್ನು ಇಂಥ ಪರೀಕ್ಷೆಗಳಲ್ಲಿ ಹಿಂದೆ ಹಾಕುತ್ತಾರೆ. ಮದುವೆ ಮಾರ್ಕೆಟಿನಲ್ಲಿ ಉದ್ಯೋಗಸ್ಥ ಹುಡುಗಿಯರಿಗೇ ಬೇಡಿಕೆ ಬೇರೆ ಹೆಚ್ಚಿದೆಯಲ್ಲ!

ಆಫೀಸ ಕೆಲಸದಲ್ಲೂ ಅಷ್ಟೆ. ಮೇಲಿಂದ ಮೇಲೆ ಕಾಫಿಗೆ ಎದ್ದು ಹೋಗುವದು, ಸ್ಮೋಕ್ ಮಾಡಲು ಹೋಗುವದು. ಗೆಳೆಯರ ಟೇಬಲ್‌ಗಳಿಗೆ ದಿನಂಪ್ರತಿಯ ಕಡ್ಡಾಯದರ್ಶನ, ಗಾಸಿಪ್‌ಗಳಿಗಾಗಿ, ವಿಚಾರ ವಿಮರ್ಶೆಗಾಗಿ ಅಲಲ್ಲಿ ಗುಂಪಾಗಿ ಮಾತು ಮುಂದುವರಿಸುವದು. ನಗರದ ಎಲ್ಲ ಸರಕಾರಿ ಕಚೇರಿಗಳಲ್ಲೂ ಸಾಮಾನ್ಯ ನೋಟ. ಹೆಂಗಸರು ಗಾಸಿಪ್‌ಗೆ ಹೊರತಾಗಿರದಿದ್ದರೂ ಆಗಾಗ ಎದ್ದು ಹೋಗುವದು ಕಡಿಮೆ! ಕುಳಿತಲ್ಲಿಯೇ ಗುಜು ಗುಜು ನಡೆಸಿರುತ್ತಾರೆ. 'ಹೊರಗಿನ ಚಟುವಟಿಕೆಗಳು' ಅವರಲ್ಲಿ ಅಷ್ಟಿಲ್ಲ. ಹೆಚ್ಚಿನ ಕೆಲಸ ಕೊಟ್ಟರೆ, ಹುಡುಗಿಯರು ಗೊಣಗಾಡುತ್ತ, ಸಿಟ್ಟು ಮಾಡುತ್ತ ಮಾಡಿ ಮುಗಿಸಿದರೆ, ಗಂಡಸರು ಕರಾರು ವಾಕ್ ಕೆಲಸ ಮುಗಿಸಿ, ರೂಲ್ಸ್‌ಗಳನ್ನು ತಮ್ಮ ಅನುಕೂಲಕ್ಕಾಗಿ ಉದ್ಧರಿಸುತ್ತ, ಕೆಲಸ ತಪ್ಪಿಸಿಕೊಂಡೋ, ಮೇಲಧಿಕಾರಿಗಳ ಜೊತೆ ಘರ್ಷಣೆಗೆ ಇಳಿದೋ ಮುಂದರಿಯುವದು ಕಂಡು ಬರುತ್ತದೆ. ವ್ಯವಸ್ಥಿತವಾಗಿ ಕಾಗದ ಪತ್ರಗಳನ್ನು, ಜೋಡಿಸಿಡುವುದು, ಫೈಲುಗಳ ನಿಗಾ, ವಿಶ್ವಾಸಾರ್ಹತೆಯ ಗಳಿಕೆಯಲ್ಲಿ ಮಹಿಳೆಯರು ಮೇಲಾಗಿರುತ್ತಾರೆ.

ಆದರೆ!

ಈ ದೃಶ್ಯ ಬಲುಬೇಗ ಬದಲಾಗುತ್ತದೆ. ಗುಮಾಸ್ತರಾಗಿ ಸೇರಿಕೊಂಡ ತರುಣಿಯರಿಗೆ ಸುಲಭವಾಗಿ ಮದುವೆ ಕೂಡಿ ಬರುತ್ತದೆ. ಸಾಂಸಾರಿಕ ತಾಪತ್ರಯಗಳು ಪ್ರಾರಂಭವಾಗುತ್ತವೆ. ಮನೆ ಹಾಗೂ ಉದ್ಯೋಗದ ಸ್ಥಳಕ್ಕಿರುವ ದೂರವನ್ನು ಕ್ರಮಿಸುವ ಬಗೆ, ಗೃಹಕೃತ್ಯಗಳ ಹೊಂದಾಣಿಕೆ, ದೈಹಿಕ ತೊಂದರೆಗಳಿಗಾಗಿ, ಇತರೇ ಸಂಸಾರದ ಸಮಸ್ಯೆಗಳಿಗಾಗಿ, ಆ ರಜೆ, ಈ ರಜೆಗಳು ಬೇಕಾಗುತ್ತವೆ. ತಡಮಾಡಿ ಬರುವದು. ಬೇಗ ಹೋಗಿ ಬಿಡುವದು ಸಾಮಾನ್ಯವಾಗುತ್ತದೆ. ಅಷ್ಟರಲ್ಲಿ ಬರುತ್ತಾಳೆ ರಜೆಗಳ ರಾಣಿ! ಈ

ಪ್ರಸೂತಿರಜಾದೇವಿಗೆ ದಿನ, ತಿಂಗಳುಗಳ ಲೆಕ್ಕವಿಲ್ಲ! ಈಗಂತೂ ಮೊದಲು ತೊಂಭತ್ತು ದಿನಗಳ ರಜೆಯನ್ನು ನೂರಿಪ್ಪತ್ತಕ್ಕೂ ಏರಿಸಿ ಅದಕ್ಕೆ ಹೊಂದಿಸಿ ಇನ್ನೂ ಕೆಲತಿಂಗಳ ವೈದ್ಯಕೀಯ ರಜೆಯನ್ನು ಪಡೆಯುವ ಸೌಲಭ್ಯ ಒದಗಿದೆ. ಪೂರ್ಣಸಂಬಳ, ಅರ್ಧಸಂಬಳ, ಬಿನ್ ಸಂಬಳ (ಅಂದರೆ ಮುಂದೆ ಗಳಿಸಬಹುದಾದ ರಜೆಯನ್ನು ಮುಂಗಡವಾಗಿ ಪಡೆಯಬಹುದಾದಂತಹ) ರಜೆಗಳು ಸಹಾಯಕ್ಕೆ ಬರುತ್ತವೆ. ಅರ್ಧವರ್ಷವನ್ನೇ ಹೆರಿಗೆ ರಜೆಯ ರೂಪದಲ್ಲಿ ಪಡೆದವರಿದ್ದಾರೆ. ಒಂದು ವರ್ಷವನ್ನು ಇಡಿಯದಾಗಿ ಅನುಭವಿಸಿದವರೂ ಇಲ್ಲದಿಲ್ಲ.

ಈಗ ಮೊದಲಿನ ಆಸ್ಥೆ ಆಫೀಸ ಕೆಲಸದಲ್ಲಿ ಉಳಿಯುವದಿಲ್ಲ. ನಿಷ್ಠಾವಂತ ಕೆಲಸಗಾತಿಯೆಂದು ಹೆಸರು ಮಾಡಿದಾಕೆ, ಎಂದು ಮನೆ ಸೇರುವೆನೋ! ಎಂದು ಕಾತರಳಾಗುತ್ತಾಳೆ. ಮನೆಯಲ್ಲಿರುವ ಕಂದನ ಯೋಚನೆ, ಒಂದೇ ಸಮ ಕಾಡಿಸುತ್ತಿರುತ್ತದೆ. ಅವಳ ಯೋಚನೆ, ದಿನಚರಿಗಳಲ್ಲಿ ಗಮನಾರ್ಹ ಬದಲಾವಣೆ ಕಂಡು ಬರುತ್ತದೆ. ಹಕ್ಕುಗಳ ಹೋರಾಟ, ಹೊಣೆಯ ನಿರಾಕರಣೆ, ಕಾಯದೆ ಶೀರ್, ನಡಾವಳಿಗಳು ಕಾಣಿಸಿಕೊಳ್ಳುತ್ತವೆ. ಮನೆಯ ಜವಾಬ್ದಾರಿಗಳು ಹೆಚ್ಚುತ್ತ ಹೋದಂತೆ ಆಫೀಸಿನಲ್ಲಿ ಕಾರ್ಯದಕ್ಷತೆ ಕಡಿಮೆಯಾಗುತ್ತ ಹೋಗುವದು ಸಹಜವಲ್ಲವೇ? ದೈಹಿಕ ದುರ್ಬಲತೆ ಇದ್ದೇ ಇರುತ್ತದೆಯಲ್ಲ?

ಮುಂದಿನ ಹಂತದಲ್ಲಿ ಪರಿವರ್ತನೆ ಇನ್ನೂ ಜೋರಾಗಿ ಕಂಡು ಬರುತ್ತದೆ. ಬಡ್ತಿಬೇಕು. ಬದಲಿಬೇಡ. (ಪ್ರಮೋಷನ್ ಬೇಕೆ ಬೇಕು, ಟ್ರಾನ್ಸ್‌ಫರ್ ಬೇಡ) ಸಂಬಳ ಸರಿಯಾಗಿ ಸಂದಾಯವಾಗಲಿ. ಹೊಣೆಗಾರಿಕೆಯ ಟೇಬಲ್ ಸಾಧ್ಯವಿಲ್ಲ. ಸವಲತ್ತುಗಳನ್ನು ಇದ್ದ ಊರಿನಲ್ಲೇ ಅದೇ ಆಫೀಸಿನಲ್ಲೇ ಕೊಡಿ!' ಎಂದು ಹೋರಾಡುವ ಮಹಿಳೆಯರಿಗೂ ಕೊರತೆಯಿಲ್ಲ. ಈ ವಿಷಯಗಳಲ್ಲೆಲ್ಲ ಮಹಿಳಾ ಮೀಸಲಾತಿ ಇಲ್ಲದಿದ್ದರೆ ಹೇಗೆ? ಎಂದು ವಾದಿಸುವವರೂ ಇದ್ದಾರೆ.

ಇಂಥ ವಿಚಾರಗಳೇ ಪುರುಷ ಸಹೋದ್ಯೋಗಿಗಳಿಗೆಲ್ಲ ಅಸಹನೆ ಬೆಳೆಯಲು ಅವಕಾಶ ಮಾಡಿಕೊಡುತ್ತವೆ. ಹೆಣ್ಣುಮಕ್ಕಳ ಹಕ್ಕಿನ ಹೆರಿಗೆ ರಜೆ ಅವರಿಗೆ ಲಭಿಸುವಂತಿಲ್ಲ ! (ಈಗ ಕನಿಷ್ಠ ರಜೆಯ ಅವಕಾಶ ಒದಗಿದೆ). ಯಾವ ಆಫೀಸಿನಲ್ಲೂ ಮಹಿಳಾ ಉದ್ಯೋಗಸ್ಥೆ, ಹೆರಿಗೆ ರಜೆ ಮೇಲೆ ಹೋದಾಗ ಹಂಗಾಮಿ ಕೆಲಸಗಾರರನ್ನು ಆ ಸ್ಥಳದಲ್ಲಿ ನೇಮಿಸುವ ಸೌಲಭ್ಯವಿರುವದಿಲ್ಲ.

ಹೀಗಾಗಿ ಆಯಾ ಆಫೀಸಿನ ಪುರುಷ ಸಹೋದ್ಯೋಗಿಗಳಲ್ಲೇ ಆಕೆಯ ರಜೆಯ ಅವಧಿಯ ಕೆಲಸವನ್ನು ಹಂಚಿಹಾಕಲಾಗುತ್ತದೆ. ಒಂದು ವರ್ಷ, ಆರು ತಿಂಗಳ ಕಾಲ ಬಾರದ ಮಹಿಳೆಯ ಹೆಚ್ಚಿನ ಕೆಲಸವನ್ನು ಪುಕ್ಕಟೆಯಾಗಿ (ಈಗ ಓ.ಟಿ. ಯನ್ನು ಮಿತವ್ಯಯದ ಕಾರಣಕ್ಕಾಗಿ ನಿಲ್ಲಿಸಲಾಗಿದೆ!) ಸಂತೋಷದಿಂದ ನಿರ್ವಹಿಸುವ ಸಹೋದ್ಯೋಗಿಗಳ ಸುವರ್ಣಯುಗ, ಕರ್ನಾಟಕದಲ್ಲಿ ಇನ್ನೂ ಬಂದಿಲ್ಲ!

ಸರಕಾರವು, ಹೆಣ್ಣುಮಕ್ಕಳಿಗೆ ಒದಗಿಸಿದ ಈ ಸೌಕರ್ಯದ ದುರುಪಯೋಗವೂ ಸಾಕಷ್ಟು ಆಗುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳದೇ ನಿರ್ವಾಹವಿಲ್ಲ. ಎಮ್.ಟಿ.ಪಿ. Media Termination of Pregnancy ಎಂಬ ಉದ್ಯೋಗಸ್ಥೆಯ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಹುದಾದ ಗರ್ಭಧಾರಣೆಯನ್ನು ಅಂತ್ಯಗೊಳಿಸಲು ಸೌಕರ್ಯವನ್ನು ಕೊಡಲಾಗಿದೆ. 45 ದಿನಗಳ ಸಂಬಳ ಸಹಿತ ರಜೆ ಇದಕ್ಕಾಗಿ ದೊರೆಯುತ್ತದೆ. ಇದನ್ನು ಎಗ್ಗಿಲ್ಲದೇ ಬಳಸುವವರು ಇದ್ದಾರೆ. ನನ್ನ ಸೇವಾದಿನಗಳ ಒಂದು ಸಂದರ್ಭ! ಒಬ್ಬಾಕೆ ಒಂದೇ ವರ್ಷದಲ್ಲಿ ಮೂರುಬಾರಿ ಈ ರಜೆ ಪಡೆದಿದ್ದರು. ಆಕೆಯ ಗಂಡ, ಬ್ಯಾಂಕ್ ಉದ್ಯೋಗಸ್ಥನಿಗೆ ಬೇರೆ ಊರಿಗೆ ವರ್ಗವಾಗಿತ್ತು. ಈಕೆಯೂ ತನ್ನ ವರ್ಗಕ್ಕಾಗಿ ಕಾಯುತ್ತ ಗಂಡನ ಊರಿನಲ್ಲೇ ಇದ್ದು ಈ ರಜೆಯ ಸವಲತ್ತು ಪಡೆಯುತ್ತಲೇ ಇದ್ದಳು. ಕ್ಲಾರ್ಕ್ ಹುದ್ದೆಯಲ್ಲಿ ಇರುವವರಿಗೆ ಖಾಸಗೀ ವೈದ್ಯರ ಸರ್ಟಿಫಿಕೇಟು ರಜೆ ಪಡೆಯಲು ಸಾಕಾಗುವಂತೆ, ಅತ್ಯಲ್ಪ ಫೀಗೂ ಇಂಥ ಕಾಗದ ಕೊಡುವ ಸಹಕಾರಿ ವೈದ್ಯರೂ ಇರುತ್ತಾರೆ. ನಿಜವಾದ ಕಾರಣ ಗೊತ್ತಿದ್ದರೂ ರಜೆಕೊಡದೇ ಇರುವದಕ್ಕೆ ಯಾವ ರೂಲ್ಸೂ ಸಹಾಯ ಮಾಡುವುದಿಲ್ಲ! ಎಂದು ಹೆಡ್‌ಕ್ಲಾರ್ಕ್ ತಮ್ಮ ಅಸಹಾಯಕತೆಯನ್ನು ಮೂರನೇ ಬಾರಿ ತೋಡಿಕೊಂಡರು. ನಾನೇ ಫೈಲ್ ಮೇಲೆ "ತನ್ನ ಆರೋಗ್ಯದ ಬಗ್ಗೆ ನಿಗಾವಹಿಸುವ ಸುಶಿಕ್ಷಿತ ಉದ್ಯೋಗಸ್ಥೆಯೊಬ್ಬಳು, ವರ್ಷದಲ್ಲಿ ಮೂರುಬಾರಿ ಎಮ್.ಟಿ.ಪಿ.ಯ ಆಘಾತ ಸಹಿಸುವದಿಲ್ಲ. ಆ ಕುರಿತು ಮುಂಜಾಗ್ರತೆ ವಹಿಸುತ್ತಾಳೆ. ಈ ವೈದ್ಯಕೀಯ ಸರ್ಟಿಫಿಕೇಟನ್ನು ಸಂಬಳಸಹಿತ ರಜೆಗೆ ಪರಿಗಣಿಸಲಾಗುವದಿಲ್ಲ' ಎಂದು ಬರೆಯ ಬೇಕಾಯಿತು. ಸುಳ್ಳು ಸರ್ಟಿಫಿಕೇಟ್‌ಗೆ - ಸಂಬಳವಿಲ್ಲದ ರಜೆಯೇ ಆಕೆಗೆ ಒದಗಿದ ದೊಡ್ಡಶಿಕ್ಷೆ! ಅದಕ್ಷತೆಗೆ, ಅಪ್ರಾಮಾಣಿಕತೆಗೆ ಸರಕಾರಿ ಸಂಸ್ಥೆಗಳಲ್ಲಿ

ಶಿಕ್ಷೆ ಇಲ್ಲವಲ್ಲ! ಕೆಲವೇ ದಿನಗಳಲ್ಲಿ ಆಕೆಯು ಕೇಳಿಕೊಂಡ ಊರಿಗೆ ವರ್ಗವಾದ ಆರ್ಡರ್ ಬಂದಿತು.

ಗೆಝೆಟೆಡ್ ಆಫೀಸರ್ ಮಹಿಳೆಯರೂ ಇಂಥ ರಜೆಯ ದುರ್ಲಾಭ ಪಡೆಯುವದುಂಟು. ನಲವತ್ತು ವರ್ಷದಾಟಿದಾಕೆ, ಮೂರು ಬಾರಿ ಇಂಥ ರಜೆ ಪಡೆದಿದ್ದಳು. ಒಂದು ರಜೆಯ ಅವಧಿ ಕಾಶ್ಮೀರ ಪ್ರವಾಸಕ್ಕೆ, ಇನ್ನೊಂದು ಗಂಡ-ಮಕ್ಕಳೊಡನೆ ಬೇಸಗೆ ವಿಹಾರಕ್ಕೆ ಮೀಸಲಾಗಿದ್ದ ವಿಚಾರಗಳು ತಿಳಿದುಬಂದವು. ಇಂಥವರ ಬೆನ್ನುಹತ್ತಿ, ಹುಸಿತನ ಸಾಬೀತುಗೊಳಿಸಲು, ಸಿವಿಲ್‌ಸರ್ಜನ್ ಹುದ್ದೆಯ ಅಥವಾ ತತ್‌ಸಮಾನ ಅಧಿಕಾರಿಗಳಿಂದ ಬೋರ್ಡ್‌ಗೆ ಇಂಥ ಸರ್ಟಿಫಿಕೇಟ್ ಸಲ್ಲಿಸಿ ಪರಿಶೀಲನೆ ಮಾಡಿಸುವ ಸಹನೆ ಹಾಗೂ ವಿನಾಕಾರಣ ಹೆಣಗುವ ಸಾಮರ್ಥ್ಯ, ಯಾವ ಆಫೀಸಿನ ಮುಖ್ಯಸ್ಥೆಗೆ ಸಾಧ್ಯ? ಬೆಟ್ಟ ಅಗಿದು ಇಲಿ ಹೊರತರುವ ಕೆಲಸ ಬೇಡವೆಂದು ಸುಮ್ಮನಿರಬೇಕಾಗುತ್ತದೆ. ಆದರೂ ಮಹಿಳಾಬಾಸ್‌ಗೆ ಸಿಗುವ ಬಿರುದು "ಸ್ತ್ರೀದ್ವೇಷಿ" 'ಹೆಣ್ಣಿಗೆ ಹೆಣ್ಣೇ ವೈರಿ ! ಈಕೆಗೆ ನಮ್ಮ ಬುದ್ಧಿವಂತಿಕೆ ಸಹಿಸಲಾಗದು! ಈಕೆ ಮಾಡಿರೋದು ಎಲ್ಲರಿಗೂ ಗೊತ್ತು!" ಇಂಥ ಮಾತುಗಳು ಅನೈಚ್ಛಿಕ ವಾಗಿಯೂ ಕೇಳಿ ಬರುತ್ತವೆ. ಹೆಣ್ಣು ಮಕ್ಕಳೇ ಮುಖ್ಯಸ್ಥೆಯನ್ನು ಆಡಿಕೊಂಡರೆ ಗಂಡಸರು ಸುಮ್ಮನಿರುತ್ತಾರೆಯೇ? ಹೆಣ್ಣು ಮಕ್ಕಳಿಗೆ ಮೀಸಲಾದ ಸವಲತ್ತುಗಳ ದುರುಪಯೋಗವಾಗುತ್ತಲೇ ಇರುವಾಗ, ಗಂಡಸರ ದೃಷ್ಟಿಯಲ್ಲಿ ಅವರು ಸಣ್ಣವರಾಗುತ್ತಲೇ ಹೋಗುತ್ತಾರೆ, ಎಂಬುದು ನೆನಪಿಡುವಂತಹದು.

ವರ್ಗಾವರ್ಗಿಯ ವಿಷಯದಲ್ಲಿ ಗಂಡಸರೇ ನಕಾರಾತ್ಮಕ ನಿಲುವು ತಳೆಯುತ್ತಾರೆ. ಯಾವತ್ತೂ ವಶೀಲಿ, ವರ್ಚಸ್ಸು, ಜಾತಿ, ಸಂಬಂಧ, ರಾಜಕಾರಣಿಗಳ ನೆಂಟನ್ನು ಬಳಸಿ ವರ್ಗವನ್ನು ರದ್ದು ಮಾಡಿಕೊಳ್ಳುತ್ತಿದ್ದರೆ, ಹೆಂಗಸರು ತಾನೆ ಏಕೆ ಒಪ್ಪಿಕೊಂಡಾರು?

ಆದರೆ ಕೆಲವು ಇಲಾಖೆಗಳಲ್ಲಿ ವರ್ಗಾವರ್ಗಿ ಅನಿವಾರ್ಯ. ನೌಕರಿಗೆ ಸೇರುವ ಮೊದಲಲ್ಲೇ ಈ ಅಂಶವನ್ನು ಸ್ತ್ರೀ ಪುರುಷ ಭೇದವಿಲ್ಲದೇ ಖಚಿತ ಪಡಿಸಿಕೊಂಡಿರುತ್ತಾರೆ. ಆದರೂ ಒಮ್ಮೆ ಸೇವೆಗೆ ಸೇರಿಕೊಂಡ ಬಳಿಕ ಒಂದಿಲ್ಲೊಂದು ರೀತಿಯಲ್ಲಿ ವರ್ಗವನ್ನು ರದ್ದುಪಡಿಸಿಕೊಳ್ಳುವವರೇ ಹೆಚ್ಚು ಜನ. ಸ್ವಾನುಭವದ ಒಂದೆರಡು ಘಟನೆಗಳನ್ನು ಇಲ್ಲಿ ಹೇಳಿಕೊಂಡರೆ ತಪ್ಪಾಗಲಾರದು.

ನಾನು ಅಖಿಲಭಾರತ ಕೇಂದ್ರ ಸೇವೆಗೆ ಸಂಬಂಧಿತ ಆಕಾಶವಾಣಿಯಲ್ಲಿದ್ದೆ. ಆಗ ಭಾರತದಾದ್ಯಂತ ವರ್ಗಾವರ್ಗಿಯ ಪದ್ಧತಿ ಜಾರಿಯಲ್ಲಿತ್ತು. ಒಂದೇ ಹುದ್ದೆಯಲ್ಲಿ ಅದೂ ಪತ್ರಾಂಕಿತ ಅಧಿಕಾರಿಯಾಗಿ ಮೂರು ಕೇಂದ್ರಗಳಲ್ಲಿ ಹದಿಮೂರು ವರ್ಷಗಳ ಸೇವೆಯ ಬಳಿಕ ಅಪರೂಪದ ಬಡ್ತಿ ಬಂದಿತ್ತು. ಬೆಂಗಳೂರಿನಿಂದ ಕಲಕತ್ತಾ ಮಹಾನಗರಕ್ಕೆ ವರ್ಗಮಾಡಿದ್ದರು. ನಾನು ಕಲಕತ್ತೆಗೆ ಹೋಗಿ ಹಾಜರಾಗುವ ದಿನಾಂಕವನ್ನು ಮುಂಚಿತವಾಗಿ ಖಚಿತಪಡಿಸಿದ್ದೆನಾದರೂ ಆ ಪತ್ರನಡುವೆ ಬಂದಿದ್ದ ಮೂರು ರಜೆಗಳು, ಚಂಡಮಾರುತದ ಪ್ರಕೋಪದಿಂದ ಉಂಟಾದ ಅಂಚೆ ವಿಳಂಬದಿಂದಾಗಿ ಸಕಾಲಕ್ಕೆ ಕಲಕತ್ತಾ ಆಫೀಸನ್ನು ತಲುಪಲೇ ಇಲ್ಲ. ಅಲ್ಲಿ ಹೋಗಿ ಕೇಂದ್ರ ನಿರ್ದೇಶಕರಿಗೆ ರಿಪೋರ್ಟ್ ಮಾಡಿದೆ. ನಂತರ ಅವರ ಸಲಹೆಯಂತೆ ರಿಲೀವ್ ಆಗಬೇಕಾಗಿದ್ದ ಅಧಿಕಾರಿಯನ್ನು ಭೇಟಿ ಮಾಡಿದಾಗ, ಅವರಿಗಾದ ಆಘಾತ, ನೋವು, ವಿಸ್ಮಯಗಳು ಅಷ್ಟಿಷ್ಟಲ್ಲ! ತೋರಿಕೆಗಾದರೂ ವಿನಯದ ಸ್ವಾಗತದ ಬದಲು, 'I never thought you would come this far away and report! ಎಂದು ಎರಡು ಮೂರು ಬಾರಿ ಅಳುಮುಖದಿಂದ ಹೇಳಿದ್ದು ಚೆನ್ನಾಗಿ ನೆನಪಿದೆ. ಅಲ್ಲಿಂದ ಪಶ್ಚಿಮ ಬಂಗಾಲದ್ದೇ ಇನ್ನೊಂದು ಊರಿಗೆ ಆಗಿದ್ದ ತಮ್ಮ ವರ್ಗದ ರದ್ಧತಿಗೆ ಅವರು ದಿಲ್ಲಿಯತನಕ ಹೋಗಿ ಬಂದಿದ್ದರು. ಅದು ರದ್ದಾಗುವದು ಖಂಡಿತವೆಂದು ನಂಬಿಯೂ ಇದ್ದರು. ನಿರಾಸೆಯಾಗದೇ ಇದ್ದೀತೆ?

ಕೆಲದಿನಗಳ ಬಳಿಕ ಉಷಾರಾಣಿಯೆಂಬ ಸಹೋದ್ಯೋಗಿ ನನ್ನನ್ನು ಕರೆದು ಒಂದು ಮಾತು ಕೇಳಿದರು, 'ಏನೂ ತಪ್ಪು ತಿಳಿದುಕೊಳ್ಳಬೇಡಿ! ನಿಮ್ಮೊಂದಿಗೆ ಬಡ್ತಿ ಪಡೆದ ಪುಷ್ಪಾ ಬ್ಯಾನರ್ಜಿ ಪಾಟ್ನಾಕ್ಕೆ ಹೋಗಲೇ ಬೇಕಾಯಿತು. ಅಲ್ಲಿ ಅವರಿಗೆ ತುಂಬ ತೊಂದರೆಯಾಗಿದೆಯಂತೆ. ಅದಕ್ಕೆ ನನಗೊಂದು ಪತ್ರ ಬರೆದು ಈ ವಿಚಾರ ನಿಮಗೆ ಕೇಳಿ ತಿಳಿಸು ಎಂದಿದ್ದಾರೆ' ಎಂದರು.

ಏನು ವಿಚಾರ? ನಾನು ಕೇಳಿದೆ.

'ಶ್ರೀಮತಿ ಕಾಮತಳು ನನ್ನೊಂದಿಗೆ ಪರಸ್ಪರ ಬದಲಿಗೆ ತಯಾರಾಗಿದ್ದಾಳೆಯೇ? ಒಪ್ಪಿಗೆಯಾದಲ್ಲಿ ಕಲಕತ್ತೆಯಿಂದ ಪಾಟ್ನಾಕೆ ಬರುವ ಪ್ರವಾಸದ ಖರ್ಚು ನಾನು ಕೊಡಬಲ್ಲೆ! ಎಂದು ಬರೆದಿದ್ದಾರೆ.' ಎಂದರು ಉಷಾರಾಣಿ.

ನಾನು ಬೆಪ್ಪಾದೆ. 'ಇಲ್ಲಿ ಎಷ್ಟು ವರ್ಷ ಇದ್ದರು?' ಎಂದು ಕೇಳಿದೆ.

"ಇಪ್ಪತ್ತೆರಡು ವರ್ಷ! ಸೇವೆಗೆ ಸೇರಿಕೊಂಡದ್ದೇ ಇಲ್ಲಿ".

ಪುಷ್ಪಾಬ್ಯಾನರ್ಜಿ ಅವಿವಾಹಿತೆಯೆಂಬುದು ಗೊತ್ತಿತ್ತು. ಇತ್ತ ನಾನು ಮಗನನ್ನು ಹೊನ್ನಾವರದಲ್ಲಿ ಪತಿಯನ್ನು ಬೆಂಗಳೂರಿನಲ್ಲಿ ಅವರ ಪಾಡಿಗೆ ಬಿಟ್ಟು ನಾಲ್ಕನೆ ವರ್ಗಾವರ್ಗಿಯಲ್ಲಿ ನಿರ್ವಾಹವಿಲ್ಲದೇ ಕಲಕತ್ತೆಗೆ ಬಂದಿದ್ದೆ. ಅಪರಿಚಿತಳಿಗೆ ಈ ಸಂದೇಶ ಕಳಿಸಿದ ಔಚಿತ್ಯವೇನು?ಎಂದು ವಿಚಾರಿಸಿದೆ.

"ನೀನು ಅಷ್ಟುದೂರದ ಬೆಂಗಳೂರಿನಿಂದ ಕಲಕತ್ತೆಗೆ ಬಂದಿರುವಿಯಲ್ಲ! ಇಲ್ಲಿಂದ ಕೆಲವೇ ಗಂಟೆಗಳ ಪ್ರಯಾಣದ ಪಾಟ್ನಾಕ್ಕೂ ಹೋಗಬಹುದು ಎಂದು ಅವಳ ಅಂದಾಜು. ಆದರೆ ಈ ಸೂಚನೆಯಲ್ಲಿ ಔಚಿತ್ಯವಿಲ್ಲ!" ಉಷಾರಾಣಿ ಒಪ್ಪಿಕೊಂಡರು. ಅರ್ಥಾತ್ ಇಪ್ಪತ್ತೆರಡು ವರ್ಷ ಕಲಕತ್ತೆಯಲ್ಲಿದ್ದಾಕೆಗೆ ಎರಡು ತಿಂಗಳು ಪಾಟ್ನಾದಲ್ಲಿ ಕಳೆಯುವದು ದುಸ್ತರವಾಗಿತ್ತು. ಅದೇ ಹುದ್ದೆಯ ಸಂಸಾರಸ್ಥೆಯ ಸುಖದುಃಖದ ಪರಿವೆ ಆಕೆಗಿರಲಿಲ್ಲ. ತನ್ನ ಕೆಲಸ ಆದರೆ ಸರಿ, ಯಾರಾದರೇನು? ಮಾನವರ ಸಂಕುಚಿತತೆಗೆ ಪ್ರದೇಶ ಭೇದವಿಲ್ಲವಲ್ಲ? ನಾಲ್ಕು ತಿಂಗಳ ಬಳಿಕ ಪುನಃ ಕಲಕತ್ತೆಗೆ ಬರುವದರಲ್ಲಿ ಆಕೆ ಯಶಸ್ವಿಯಾದಳು.

ಆಕಾಶವಾಣಿಯ ಮಹಾನಿರ್ದೇಶನಾಲಯ ದಿಲ್ಲಿಯಲ್ಲಿದೆ. ಅಲ್ಲಿ ಹಾಗೂ ದಿಲ್ಲಿ ಬಾನುಲಿಕೇಂದ್ರಗಳಲ್ಲಿ ನನ್ನೊಂದಿಗೆ ಆಯ್ಕೆಯಾದ ಮಹಿಳೆಯರು, ಸೇವೆಯನ್ನು ಪ್ರಾರಂಭಿಸಿ ಅಲ್ಲಿಯೇ ನಿವೃತ್ತರಾದವರಿದ್ದಾರೆ. ಅವರನ್ನು "ಡೆಲ್ಲಿ ಡೇಮ್ಸ್" ಎಂದು ಕರೆಯುತ್ತಿದ್ದೆ. (ಲಾರ್ಡ್ ಇದರ ಸ್ತ್ರೀರೂಪ ಡೇಮ್). ಒಮ್ಮೆ ದಿಲ್ಲಿಗೆ ಹೋದಾಗ ವರ್ಗಾವರ್ಗಿಯ ಅಧಿಕಾರಿಗೆ ನೀವು ದಿಲ್ಲಿಯ ಒಬ್ಬ ಮಹಿಳೆಯನ್ನಾದರೂ ವರ್ಗಮಾಡಿದ ದಾಖಲೆ ಇಲ್ಲವಲ್ಲ? ಎಂದು ಕೇಳಿದೆ. ಬಂದ ಉತ್ತರ ಹೀಗಿತ್ತು! "ಅವರನ್ನು ಹೇಗೆ ವರ್ಗಮಾಡುವದು ಸಾಧ್ಯ? ಅವರೆಲ್ಲಾ ವಿವಾಹಿತೆಯರು. ಅವರ ಪತಿದೇವರಲ್ಲ ಇಲ್ಲೇ ನೌಕರಿ ಮಾಡುತ್ತಿದ್ದಾರೆ. ಅವರ ಮಕ್ಕಳು ಇಲ್ಲೇ ಓದುತ್ತಿದ್ದಾರೆ!" ನನ್ನ ಪಿತ್ತ ನೆತ್ತಿಗೇರಿತು. 'ಭಾರದ್ವಾಜರೇ, ದಕ್ಷಿಣ ಭಾರತೀಯ ಮಹಿಳೆಯರೂ ವಿವಾಹಿತೆಯರಿರುತ್ತಾರೆ. ಅವರಿಗೂ ಪತಿ-ಪುತ್ರರು ಇರುತ್ತಾರೆ. ಅವರ ಮಕ್ಕಳೂ ಸ್ಕೂಲಿಗೆ ಹೋಗುತ್ತಾರೆ. ಇದೇ ಅವಧಿಯಲ್ಲಿ ನನ್ನನ್ನು ಮೂರುಬಾರಿ ಟ್ರಾನ್ಸ್‌ಫರ್ ಮಾಡಿದಿರಿ ನಾಲ್ಕನೆಯ ಕೇಂದ್ರದಲ್ಲಿದ್ದೇನಲ್ಲ! ಇದು ದಂತಕತೆಯೇ?' ಎಂದು ಜೋರಾಗಿ ಮಾತನಾಡಿದ್ದು

ಪಕ್ಕದ ರೂಮಿನಲ್ಲಿದ್ದ ಪರಿಚಿತರಿಗೆ ಕೇಳಿಸಿತು. ನಡೆದದ್ದು ಕೇಳಿ, ನನಗೆ ಸಮ
ಹೇಳಿ, 'ಆತನಿಗೆ ದಕ್ಷಿಣ ಭಾರತೀಯರ ಬಗ್ಗೆಯೂ ಗೌರವವಿದೆ ಮ
ಹಿಂದಿ ಮನುಷ್ಯ. ಭಾಷೆಯ ತಪ್ಪು ಮಾಡಿದ್ದಾನೆ!' ಎಂದು ನಾನು ಮೇಲಧಿ
ಆತನ ಕುರಿತಾಗಿ ದೂರುಕೊಡದಂತೆ ನೋಡಿಕೊಂಡರು. ನಾನು ಪರಿ
ಎಲ್ಲರಿಗೂ ಭಾರದ್ವಾಜನ ಅಭಿಪ್ರಾಯ ಬಿತ್ತರಿಸುತ್ತ ಹೋದೆ. ಆತನಿಗೆ ಮು
ಆಯಿತೋ ಇಲ್ಲವೋ ಗೊತ್ತಿಲ್ಲ, ಆದರೆ ದಿಲ್ಲಿಯಲ್ಲಿದ್ದವರೆಲ್ಲ 'ಸಿಂಹಾ
ಹತ್ತಿರವಿದ್ದು ತಮಗೇ ಎಲ್ಲ ಅನುಕೂಲಗಳು ದೊರೆಯುವಂತೆ ನೋಡಿಕೋ
ಹೊಸ ವಿಚಾರವೇನಲ್ಲ.

ಈಗ ವರ್ಗಾವರ್ಗಿಯ ಕುರಿತು ರಿಯಾಯಿತಿ ಸಾಕಷ್ಟಿದೆ.
ರಾಜ್ಯದಲ್ಲೇ ಆಕಾಶವಾಣಿಯ ಸಿಬ್ಬಂದಿಯನ್ನು ವರ್ಗಾಯಿಸುತ್ತಾರೆ. ನಿರ್ದೇ
ಸ್ಥಾನಕ್ಕೆ ಮಾತ್ರ ರಾಜ್ಯದಲ್ಲಿ ಸ್ಥಾನ ಖಾಲಿಯಿಲ್ಲದಾಗ ನೆರೆ ರಾಜ್ಯಕ್ಕೆ ಕಳಿಸ
ಆದರೆ ಬೆಂಗಳೂರಿಗರು ಸುಲಭದಲ್ಲಿ ಈ ಸುಖನಗರಿಯನ್ನು ಬಿಟ್ಟು ಹೋ
ಒಪ್ಪುವುದೇ ಇಲ್ಲ!

ವರ್ಗಾವರ್ಗಿವಿಚಾರದಲ್ಲಿ ಒಂದೇ ಕಿವಿಮಾತು ಹೇಳಬ
ವರ್ಗವಾಗಿ ಬಡ್ತಿಯಲ್ಲಿ ಒಮ್ಮೆ ಆದರೂ ಮಹಿಳೆಯೊಬ್ಬಳು ಬೇರೆ
ಹೋಗುವ ಧೈರ್ಯ, ಉತ್ಸಾಹ ತೋರಿದರೆ ಆಕೆಯ ವಿಚಾರದಲ್ಲಿ ಅ
ಜನರ ಗೌರವ ಬೆಳೆಯುತ್ತದೆ. ಸ್ವತಃ ಆಕೆಯ ಆತ್ಮವಿಶ್ವಾಸ-ಮನೋಬ
ಸಾಕಷ್ಟು ಹೆಚ್ಚುತ್ತವೆ. ಒಂದು ಟರ್ಮ್ ಮುಗಿಸಿದರೆ, ತನ್ನ ಊರಿಗೆ ಮ
ಸಾಧ್ಯತೆ ಬಲವಾಗುತ್ತದೆ. ಮೇಲಧಿಕಾರಿಗಳೂ ಇಂಥವರಿಗೆ ಸ
ಮಾಡುತ್ತಾರೆ. ಸಂಸಾರ-ಮನೆ-ಮಕ್ಕಳು. ಗೃಹಕೃತ್ಯಗಳು ಬೆಂಬಿಡದವುಗಳೇ
ಮಹಿಳೆಗೆ ಒಂದು ಜೀವಮಾನ ಒದಗಿಸಿ, ಸ್ಥಾನ-ಮಾನ-ಪ್ರತಿಷ್ಠೆ
ಒದಗಿಸುವ ಸೇವಾಸಂಸ್ಥೆಗೆ- ಅದರ ಒಂದಾದರೂ ಕರಾರಿಗೆ ಒಮ್ಮೆಯಾ
ಗೌರವ ತೋರಬೇಡವೇ? ಕೊಂಚವಾದರೂ ಸಾಹಸ ತೋರಬಹುದ

ನನ್ನ ಸರ್ವೀಸಿನ 30 ವರ್ಷಗಳಲ್ಲಿ ಸುಮಾರು 20 ವರ್ಷಗಳನ್ನು ಒ
ಬೇರೆ ಬೇರೆ ಊರುಗಳಲ್ಲಿ ಕಳೆಯುವ ಸಂದರ್ಭಗಳು ಬಂದವು. ಇಂಥ
ಎಲ್ಲರಿಗೂ ಸಾಧ್ಯವಿಲ್ಲ. ಅಪೇಕ್ಷಣೀಯವೂ ಅಲ್ಲ. ಆದರೆ ಬಾಳಸಂಗ
ಸಹಕಾರವಿದ್ದರೆ, ಮಹಿಳೆಯು ಉದ್ಯೋಗ-ಗೃಹ ಜೀವನಗಳ ಹೊ

ಮಾಡಲು ಸಾಧ್ಯ. ಈ ಸಾಹಸವನ್ನು ಸಾಧ್ಯವಾಗಿಸಲು 'ನಾಲ್ಕು ಕೈ ಒಂದು ಮನಸ್ಸು' ಬೇಕು! ನನ್ನ ಜೀವನದಲ್ಲಿ ಅದು ಘಟಿಸಿತು. ವೃತ್ತಿಗೆ ಆದ್ಯತೆ-ಗೌರವ ನೀಡಿದ ಅನೇಕ ಮಹಿಳೆಯರ ಜೀವನದಲ್ಲೂ ಘಟಿಸಿರಬಹುದಾಗಿದೆ. ಗೃಹಕೃತ್ಯವೆಂಬುದು ಇಂದಿನ ದಿನಗಳಲ್ಲಿ ಜಂಟಿ ಜವಾಬ್ದಾರಿ. ಪತಿ-ಪತ್ನಿಯರಿಬ್ಬರೂ ಕೆಲಸಕ್ಕೆ ಹೊರಡಬೇಕಾದರೆ ಮನೆಯ ಕೆಲಸಗಳನ್ನು ನೋಡಿಕೊಳ್ಳುವವರು ಯಾರು? ಮಕ್ಕಳ ಸ್ಕೂಲು ತಿಂಡಿ-ಊಟ-ಸ್ಕೂಲಿನ ವೇಳೆಯ ನಂತರದ ಅವರ ಮೇಲ್ವಿಚಾರಣೆಯನ್ನು ಯೋಜಿಸಿ ಹಂಚಿಕೊಂಡಾಗಲೇ ಸಾಧ್ಯ. ಮನೆಯೇ ಬಾಳಿನ ಪ್ರಯೋಗಶಾಲೆ. ಮಕ್ಕಳ ಭಾವೀ ಜೀವನದ ತರಬೇತಿ ಕೇಂದ್ರ ಕೂಡ. ಮನೆಯ ಸದಸ್ಯರೆಲ್ಲ ಕೆಲಸಗಳನ್ನು ಹಂಚಿಕೊಂಡರೆ, ಎಳೆಯ ಪೀಳಿಗೆಯವರಿಗೆ ಮೊದಲಿನಿಂದಲೂ ತಮ್ಮ ತಮ್ಮ ಪುಸ್ತಕ, ಬಟ್ಟೆಬರೆ ಹೊಂದಿಸಿಕೊಳ್ಳುವ, ಟಿಫಿನ್ ಡಬ್ಬಿ ತುಂಬುವ, ಸ್ಕೂಲಿನಿಂದ ಬಂದೊಡನೆ, ಅದನ್ನು ತೊಳೆದಿಡುವ ಮುಂತಾದ ಚಿಕ್ಕ ಪುಟ್ಟ ಕೆಲಸಗಳ ರೂಢಿ ಮಾಡಿಸಿದರೆ, ನಿಧಾನವಾಗಿ ಅವು ತಾವಾಗಿಯೇ ಇತರ ಕೆಲಸಗಳನ್ನು ಮಾಡುವ ಆಸಕ್ತಿ ತೋರಬಹುದು.

ಉದ್ಯೋಗದಲ್ಲಿ ಯಶಸ್ಸು ಪಡೆಯಲು ಅನೇಕಸಲ ವೈಯಕ್ತಿಕ ತ್ಯಾಗಕ್ಕೆ ಗಂಡ-ಹೆಂಡಿರಿಬ್ಬರೂ ಸಿದ್ಧರಾಗಬೇಕಾಗುತ್ತದೆ. ಹಣದ ಉಳಿತಾಯ ಸಾಧ್ಯವಾಗುವದಿಲ್ಲ. ಮಕ್ಕಳನ್ನು ಅಗಲಿ ಇರಬೇಕಾಗಬಹುದು. ನಮಗೆ ಇಷ್ಟವಿದ್ದಂತೆ ಅವನ್ನು ಬೆಳೆಸಲು ಆಗದೇ ಇರಬಹುದು. (ಇಷ್ಟವೆಂಬುದು 'ಶ್ರೇಷ್ಠ'ವಲ್ಲ ದಿರಬಹುದು ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ.) ಆದರೆ ಹಿತವಾದ ವಾತಾವರಣದಲ್ಲಿ ತಂದೆ-ಅಥವಾ ತಾಯಿಯೊಂದಿಗೆ ಇದ್ದು ಕೆಲಬಾರಿ ಇಬ್ಬರಿಂದಲೂ ದೂರವಿದ್ದು ಮಕ್ಕಳು ಚೆನ್ನಾಗಿ ಬೆಳೆದ ಅನೇಕ ನಿದರ್ಶನಗಳಿವೆ. ತಂದೆ-ತಾಯಿಗಳ ಸತತ ಆರೈಕೆಯಲ್ಲೇ ಮಕ್ಕಳು ಸರಿಯಾಗಿ ಪ್ರಗತಿ ಸಾಧಿಸುತ್ತಾರೆಂಬುದೂ ಸಾರ್ವಕಾಲಿಕ ಸತ್ಯವಲ್ಲ. ನಿರೀಕ್ಷೆ ಮೀರಿಯೂ ಅಡ್ಡದಾರಿ ಹಿಡಿದ ಎಳೆಯರಿದ್ದಾರೆ.

ಹೆಚ್ಚಿನ ಉದ್ಯೋಗಸ್ಥೆಯರಿಗೆ ತಮಗೆ ಬಾಲ್ಯದಲ್ಲಿ ಸಿಗದೇ ಇದ್ದ ಸೌಕರ್ಯ ಗಳನ್ನೆಲ್ಲ ಮಕ್ಕಳಿಗೆ ಕೊಡಮಾಡುವ ಹಂಬಲ! ಒಳ್ಳೇ ತಿಂಡಿ (ಬಾಯಿರುಚಿಯದು!) ಒಳ್ಳೇ ಸ್ಕೂಲು (ಹೆಚ್ಚು ಡೊನೇಶನ್ ಇದ್ದದ್ದು!) ಒಳ್ಳೆಯ ಬಟ್ಟೆಬರೆ

(ಒನಪು-ಡಿಝೈನ್‌ಗಳದ್ದು) ಗಳನ್ನು ಹೊಂದಿಸುವದರಲ್ಲಿ ತೊಡಗಿರುತ್ತಾರೆ. ಮಕ್ಕಳಿಗೆ ಬೇಕಾದದ್ದು ಪ್ರೀತಿ, ಲಕ್ಷ್ಯಗಳೆಂಬುದನ್ನು ಮರೆತುಬಿಡುತ್ತಾರೆ. ಸಾಲದ್ದಕ್ಕೆ ಮಕ್ಕಳೊಡನೆ ತಾವು ನಿರೀಕ್ಷಿಸಿದಷ್ಟು ಸಮಯ ಕಳೆಯಲಾಗುವದಿಲ್ಲವೆಂಬ ಅಪರಾಧಿ ಭಾವ, ಸದಾ ತಾಯ್ತಂದೆಗಳನ್ನು ಕಾಡುತ್ತಿರುತ್ತದೆ. ಹೀಗಾಗಿ ಇಬ್ಬರೂ ಪೈಪೋಟಿಯಿಂದ ಮಕ್ಕಳ ಬೇಡಿಕೆಗಳನ್ನು ಪೂರೈಸಲು ಹವಣಿಸುವ ಯತ್ನದಲ್ಲಿ ಮಕ್ಕಳು ತಾವು ಇವಕ್ಕೆ ಸಹಜವಾಗಿಯೇ ಬಾಧ್ಯಸ್ಥರು! ಎಂದು ದೃಢವಾಗಿ ನಂಬುತ್ತವೆ. ತಂದೆ-ತಾಯ ದೌರ್ಬಲ್ಯಗಳನ್ನು ಥಟ್ಟನೆ ಗುರುತಿಸಿ ತನ್ನ ಲಾಭಕ್ಕೆ ಬಳಸುವ ಚಾಣಾಕ್ಷತೆ, ಪುಟಾಣಿಗಳಿಗೆ ಹೇಗೆ ಸಾಧಿಸುತ್ತದೊ! ಸಾಂಸಾರಿಕ ಘರ್ಷಣೆಗಳಲ್ಲಿ ಮಕ್ಕಳ ಪಾತ್ರ ಇರುತ್ತದೆಂದು ತಡವಾಗಿ ಪಾಲಕರು ಕಂಡುಕೊಳ್ಳುತ್ತಾರೆ. ಮಕ್ಕಳ ಆಟ-ಪಾಠಗಳಲ್ಲಿ ಆಸಕ್ತಿ ವಹಿಸುವದು ಅವರೊಂದಿಗೆ ಬಿಡುವಿನ ಹೆಚ್ಚಿನ ಸಮಯ ಕಳೆಯುವದು, ಅವಕ್ಕೆ ಆಟಿಗೆ, ತಿಂಡಿಗಳನ್ನು ಕೊಡಿಸುವದಕ್ಕಿಂತ ಹೆಚ್ಚು ಪರಿಣಾಮಯಾಗಬಲ್ಲವು.

ಉದ್ಯೋಗಸ್ಥ ಗೃಹಿಣಿಯರ ನೆಮ್ಮದಿ ಕೆಡಿಸುವ ಒಂದೆರಡು ವಿಚಾರಗಳತ್ತ ಗಮನ ಹರಿಸೋಣ. ಅವೆಂದರೆ ಮಹತ್ವಾಕಾಂಕ್ಷೆ ಹಾಗೂ ತೀವ್ರವಾದ ಸಾಮಾಜಿಕ ಸ್ಪರ್ಧೆ. ಪ್ರತಿಯೊಬ್ಬರೂ ತಮ್ಮ ಮಗ ಅಥವಾ ಮಗಳು ಡಾಕ್ಟರ್ ಅಥವಾ ಎಂಜಿನಿಯರ್ ಆಗಲೇಬೇಕು ಎಂದು ಹಂಬಲಿಸುತ್ತಾರೆ.

ಮಕ್ಕಳಿಗೆ ಚೆನ್ನಾಗಿ ಓದಿಸಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ವಿರಲಾರದು. ಆದರೆ ಈ ಎರಡೇ ವೃತ್ತಿಗಳು ಮನುಷ್ಯನ ಜಾಣ್ಮೆ ಅಥವಾ ಯೋಗ್ಯತೆಯನ್ನು ನಿರ್ಧರಿಸುತ್ತವೆ, ಎಂದು ಒಪ್ಪಿಕೊಳ್ಳುವದು ಕಷ್ಟ. ಈ ಎರಡು ವಿದ್ಯಾಪ್ರಕಾರಗಳಿಗಾಗಿ ಹುಟ್ಟಿಕೊಂಡ ಕಾಲೇಜುಗಳು ಹಾಗೂ ಡೊನೇಶನ್ ಪದ್ಧತಿಯಿಂದಾಗಿ ನಮ್ಮ ವೈಭವದ ಕನ್ನಡನಾಡು, ಎಷ್ಟು ಹೀನ ಹೆಸರನ್ನು ಪಡೆದಿದೆ, ಎಂಬುದು ಬೇರೆ ರಾಜ್ಯಗಳಲ್ಲಿ ಕೆಲಸಮಾಡುವಾಗ ಸ್ಪಷ್ಟವಾಗಿ ಗೋಚರಿಸುತ್ತದೆ. ಕಪ್ಪುಪಣ ಮಾಡಿದವರ ಸಂತಾನವೇ ದೊಡ್ಡ ಸಂಖ್ಯೆಯಲ್ಲಿ ಕರ್ನಾಟಕಕ್ಕೆ ಬಂದು ತಾಂತ್ರಿಕ, ವೈದ್ಯಕೀಯ ಕಾಲೇಜುಗಳಲ್ಲೆಲ್ಲ ತುಂಬಿಕೊಂಡು ಇಲ್ಲಿಯ ಬುದ್ಧಿವಂತ ಮಕ್ಕಳಿಗೇ ಶಿಕ್ಷಣ ಸಿಗದಂತೆ ಆದದ್ದು, ಶಿಕ್ಷಣ ಖಾತೆಯಲ್ಲಿ ಅಲ್ಲೋಲಕಲ್ಲೋಲವೆದ್ದದ್ದು, ನಂತರ ಕೊಂಚ ರಿಯಾಯಿತಿಗಳು ದೊರೆತದ್ದು, ಎಲ್ಲರಿಗೂ ಗೊತ್ತಿದ್ದ ವಿಚಾರಗಳೇ! ಆದರೆ ಪಾಲಕರಿಗೆಲ್ಲ ತಾವು ಇಷ್ಟಪಟ್ಟ

ಕೋರ್ಸಿಗೆ ಮಕ್ಕಳನ್ನು ಸೇರಿಸಲಿಕ್ಕೆ ಆಯಿತೇ? ಹಣದ ಹೊಂದಾಣಿಕೆ ಆಯಿತೇ? ನೆಮ್ಮದಿ ಲಭಿಸಿತೇ?

ಇಲ್ಲ! ಸಾಮಾಜಿಕ ಸಂದರ್ಭದಲ್ಲಿ ಮಹತ್ವಾಕಾಂಕ್ಷೆಯ ಪೈಪೋಟಿಯಲ್ಲಿ - ಕೆಲಮಟ್ಟಿಗೆ ನ್ಯಾಯ ಲಭಿಸಿದರೂ ನೆಮ್ಮದಿ ಮಾಯವಾಗಿದೆ. ಎಷ್ಟು ಹೆಚ್ಚು ಗುಣಗಳನ್ನು ಪಡೆದರೂ, ಕೊಂಚವೇ ಗುಣಗಳ ಅಂತರದಿಂದ ಸೀಟು ಸಿಗದ ದುರ್ದೈವಿಗಳಿದ್ದಾರೆ. ಸೀಟ್ ಸಿಕ್ಕರೆ ಬೇಕಾದ ಕಾಲೇಜ್ ಸಿಗುವದಿಲ್ಲ. ಕಾಲೇಜಿನಲ್ಲಿ ಪ್ರವೇಶ ಸಿಕ್ಕರೆ ಹಾಸ್ಟೆಲ್ ಅನುಕೂಲ ಇಲ್ಲ. ಒಂದಾನೊಮ್ಮೆ ಅದೂ ದೊರೆತರೆ ಹಣವಂತರ ಮಕ್ಕಳೊಡನೆ ಸ್ಪರ್ಧಿಸುವಂತಿಲ್ಲ. ಮಕ್ಕಳು ಸದಾಕಾಲ ಕರಬುತ್ತಲೇ ಇದ್ದರೆ ಹಿರಿಯರಿಗೆಲ್ಲಿಯ ಶಾಂತಿ? ಕಾರು ಇಟ್ಟುಮಜಾಮಾಡಿ ಯಾವ ಬೌದ್ಧಿಕ ಯೋಗ್ಯತೆಯಿಲ್ಲದೆಯೇ ಡಿಗ್ರಿ ಪಡೆಯುವವರ ಜೊತೆಗೆ ತಮ್ಮ ಮಕ್ಕಳನ್ನು ಸ್ಪರ್ಧೆಗೆ ಇಳಿಸಲು ಪಾಲಕರು ಕಾರಣರಾಗುತ್ತಾರೆ. ಅಷ್ಟಿದ್ದೂ ಓದನ್ನು ಕೊನೆಗೊಮ್ಮೆ ಮಕ್ಕಳು ಮುಗಿಸಿದರೆನ್ನಿ, ವಿದೇಶಗಳಿಗೆ ಹಾರಲು ಸಿದ್ಧರಾಗಿಯೇ ಇರುತ್ತಾರೆ. ಓದಲು ಅಥವಾ ದುಡ್ಡುಮಾಡಲು! ಈ ಮಹತ್ವಾಕಾಂಕ್ಷೆ, ಪಾಲಕರಲ್ಲೇ ಜಾಸ್ತಿಯಾಗಿರುವದು ಕಂಡುಬರುತ್ತದೆ. ಮಗ, ವಿದೇಶಕ್ಕೆ ಹೋಗುವದರಲ್ಲಿ ಸಾರ್ಥಕತೆಯ ಪರಾಕಾಷ್ಠೆ ಕಾಣುವವರಿದ್ದಾರೆ. ಮಗಳಾದರೆ, ಅಂಥ ಅಳಿಯನನ್ನೇ ಹುಡುಕುತ್ತಾರೆ. ಸರಿ, ಅವರೇನೋ ನಗುನಗುತ್ತ ಹೊರಟು ಹೋಗುತ್ತಾರೆ. ತಾಯ್ತಂದೆಗಳಿಗೆ ಉಳಿಯುವದು - ಸಾಲ, ಇಳಿಮುಖವಾಗುತ್ತಿರುವ ಆರೋಗ್ಯ, ಬಾಯ್ತೆರೆದು ನಿಂತ ನಿವೃತ್ತಿ, ಕೊನೆಯಿಲ್ಲದ ಅಶಾಂತಿಗಳಷ್ಟೆ! ಮಕ್ಕಳಿಗಾಗಿ ಎಷ್ಟೊಂದು ತ್ಯಾಗ ಮಾಡಿದೆವು, ಎಂಬ ಭ್ರಮೆ ಅವರದಾಗಿದ್ದರೆ, ತಾಯ್ತಂದೆಗಳು, ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ ಎಂದು ಮಕ್ಕಳು ಅಂದು ಕೊಳ್ಳುತ್ತಾರೆ.

“ನನ್ನ ಮಗನಿಗೆ ಡ್ರಾಯಿಂಗ್ ಇಷ್ಟ! ಅವನನ್ನು ಜೆ.ಜೆ. ಸ್ಕೂಲಿಗೆ ಕಳಿಸ್ತೀನಿ’. ‘ನನ್ನ ಮಕ್ಕಳನ್ನು ಕನ್ನಡ ಮೀಡಿಯಂ ಮೂಲಕ ಓದಿಸಿದೆ’ ‘ಸಂಸ್ಕೃತ ಓದು ಮಗು! ಮೇಷ್ಟ್ರು ಆಗ್ತೀಯಾ?’ ‘ಸಂಗೀತವನ್ನೇ ರೂಢಿಸಿಕೋ ಅದರಲ್ಲಿ ಮುಂದುವರಿಯುವಂತೆ ನೋಡಿಕೋ’ ಹೀಗೆ ಮಕ್ಕಳಿಗೆ ಬೋಧಿಸುವ ಒಬ್ಬರೇ ತಾಯಿ, ಅಥವಾ ತಂದೆಯನ್ನು ನಾನು ಕಂಡದ್ದೇಇಲ್ಲ! ಈ ಒಲವು ಅಥವಾ ಆಸಕ್ತಿಗಳೇನು ಕಡಿಮೆ ಮಟ್ಟದವೇ? ಅವುಗಳಲ್ಲಿ ಪರಿಶ್ರಮ ಸಾಧಿಸಿದರೆ ಮಕ್ಕಳು ಯಶಸ್ವಿ ಆಗಲಾರರೇ? ಹೆಚ್ಚಿನ ತಾಯ್ತಂದೆಗಳು ಮಕ್ಕಳ ಒಲವನ್ನು ಅರಿತುಕೊಳ್ಳಲು

ಯತ್ನಿಸುವದೇ ಇಲ್ಲ. ಸಾಮಾಜಿಕ ಪೈಪೋಟಿಯಲ್ಲಿ ತಮ್ಮ ಮಹತ್ವಾಕಾಂಕ್ಷೆಗೆ ಮಕ್ಕಳನ್ನು ಬಲಿಪಶುವಾಗಿಸಿದ ಪಾಲಕರಿಗೆ ಕೊರತೆಯಿಲ್ಲ. ಹೆಚ್ಚೆಂದರೆ ಅವರವರ ಆಸಕ್ತಿಗಳ ಜೊತೆಗೇ ತಾಂತ್ರಿಕ ಅಥವಾ ವೈದ್ಯಕೀಯ ಶಿಕ್ಷಣ ಮುಂದುವರಿಸುವಂತೆ ಮಾಡಿ ಎಳೆಯ ಜೀವಗಳು ಕಲಿಕೆಯ ಭಾರದಿಂದ ದಣಿದು ಹಣ್ಣಾಗುವಂತೆ ಮಾಡುತ್ತಾರೆ.

ಸಾಮಾಜಿಕ ಸ್ಪರ್ಧೆಯಲ್ಲಿ ತಾನು ಇತರರನ್ನು ಮೀರಿಸಬೇಕೆಂಬ ಸುಪ್ತ ಆಸೆ ಹಲವಾರು ವಿಧದಲ್ಲಿ ಮೈತಾಳುವುದನ್ನು ಪ್ರತಿದಿನ ನೋಡುತ್ತೇವೆ. ಉದ್ಯೋಗಸ್ಥ ಮಹಿಳೆಯರಲ್ಲಿ ಮೇಲಿನ ದರ್ಜೆಗೆ ಹೋದಂತೆ ಒಡವೆ, ಬಟ್ಟೆಬರೆ, ಮನೆಯ ಅಲಂಕರಣ, ವಾಹನಾದಿಗಳು ಮುಖ್ಯವೆಂಬ ಕಲ್ಪನೆ ಬೆಳೆಯುತ್ತ ಹೋಗುವದು ಕಂಡುಬರುತ್ತದೆ. ಮದುವೆ, ಮುಂಜಿ, ಗೃಹಪ್ರವೇಶಾದಿ ಸಮಾರಂಭಗಳಲ್ಲಿ ಖರ್ಚುಮಾಡಿ ತಮ್ಮ ಪ್ರತಿಷ್ಠೆ ಮೆರೆಸುವದು ತೀರ ಸಾಮಾನ್ಯವಾಗಿದೆ. ಇಂಥ ಖರ್ಚು ಅನವಶ್ಯಕ ಎಂದು ಯೋಚಿಸುವವರೇ ವಿರಳ. ಸದಾ ಇತರರ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸುವವರು, ತಾವೂ ಆಗೊಮ್ಮೆ ಈಗೊಮ್ಮೆ ಏರ್ಪಡಿಸಲೇ ಬೇಕಲ್ಲ? ಆಗ ಖರ್ಚಿಗೆ ಮಿತಿ ಹಾಕುವಂತಿದೆಯೇ? 'ನನ್ನ ಸಹೋದ್ಯೋಗಿ ಎರಡು ಸ್ವೀಟ್ ಕೊಡಿಸಿದರೆ ನಾನು ಮೂರು ಕೊಡಸ್ತೀನಿ... ಒಂದು ಗಿಫ್ಟ್ ಅಥವಾ ಮೆಮೆಂಟೊ ಅವಳದಕ್ಕಿಂತ ದುಬಾರಿ ಇರಲಿಕ್ಕೇ ಬೇಕು! ಎಂದು ಯೋಚಿಸುವವರು ಹಲವರು. ಎಲ್ಲರೂ ಮರೆಯುವ ಮಾತೆಂದರೆ, ರಿಸೆಪ್ಶನ್ ಹೊತ್ತಿಗೆ ಬಂದು ಬಾಯಿ ತುಂಬ ಹೊಗಳಿದವರು, ಹಿಂದಿನಿಂದ ಹೀಯಾಳಿಸುತ್ತಲೂ ಇರುತ್ತಾರೆ, ಎಂಬುದು. ಕೆಲಮಾತುಗಳು ಕಿವಿಗೆ ಬಿದ್ದಾಗ ನೆಮ್ಮದಿ ಉಳಿಯುತ್ತದೆಯೇ? ಈ ಮೇಲಾಟದ ಸ್ಪರ್ಧೆಯಲ್ಲಿ 'ಖರ್ಚು ಕೈಮೀರಿ ಹೋಯಿತು. ಆದರೆ ಮನಸ್ಸಿಗೆ ಬಹಳೇ ಸಂತೋಷವಾಯಿತು! ಎಂದು ಹೇಳುವವರು ಸಿಗಬಹುದೇ?

ತನ್ನ ಯೋಗ್ಯತೆಗೆ ಸರಿಯಾದ ಹುದ್ದೆ-ಬಡ್ತಿ-ಪ್ರಶಸ್ತಿಗಳು ಸಂದಾಯವಾಗಿಲ್ಲ! ಎಂಬುದು ಪ್ರತಿಯೊಬ್ಬ ಉದ್ಯೋಗಸ್ಥ ಸ್ತ್ರೀ-ಪುರುಷರ ಅನಿಸಿಕೆ. ದೇವರು ಕರುಣಾಮಯಿ. ಎಷ್ಟೊಂದು ಕೊಡಮಾಡಿದ್ದಾನಲ್ಲ! ಎಂದು ಯೋಚಿಸುವವರಿಲ್ಲ. ಇದೇ ಮಹಾನಗರ ಬೆಂಗಳೂರಿನಲ್ಲಿ ಅದೆಷ್ಟು ಗಾರ್ಮೆಂಟ್ ಫ್ಯಾಕ್ಟರಿಗಳಿವೆ. ತಿಂಗಳಿಗೆ 500 ರಿಂದ 1000 ರೂಪಾಯಿಗಳಿಗೆ ದಿನಕ್ಕೆ 10-12 ಗಂಟೆಗಳ

ದುಡಿಯುವ ದುರ್ದೈವಿಗಳು ಅಲ್ಲಿ ನವೆಯುತ್ತಾರೆ. ಅನಾರೋಗ್ಯದಿಂದ ರು ದಿನ ಹೋಗಲಾಗದಿದ್ದರೆ ಸಂಬಳ ಕಡಿತ. ಕೆಲ ದಿನ ಹೋಗಲಾಗದಿದ್ದರೆ ರಿಗೇ ಚಕ್ರ. ಖಾಸಗೀ ಸಂಸ್ಥೆಗಳಲ್ಲಿ ಸೇಲ್ಸ್‌ಗರ್ಲ್ಸ್, ಟ್ಯುಟೋರಿಯಲ್ಸ್‌ಗಳಲ್ಲಿ ಎಂದು ಅತಿಕಡಿಮೆ ಸಂಬಳ ಪಡೆಯುವ ಸುಶಿಕ್ಷಿತೆಯರಿದ್ದಾರೆ. ಸರಕಾರಿ ದ್ಯೋಗಸ್ಥೆಯರ ಯಾವ ಸವಲತ್ತೂ ಅವರ ಬಳಿ ಕನಸಿನಲ್ಲೂ ಸುಳಿಯದು! ಅಗರಬತ್ತಿ, ಮೋಂಬತ್ತಿಗಳನ್ನು ಮಾಡುವ, ಬೀಡಿಕಟ್ಟುವ, ಇಂಥ ಹತ್ತಾರು ಮಾಡುತ್ತಿರುವ ಹೆಂಗಳೆಯರ ಗೋಳನ್ನು ಅರಿಯುವವರಾರು?

ಎಲ್.ಆಯ್.ಸಿ. ಸರಕಾರಿ ನೌಕರಿ ಪಿ.ಎಸ್.ಯು, ಬ್ಯಾಂಕ್ ದ್ಯೋಗಸ್ಥೆಯರನ್ನು ನೋಡಿ! ವರ್ಷಕ್ಕೆ 82 ರಿಂದ 120 ರಜಾದಿನಗಳು. .ಟಿ.ಸಿ., ಬೋನಸ್, ಸಬ್ಸಿಡಿಯ ಅಗ್ಗದ ಊಟ-ತಿಂಡಿಗಳನ್ನು ಒದಗಿಸುವ ಟೀನ್ ಸೌಕರ್ಯ, ಕ್ವಾಟರ್ಸ್, ಪ್ರಾವಿಡಂಟ್ ಫಂಡ್ ಬಗೆ ಬಗೆಯ ಲಭ್ಯ , ನಿವೃತ್ತಿ ಜೀವನ ಎಲ್ಲ ಇದ್ದೂ ಆಗಾಗ ಸಂಪು ಹೂಡುವ ಅತೃಪ್ತಿ ಅವರಲ್ಲಿ ಟು ಬರುತ್ತದೆ! ಇವೆಲ್ಲವುಗಳಿಂದ ವಂಚಿತರಾದ ನತದೃಷ್ಟೆಯರ ಬಗ್ಗೆ ಯಾರು ೀಚಿಸುತ್ತಾರೆ? ಆ ಹೆಂಗಳೆಯರಿಗೂ ಕನಸುಗಳಿವೆ. ತಮ್ಮ ಮಕ್ಕಳಾದರೂ ಲಿ ಬಡತನದಲ್ಲಿ ಹೇಗಿದ್ದರೂ ಓದಿಸಬೇಕೆಂದು ಕಷ್ಟಪಡುವ ಮಂದಿರಿದ್ದಾರೆ. ಮಧ್ಯಮವರ್ಗದವರು ಕಣ್ಣೆತ್ತಿಯೂ ನೋಡದ ಯಾವ ತ್ರ ನೌಕರಿಯೂ ಅವರಿಗಾಗಲಿ, ಅವರ ಮಕ್ಕಳಿಗಾಗಲಿ ದೊರೆಯುವ ಧ್ಯತೆಯಿರುವುದಿಲ್ಲ. ಒಂದು ದಿನ ಮನೆಗೆಲಸದಾಕೆ ಬರದಿದ್ದರೆ ಕಚೇರಿ-ಬ್ಯಾಂಕ್ ದ್ಯೋಗಸ್ಥೆಯ ಸ್ಥಿತಿ ಊಹಿಸಲ ಸಾಧ್ಯ! ನಾಲ್ಕಾರು ಮನೆಗಳ ಅಂಥ ಕೆಲಸವನ್ನೇ ಡಿ ಹೊಟ್ಟೆ ಹೊರಕೊಂಡು ಮಕ್ಕಳನ್ನು ನೋಡಿಕೊಳ್ಳುವವಳ ಸ್ಥಿತಿ-ಮನಸ್ಥಿತಿಗಳ ಕುರಿತು ಯೋಚಿಸುವವರು ಕಡಿಮೆಯೇ.

ನಮ್ಮ ರಾಜ್ಯಸರಕಾರದ ಸಂಬಳದ ಸ್ಕೇಲ್‌ಗಳು ಭಾರತದಲ್ಲೇ ಷ್ಠಮಟ್ಟದವು, ಎಂಬ ಅಂಶ ಹೆಚ್ಚಿನ ಜನರಿಗೆ ತಿಳಿದಿರಲಾರದು. 70ರ ಕದಲ್ಲೇ ಜಸ್ಟಿಸ್ ಎ.ಎನ್. ಪೈ ಕಮಿಷನ್ ಗೊತ್ತುಪಡಿಸಿದ ವೇತನಶ್ರೇಣಿ ರದಲ್ಲೆ ಏಕಮಾತ್ರವಿತ್ತು. ಕ್ರಮೇಣ ಕೆಲರಾಜ್ಯಗಳು ಅದನ್ನು ಹಿಂಬಾಲಿಸಿದರೂ ತ್ತರ, ಪೂರ್ವ ಭಾರತದ ಹಲವಾರು ರಾಜ್ಯಗಳಲ್ಲಿ ವೇತನ ಕೆಳಮಟ್ಟದಲ್ಲೇ . ಸೊಗಸಾದ ನಗರ, ಕೇಳದೆಯೇ ಒದಗಿದ ಸವಲತ್ತುಗಳು, ಉತ್ತಮ

ಸಂಬಳ ಶ್ರೇಣಿ, ಚ್ಯಾಲೆಂಜ್‌ಗಳೇ ಇಲ್ಲದ ವೃತ್ತಿಜೀವನ ಇವುಗಳಿಂದಾಗಿ ಕನ್ನಡಿತಿಯ ಸಾಧನೆ ಮೊಟಕಾಗಿದೆಯೇ?

ರುಕ್ಮಿಣಿ ಅರುಂಡೇಲ್, ಕಮಲಾಬಾಯಿ ಹೊಸಪೇಟೆ, ಕಿರಣ್‌ಬೇಡಿ, ದುರ್ಗಾಭಾಗವತ, ಮಹಾಶ್ವೇತಾದೇವಿ, ಸುಜಾತಾ ಮನೋಹರ್, ಮಾಧುರಿಶಹಾ, ಇಲಾಭಟ್, ಕಾವೊಸಿ ಮುಂತಾದವರ ಸಾಧನೆಯ ಮಟ್ಟದ ಒಬ್ಬ ಮಹಿಳೆಯೂ ನಮ್ಮಲ್ಲಿ ಕಂಡು ಬಂದಿಲ್ಲ. ಬಹುಶಃ ಮಹಾರಾಜರ ಕಾಲದಿಂದಲೂ ಮಹಿಳೆಯರಿಗೆ ಕೊಡಮಾಡಿದ ಸವಲತ್ತುಗಳಿಂದಾಗಿಯೋ ಏನೋ ಆಹ್ವಾನಗಳೇ ಒದಗಲಿಲ್ಲ! ಆದರೆ ಇವುಗಳಿಂದ ವಂಚಿತರಾದ ಬಲುದೊಡ್ಡ ಮಹಿಳಾ ಸಮೂಹ, ನಮ್ಮೊಂದಿಗೇ ಬದುಕುತ್ತಿದೆ. ಅವರ ಮೂಕ ವೇದನೆಯನ್ನು ಆಗೊಮ್ಮೆ ಈಗೊಮ್ಮೆ ಅರಿಯುವ ಪ್ರಯತ್ನವನ್ನಾದರೂ ಮಾಡಿದರೆ, ನಮಗೆ ಲಭ್ಯವಾದ ಸುಖಜೀವನದ ಕಲ್ಪನೆ ಬಂದೀತು!

❖

ಸ್ತ್ರೀ-ಪುರುಷರ ಸಮಾನತೆ : ಒಂದು ವಿವೇಚನೆ

ಈ ಲೇಖನ, 'ಸ್ತ್ರೀ-ಪುರುಷರ ಸಮಾನತೆ'ಯನ್ನು ಭಾರತೀಯ ಸಂದರ್ಭದಲ್ಲಿ ವಿವೇಚಿಸಲಾಗಿದೆ ಎಂಬುದನ್ನು ಮೊದಲೇ ಸ್ಪಷ್ಟಪಡಿಸುವದು ಉಚಿತವೆನಿಸುತ್ತದೆ. ನಮ್ಮ ದೇಶದ ಇತಿಹಾಸದಲ್ಲಿ ಸ್ತ್ರೀಯರು ಪುರುಷರೊಂದಿಗೆ ಸಮಾನತೆಯನ್ನು ಪಡೆಯುವದಕ್ಕಾಗಿ ಹೋರಾಡಿದ ಯಾವ ದಾಖಲೆಗಳೂ ಸಿಗುತ್ತಿಲ್ಲ! ಸ್ತ್ರೀ ಪುರುಷರಿಬ್ಬರೂ ಸಮಾಜದ ಅವಿಭಾಜ್ಯ ಅಂಗ. ಅಂತೆಯೇ ವೇದಕಾಲದಲ್ಲಿ ಜೊತೆ ಜೊತೆಯಾಗಿಯೇ ಗೃಹಜೀವನದಲ್ಲಿ ಶಿಕ್ಷಣದಲ್ಲಿ, ಕರ್ಮಕಾಂಡಗಳಲ್ಲಿ ಪಾಲುಗೊಂಡುದನ್ನು ನೋಡುತ್ತೇವೆ. ಜೀವನದ ಸಕಲ ಕಷ್ಟ-ಕಾರ್ಪಣ್ಯಗಳಲ್ಲಿ ಗಂಡಸಿನ ಜೊತೆಗಾತಿ, ಹೆಣ್ಣೇ ಆಗಿ ಹೋರಾಡುತ್ತ ಬಂದದ್ದುಂಟು. ಗಂಡು-ಹೆಣ್ಣು ಒಬ್ಬರಿಗೊಬ್ಬರು ಪೂರಕವಾಗಿ ಗಣಿಸಲ್ಪಟ್ಟ ಹಂತದಲ್ಲಿ ಅವರಲ್ಲಿ ಮೇಲು-ಕೀಳು ಭಾವವನ್ನು ಕಲ್ಪಿಸುವದು ಸಲ್ಲದ ಮಾತು. ಪುರುಷನು ಧೈರ್ಯ ಸ್ಥೈರ್ಯ, ಶಕ್ತಿ ಸಾಮರ್ಥ್ಯಗಳಿಗೆ ಹೆಸರಾದರೆ, ಸ್ತ್ರೀಯು ದಯೆ-ದಾಕ್ಷಿಣ್ಯ, ಕರುಣೆ-ಕ್ಷಮೆಗಳ ಆಗರ. ಸಾಂಸಾರಿಕ ಜೀವನದಲ್ಲಿ ಗಂಡುಗೆದ್ದು ಸೋಲುತ್ತಾನೆ. ಹೆಣ್ಣು ಸೋತು ಗೆಲ್ಲುತ್ತಾಳೆ. ಈ ಸಂಪ್ರದಾಯ ಭಾರತೀಯ ಸಂಸ್ಕೃತಿಯಲ್ಲಿ ಅನಾದಿಕಾಲದಿಂದ ನಡೆದು ಬಂದಿದೆ. ಚಾರಿತ್ರಿಕ ಘಟನೆಗಳಿಂದ ಕೆಲವು ಏರುಪೇರುಗಳಾದರೂ, ಪರಸ್ಪರ 'ಪೂರಕ' ಕಲ್ಪನೆ ಅಲ್ಲಗಳೆದವರಿಲ್ಲ. ಆದರೆ ಪತಿ-ಪತ್ನಿಯನ್ನು ಸ್ವತಂತ್ರ ಘಟಕವಾಗಿ, ಬೇರೆ ಬೇರೆ ವ್ಯಕ್ತಿಗಳನ್ನಾಗಿ ವಿಭಜಿಸಿದ್ದು ಪಾಶ್ಚಾತ್ಯ ಸಂಸ್ಕೃತಿಯ ಪ್ರತೀಕ. ಆಧುನಿಕ ದೃಷ್ಟಿಯ ಸಮಾನತೆ-ಸ್ತ್ರೀ ಸ್ವಾತಂತ್ರ್ಯದ ಕಲ್ಪನೆಯನ್ನು ಪಾಶ್ಚಾತ್ಯರಿಂದ ಎರವಲು ಪಡೆದಿದ್ದೇವೆ. ಅಂತೆಯೇ ಸಂಪತ್ತು, ಸುಖ, ಸಮೃದ್ಧಿಗಳನ್ನು ಹೊಂದಿದ ಸುಶಿಕ್ಷಿತ ನಗರವಾಸಿ ಸ್ತ್ರೀಯರಲ್ಲೇ ಪಾಶ್ಚಾತ್ಯ ವಿಚಾರದ ಸಮಾನತೆಯ ಕುರಿತಾದ ಆಂದೋಲನ ಕಾಣುತ್ತೇವೆ. ಹೊಸ ವಿಚಾರಗಳನ್ನು ಬಿತ್ತರಿಸುವದರಲ್ಲಿ ತೊಡಗಿರುವ ಸಂಘ-ಸಂಸ್ಥೆಗಳನ್ನು ನೋಡುತ್ತೇವೆ. ಭಾರತೀಯ ಮಹಿಳೆ ನಡೆದುಬಂದ ದಾರಿಯನ್ನು ಚರಿತ್ರೆಯ

ಹಿನ್ನೆಲೆಯಲ್ಲಿ ಅರಿತುಕೊಳ್ಳುವ ಯತ್ನವನ್ನು ಆಂದೋಳನದಲ್ಲಿ ತೊಡಗಿಸಿ ಕೊಂಡವರು ಮಾಡದಿರುವದು ವಿಷಾದದ ಸಂಗತಿ.

ಶಿಲಾಯುಗದಲ್ಲಿ, ಸ್ತ್ರೀಯರನ್ನು ಕ್ರೂರಮೃಗಗಳಿಂದ ಸಂರಕ್ಷಿಸಬಲ್ಲ ಸಬಲ ಪುರುಷ ರಕ್ಷಣೆ ಅತ್ಯವಶ್ಯವಾಗಿತ್ತು. ವರರೊಂದಿಗೆ ತೀವ್ರ ಹೋರಾಟ ನಡೆಸಿದ, ಜಯಶಾಲಿಯೊಂದಿಗೇ ವಧುವಾದವಳು ಸಂಸಾರ ಹೂಡುವ ರೂಢಿ ಬೆಳೆದು ಬಂದಿತು. ಹೀಗೆ ಸೋತು ಸತ್ತವರ ರಕ್ತದ ತಿಲಕವನ್ನೇ ಕನ್ನೆಯ ಹಣೆಗೆ ಇಡುತ್ತಿದ್ದುದು, ನಂತರ ಕುಂಕುಮದ ರೂಪತಾಳಿತು, ಎಂದು ಹೇಳಲಾಗುತ್ತದೆ. ಸಹನೆಯಲ್ಲಿ ಸ್ತ್ರೀಯರನ್ನು ಭೂಮಿಗೆ ಹೋಲಿಸಿದರು. ಫಲವತಿ ಮಾತೆಯನ್ನೇ ಶಕ್ತಿಯ ರೂಪದಲ್ಲಿ ಪೂಜಿಸುವ ಪಂಥ ಬೆಳೆದು ಬಂದಿತು. ಇಪ್ಪತ್ತೈದು ಸಹಸ್ರವರ್ಷಗಳ ಹಿಂದೆ ರಚಿತವಾದ ಗುಹಾಚಿತ್ರಗಳಲ್ಲಿ ಮಾತೆಯನ್ನು ದೈವತ್ವಕ್ಕೆ ಏರಿಸಲಾಗಿದೆ. ವೇದಕಾಲದಲ್ಲಿ ಅಂದರೆ ಕ್ರಿ.ಶ. ಪೂರ್ವ 2000 ವರ್ಷಗಳ ಹಿಂದೆ, ಸ್ತ್ರೀಯರಿಗೆ ಪುರುಷರಿಗೆ ಸರಿಸಮವಾದ ವಿದ್ಯಾರಂಭ ಕೊಡಲಾಗುತ್ತಿದ್ದುದು ಸೂತ್ರಕಾಲದಲ್ಲಿ ಆನಂತರವೂ ಮುಂದರಿಯಿತು. ವಾತ್ಸ್ಯಾಯನನು (ಕ್ರಿ.ಶ. 1ನೇ ಶತಮಾನ) ಸ್ತ್ರೀಯರು ಕರಗತ ಮಾಡಿಕೊಳ್ಳಬಹುದಾಗಿದ್ದ ಹಲವಾರು ಶಾಸ್ತ್ರ ಮತ್ತು ಕಲೆಗಳನ್ನು ಹೆಸರಿಸಿದ್ದಾನೆ. ಭಾರತೀಯ ಸಂಸ್ಕೃತಿಯ ಸುವರ್ಣಯುಗವಾದ ಕ್ರಿ.ಶ. 3 ರಿಂದ 9ನೇ ಶತಮಾನದ ಅವಧಿಯವರೆಗೆ ಸ್ತ್ರೀಯರ ಕುರಿತು ಉದಾರಭಾವನೆಯೇ ವ್ಯಕ್ತವಾಗಿದೆ. 'ಸಂಸ್ಕಾರವೆಂಬುದು ಆತ್ಮಕ್ಕೆ ಸಂಬಂಧಿಸಿದ್ದೇ ಹೊರತು ಸ್ತ್ರೀ-ಪುರುಷ ಎಂಬ ಬಾಹ್ಯಭೇದಕ್ಕಿಲ್ಲ' ಎಂದು ಕಾವ್ಯಮೀಮಾಂಸಕಾರ ರಾಜಶೇಖರನು ಸಾರಿ ಹೇಳಿದ. ಪುರುಷರಂತೆ ಸ್ತ್ರೀಯರೂ ಉತ್ತಮ ಕವಿಗಳಾಗ ಬಲ್ಲರು. ಎಂದು ಬಲವಾಗಿ ನಂಬಿದ್ದನಲ್ಲದೇ ಹಲವಾರು ಕವಯತ್ರಿಯರನ್ನು ಉದ್ಧರಿಸಿದ್ದಾನೆ. ಆತನ ಪತ್ನಿ ಅವಂತಿ ಸುಂದರಿಯೂ ಕವಿ, ಅಲಂಕಾರ ಶಾಸ್ತ್ರ ಪ್ರವೀಣೆಯಾಗಿದ್ದ ಬಗ್ಗೆ ಅಭಿಮಾನವನ್ನು ತಾಳಿದ್ದ.

ಮಧ್ಯಯುಗದಲ್ಲೂ ಹೆಂಗಳೆಯರಿಗೆ ಗೌರವದ ಸ್ಥಾನಮಾನಗಳಿದ್ದುದನ್ನು ಶಾಸನಗಳು ಹೇಳುತ್ತೇವೆ. ಪಂಪ, ಬಿಲ್ಹಣ, ಚಾಮರಸ, ವಿದೇಶೀ ಪ್ರವಾಸಿಗಳಾದ ಪ್ಯಾಸ್-ಫರ್ನಾವೊ ನ್ಯುನಿಝ್ ಮೊದಲಾದವರ ಕೃತಿಗಳಿಂದಲೂ ಈ ಮಾತನ್ನು ಅರಿಯಬಹುದಾಗಿದೆ. ಸ್ತ್ರೀಯರಲ್ಲಿ ಬಲ-ದಕ್ಷತೆಗಳು ಸುಪ್ತವಾಹಿನಿಯಾಗಿರುತ್ತವೆ. ಸಂದರ್ಭನುಸಾರ ಅವು ಪ್ರಕಟವಾದಾಗಲೇ ಆ ಸಾಮರ್ಥ್ಯದ ಅರಿವಾಗುತ್ತಿತ್ತು.

ಮಬ್ಬೆ, ಅಕ್ಕಾದೇವಿ, ಅಕ್ಕಮಹಾದೇವಿ, ಅಚಲೆ, ಸಾವಿಯಬ್ಬೆ, ಶಾಂತಲೆ ಕ್ಕ, ಕೆಳದಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಚಾಂದಬೀಬಿ ಮೊದಲಾದವರು ಮ್ಮ ತ್ಯಾಗ, ಕಲೆ, ವಿರಕ್ತಿ, ಧೈರ್ಯ, ಸಾಹಸಗಳಿಂದಲೇ ಅಜರಾಮರರಾಗಿದ್ದಾರೆ. ಹಾರ, ಊರು, ನಾಡು, ಮಂಡಲ, ಮಹಾಮಂಡಲಗಳ ಆಡಳಿತಗಾರರಾಗಿ ವಾರು ರಾಣಿಯರು ಮಿಗಿಲೆನಿಸಿದ್ದಾರೆ.

ಮಹಮ್ಮದೀಯರ ಆಕ್ರಮಣ ಮತ್ತು ಗೋವಾ. ಡೆಕ್ಕನ್, ಕರ್ನಾಟಕಗಳಲ್ಲಿ ರ ಆಡಳಿತ ಪ್ರಾರಂಭವಾಗಿ, ಸಾಮಾಜಿಕ ಜೀವನದಲ್ಲಿ ಹಲವಾರು ವಾರ್ಯ ಮಾರ್ಪಾಡುಗಳಾದವು. ಮ್ಲೇಂಛರಿಂದ ಮಹಿಳೆಯರನ್ನು ರಕ್ಷಿಸಲು ವಾರು ಕಡ್ಡಾಯಗಳು ಕಾಣಿಸಿಕೊಂಡವು. ದೇಶದ ಅಸ್ಥಿರತೆ, ಸುರಕ್ಷಿತತೆಯ ಾವಗಳಿಂದಾಗಿ ಸ್ತ್ರೀಯರೂ ಇವಕ್ಕೆ ಆಕ್ಷೇಪ ಎತ್ತಿದಂತೆ ತೋರುವದಿಲ್ಲ. ೀಣ ಮಹಿಳೆಯರಿಗೆ ಮನೆಯೇ ಎಲ್ಲ ಚಟುವಟಿಕೆಗಳ ಕೇಂದ್ರವಾಗಿ ಮಿತವಾಯಿತು. ಮನೆಯೇ ಶಾಲೆ, ಪೂಜೆ, ವಿನೋದಾವಳಿಗಳ ಾವಾಯಿತು. ಇಲ್ಲಿಂದ ಸ್ತ್ರೀಪುರುಷರ ಚಟುವಟಿಕೆಗಳು ಭಿನ್ನ ರೂಪತಾಳಿ ಮಾನತೆ ಹೆಚ್ಚೆಚ್ಚು ಗೋಚರಿಸಲಾರಂಭಿಸಿತು. ಈ ಪದ್ಧತಿಯೇ ಶತಮಾನಕ್ಕೂ ಕ್ಕ ಮುಂದರಿಯಿತು. ಬ್ರಿಟಿಷರ ಆಳಿಕೆಯಲ್ಲಿ ಇಂಗ್ಲಿಷ್ ಶಿಕ್ಷಣದ ಪ್ರಭಾವ ಕ್ಕಾಗಿಪುರುಷರ ಮೇಲೆ ಬಿದ್ದರೂ, ಬಹುಸಂಖ್ಯಾತ ಹೆಂಗಳೆಯರು ಹಿಂದಿನ ಪ್ರದಾಯವನ್ನೇ ಉಳಿಸಿಕೊಂಡುಬಂದರು. ಬಾಲವಿವಾಹ, ಸಹಗಮನ, ವೆಯರ ಮುಂಡನಗಳು ಕಡ್ಡಾಯವೆಂಬಂತೆ ನಡೆದುಬಂದ ಅನಿಷ್ಟಗಳಾಗಿದ್ದವು. ಯರನ್ನು ರಕ್ಷಿಸಲೆಂದೇಹುಟ್ಟಿಕೊಂಡ ಕೆಲವು ಕ್ರಮಗಳು ಅವರನ್ನು ಹತ್ತಿಕ್ಕಲು ಾಯವಾದವು ಎಂಬುದು ಚರಿತ್ರೆಯ ವಿಪರ್ಯಾಸ. ಇಷ್ಟಾದರೂ ಶ್ರಮಜೀವಿ ಹಿಳಾವರ್ಗ, ತನ್ನ ತನವನ್ನು ಬಿಟ್ಟುಕೊಡಲಿಲ್ಲ. ಗಂಡಸರೊಡನೆ ಕಷ್ಟಪಟ್ಟು ಡಿಯುತ್ತಿದ್ದಂತೆ ತನ್ನ ಹಕ್ಕುಗಳನ್ನು ಉಳಿಸಿಕೊಂಡು ಬಂದಿತು.

ಮೂಲಬುಡಕಟ್ಟಿನ ಆದಿವಾಸಿಗಳಲ್ಲಿ ಹೆಂಗಳೆಯರದೇ ಮೇಲುಗೈ, ವರನು, ು-ದಕ್ಷಿಣೆ ತೆತ್ತಾಗಲೇ ವಿವಾಹ. ಅದು ಕೈಗೂಡದಿದ್ದರೆ ಭಾವೀ ಮಾವನ ನೆಯಲ್ಲಿ ಜೀತದಾಳಾಗಿಯೋ, ಬಿಟ್ಟಿ ಆಳಾಗಿಯೋ ದುಡಿದು ವಧುದಕ್ಷಿಣೆ ಸಿ ಮದುವಣಿಗನಾಗುವ ಅರ್ಹತೆ ಪಡೆಯಬೇಕು. ದುಡಿತದಿಂದ, ಕುಡಿತ, ತಗಳಲ್ಲಿ ಪತಿಗಿರುವಷ್ಟು ಸ್ವಾತಂತ್ರ್ಯ ಪತ್ನಿಗೂ ಇದೆ. ಗಂಡ, ವಿವಾಹಬಾಹ್ಯ

ದೈಹಿಕ ಸಂಬಂಧ ಬೆಳೆಸಿಕೊಂಡರೆ ಹೆಂಡತಿ ಅವನನ್ನು ತ್ಯಜಿಸಿ ಬೇರೊಬ್ಬನನ್ನು ವರಿಸಬಹುದು. ಸಂಸಾರದ ಸುಖಕ್ಕಾಗಿ, ನೆಮ್ಮದಿಗಾಗಿ ಅವಳೂ ದಿನವಿಡೀ ಬೆನ್ನು ಮುರಿದು ದುಡಿಯುವದರಿಂದ ಪತಿಯ ಮರ್ಜಿ ಕಾಯಬೇಕಾದ ಪ್ರಮೇಯವೇ ಬರುವದಿಲ್ಲ. ಕರ್ನಾಟಕ ಕರಾವಳಿಯ ಹಾಲಕ್ಕಿಗೌಡರ ಸಮಾಜದಲ್ಲಿ ಮೊದ್ದು, ಪೆದ್ದು, ವರನನ್ನು ಕನ್ಯೆ ನಿರಾಕರಿಸಿದರೆ ಅವನು ಅವಿವಾಹಿತನಾಗಿಯೇ ಜೀವನವನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಅದೆಷ್ಟೋ ಸಲ ದುಂಬಾಲು ಬಿದ್ದು ಅಣ್ಣನ ವಿಧವೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಲಂಬಾಣಿಗಳ ಸಮಾಜದಲ್ಲಿ ಹೆಂಗಳೆಯರೇ ಸಂಸಾರದ ಹೊರೆ ಹೊರುವದರಿಂದ ಗಂಡಿಗೆ ಅವಳ ಆಶೋತ್ತರಗಳಿಗೆ ಮಹತ್ವ ಕೊಡಲೇಬೇಕಾಗುತ್ತದೆ. ಇದರಂತೆ ಖಾರ್ವಿಗಳು, ಗ್ರಾಮೊಕ್ಕಲರು, ಕುಣುಬಿಗಳು, ಗೊಂಡರು, ಗಾಬೀತರು, ಮಾಟಕಾರರು, ಮೊದಲಾದ ಜನಾಂಗಗಳಲ್ಲಿ ಸ್ತ್ರೀ-ಪುರುಷರ ಸಮಾನತೆಗಾಗಿ ಆಂದೋಲನ ಮಾಡುವ ಪ್ರಸಂಗ ಬರುವದೇ ಇಲ್ಲ.

ಗ್ರಾಮೀಣ ಸಮಾಜದಲ್ಲಿ ಇಂಥ ಪರಿಸ್ಥಿತಿ ಇದ್ದಾಗ, ಅಧಿಕಾರ, ಪ್ರತಿಷ್ಠೆ, ಸುಖ-ಸಂಪತ್ತುಗಳ ಸೌಕರ್ಯವುಳ್ಳ ನಗರವಾಸಿ ಕುಟುಂಬಗಳ ಮಹಿಳೆಯರಿಗೇ 'ಸಮಾನತಾ' ವಾದದ ಕುರಿತಾದ ಕಾಳಜಿ ಎಂದರೆ ಅತಿಶಯೋಕ್ತಿಯಾಗಲಾರದು. ತಮ್ಮ ಸ್ಥಾನಮಾನಗಳಲ್ಲಿ ಹೆಚ್ಚಳ ಮಾಡಿಕೊಳ್ಳಲು, ಪ್ರಚಾರಗಿಟ್ಟಿಸಲು ಇದೊಂದು ಸಾಧನವಾಗಿದೆ. ಯಾವ ನಾಗರಿಕ ಅನುಕೂಲಗಳೂ ಇಲ್ಲದೇ ಅಜ್ಞಾನ, ದಾರಿದ್ರ್ಯಗಳಲ್ಲಿ ಜೀವಚ್ಛವಗಳಾಗಿ ಬದುಕುತ್ತಿರುವ ಅಭಾಗಿನಿಯರ ಬಗ್ಗೆ ಪ್ರೀತಿ, ಕಳಕಳಿ, ದಯೆಗಳು, ಈ ವರ್ಗದವರಲ್ಲಿ ಇವೆ, ಎಂದು ಯಾರೂ ತಪ್ಪಾಗಿ ಭಾವಿಸಕೂಡದು. ಅದೆಷ್ಟೋ 'ಸಮಾಜ ಸೇವಿಕೆ'ಯರು ಜೆನುಗಾದ ವಿದೇಶಿ ಬಟ್ಟೆತೊಟ್ಟು, ಸೆಂಟ್ ಹಾಕಿಕೊಂಡು ಕಾರಿನಲ್ಲಿ ಓಡಾಡಿ ಬಡವರ 'ಬಸ್ತಿ'ಗಳನ್ನು ಸಂದರ್ಶಿಸುವದುಂಟು. ಇವರಿಗೆ ಮಣ್ಣಿನ ಮಕ್ಕಳ ನಿರೀಕ್ಷೆ-ನಿರಾಶೆಗಳ ಅರಿವಾಗುವದೆಂತು? ಇವರುಗಳು ರೇಡಿಯೋ, ದೂರದರ್ಶನಗಳಿಗೆ ಸಂದರ್ಶನ ಕೊಟ್ಟೋ, ಸಾರ್ವಜನಿಕವಾಗಿ ವೇದಿಕೆಯನ್ನು ಅಲಂಕರಿಸಿಯೋ, ವೃತ್ತಪತ್ರಿಕೆಗಳ ಮುಖಾಂತರವೋ ಪ್ರತಿಷ್ಠಿತರಾಗುವ ಪ್ರಯತ್ನದಲ್ಲಿ ತೊಡಗಿರುತ್ತಾರೆ. ಸ್ತ್ರೀಯರ ಸಂಪೂರ್ಣ ಸ್ವಾತಂತ್ರ್ಯದಲ್ಲಿ ವಿಶ್ವಾಸವಿಟ್ಟು ಓರ್ವಮಹಿಳೆ, ಪತಿಯು ಒಂದು

ಲೋಟ ನೀರು ಕೇಳಿದ್ದಕ್ಕೆ, ಆತನ 'ಹಿಂಸೆ ತಾಳಲಾರದೇ' ಅವನನ್ನು ತ್ಯಜಿಸಿದಳಂತೆ. ಇನ್ನೊಬ್ಬಾಕೆ ತನ್ನ ಪ್ರೀತಿಯ ಮಗಳು - ಪತಿಯಿಂದ ಹುಟ್ಟಿದವಳಲ್ಲ! ಎಂದು ಸಾರಿದಳು. ಮಗದೊಬ್ಬಳು ನಗರ ಪಾಲಿಕೆ ಮತ್ತು ಶಾಲೆಗಳಲ್ಲಿ ತಾನೇ ತಂದೆಯ ಸ್ಥಾನ ಅಲಂಕರಿಸಿದ್ದರಿಂದ ತನ್ನ ಹೆಸರನ್ನೇ ನೋಂದಾಯಿಸಲು ಒತ್ತಾಯಿಸಿದಳು. ಜಾಹೀರಾತಿನವರು, ಚಲನಚಿತ್ರ ಉದ್ದಿಮೆಯವರು, ಧನಪಿಶಾಚಿಗಳು ದಿನದಿನವೂ ಬೇರೆ ಬೇರೆ ವಯಸ್ಸಿನ ಹೆಂಗಳೆಯರನ್ನು ಮೋಸ, ವಂಚನೆ, ಬಲಾತ್ಕಾರಗಳಿಗೆ, ಗುರಿಮಾಡುತ್ತಾರೆ. ಎಳೆ ಹೆಣ್ಣು ಮಕ್ಕಳೂ ಹೊರತಾಗಿಲ್ಲ. ಆದರೆ ಇವರಿಗಾಗಿ ತಲೆ ಕೆಡಿಸಿಕೊಂಡ ಸಮಾಜಕಾರ್ಯಕರ್ತೆಯರು ಎಷ್ಟು ಜನರಿದ್ದಾರೆ?

ಮಹಿಳೆಯರಲ್ಲಿ ಶಿಕ್ಷಣ ಪ್ರಮಾಣದಲ್ಲಿ ಹೆಚ್ಚಳವಾಗುತ್ತಾ ಇದೆಯೆಂದು ಸರಕಾರಿ ಸಂಖ್ಯೆಗಳು ನಮೂದಿಸುತ್ತವೆ. ಆದಾಗ್ಯೂ ಕರೆವೆಣ್ಣು, ವೇಶ್ಯಾವಾಟಿಕೆ ಗಳು, ಆತ್ಮಹತ್ಯೆ, ಭ್ರೂಣಹತ್ಯೆ, ವರದಕ್ಷಿಣೆ ಸಾವುಗಳಲ್ಲೂ ಗಣನೀಯ ಹೆಚ್ಚಳವಾಗುತ್ತಾ ಹೋಗಿದೆಯೆಂಬುದನ್ನು ಮರೆಯಲಾದೀತೇ? ಆಗೊಮ್ಮೆ ಈಗೊಮ್ಮೆ ಇಂಥ ದುರಂತಗಳು ಹೊರಬಿದ್ದಾಗ ಸಮಾನತೆಯ ಹೋರಾಟ ಗಾರರು, ಕೈಯಲ್ಲಿ ಫಲಕಗಳನ್ನು ಹಿಡಿದು, ಧಿಕ್ಕಾರಗಳನ್ನು ಕೂಗುತ್ತ ಸಂಬಂಧಿತ ಮಂತ್ರಿಗಳನ್ನೋ, ಮುಖ್ಯ ಮಂತ್ರಿಗಳನ್ನೋ ಭೇಟಿಮಾಡಿದರೆ, ಅವರಿಂದ ಆಶ್ವಾಸನೆ ಪಡೆದರೆ, ಕರ್ತವ್ಯ ಮುಗಿಯಿತು ಎಂದು ತಿಳಿಯುತ್ತಾರೆ.

ಬಹುಸಂಖ್ಯಾತ ಭಾರತೀಯ ಮಹಿಳೆಯರು ಪತಿಯನ್ನು ಏಕವಚನ ದಲ್ಲಿಯೇ ಸಂಬೋಧಿಸುತ್ತಾರೆ. ಬಹುವಚನ ಬಳಸುವವರು ಅಭ್ಯಾಸ ಬಲದಿಂದ ಹಾಗೆ ಮಾಡುತ್ತಾರೆಯೋ ಹೊರತು ಪ್ರೀತಿ-ಗೌರವಗಳ ದ್ಯೋತಕವಾಗಿ ಅಲ್ಲ. ಇದು ಬೆಂಗಳೂರಿನಲ್ಲಿ ಸಾರ್, ಸ್ವಾಮಿ ಎಂದು ಕರೆದಂತೆ! ಅಥವಾ ಧಾರವಾಡ ಸೀಮೆಯಲ್ಲಿ ಸಾಹೇಬರೇ! ಎಂದು ಸಂಬೋಧಿಸಿದಂತೆ ಅದಕ್ಕೆ ಯಾವ ವಿಶೇಷಾರ್ಥವನ್ನು ಕೊಡಬೇಕಾಗಿಲ್ಲ. ನಮ್ಮಲ್ಲಿ ಕೆಲವು ಸುಸಂಸ್ಕೃತ ಮನೆತನಗಳಲ್ಲಿ ಎಂದೂ ಪತ್ನಿಯನ್ನು ಏಕವಚನದಲ್ಲಿ ಕರೆದಾಗಲೀ ಹೆಸರೆತ್ತಿ ಕೂಗುವದಾಗಲಿ ಮಾಡದ ಮಹನೀಯರಿದ್ದಾರೆ. ನಮ್ಮ ಅಜ್ಜ, ಅಜ್ಜಿಯನ್ನು ಕರೆಯುತ್ತಿದ್ದದ್ದು "ಕೇಳಿಸಿತೇ?" ಎಂದು. ನೇರವಾಗಿ ಸಂಬೋಧಿಸಿದ್ದು ಎಂದೂ ನೋಡಲಿಲ್ಲ.

ಅರೆಶತಮಾನದ ಹಿಂದೆ ಟೈಫೈಡ್ ಜ್ವರಕ್ಕೆ ಬಲಿಯಾದ ನನ್ನ ತಾಯಿಯ ತಂದೆಯವರು ಎಲ್ಲಹಂತಗಳಲ್ಲೂ ಸರಿಸಮಾನಳಂತೆ ನಡೆಸಿಕೊಳ್ಳುತ್ತಿದ್ದುದು ಇ ಜ್ಞಾಪಕವಿದೆ. ಇಂಗ್ಲಿಷ್ ಓದಲು, ಬರೆಯಲು ಕಲಿಸಿದರು. ಸಂಗೀತ, ಹೊ ಆಟಗಳಲ್ಲಿ ಪ್ರೋತ್ಸಾಹಿಸಿದರು. ಸೀರೆಯನ್ನು ಕಚ್ಚೆಹಾಕಿ, ನಮ್ಮ ತಾಯಿಯವ ನದಿ-ಸಮುದ್ರಗಳಲ್ಲಿ ಮೀನಿನಂತೆ ಈಜಾಡುತ್ತಿದ್ದರಂತೆ. ಓರ್ವಪುತ್ರ-ಮೂ ಪುತ್ರಿಯರನ್ನು ಹೊಂದಿದ ನಮ್ಮ ತಂದೆ, ಏನೇನೂ ತಾರತಮ್ಯ ಮಾಡ ನಾಲ್ವರನ್ನು ಸರಿಸಮವಾಗಿ ಪ್ರೀತಿಸಿದರು, ಓದಿಸಿದರು, ಹೆಚ್ಚಿನ ಸಾಧ ಪ್ರೋತ್ಸಾಹಿಸಿದರು. ಪತಿಯ ಕುಟುಂಬವೂ ಇದಕ್ಕೆ ಹೊರತಾಗಿರಲಿಲ್ಲ. ಮು ದಶಕಗಳ ಹಿಂದೆ ಯಾವ ಬೇಡಿಕೆಯನ್ನೂ ಮುಂದಿಡದೇ ಹಿರಿಯ ಸೊಸೆಯ ಮನೆ ತುಂಬಿಸಿಕೊಂಡರು. ಕುಂದುಕೊರತೆಗಳನ್ನು ಗಮನಿಸಲ ಪೂಜೆ-ಪುನಸ್ಕಾರಗಳಿಗೆ ಒತ್ತಾಯಿಸಲಿಲ್ಲ. ಬಹುವಚನ ಬಳಸೆಂದು ಯಾ ನನಗೆ ಹೇಳಲಿಲ್ಲ. ನಮ್ಮ ಮನೆಯ ಕಿರಿಯ ವಯಸ್ಸಿನ ಕೆಲಸದಾಕೆ, ಪತಿಯನ್ನು ರಾಯರೇ! ಎನ್ನುತ್ತಿದ್ದಳು. (ಕೊಂಕಣಿಯಲ್ಲಿ ಅದು ಅರಸನಿ ಅನ್ವಯಿಸುತ್ತದೆ.) ನಾನೂ ಅನುಕೂಲಕ್ಕಾಗಿ ಹೀಗೆಯೇ ಕರೆಯುತ್ತಿದ್ದೆ. ನನ್ನ ಚಿಕ್ಕವನಿದ್ದಾಗ ಒಮ್ಮೆ, "ಅಮ್ಮ, ಸದಾಕಾಲ ಅಪ್ಪನಿಗೆ ರಾಯರೇ! ಎ ಕರೆಯುತ್ತಾಳಲ್ಲ! ಕಿರೀಟ ಧರಿಸದ, ಖಡ್ಗ ಹಿಡಿಯದ ಈತ, ಯಾವ ದೇ ರಾಯನೋ ಏನೋ! ಎಂದು ಸೋಜಿಗದ ವ್ಯಂಗ್ಯದಿಂದ, ನಿರಾಸೆಯಿ ಉದ್ಗರಿಸಿದ್ದ.

ದೀರ್ಘವೈವಾಹಿಕ ಜೀವನದಲ್ಲಿ ಪತಿಯ ಪ್ರೋತ್ಸಾಹದಿಂ ಆಕಾಶವಾಣಿಯ ನೌಕರಿ ಮುಂದುವರಿಸಿ, ದೇಶದ ನಾಲ್ಕೂ ಮೂಲೆ ಒಬ್ಬಳೇ ಹೋಗಿ ಬರುವಂತಾಯಿತು. ಡಾಕ್ಟರೇಟಿಗೆ ಸಂಶೋಧನೆ ನಡೆ ಸಕ್ರಿಯ ಸಹಾಯ ಒದಗಿಸಿದರು. ಲೇಖನಗಳನ್ನು, ಗ್ರಂಥಗಳನ್ನು ಬರೆಯ ಪ್ರೋತ್ಸಾಹಿಸಿದರು. ನನ್ನ ವಿದ್ಯಾಗುರು ಮತ್ತು ಖ್ಯಾತ ಇತಿಹಾಸ ಡಾ। ಜಿ.ಎಸ್. ದೀಕ್ಷಿತರು ಏಕಪ್ರಕಾರವಾಗಿ ನನ್ನ ಸಂಶೋಧನೆಯ ಪ್ರಯತ್ ಆಸಕ್ತಿ ವಹಿಸುತ್ತ ಬಂದಿದ್ದಾರೆ. ಇಂದಿಗೂ ಅವರನ್ನು ಭೇಟಿ ಮಾಡಿದಾಗ ನಾ ಕಾಲೇಜು ವಿದ್ಯಾರ್ಥಿನಿ, ಎಂಬ ಭಾವನೆ ಮೂಡುತ್ತದೆ! ನಾನು ವರ್ಗಾ ಹೊಂದಿದ ಊರುಗಳು ದೂರ ದೂರದ ರಾಜ್ಯಗಳಲ್ಲಿ ಇದ್ದರೂ ಅ

ಮೇಲಧಿಕಾರಿಗಳು, ಸಹೋದ್ಯೋಗಿಗಳು ಹೆಚ್ಚಿನ ಸೌಹಾರ್ದತೆ-ವಿಶ್ವಾಸ ಗಳಿಂದಲೇ ಕಂಡರು. ಹೆಣ್ಣಾಗಿ ಹುಟ್ಟಿದ್ದಕ್ಕೆ ಕೊರಗುವ ಪ್ರಸಂಗ ಒಮ್ಮೆಯೂ ಬರಲಿಲ್ಲವೆಂದು ಹೇಳಬಲ್ಲೆ!

ಆಧುನಿಕರೆನಿಸಿಕೊಳ್ಳುವ ಮಹಿಳೆಯರಲ್ಲಿ ಅಂಗಾಂಗಗಳ ಸೌಂದರ್ಯವನ್ನು ಪ್ರದರ್ಶಿಸಲೆಂದು ಅತಿಕಡಿಮೆ ಬಟ್ಟೆಯಲ್ಲಿ ರೂಪದರ್ಶಿಗಳು ರಾರಾಜಿಸುತ್ತಾರಷ್ಟೆ ಅಲ್ಲ. ಅದನ್ನು ಹೆಗ್ಗಳಿಕೆಯೆಂದು ಭಾವಿಸುತ್ತಾರೆ. ಮೊನ್ನೆ ಸ್ವತಃ ಸುಶಿಕ್ಷಿತೆಯಾದ ತಾಯಿಯೊಬ್ಬಳು ನೃತ್ಯಗಾತಿಯೆಂದು ಮಗಳನ್ನು ಪರಿಚಯಿಸಿದಳು, ನಂತರ..... ಸೋಪಿನ ಜಾಹೀರಾತಿಗೆ ಆಕೆ ಮಾಡೆಲ್ ಆಗಿ ಆಯ್ಕೆಯಾಗಿದ್ದಾಳೆಂದು ಸಂಭ್ರಮದಿಂದ ಹೇಳಿದಳು. ಸೋಪು ನೀರುಗಳ ನಡುವೆ ಆ ಚೆಲುವಾದ ಹುಡುಗಿ ಯಾವ ಉಡುಗೆಯನ್ನು ಮಾಡೆಲ್ ಆಗಿ ಧರಿಸಬಹುದು? ಎಂದು ಊಹಿಸಿಯೇ ಮೈಜುಮ್ಮೆಂದಿತು. ಪಾಲಕರೇ ಇಂಥ ಪ್ರಸಿದ್ಧಿ-ಪ್ರದರ್ಶನಗಳಿಗೆ ಪ್ರೋತ್ಸಾಹಿಸಿದರೆ ಕೇಳಬೇಕೇ? ಆದರೆ ಇವೆಲ್ಲ ಕ್ಷಣಿಕ ವ್ಯಾಮೋಹಗಳೆಂದು ತಾಯಿಯಾದವಳಿಗೆ ಹೊಳೆಯದೇ ಹೋದದ್ದು ಆಶ್ಚರ್ಯ. ಸ್ತ್ರೀಯರಿಗೆ ಅವಹೇಳನಕಾರಿಯಾದ ಅಲ್ಪ ವಸ್ತ್ರದ, ವಿವಸ್ತ್ರದ ಜಾಹೀರಾತುಗಳ ವಿರುದ್ಧ ಯಾವದೇ ಆಂದೋಲನ ನಮ್ಮಲ್ಲಿ ಇಲ್ಲದ್ದು, ಎಳೆಯರ ಮೇಲೆ ಅವು ಬೀರಬಹುದಾದ ದುಷ್ಪರಿಣಾಮಗಳ ಬಗ್ಗೆ ಆಲೋಚಿಸದೇ ಇದ್ದದ್ದು ವಿಷಾದಕರ. ಇತ್ತೀಚೆಗೆ ದೈಹಿಕ ಆಕರ್ಷಣೆಗೇ ವಿಶೇಷ ಮಹತ್ವ ಕೊಡಲಾರಂಭಿಸಿದ್ದಾರೆ. ಬೌದ್ಧಿಕ ಬೆಳವಣಿಗೆ ಹಿಂದೇಟು ಹಾಕಿದೆ.

ಸಮಾಜದಲ್ಲಿ, ಉದ್ಯೋಗ ಕ್ಷೇತ್ರದಲ್ಲಿ ನಮ್ಮ ಸೋದರಿಯರ ಅಪೇಕ್ಷೆ-ನಿರೀಕ್ಷೆಗಳು ಹಲವೊಂದು ಸಲ ತದ್ವಿರುದ್ಧವಾಗಿರುತ್ತವೆ. ತಮಗೆ ಲಾಭವಾಗುವಾಗ ಪುರುಷರಿಂದ ಪ್ರತ್ಯೇಕತೆಯನ್ನು ಬಯಸುತ್ತಾರೆ. ಉಳಿದ ಕ್ಷೇತ್ರಗಳಲ್ಲಿ ಸರಿಸಮಾನತೆಯನ್ನು ನಿರೀಕ್ಷಿಸುತ್ತಾರೆ. ಬಸ್ಸು, ರೇಲ್ವೆ, ಚುನಾವಣೆ, ಹುದ್ದೆ, ಶಿಕ್ಷಣ ಕ್ಷೇತ್ರ, ಆಫೀಸುಗಳಲ್ಲಿ ಅವರಿಗೆ ಮೀಸಲಾತಿ ಇರಬೇಕು. ಸಂಘ-ಸಂಘಟನೆ ಗಳಲ್ಲಿ -ಸಾಹಿತ್ಯ ವಿಭಾಗಗಳಲ್ಲಿ ಪಾರಿತೋಷಕಗಳು ಇರಲೇಬೇಕು. ವರ್ಗಾವರ್ಗಿ ಇರಕೂಡದು, ಅದೇ ಸಂಬಳ, ಸವಲತ್ತುಗಳ ಮಟ್ಟಿಗೆ ಸರಿಸಮಾನತೆಯಲ್ಲಿ ವಿಶ್ವಾಸವಿಟ್ಟವರವರು. ನಮ್ಮಲ್ಲಿ ಮಹಿಳಾ ರಾಜಕಾರಣಿಗಳು, ಅವರು ಗಂಡಸರಾಗಿದ್ದರೆ ಯಾರೂ ಕೇಳುತ್ತಿರಲಿಲ್ಲ! ಎಂಬುದನ್ನು ಮರತೇ ಬಿಡುತ್ತಾರೆ.

ರಾಜಕೀಯ ಏಳ್ಗೆಗೆ ವರ್ಚಸ್ವಿ ಕುಟುಂಬದ ಅಥವಾ ಜಾತಿಯ ಮಹಿಳೆಯಾಗಿದ್ದೇ ಮುಖ್ಯಕಾರಣ, ಅದಕ್ಕಾಗಿಯೇ ಪ್ರಾರಂಭಿಕ ಪ್ರೋತ್ಸಾಹ ದೊರೆಯಿತು, ಎಂಬ ಅಂಶವನ್ನು ಅವರೂ ಇತರರೂ ಮರೆಯುವಂತಿಲ್ಲ. ನಿತ್ಯ ಜೀವನದಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿಯೂ ಎದುರಿಸಬೇಕಾದ ಇಬ್ಬಗೆಯ ಧೋರಣೆಗಳೇ ನಮ್ಮ ನಾರಿಯರ ಮುನ್ನಡೆಗೆ ಅಡ್ಡಕಲ್ಲಾಗಿ ಪರಿಣಮಿಸಿವೆ.

❖



ತಮ್ಮ ಕಾವ್ಯ ಹಾಗೂ ಜೀವನದಲ್ಲಿ ಅಂಬಿಕಾತನಯದತ್ತರು ಸ್ತ್ರೀ ರೂಪವನ್ನು ಕಂಡುಕೊಂಡ ಬಗ್ಗೆ ಅನನ್ಯವಾದದ್ದು, ಅಮೋಘ ವಾದದ್ದು. ತನ್ನ ಮುತ್ತಜ್ಜಿ, ಅಜ್ಜಿ, ತಾಯಿಯಲ್ಲಿ ಅಸಾಧಾರಣ ಪೌರುಷ ಗುರುತಿಸಿದರು. ಹತ್ತು ಹಲವು ರೂಪಗಳಲ್ಲಿ ನಾರೀ ಶಕ್ತಿಯನ್ನು ಕಂಡು ಆರಾಧಿಸಿದರು. ಕೆಲವನ್ನು ಗುರುತಿಸುವ ಸಾಹಸ, 'ಅಂಬಿಕಾತನಯದತ್ತರ ಸ್ತ್ರೀ ದೃಷ್ಟಿಕೋನ'ದಲ್ಲಿದೆ.

ಬೇಲಿಯೇ ಎದ್ದು ಹೊಲ ಮೇಯ್ದಂತೆ, ಕಾನೂನು ರಕ್ಷಕರೇ ಮಹಿಳೆಯರಿಗೆ ರಕ್ಷಣೆಯೀಯುವ ಬದಲು ಅನ್ಯಾಯ ಎಸಗುವ ಘಟನೆಗಳನ್ನು ಪ್ರತಿದಿನ ಕಾಣುತ್ತೇವೆ. ಜೊತೆಗೆ ಮಹಿಳೆಯರೂ ಹೆಚ್ಚಿನ ಹೊಣೆ, ಸ್ಥೈರ್ಯಗಳನ್ನು ತೋರುತ್ತಿಲ್ಲ. ಅವರು ಸಾಮಾಜಿಕ ಪ್ರಜ್ಞೆ ಬೆಳೆಸಿಕೊಳ್ಳ ಬೇಕಾದ ಅವಶ್ಯಕತೆ, ಮಹಿಳೆ ಮತ್ತು ಕಾನೂನು ರಕ್ಷಕರು' ಲೇಖನದಲ್ಲಿದೆ.

ಬಾನುಲಿಯಂತಹ ಪ್ರಬಲ, ಚಲನಶೀಲ, ಅಗ್ಗದ ಮಾಧ್ಯಮ ನಾರಿಯಲ್ಲಿ ಅರಿವು ಬೆಳೆಸುವ ಮುಖ್ಯ ಸಾಧನವಾಗಬಲ್ಲದು ಎಂಬುದನ್ನು 'ಬಾನುಲಿ ಮತ್ತು ಮಹಿಳಾ ಜಾಗೃತಿ'ಯಲ್ಲಿ ತೋರಿಸಿದರೆ, ಗೃಹಕೃತ್ಯ ಹಾಗೂ ವೃತ್ತಿಗಳಲ್ಲಿ ಮಹಿಳೆಯರ ಪಾತ್ರವನ್ನು, ಸ್ವಾನುಭವದ ಹಿನ್ನೆಲೆಯಲ್ಲಿ ಎಂಟನೆಯ ಅಧ್ಯಾಯದಲ್ಲಿ ಬಿಂಬಿಸಲು ಪ್ರಯತ್ನಿಸಿರುವೆ. ಮಾನಸಿಕವಾಗಿ ಸ್ತ್ರೀ-ಪುರುಷರಿಬ್ಬರೂ ಬೆಳೆಯದ ಹೊರತು ಸ್ತ್ರೀ-ಪುರುಷ ಸಮಾನತೆಯೆಂಬುದು ಮರೀಚಿಕೆ! ಎಂಬ ಅನಿಸಿಕೆ ಕೊನೆಯ ಪ್ರಬಂಧ ದಲ್ಲಿದೆ.

ಡಾ. ಜ್ಯೋತ್ಸ್ನಾ ಕಾಮತ್
ಬೆಂಗಳೂರು